ಹೊಸ್ತಿಲು : ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ

ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಶ್ರೀಮತಿ ಸವಿತಾ ಧರ್ಮಪಾಲ

ಮಾರ್ಗದರ್ಶಕರು

ಡಾ. ವಿ.ಎಸ್.ಬಡಿಗೇರ

ಪ್ರವಾಚಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಫೆಬ್ರವರಿ ೨೦೦೫

ಹೊಸ್ತಿಲು : ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಶ್ರೀಮತಿ ಸವಿತಾ ಧರ್ಮಪಾಲ

ಮಾರ್ಗದರ್ಶಕರು
ಡಾ. ವಿ.ಎಸ್.ಬಡಿಗೇರ
ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಫೆಬ್ರವರಿ ೨೦೦೫

ಸಂಶೋಧಕರ ಪ್ರಮಾಣ ಪತ್ರ

ಹೊಸ್ತಿಲು : ಒಂದು ಅಧ್ಯಯನ ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ ಡಾ.ವೀರೇಶ ಬಡಿಗೇರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨೮-೦೧-೦೫
ಸ್ಥಳ : ವಿದ್ಯಾರಣ್ಯ

ಶ್ರೀಮತಿ ಸವಿತಾ ಧರ್ಮಪಾಲ
ಸಂಶೋಧಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀಮತಿ ಸವಿತಾ ಧರ್ಮಪಾಲ ಅವರು ಹೊಸ್ತಿಲು : ಒಂದು ಅಧ್ಯಯನ ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ವೀರೇಶ ಬಡಿಗೇರ
ಮಾರ್ಗದರ್ಶಕರು ಮತ್ತು ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೨೬-೧-೨೦೦೫
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

ಕನ್ನಡ ಎಂ.ಎ.ಮುಗಿಸಿದ ನನಗೆ ಸಂಶೋಧನೆ ಮಾಡಬೇಕೆಂಬ ಮಹಾದಾಸೆ ಎಲ್ಲೋ ಒಂದು ಕಡೆ ಪ್ರೋತ್ಸಾಹಿಸುತ್ತಿತ್ತು. ಕನ್ನಡ ವಿಶ್ವವಿದ್ಯಾಲಯವನ್ನು ನೋಡಬೇಕೆಂದು ಕುತೂಹಲದಿಂದ ಬಂದೆ ಅಲ್ಲಿನ ಸಂಶೋಧನೆಯ ವಾತಾವರಣ ನನ್ನಲ್ಲಿ ಇದ್ದ ಸಂಶೋಧನಾ ಪ್ರಜ್ಞೆ ಜಾಗೃತಗೊಳಿಸಿತು.

ಸ್ತ್ರೀ ಆದ ನಾನು ನನ್ನ ಬದುಕಿನಲ್ಲಿ ಹೊಸ್ತಿಲಿನ ಪಾತ್ರ ಮತ್ತು ಪ್ರಯೋಗ ನನ್ನನ್ನು ಈ ಕುರಿತು ಚಿಂತನೆಗೆ ತೊಡಗಿಸಿತು. ಅಲ್ಲದೆ ಅದರೊಂದಿಗಿರುವ ಸಂಪ್ರದಾಯ ಮತ್ತು ಮಹತ್ವ ಇಂದು ಕೈತಪ್ಪಿ ಹೋಗುತ್ತಿವೆ ಎನಿಸುತ್ತಿತ್ತು. ಅದರ ಫಲವೇ ಇಂದು ನಾನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿರುವ **ಹೊಸ್ತಿಲು : ಒಂದು ಅಧ್ಯಯನ** ಎಂಬ ಮಹಾಪ್ರಬಂಧ.

ಈ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಅಂದಿನ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡ ಹಾಗೂ ಇಂದಿನ ಕುಲಪತಿಗಳಾದ ಡಾ.ಬಿ.ಎ.ವಿವೇಕ ರೈ ಅವರಿಗೆ ಹಾಗೂ ಹಿಂದಿನ ಅಧ್ಯಯನಾಂಗದ ನಿರ್ದೇಶಕರಾದ ಡಾ.ಕರೀಗೌಡ ಬೀಚನಹಳ್ಳಿ ಅವರಿಗೆ ಮತ್ತು ಇಂದಿನ ನಿರ್ದೇಶಕರಾದ ಡಾ.ಟಿ.ಆರ್. ಚಂದ್ರಶೇಖರ ಅವರಿಗೆ,

ನನ್ನಲ್ಲಿನ ಸಂಕೋಚ ಭಾವನೆಯನ್ನು ಹೋಗಲಾಡಿಸಿ ನನ್ನ ಸಂಶೋಧನಾ ಮಾರ್ಗದ ಪ್ರತಿಯೊಂದು ತೊಡಕು ತೊಂದರೆಗಳಿಗೆ ತಮ್ಮ ಅಮೂಲ್ಯವಾದ ಸಲಹೆ ಮತ್ತು ಮಾರ್ಗದರ್ಶನ ನೀಡಿದ ಮಾರ್ಗದರ್ಶಕರಾದ ಡಾ.ವೀರೇಶ ಬಡಿಗೇರ ಅವರಿಗೆ,

ನನ್ನ ಶೈಕ್ಷಣಿಕ ಸಾಧನೆಯ ಇಂದಿನ ಈ ಮಟ್ಟಕ್ಕೆ ಕಾರಣರಾದ ನನ್ನ ಪತಿ ಶ್ರೀ ಪಂಪಾಪತಿ ಬಡಿಗೇರ ಅವರಿಗೆ,

ನನ್ನ ಶೈಕ್ಷಣಿಕ ಮುನ್ನಡೆಗೆ ಕಾರಣರು ಮತ್ತು ಸದಾ ತಮ್ಮ ಆಶೀರ್ವಾದದ ಹಸ್ತವನ್ನಿತ್ತ ಶತಾಯುಶಿಗಳು ಮತ್ತು ಸ್ವತಂತ್ರ ಯೋಧರು ಆದ ಪೂಜ್ಯ ಮಾವನವರಾದ ಶ್ರೀ ಲಿಂಗಪ್ಪ ಬಡಿಗೇರ ಅವರಿಗೆ, ಭಾವನವರಾದ ಶ್ರೀ ಆರ್.ಎಲ್.ಬಡಿಗೇರ ಮತ್ತು ಶ್ರೀಮತಿ ಶ್ರೀ ಲಕ್ಷ್ಮೀಶ್ ಎಲ್.ಬಡಿಗೇರ ಅವರಿಗೆ,

ನನ್ನ ಸಂಶೋಧನೆಯ ಮಾರ್ಗದ ಪ್ರತಿಯೊಂದು ಸಮಸ್ಯೆಗೆ ತಮ್ಮ ಅಮೂಲ್ಯ ಸಮಯವನ್ನು ನೀಡಿ ಸಲಹೆಯನ್ನಿತ್ತ ಶ್ರೀಮತಿ ಮತ್ತು ಡಾ.ಬಸವಲಿಂಗ ಸೊಪ್ಪಿನಮಠ ಅವರಿಗೆ, ಸದಾ ನನ್ನ ಮೇಲೆ ಪ್ರೀತಿಯ

ಆಶೀರ್ವಾದವನ್ನಿತ್ತ ತಂದೆಯವರಾದ ಪೂಜ್ಯ ಶ್ರೀ ಧರ್ಮಪಾಲ ಪೋದ್ದಾರ ತಾಯಿಯವರಾದ ಪೂಜ್ಯ ಶ್ರೀಮತಿ ಶಾರದಾಬಾಯಿ ಅವರಿಗೆ ನನ್ನ ಮುದ್ದುಮಕ್ಕಳಾದ ಐಶ್ವರ್ಯ ಮತ್ತು ಅಮಿತ್ ಅವರಿಗೆ,

ತಮ್ಮ ಪ್ರೀತಿಯ ನುಡಿಗಳಿಂದ ನನ್ನಲ್ಲಿ ಹೊಸ ಚೈತನ್ಯವನ್ನು ತುಂಬಿದ ಶ್ರೀಮತಿ ಸುರೇಖ ಜಾಲಿಹಾಳ ಮತ್ತು ಶ್ರೀ ರಂಗನಾಥ್ ಜಾಲಿಹಾಳ ಹಾಗೂ ಶ್ರೀಮತಿ ಶ್ರೀ ಚಂದ್ರಕಾಂತ್ ಅವರಿಗೆ,

ವಿಭಾಗದ ಮುಖ್ಯಸ್ಥರಾದ ಡಾ.ಎಫ್.ಟಿ.ಹಳ್ಳಿಕೇರಿ, ಪ್ರೊ.ಎ.ವಿ.ನಾವಡ, ಡಾ.ಕೆ.ರವೀಂದ್ರನಾಥ, ಡಾ.ಎಸ್.ಎಸ್.ಅಂಗಡಿ, ಶ್ರೀ ಎಸ್.ಆರ್.ಚನ್ನವೀರಪ್ಪ, ಹಾಗೂ ವಿಭಾಗದ ಆಡಳಿತ ಸಿಬ್ಬಂದಿ ಮತ್ತು ಗ್ರಂಥಾಲಯದ ಎಲ್ಲ ಸಿಬ್ಬಂದಿವರ್ಗದವರಿಗೆ,

ಕರಡು ಪ್ರತಿ ತಿದ್ದುವಲ್ಲಿ ಸಹಕರಿಸಿದ ಡಾ.ಡಿ.ಮೀನಾಕ್ಷಿ ಮತ್ತು ಕಂಡಾಗಲೆಲ್ಲ ಅಕ್ಕರೆಯಿಂದ ಮಾತನಾಡಿಸಿ ಸಂಶೋಧನಾ ಕಾರ್ಯದ ಬಗ್ಗೆ ವಿಚಾರಿಸುತ್ತಿದ್ದ ಶ್ರೀಮತಿ ಅನಿತಾ ಬಡಿಗೇರ ಅವರಿಗೆ,

ಶ್ರೀಮತಿ ಮತ್ತು ಶ್ರೀ ಗಂಗಾಧರ ಕುರ್ಲಿ, ಶ್ರೀಮತಿ ಮತ್ತು ರಾಜಗೋಪಾಲ್, ಶ್ರೀಮತಿ ಮತ್ತು ಶ್ರೀ ಬಸವರಾಜ ಖೇಣೆದ್, ಶ್ರೀಮತಿ ಮತ್ತು ಶ್ರೀ ಎಂ.ಪಂಪಣ್ಣ, ಶ್ರೀಮತಿ ಮತ್ತು ಶ್ರೀ ಸಿದ್ದನಗೌಡ ದೊಡ್ಡಮನಿ, ಶ್ರೀಮತಿ ಮತ್ತು ಶ್ರೀ ಬಸವರಾಜ ಗದುಗಿನ ಅವರಿಗೆ,

ಅಂದವಾಗಿ ಅಕ್ಷರ ಸಂಯೋಜಿಸಿದ ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್ ಶ್ರೀಮತಿ ಬಿ.ರಶ್ಮಿ ಮತ್ತು ಶ್ರೀ ಎ.ಎಂ.ಕೃಪಾಶಂಕರ್ ಹಾಗೂ ಪ್ರಬಂಧವನ್ನು ಅಚ್ಚುಕಟ್ಟಾಗಿ ಬೈಂಡ್ ಮಾಡಿಕೊಟ್ಟು ಶ್ರೀ ಮಹಾಂತೇಶ್ ಬುಕ್ ಬೈಂಡಿಗ್ ಅವರಿಗೆ

ಅನಂತ ಕೃತಜ್ಞತೆಗಳು

ಸವಿತಾ ಧರ್ಮಪಾಲ

ಪರಿವಿಡಿ

ಅಧ್ಯಾಯ ೧

ಹೊಸ್ತಿಲಿನ ತಾತ್ವಿಕ ಚೌಕಟ್ಟು ಮತ್ತು ವ್ಯಾಪ್ತಿ

೧.೧. ಅಧ್ಯಯನದ ತಾತ್ವಿಕ ಚೌಕಟ್ಟು

೧.೨. ಅಧ್ಯಯನದ ಆಕರಗಳು

೧

ಅಧ್ಯಯನದ ತಾತ್ವಿಕ ಚೌಕಟ್ಟು ಮತ್ತು ವ್ಯಾಪ್ತಿ

೧.೧. ಅಧ್ಯಯನದ ತಾತ್ವಿಕ ಚೌಕಟ್ಟು

ಕಳೆದ ಒಂದು ದಶಕದಲ್ಲಿ ಮಹಿಳಾ ಸಂವೇದನೆ ಕುರಿತಂತೆ ಅನೇಕ ರೀತಿಯ ಚರ್ಚೆಗಳು, ಸಂವಾದಗಳು ನಡೆಯುತ್ತಿವೆ. ಆ ಕುರಿತ ವೈವಿಧ್ಯಮಯ ಬರಹಗಳೂ ಬರುತ್ತಿವೆ. ಇವುಗಳಲ್ಲಿ ಉದಾರ ಮತ್ತು ಉಗ್ರವಾದ ಎರಡೂ ನೆಲೆಗಳು ಕಾಣಿಸಿಗುತ್ತವೆ. ಹಾಗೆ ಭಾರತೀಯ ಮತ್ತು ಪಾಶ್ಚಾತ್ಯ ಎರಡೂ ನೆಲೆಗಳಿಂದ ಇಂಥ ಚರ್ಚೆಗಳು ಪ್ರೇರಣೆ ಪಡೆದದ್ದು ಇದೆ. ಆರಂಭದ ಬರಹಗಳಲ್ಲಿ 'ಭಾರತೀಯ' ಎನ್ನುವ ಪರಂಪರೆಯ (ಅದು ಸಾಹಿತ್ಯ, ಸಂಸ್ಕೃತಿ ಯಾವುದಾದರೂ ಆಗಬಹುದು) ನೆಲೆಯಲ್ಲಿ ಸ್ತ್ರೀಪರ ಸಂವೇದನೆಗಳನ್ನು ನಿರ್ವಚಿಸಿದ್ದು ಇದೆ. ಆದರೆ ಇತ್ತೀಚಿನ ಅಧ್ಯಯನಗಳ ಬಹುಮುಖ್ಯ ಕಾಳಜಿ ಎಂದರೆ 'ಹೆಣ್ಣನ್ನು' ಸ್ಥಳೀಯ ಹಾಗೂ ಬಹುಮುಖಿ ಸಂಸ್ಕೃತಿಗಳ ನೆಲೆಗಳಿಂದ ಪರಿಭಾವಿಸುವುದು. ಇದು 'ಭಾರತೀಯ' ಎನ್ನುವ ನೆಲೆಗಿಂತ ಭಿನ್ನವಾಗಿ ಆಯಾ ಸ್ಥಳೀಕ ಸಮುದಾಯ ಸಂಸ್ಕೃತಿಗಳ ಪರೀಧಿಯಲ್ಲಿ ಹೆಣ್ಣನ್ನು ಮತ್ತು ಅವಳ ಒಟ್ಟು ಬದುಕನ್ನು ಗ್ರಹಿಸುವಂಥದ್ದು. ವಸಾತೀಕರಣ ಮತ್ತು ಜಾಗತೀಕರಣಗಳ ಹಿನ್ನೆಲೆಯಲ್ಲಿ ರೂಪಗೊಂಡ ಇಂಥ ಪ್ರಕ್ರಿಯೆ ಹೆಣ್ಣನ್ನು ಸ್ವತಂತ್ರ ಘಟಕವಾಗಿ ಪರಿಭಾವಿಸುತ್ತದೆ.

ನನ್ನ ಅಧ್ಯಯನದ ಮಿತಿಯಲ್ಲಿ ನಾನು ಮಾಡಬಯಸುವುದು ಸ್ಥಳೀಕರಣದ ಹಿನ್ನೆಲೆಯಲ್ಲಿ ಸ್ತ್ರೀ ವಾಚಿಯಾಗಿರುವ ಹೊಸ್ತಿಲಿನ ನಿರ್ವಚನವನ್ನು ಮೊದಲನೆಯದಾಗಿ ಸಾಹಿತ್ಯಿಕ ಸಂಸ್ಕೃತಿಯಲ್ಲಿ ಭಾರತೀಯ ಮತ್ತು ಸ್ಥಳೀಯ ತಾತ್ವಿಕತೆಯ ನೆಲೆಯಲ್ಲಿ ಸ್ತ್ರೀ ಮತ್ತು ಅದಕ್ಕೆ ಸಂವಾದಿ ರೂಪಗಳ ಸಂಬಂಧಿ ಕೆಲವು ಸ್ಥೂಲ ಸಂಗತಿಗಳನ್ನು ಗಮನಿಸುವುದು. ಎರಡನೆಯದಾಗಿ ಸ್ತ್ರೀವಾದಿ ಅಧ್ಯಯನ ನಿರ್ಮಿತಿ ಪ್ರಕ್ರಿಯೆಯ ಮೂಲತಃ ಅದು ಯಾವ ಜಗತ್ತಿಗೆ ಪ್ರತಿಕ್ರಿಯೆಯಾಗಿ ರೂಪಗೊಂಡಿತೋ ಆ ಜಗತ್ತನ್ನು ಅರ್ಥೈಸಿಕೊಳ್ಳುವುದರ ಮೂಲಕ ಅಧ್ಯಯನವನ್ನು ಆರಂಭಿಸುವುದು. ನನ್ನ ಈ ಹುಡುಕಾಟಕ್ಕೆ 'ಸಂಸ್ಕೃತ ವಿಶ್ವ' ಮತ್ತು 'ಭಾರತೀಯ ಪರಂಪರೆ'ಯ ಬೀಳಲುಗಳನ್ನು ಎತ್ತಿಕೊಳ್ಳುತ್ತೇನೆ. ಇದು ಬಹುಕಾಲದಿಂದಲೂ ಸಾಹಿತ್ಯ ಸಂಸ್ಕೃತಿಗಳ, ರಾಜಕೀಯ ಸಂಸ್ಕೃತಿಗಳ ನಿರ್ದೇಶಕನಾಗಿ ಜೀವಭಾವವಾಗಿ ಬೆಳೆದುಬಂದಿದೆ. ಇನ್ನೊಂದು ಬದಿಯಿಂದ ಬಹುಮುಖ್ಯವಾಗಿ ಸ್ಥಳೀಯವಾದ ಸಮುದಾಯ ಪ್ರಣೀತ ಸ್ತ್ರೀ ಸಂವೇದನೆಗಳ ಅನಾವರಣ ಕುರಿತ ಚರ್ಚೆಯನ್ನು ಎತ್ತಿಕೊಳ್ಳಬಯಸುತ್ತೇನೆ. ನನ್ನ ಅಧ್ಯಯನದ ಬಹುಮುಖ್ಯ ಕಾಳಜಿ ಇದೇ ಆಗಿದೆ.

ಭಾರತೀಯ ಮತ್ತು ಸಂಸ್ಕೃತ ಎನ್ನುವ ಜಾಗತಿಕ ಸ್ವರೂಪದ ಈ ಸಾಹಿತ್ಯ ಸಂಸ್ಕೃತಿ ಮತ್ತು ಬದುಕಿನ ನೆಲೆಗಳು ಹೇಗೆ ಸ್ಥಳೀಯ ಸ್ವರೂಪವನ್ನು ಪಡೆದುಕೊಂಡವು. ಪರಸ್ಪರ ಸಂಬಂಧದ ವ್ಯವಹಾರದಲ್ಲಿ 'ಸ್ಥಳೀಯ' ಮತ್ತು ವಿಶ್ವಾತ್ಮಕವೆಂದೆನೆಸುವ ಈ ಎರಡೂ ಪರಿಕಲ್ಪನೆಗಳು ಒಂದು ಇನ್ನೊಂದನ್ನು ಹೇಗೆ ರೂಪಿಸುತ್ತ ಹೋದವು ಈ ಹೊಂದಾಣಿಕೆ 'ಅನ್ಯ' ಮತ್ತು 'ನಮ್ಮ' ಎನ್ನುವ ಎರಡು ಹೋಳುಗಳನ್ನು ಒತ್ತಾಯಪೂರ್ವಕವಾಗಿ ಅಭೇದ ಎನ್ನುವಂತೆ ಬೆಸೆದು ನಿರ್ಮಿಸಿದ ಭ್ರಮೆಗಳನ್ನು ಅರ್ಥಮಾಡಿಕೊಳ್ಳುವುದು ಕೂಡ ಈ ಅಧ್ಯಯನದ ಬಹುಮುಖ್ಯ ತಾತ್ವಿಕ ಕಾಳಜಿಯಾಗಿದೆ.

ಇದೂವರೆಗೂ ಹಲವು ರೀತಿಯ ಪರಿಕಲ್ಪನೆಗಳನ್ನು ಉದಾರವಾಗಿ ಹರಿಯ ಬಿಡಲಾಗಿದೆ. 'ಭಾರತೀಯ ನಾರಿ', 'ಭಾರತೀಯ ಸ್ತ್ರೀ' ಪತಿವ್ರತೆ ಹಾಗೂ ಅರಿಷಿನ ಕುಂಕುಮ, ತಾಳಿಯಂತಹ ಸೌಭಾಗ್ಯ ವಸ್ತುಗಳ ಮೂಲಕ ಏಕಾಕೃತಿಯ ಸ್ತ್ರೀ ಮಾದರಿಯೊಂದನ್ನು ನಿರ್ಮಿಸಿ ಕೊಡಲಾಗಿದೆ. ಪತಿತೆಯಾಗಿದ್ದರೂ ಪರಾಧೀನೆ, ಜೀವಜಲವಾಗಿದ್ದರು ಜಡವಸ್ತು ವಂಶೋದ್ಧಾರಕಳಾಗಿದ್ದರೂ ನಿರ್ವೀರ್ಯಳು, ಕೀಳರಿಮೆಯಿಂದ ಬಳಲುವವಳಾದಂತಹ ಹೆಣ್ಣಿನ ಚಿತ್ರ ನಮಗೆ ದಕ್ಕುತ್ತದೆ. ಕುಟುಂಬ, ಮಕ್ಕಳು, ಮನೆ, ಸಂಪ್ರದಾಯದ ಹೆಸರಿನಲ್ಲಿ ಅವಳ ಅಸ್ತಿತ್ವವನ್ನೇ ಅಡಗಿಸಿಡಲಾಗಿದೆ. ಅಷ್ಟೆ ಏಕೆ ಮನೆಗಿರುವ ಒಂದು 'ಹೊಸ್ತಿಲೇ' ಅವಳ ಜೀವಮಾನವನ್ನೆಲ್ಲಾ ನುಂಗಿ ನೀರು ಕುಡಿಯುವಂತಾಗಿದೆ.

ಹಾಗೆ ನೋಡಿದರೆ ಭಕ್ತ ತಾನು ಪೂಜಿಸುವ ದೈವದಿಂದ ಪ್ರಯೋಜನ ಪಡೆದುಕೊಳ್ಳದೇ ಇರಲಾರ. ಪೂಜೆಯ ಗುರಿಯೇ ಪ್ರಯೋಜನ ತಾನೆ. ದಿನನಿತ್ಯ ಎದ್ದೇಳುತ್ತಲೇ ಹೊಸ್ತಿಲನ್ನು ಸ್ಪರ್ಶಿಸಿ ಪೂಜಿಸಿ ಅಂದಗೊಳಿಸುವ ಭಕ್ತಳ (ಹೆಣ್ಣಿನ) ಬಾಳಿಗೆ ಹೊಸ್ತಿಲೇ ಒಂದು ಕಂಟಕವಾಗುವುದು ವಿಪರ್ಯಾಸ. ಇಂಥ ಹಲವು ವಿಪರ್ಯಾಸಗಳಿಗೆ ಕಾರಣ ಹುಡುಕುವುದು ಈ ಅಧ್ಯಯನದ ಉದ್ದೇಶವಾಗಿದೆ ಕೂಡ.

ಉದ್ದೇಶ : ನಮ್ಮಲ್ಲಿ ಸಂಪ್ರದಾಯ ಎನ್ನುವುದು ಬಹಳ ವಿಶಿಷ್ಟವಾದದ್ದು. ಅದು ತಲೆಮಾರಿನ ಚಾರಿತ್ರಿಕ ಪ್ರಜ್ಞೆಯನ್ನು ಗರ್ಭೀಕರಿಸಿಕೊಂಡಂಥದ್ದು. ಎಲ್ಲಿ ಸಂಕೇತ, ಸಂಜ್ಞೆ ಸೂಚನೆಗಳಿಗೆ ಒಂದು ನಿರ್ದಿಷ್ಟವಾದ ಬೆಲೆಯುಂಟೋ ಅಲ್ಲಿಯೇ ಸಂಪ್ರದಾಯದ ಜನನವಾಗುತ್ತದೆ. ಆದ್ದರಿಂದ ಸಂಪ್ರದಾಯ ಎನ್ನುವುದು ಆರಾಧಕ ಸಮುದಾಯವೊಂದು ಪರಂಪರಾನುಗತವಾಗಿ ಮನವೊಪ್ಪಿ ಗ್ರಹಿಸುವ ಸಂಕೇತಗಳ ಮೊತ್ತ ಎಂದು ಹೇಳಬಹುದು. ದಿನ ಬದುಕಲ್ಲಿ ಬಳಕೆಯಾಗುವ ನಡೆ-ನುಡಿ ಇತ್ಯಾದಿ ಪ್ರತಿಯೊಂದಕ್ಕೂ ಒಂದು ಭಾವನಾ ಪ್ರಪಂಚವಿರುತ್ತದೆ.

ಹೊಸ್ತಿಲಿನ ಸಂಪ್ರದಾಯವನ್ನು ಅದರ ಸ್ವರೂಪಸಾಮ್ಯ ಹಾಗೂ ಗುಣಸಾಮ್ಯದಿಂದ ಗ್ರಹಿಸಬಹುದಾಗಿದೆ. ಸಂಪ್ರದಾಯ ಬದುಕಿಗೆ ಪ್ರತಿಬಂಧಕವೆನಿಸಿದರೆ ಒಂದೊಂದು ಬಾರಿ ಬದುಕು ಸಂಪ್ರದಾಯಕವೆನಿಸಲೂ ಬಹುದು. ಹೀಗಾಗಿ ಇವೆರಡು ಒಂದೇ ನಾಣ್ಯದ ಎರಡು ಮುಖಗಳು. ಇಂಥ ಸಂಪ್ರದಾಯದಲ್ಲಿ ಆಡಂಬರಕ್ಕಿಂತ ಆಲೋಚನೆ, ಕಠಿಣತೆಗಿಂತ ಸರಳತೆ, ಜಡತೆಗಿಂತ ಅದರ ಗತಿಶೀಲ ಗುಣಕ್ಕೆ ಮಹತ್ವಕೊಡಬೇಕಾಗುತ್ತದೆ. ಸಂಪ್ರದಾಯವೆನ್ನುವುದು ತನ್ನ ಮಿತಿಯಲ್ಲಿಯೇ ಪ್ರಗತಿ ಮುಖವಾಗಿಯೂ ಇರಬೇಕಾಗುತ್ತದೆ. ಅಂದೊಂದು ಸಂಕೋಲೆಯಾಗಬಾರದು. ಅಂದರೆ ಒಂದು ಸಂಪ್ರದಾಯದಿಂದ ಇನ್ನೊಂದು ಸಂಪ್ರದಾಯ ಜೀವ ಪಡೆಯಬೇಕೆ ವಿನಹಃ ಅದು ತಾನೇ ಸ್ಥಿರವೆಂದು ಭ್ರಮಿಸಬಾರದು. ಈ ರೀತಿ ಸಂಪ್ರದಾಯ ಮತ್ತು ಅದರ ಗತಿಶೀಲ ಪ್ರವೃತ್ತಿಯ ಮೂಲಕ ಹೊಸ್ತಿಲಿನ ಸಾಂಸ್ಕೃತಿಕ ಅನನ್ಯತೆಯನ್ನು ನಿರ್ವಚಿಸಿಕೊಳ್ಳುವುದು ಈ ಅಧ್ಯಯನದ ಪ್ರಮುಖ ಉದ್ದೇಶ.

'ಹೊಸ್ತಿಲು' ಎಂದಾಕ್ಷಣ ಕಣ್ಮುಂದೆ ಬರುವುದು ಮನೆ. ಈ ಮನೆ ವ್ಯಕ್ತಿಯೊಬ್ಬನ ನೆಮ್ಮದಿಯ ತಾಣವೂ ಆಗಿದೆ. 'ಮನೆ' ಎಂಬ ಪರಿಕಲ್ಪನೆ ಆದಿಮಾನವನಿಂದಲೆ ಹುಟ್ಟಿರಬಹುದು. ಮರದ ಪೊಟರೆ, ಗುಹೆಯ ಒಳಗೆ ಪ್ರಾಣಿಗಳಿಂದ, ಮಳೆಯಿಂದ ರಕ್ಷಣೆಯನ್ನು ಪಡೆಯಲು ಆಶ್ರಯ ಪಡೆಯುತ್ತಿದ್ದ ಆದಿಮಾನವ ಗುಹೆಯ ಬಾಯಿಗೆ ಕಲ್ಲುಬಂಡೆಯನ್ನು ಇಟ್ಟು ನೆಮ್ಮದಿಯನ್ನು ಕಂಡನು. ಬಹುಶಃ ಇವೇ ಮುಂದೆ ಮನೆ ಮತ್ತು ಬಾಗಿಲುಗಳ ಸೃಷ್ಟಿಗೆ ಮೂಲ ಪ್ರೇರಣೆಯಾಗಿರಬಹುದು. ಕೇವಲ ಆಶ್ರಯದ ದೃಷ್ಟಿಯಿಂದ ಈ ಉಪಾಯವನ್ನು ಹೂಡಿದ ಆದಿಮಾನವ ಗುಹೆಯಿಂದ ಗುಡಿಸಲನ್ನು ನಿರ್ಮಿಸಿ ವಾಸ ಮಾಡ ತೊಡಗಿದನು. ಗವಿ-ಗವ್ವರ, ಮರದ ಪೊಟರೆಗಳ ವಾಸದಿಂದ ಗುಡಿಸಿಲಿನವರೆಗೆ ಬಂದಂತೆ ನಾಗರಿಕ ಪ್ರಜ್ಞೆ ಜಾಗೃತವಾದಂತೆ ಮಳೆ, ಗಾಳಿ, ಬೆಂಕಿಯಿಂದ ಸಂರಕ್ಷಣೆ ಪಡೆಯಲು ತಮ್ಮ ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವಂತಹ ದೀರ್ಘಕಾಲ ಬಾಳಿಕೆ ಬರುವ ಮನೆ ನಿರ್ಮಾಣಕ್ಕೆ ಕೈ ಹಾಕಿದ. ಮನೆ ಎಂದರೆ ಕೇವಲ ನಾಲ್ಕು ಗೋಡೆಗಳಾದರೆ ಸಾಕೆ ಒಳಗೆ ಮತ್ತು ಹೊರಗೆ ತಿರುಗಾಡಲು, ಗಾಳಿಯ ಸಂಚಾರವಾಗಲು, ಬೆಳಕು ಪ್ರವೇಶಿಸಲು ಒಂದು ಮಾರ್ಗ ಬೇಡವೆ? ಈ ಮಾರ್ಗವೇ ಬಾಗಿಲು. ಮಾರ್ಗದ ಸೃಷ್ಟಿಯೂ ಆಯಿತು. ಈ ಮಾರ್ಗಕ್ಕೆ ಸುಲಭವಾಗಿ ತೆರೆದು ಮುಚ್ಚಲು ಬರುವಂತಹ ಕದಗಳ ಅವಶ್ಯಕತೆ

ಇತ್ತು. ಇದು ಕೂಡ ಮರದ ಹಲಗೆಗಳ ಸಹಾಯದಿಂದ ಪೂರ್ಣಗೊಂಡಿತು. ಬಾಗಿಲು ಕದಗಳು ಭದ್ರವಾಗಿರಲು ಚೌಕಟ್ಟು ನಿರ್ಮಾಣವಾಯಿತು. ಈ ಚೌಕಟ್ಟಿನ ಕೆಳಭಾಗವೇ 'ಹೊಸ್ತಿಲು'.

ಜನಪದರ ಬದುಕಿನಲ್ಲಿ ಹೊಸ್ತಿಲು ಕೇವಲ ಒಂದು ಕಟ್ಟಿಗೆ ತುಂಡು ಅಥವಾ ಭೌತಿಕವಸ್ತು ಆಗದೇ ಲಕ್ಷ್ಮೀಯ ಸ್ವರೂಪವನ್ನು ಪಡೆದಿವೆ. ಮನೆಯ ಮರ್ಯಾದೆ, ಸಮಾಜ ಮತ್ತು ಕುಟುಂಬವನ್ನು ಬೇರ್ಪಡಿಸುವ ಸೀಮೆಯೆಂದು, ವೈಯಕ್ತಿಕ ಮತ್ತು ಸಾಮಾಜಿಕ ಬದುಕನ್ನು ಪ್ರತ್ಯೇಕಿಸುವ, ಕುಟುಂಬದ ಮರ್ಯಾದೆಯನ್ನು ಕಾಪಾಡುವಂತಹ ರೇಖೆಯೆಂದಾಯಿತು. ಹೀಗೆ ನಾನಾ ರೀತಿಯ ಸಾಂಕೇತಿಕ ರೂಪಗಳನ್ನು ಪಡೆದ ಹೊಸ್ತಿಲು ಮಾನವ ಬದುಕಿನ ಅವಿಭಾಜ್ಯ ಅಂಗವಾಯಿತು. ಹೊಸ್ತಿಲು ಎಂದರೆ ಮರ್ಯಾದೆ. ಮರ್ಯಾದೆ ಎಂದರೆ ಹೆಣ್ಣು. ಹೀಗೆ ಹೆಣ್ಣಿನ ಜೀವನದ ಸುತ್ತ ಬೇಲಿಯ ರೂಪದಲ್ಲಿ ಬಿಗಿದ ಹೊಸ್ತಿಲು ಆಕೆಯ ದೈನಂದಿನ ಕೃತ್ಯಗಳಲ್ಲಿ ಪ್ರಥಮ ಸ್ಥಾನ (ಪೂಜೆಯ ರೂಪದಲ್ಲಿ) ಪಡೆಯಿತು.

ಒಂದು ಕಡೆ ಪೂಜ್ಯನೀಯ ಸ್ಥಾನವನ್ನು ಪಡೆದುಕೊಂಡು ಹೊಸ್ತಿಲು ಮತ್ತೊಂದೆಡೆ ರಕ್ಷಣೆ ಮತ್ತು ಭಕ್ಷಣೆಯ ಪಾತ್ರವನ್ನು ವಹಿಸುತ್ತ ಬಂದಿದೆ. ಪ್ರತಿನಿತ್ಯ ಹೊಸ್ತಿಲು ತೊಳೆದು ಅರಿಷಿನ ಕುಂಕುಮ, ಹೂಗಳಿಂದ ಪೂಜಿಸಿ, ರಂಗೋಲಿಗಳಿಂದ ಅಲಂಕರಿಸಿ ಅದರ ಶುದ್ಧೀಕರಣವು ಆಯಿತು. ಜೊತೆಗೆ ಮನೆಯ ಒಳಗೆ ಜನರಿದ್ದಾರೆ ಎಂಬ ಭಾವನೆಯು ಬರುತ್ತದೆ. ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೊ ಎಂಬ ಬಸವಣ್ಣನವರ ವಚನದಲ್ಲಿಯೂ ಹೊಸ್ತಿಲ ಸ್ವಚ್ಛತೆ ಮತ್ತು ಮನೆಯ ಒಳಗೆ ಮನೆಯವರ ವಾಸವನ್ನು ಎತ್ತಿ ತೋರಿಸುವಂತಿದೆ. ಹೊಸ್ತಿಲ ಮೇಲಣ ಕಸಕಡ್ಡಿ, ಅಸ್ವಚ್ಛತೆಯು ಜನರವಾಸರಹಿತ ಮನೆಯ ವಾತಾವರಣ ಎತ್ತಿತೋರುತ್ತದೆ. ಜನಸಂಚಾರವಿಲ್ಲವೆಂದೆನಿಸುತ್ತದೆ. ಹೊಸ್ತಿಲ ಪೂಜೆ ಸ್ವಚ್ಛತೆ ಮನೆಯ ಯೋಗಕ್ಷೇಮದ ಪ್ರತೀಕವೂ ಆಗಿದೆ.

ಹೊಸ್ತಿಲು ಮಾನವನ ವೈಯಕ್ತಿಕ ಮತ್ತು ಸಾಮಾಜಿಕ ಜೀವವನ್ನು ವಿಭಜಿಸುವಂತಹದ್ದು. ಇಲ್ಲಿ ವೈಯಕ್ತಿಕತೆಯೆಂದರೆ ಮನೆಯ ಒಳಗೆ ಸಾಮಾಜಿಕತೆಯೆಂದರೆ ಮನೆಯ ಹೊರಗೆ ಎಂದು ಸ್ಪಷ್ಟವಾಗಿ ಸೂಚಿತವಾಗುತ್ತದೆ. ಸಂಘ ಜೀವಿಯಾದ ಮನುಷ್ಯನಿಗೆ ಒಳಗೂ ಅಂದರೆ ವೈಯಕ್ತಿಕ ಜೀವನ ಇರುವಂತೆ, ಹೊರಗೂ ಅಂದರೆ ಸಾಮಾಜಿಕ ಜೀವನ ಇದೆ. ಇವೆರಡರ ನಿರಂತರ ಸಂಘರ್ಷ ಮತ್ತು ಸಮನ್ವಯದಲ್ಲಿ ಅವನ ಒಟ್ಟು ಜೀವನ ರೂಪುಗೊಳ್ಳುತ್ತದೆ. ವೈಯಕ್ತಿಕತೆಯನ್ನು ಕಾಪಾಡಿಕೊಳ್ಳುತ್ತಲೆ ಸಾಮಾಜಿಕತೆಯನ್ನು ಜೀವಿಸಬೇಕಾದ ಅನಿವಾರ್ಯತೆ ಸಮಾಜ ಜೀವದಲ್ಲಿ ವೈಯಕ್ತಿಕ ಜೀವನ ಕರಗಿ ಹೋಗಬಹುದಾದ ಆದರ್ಶ ಬದುಕು ಇವುಗಳನ್ನು ಸಾಧಿಸುತ್ತಲೆ ಅವನು ಬದುಕನ್ನು ಮುನ್ನಡೆಸುತ್ತಾ ಹೋಗುತ್ತಾನೆ. ಇಲ್ಲಿ ವೈಯಕ್ತಿಕ ಎನ್ನುವುದು ಆತನು ಮಾತ್ರ ಅಲ್ಲದೆ ಆತನ ಇಡಿ ಪರಿವಾರವೇ ಒಳಗೊಳ್ಳುತ್ತದೆ. ಸಾಮಾಜಿಕತೆ

ಎಂಬುದು ಸಮಾಜದ ಜೊತೆಗೆ ನಿಸರ್ಗವನ್ನು ಒಳಗೊಳ್ಳುತ್ತಿರುವುದು ವೇದ್ಯವಾಗುತ್ತದೆ. ಹೀಗೆ ವ್ಯಕ್ತಿ ಮತ್ತು ಸಮಾಜಗಳ ನಡುವಿನ ಮುಖಾಮುಖಿಯನ್ನು ಎಳೆದು ತೋರುವ ಸುವರ್ಣರೇಖೆಯ ಹಾಗೆ ಹೊಸ್ತಿಲು ಮಾನವ ಜೀವನದಲ್ಲಿ ತನ್ನ ಮಹತ್ವದ ಪಾತ್ರವನ್ನು ಆಡುತ್ತಲೆ ಇದೆ.

ಹೊಸ್ತಿಲು ಬಾಗಿಲ ತಳ, ಪ್ರವೇಶದ್ವಾರ, ಹೊಸ್ತಿಲಲ್ಲಿ ಕಾಲಿಡು-ತೊಡಗು-ಪ್ರಾರಂಭವಾಗು, ಹೊಸ್ತಿಲು ತುಳಿ ಮೆಟ್ಟು ಪ್ರವೇಶಿಸು, ಅವನು ಸಾಲೆಯ ಹೊಸ್ತಿಲು ತುಳಿದವನಲ್ಲ. ಹೊಸ್ತಿಲು ದಾಟು, ಮನೆ ಬಿಟ್ಟು ಹೋಗು, ಬೀದಿಗಿಳಿ, ಕೆಟ್ಟ ದಾಂ ಓಡಿ, ರಾಯರು ಸಾಯುವವರೆಗೂ ಅವರ ಹೆಂಡತಿಯು ಮನೆಯ ಹೊಸ್ತಿಲು ದಾಟಿದವರಲ್ಲ. ರಾಮಚಂದ್ರನು ಈಗ ಯೌವನದ ಹೊಸ್ತಿಲು ದಾಟಿದ್ದಾನೆ ಎನ್ನುವ ಮಾತಿಗೇನು ಬರವಿಲ್ಲ. ಹೊಸ್ತಿಲು ಕುಟುಂಬದ ಬಹುಮುಖ್ಯ ಸೀಮಾರೇಖೆ. ಕುಟುಂಬದ ಗೌರವಾದರಗಳ ಒನ್ನೆಲೆಯಲ್ಲಿ ಈ ಹೊಸ್ತಿಲು ಬಹುಮುಖ್ಯವಾದದ್ದು. ಇದನ್ನು ದಾಟುವುದೆಂದರೆ ಮನೆಯನ್ನು ಬಿಟ್ಟು ಹೋಗುವುದೆಂದೇ ಅರ್ಥ. ಹಿಂದೆ ಮತ್ತು ಇಂದು ಕೂಡ ಹೆಂಗಸರಿಗಂತೂ ಮನೆಯ ಹೊಸ್ತಿಲೇ ಗಡಿಯಾಗಿ ಉಳಿದಿದೆ. ಅದನ್ನು ದಾಟುವುದೇ ಅಪರಾಧವೆನ್ನಿಸಿರಬೇಕು. ನಮ್ಮ ತಾಯಿ ಹೊಸ್ತಿಲು ದಾಟಿದವರಲ್ಲ. ಹೊಸ್ತಿಲು ದಾಟಿದ ಹೆಣ್ಣು ಕುಲಕ್ಕೆ ಅಪಕೀರ್ತಿ ತರುವುದಂತೂ ಖಚಿತ ಎನ್ನುವ ಭಾವನೆ ನಮ್ಮ ಸಮಾಜದಲ್ಲಿದೆ. ಕುಟುಂಬದ ಒಳಗೆ ಇರುವಂತಹ ಸ್ತ್ರೀಗೆ ಸಿಗುವ ಗೌರವ ಮನೋಭಾವನೆ ಈ ಹೊಸ್ತಿಲು ದಾಟಿದ ಹೆಣ್ಣಿಗೆ ದೊರೆಯುವುದು ಕಠಿಣ.

ಸಮುದಾಯವೊಂದರ ಸಂದರ್ಭದಲ್ಲಿ ಒಳಗು ಮತ್ತು ಹೊರಗನ್ನು ವಿಂಗಡಿಸುವ ಸೀಮಾರೇಖೆ ಎಂದರೆ ಮನೆಯ ಹೊಸ್ತಿಲು. ಹೊಸ್ತಿಲ ಪ್ರವೇಶ ಎಂದರೆ ಒಳಗೂ ಅಲ್ಲ, ಹೊರಗೂ ಅಲ್ಲ. ನರಸಿಂಹ ಹೊಸ್ತಿಲು ಮೇಲೆ ಕುಳಿತುಕೊಂಡೇ ಹಿರಣ್ಯಕಶ್ಯಪುವಿನ ಹೊಟ್ಟೆಯನ್ನು ಸೀಳಿದನೆಂದು ಪುರಾಣಕಥೆ ಇರುವುದು ಎಲ್ಲರಿಗೂ ಗೊತ್ತು. ಮಾರ್ಗಶಿರ ಮಾಸದಲ್ಲಿ ದೇವತೆಗಳ ಆಗಮನ ಆಗುವುದು ಕೂಡ ಹೊಸ್ತಿಲು ಮೇಲೆಯೇ ಎಂದು ಆ ಹುಣ್ಣಿಮೆಗೆ 'ಹೊಸ್ತಿಲ ಹುಣ್ಣಿಮೆ' ಎಂದು ಹೆಸರಾಗಿದೆ.

ಸಮಾಜದ ಜೊತೆಗಿದ್ದು ತನ್ನ ಕುಟುಂಬ ಜೀವನವನ್ನು ಕಟ್ಟಿಕೊಂಡ ವ್ಯಕ್ತಿ ಹೊಸ್ತಿಲ ಒಳಗಿನ ಜವಾಬ್ದಾರಿಯನ್ನು ಇತಿಹಾಸದ ಒಂದು ಘಟ್ಟದಲ್ಲಿ ಮಹಿಳೆಗೆ ಬಿಟ್ಟುಕೊಟ್ಟಿದ್ದಾನೆ. ಹಾಗೆ ಬಿಟ್ಟು ಕೊಡುವಾಗ ಮನೆಯ ಹೊಣೆಗಾರಿಕೆಯ ಜೊತೆಗೆ ಮನೆತನದ ಮರ್ಯಾದೆಗೆ ಅವಳನ್ನು ಬಾಧ್ಯಳಾಗಿಸಿದ್ದಾನೆ. ಹೀಗೆ ಹೆಣ್ಣಿನ ವರ್ತನೆಗಳು ಹೊಸ್ತಿಲಿನೊಂದಿಗೆ ನೇರ ಸಂವಾದಕ್ಕಿಳಿಯುವುದನ್ನು, ಮರ್ಯಾದೆಯೆನ್ನುವುದು ಮಿತಿ ಮಾತ್ರವೇ ಅಲ್ಲ ಗೌರವ ಎಂಬ ವಿಶೇಷ ಅರ್ಥವನ್ನು ಕೊಡುತ್ತಾ ಹೆಣ್ಣು ಮತ್ತು ಹೊಸ್ತಿಲಿಗೆ ಸಮನಾಗಿ ಚಾಚಿಕೊಳ್ಳುವುದನ್ನು ನೋಡಬಹುದಾಗಿದೆ. ಹೀಗೆ ಹೊಸ್ತಿಲು ತೊಟ್ಟ ರೂಪಕ್ಕಿಂತ ಅದರ ಸಾಂಕೇತಿಕತೆಯೆ ಹೆಚ್ಚಾಗಿರುವುದನ್ನು ನಮ್ಮ ದೇಶದ ಪುರಾಣ ಮತ್ತು ಚರಿತ್ರೆಗಳಲ್ಲಿ ನೋಡುತ್ತವೆ.

ಮನೆಯ ಹೊಸ್ತಿಲು ಒಳಗು ಹೊರಗನ್ನು ವಿಂಗಡಿಸುವಂತೆ ಮನೆಯ ಅಸ್ತಿತ್ವವನ್ನು ನಮ್ಮ ಭಾವನೆಯ ಮಟ್ಟದಲ್ಲಿ ಇನ್ನೊಂದು ವಿಂಗಡಣೆಯನ್ನು ಮಾಡುತ್ತದೆ. ಮನೆಯ ಒಳಗಿನವರೆಲ್ಲ ಆತ್ಮೀಯರು, ಸ್ವಜನರು. ಹೊರಗಿನವರು ಪರಕೀಯರು. ಹೀಗೆ ಕೌಟುಂಬಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾದ ತರತಮತೆಯನ್ನು, ಸೌಜನ್ಯ ಸೌಹಾರ್ದತೆಯನ್ನು ಹೊಸ್ತಿಲಿನ ಅಧ್ಯಯನ ಕಟ್ಟಿಕೊಡುತ್ತದೆ.

ಹೊಸ್ತಿಲು ಪದದ ನಿಜವಾದ ವ್ಯಾಖ್ಯಾನವನ್ನು ಶ್ರೀ ವಿಷ್ಣುವಿನ ನರಸಿಂಹನ ಅವತಾರದ ಸಂದರ್ಭದಲ್ಲಿ ನೋಡಬಹುದಾಗಿದೆ. ಮನೆಯ ಹೊರಗಾಗಲಿ ಅಥವಾ ಒಳಗಾಗಲಿ, ಭೂಮಿಯ ಮೇಲಾಗಲಿ ಅಥವಾ ಆಕಾಶದಲ್ಲಾಗಲಿ, ಪ್ರಾಣಿಗಳಿಂದಾಗಲಿ, ಮನುಷ್ಯರಿಂದಾಗಲಿ, ಆಯುಧಗಳಿಂದಾಗಲಿ, ನನಗೆ ಮರಣ ಬರಬಾರದು ಎಂಬ ವರವನ್ನು ಪಡೆದ ಹಿರಣ್ಯಕಶ್ಯಪುವನ್ನು ನರನು ಅಲ್ಲದ ಪ್ರಾಣಿಯು ಅಲ್ಲದ ನರಸಿಂಹನು ಹಗಲೂ ರಾತ್ರಿಗಳಲ್ಲದ, ಸಾಯಂಕಾಲದ ಸಂಜೆಯಲ್ಲಿ ಮನೆಯ ಒಳಗೂ ಅಲ್ಲ, ಹೊರಗೂ ಅಲ್ಲದ ಹೊಸ್ತಿಲ ಮೇಲೆ ನಿಂತು ಹಿರಣ್ಯಕಶ್ಯಪುವನ್ನು ತನ್ನ ತೊಡೆಯ ಮೇಲೆ ಹಾಕಿಕೊಂಡು ಯಾವುದೇ ಆಯುಧಗಳನ್ನು ಬಳಸದೆ ಕೈಗಳ ಉಗುರುಗಳಿಂದ ಅವನ ಎದೆಯನ್ನು ಸೀಳಿದನು. ಹಿರಣ್ಯಕಶ್ಯಪುವಿನ ಸಾವಿಗೆ ನರಸಿಂಹ ಹೊಸ್ತಿಲನ್ನೇ ಏಕೆ ಆಯ್ಕೆ ಮಾಡಿಕೊಂಡ ಎಂದು ಯೋಚಿಸುವಾಗ ಆತ ಪಡೆದಿದ್ದ ವರದಲ್ಲಿ ಹೊರಗೆ ಅಲ್ಲದೆ ಒಳಗೆ ಮತ್ತು ಮೇಲೆ ಇಲ್ಲವೆ ಕೆಳಗೆ ಎಂಬ ಮಾತುಗಳು ನಮ್ಮನ್ನು ಚಿಂತನೆಗೆ ತೊಡಗಿಸುತ್ತವೆ. ಹೊಸ್ತಿಲು ಮೇಲೆ ಮತ್ತು ಕೆಳಗೆ ಇಲ್ಲದೆ ಮಧ್ಯದ ಸ್ಥಾನ ಪಡೆದಿದೆ. ಅಲ್ಲದೆ ಹೊಸ್ತಿಲು ಮನೆಯನ್ನು ಒಳಗೂ ಹೊರಗೂ ಎಂಬುದಾಗಿ ಭೇದಿಸುತ್ತದೆ ಎಂಬಂತಾಯಿತು.

ಚರಿತ್ರೆ ಪುರಾಣಗಳಲ್ಲಿಯೂ ಕೂಡ ನಾವು ಹೊಸ್ತಿಲಿನ ಉಲ್ಲೇಖ ಕಾಣಬಹುದಾಗಿದೆ. ರಾಮಾಯಣದಲ್ಲಿ ಲಕ್ಷ್ಮಣನು ಎಳೆದಂತಹ ರೇಖೆ ಕೂಡ ಹೊಸ್ತಿಲನ್ನೇ ಪ್ರತಿನಿಧಿಸುತ್ತದೆ. ಆ ಮೂಲಕ ರಕ್ಷಣೆಯನ್ನು ಕೂಡ. ರೇಖೆ ದಾಟಿದ ಸೀತೆಯ ಗತಿ ಅದರ ಪರಿಣಾಮ ಇಂದಿಗೂ ನಮ್ಮ ಸ್ಮರಣೆಯಲ್ಲಿದೆ. ಪ್ರತಿಯೊಂದು ಮನೆಯ ಹೊಸ್ತಿಲು ಕೂಡ ಆ ಮನೆಯ ಹೆಣ್ಣುಮಕ್ಕಳ ರಕ್ಷಣೆಯ ಹೊಣೆಯನ್ನು ಹೊತ್ತಿದೆ. ಅದರ ಮಿತಿಯಲ್ಲಿ ಅವಳು ಸುರಕ್ಷಿತವಾಗಿರಬಲ್ಲಳು ಎಂಬುದು ಪರಂಪರೆಯಿಂದ ಬೆಳೆದು ಬಂದಿದೆ. ಪುರಾಣ ಚರಿತ್ರೆಗಳಲ್ಲಾಗಲಿ, ವಾಸ್ತವ ಬದುಕಿನಲ್ಲಾಗಲಿ ಮಹಿಳೆಗೆ ಒಂದು ಮಿತಿ ಅಥವಾ ಚೌಕಟ್ಟು ಎಂದರೆ ಮನೆಯ ಹೊಸ್ತಿಲು ಆಗಿದೆ. ಮನೆಗೆ ಒಂದು ಹೊಸ್ತಿಲಿದ್ದಂತೆ ಊರಿಗೆ ಒಂದು ಅಗಸೆ, ಕೋಟೆಗೆ ಒಂದು ಬಾಗಿಲು. ಇವು ಆಯಾ ಪ್ರದೇಶದ ಸಂಕರ್ಷಣೆಯನ್ನು ಮಾಡುವ ಕಾರ್ಯನಿರ್ವಹಿಸುತ್ತವೆ. ಹಿಂದೆ ಸಂಜೆಯಾಗುತ್ತಲೆ ಅಗಸೆ ಬಾಗಿಲು ಅಥವಾ ಕೋಟೆ ಬಾಗಿಲು ಹಾಕಿ ಭದ್ರಪಡಿಸಿದರೆಂದರೆ ಬೆಳಗಿನವರೆಗೆ ಯಾರು ಪ್ರವೇಶಿಸುವಂತಿರಲಿಲ್ಲ. ಅಂದರೆ ಸಾಯಂಕಾಲ ದೀಪ ಹಚ್ಚುವುದಕ್ಕಿಂತ ಮೊದಲೆ ತಮ್ಮ ತಮ್ಮ ತಾಣಗಳನ್ನು ಸೇರಿಕೊಳ್ಳಬೇಕೆಂದು ಈ ಕಟ್ಟೆಚ್ಚರ.

ಹೊಸ್ತಿಲು ಮನೆಯ ಅವಿಭಾಜ್ಯ ಭಾಗವೇ ಆಗಿದ್ದರೂ 'ಅಧ್ಯಯನದ ವಸ್ತು' ಆಗಿ ಗಂಭೀರ ವಿವೇಚನೆಗೆ ಇದುವರೆಗೆ ಒಳಪಟ್ಟಿರುವುದಿಲ್ಲ. ಇದಕ್ಕೆ ಕಾರಣ ಪ್ರಾಯಶಃ ಅದು ಪುರಾಣ, ಚರಿತ್ರೆ ಮತ್ತು ಸಂಪ್ರದಾಯಗಳಲ್ಲಿ ಚದುರಿ ಹೋಗಿರುವುದೇ ಆಗಿದೆ. ಅದರ ಆರಂಭ ಮತ್ತು ಬೆಳವಣಿಗೆಯನ್ನು ನಾಗರಿಕತೆಯ ಬೆಳವಣಿಗೆಯ ಜೊತೆಗಿಟ್ಟು ಗಮನಿಸಲು ಸಾಧ್ಯವಿದೆ. ಹಾಗೆಯೇ ಸಂಸ್ಕೃತಿಯ ನಿರ್ವಚನವನ್ನು ಹೊಸ್ತಿಲ ಮೂಲಕ ಕಟ್ಟಿಕೊಡುವುದು ಸಾಧ್ಯವಿದೆ. ಆದರೆ ಈ ತೆರನಾದ ಪ್ರಯತ್ನಗಳು ಬಹುಶಃ ನಡೆದ ಹಾಗೆ ಕಾಣಿಸುವುದಿಲ್ಲ. ಹೊಸ್ತಿಲು ಮೂರ್ತಸ್ವರೂಪವೇ ಆದರೂ ಅಮೂರ್ತತೆಯಲ್ಲಿ, ಸಾಂಕೇತಿಕತೆಯಲ್ಲಿ ತೆರೆದುಕೊಳ್ಳುವುದೇ ಅಧಿಕ. ಹೊಸ್ತಿಲನ್ನು ಅಧ್ಯಯನದ ಶಿಸ್ತಿಗೆ ಒಳಪಡಿಸಿದಾಗ ಅನೇಕ ಹೊಸ ಹೊಸ ಸಾಧ್ಯತೆಗಳು, ಸವಾಲುಗಳು ನಮ್ಮೆದುರು ಬಿಚ್ಚಿಕೊಳ್ಳುತ್ತವೆ.

ರೂಪಕ್ಕೆ ಒದಗುವ ಹೊಸ್ತಿಲನ್ನು ಅದರ ವಿಭಿನ್ನ ನೆಲೆಗಳಲ್ಲಿ ಅರ್ಥೈಸುವಲ್ಲಿಯೇ ಅದರ ನಿಜವಾದ ಅಧ್ಯಯನದ ಮಹತ್ವ ಅಡಿಗಿದೆ. ಹಾಗೂ ಅಧ್ಯಯನದ ನೆಲೆಗಳಲ್ಲಿ ಮಾನವನ ಸಮಗ್ರ ಬದುಕು ಹುದುಗಿದೆ. ಈ ಬದುಕು ವೈಯಕ್ತಿಕತೆಯಿಂದ ಕೌಟುಂಬಿಕತೆಗೆ ಸೇರಿ ಸಾಮಾಜಿಕತೆಯವರೆಗೆ, ಪುರಾಣ ಚರಿತ್ರೆಯಿಂದ ಹಿಡಿದು ವರ್ತಮಾನದವರೆಗೆ ತನ್ನನ್ನು ವಿಸ್ತರಿಸಿಕೊಂಡಿದೆ. ಇವೆಲ್ಲವುಗಳ ಜೊತೆಗೆ ನಾಗರಿಕತೆಯ ಎಲ್ಲ ಹೊಡೆತಗಳಲ್ಲೂ ತನ್ನನ್ನು ಇನ್ನೂ ರಕ್ಷಿಸಿಕೊಳ್ಳುತ್ತ ಬಂದಿರುವ ಜಾನಪದ ಬದುಕು ಇದೆ. ಇದು ತನ್ನ ಸಾಹಿತ್ಯ ಸಂಪ್ರದಾಯ ಐತಿಹ್ಯಗಳಲ್ಲಿ ಹೊಸ್ತಿಲಿನ ಮಹತ್ವವನ್ನು ಉಳಿಸಿ ಬೆಳಸಿಕೊಂಡು ಬಂದಿದೆ. ಹೀಗೆ ಪುರಾಣ ಚರಿತ್ರೆ ಸಾಹಿತ್ಯದ ಜೊತೆಗೆ ಜಾನಪದವನ್ನು ಸೇರಿಕೊಂಡು ಹೊಸ್ತಿಲ ಅಧ್ಯಯನಕ್ಕೆ ತೊಡಗುವುದು ಅರ್ಥಪೂರ್ಣವಾಗಿ ಕಾಣುತ್ತದೆ.

ವ್ಯಾಪ್ತಿ : ಹೊಸ್ತಿಲು ಭಾರತೀಯ ಜನಬದುಕಲ್ಲಿ ಒಂದು ಪ್ರಧಾನ ಸಾಂಸ್ಕೃತಿಕ ಘಟಕ ಮತ್ತು ಆರಾಧನೆಯ ಸಂಕೇತ. ನಿತ್ಯ ಬೆಳಗಿನ ಜಾವದಿ ಪೂಜೆಯ ಮೂಲಕ ದೈವವನ್ನು ಕಾಣುವ ಸರಳ ಆಚರಣೆ ಇದಾಗಿದೆ. ಗ್ರಾಮದಿಂದ ಹಿಡಿದು ನಗರ ನಾಗರಿಕತೆಯ ಜೀವನದಲ್ಲಿ ಹೊಸ್ತಿಲಿನ ಮಹತ್ವ ಹಾಸುಹೊಕ್ಕಾಗಿದೆ. ಹೊಸ್ತಿಲು ಪದದ ಬಗೆಗೆ ಜಿಜ್ಞಾಸೆಯನ್ನು ಮುಂದುವರೆಸಿದಾಗ ಸುಮಾರು ಐದುಸಾವಿರ ವರ್ಷಗಳಷ್ಟು ಹಿಂದಿನ ಇತಿಹಾಸ ಇದದ್ದು ಗ್ರಹಿಕೆಗೆ ಬರುತ್ತದೆ. ಹರಪ್ಪಾ ಮೊಹೆಂಜೋದಾರೋ ಸಂಸ್ಕೃತಿ, ಸಿಂಧುನಾಗರಿಕತೆ ಹಾಗೂ ಗತಕಾಲದ ಅನೇಕ ರಾಜಮನೆತನಗಳು ಚರಿತ್ರೆಯುದ್ದಕ್ಕೂ ಹೊಸ್ತಿಲು ಬಗೆಗೆ ಇಟ್ಟುಕೊಂಡಿದ್ದ ಅನೇಕ ಮೌಲಿಕ ಸಂಗತಿಗಳು ಗ್ರಹಿಕೆಗೆ ಬರುತ್ತವೆ. ಅಷ್ಟೇ ಅಲ್ಲದೆ ಶಿಲ್ಪಶಾಸ್ತ್ರ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದಲೂ ತನ್ನದೇ ಆದ ಸ್ಥಾನವನ್ನು ಹೊಸ್ತಿಲು ಉಳಿಸಿಕೊಂಡಿದೆ.

ಹೊಸ್ತಿಲು ಕೇವಲ ಒಂದು ಮನೆಗೆ ಅಥವಾ ಹೆಣ್ಣಿನ ಬದುಕಿಗೆ ಸೀಮಿತವಾಗಿರದೆ ವಿಶಾಲ ವ್ಯಾಪ್ತಿಯನ್ನು ಒಳಗೊಂಡಿದೆ. ಊರಿಗೆ ಅಗಸಿಯ ರೂಪದಲ್ಲಿ, ಕೋಟೆ ಕೊತ್ತಲಗಳಿಗೂ ಕೂಡ ಒಂದು ಬಾಗಿಲು ಇರುತ್ತಿತ್ತು. ಇದನ್ನು ದಾಟಿ ಶತ್ರುಗಳು ಒಳಬಂದಂತೆ ಸೈನಿಕರು ಯಾವಾಗಲೂ ಕಾವಲು

ಕಾಯುತ್ತಿದ್ದರು. ಅನ್ಯರ ಪ್ರವೇಶ ತಡೆಯಲು ಇದು ಸಾಂಕೇತಿಕವಾಗಿ ದೇವಸ್ಥಾನದ ಬಾಗಿಲುಗಳಿಗೆ ದ್ವಾರಪಾಲಕರ ಕೆತ್ತನೆಯನ್ನು ನೋಡಬಹುದು. ಪುರಾಣ ಮತ್ತು ಇತಿಹಾಸಗಳಲ್ಲಿ ಸ್ವರ್ಗ, ದೇವಲೋಕ, ಅಧೋಲೋಕಗಳ ಪ್ರವೇಶದ್ವಾರ ಮತ್ತು ಬಾಗಿಲುಗಳನ್ನು ಕುರಿತು ಹೇಳಲಾಗಿದೆ. ಇವೆಲ್ಲದಕ್ಕೂ ರಕ್ಷಕರಿದ್ದಾರೆ. ಅಲ್ಲಿ ಪ್ರವೇಶಿಸುವುದಕ್ಕೆ ಕೆಲವು ವಿಶೇಷ ಅರ್ಹತೆಗಳಿರಬೇಕಾಗುತ್ತದೆ. ಸಾಮಾನ್ಯವಾಗಿ ನಿಷಿದ್ಧವಾದ ಬಾಗಿಲನ್ನು ಜನಪದ ಕಥೆಗಳಲ್ಲಿ ಕಾಣುತ್ತೇವೆ.

ಹೊಸ್ತಿಲನ್ನು ಬಳಸುತ್ತ ಬಂದ ವ್ಯಕ್ತಿ ಮತ್ತು ಸಮಾಜದ ಅಧ್ಯಯನದ ಜೊತೆಗೆ ಹೊಸ್ತಿಲನ್ನು ಬಳಕೆಗೆ ಸಿದ್ಧಪಡಿಸಲು ಕಾರಣವಾದ ಒಂದು ಜನಾಂಗವು ಆದಿಮ ಕಾಲದಿಂದಲೂ ಇಲ್ಲಿ ಪರಂಪರೆಯಾಗಿ ಬೆಳೆದುಬಂದಿದೆ. ಶಿಲೆ ಮತ್ತು ಲೋಹಗಳಲ್ಲಿ ವೈವಿಧ್ಯಮಯವಾಗಿ ಅರ್ಥಪೂರ್ಣವಾಗಿ ಕಲಾತ್ಮಕವಾಗಿ ರೂಪಿಸಿಕೊಡುವ ವಿವಿಧ ಜನಾಂಗಗಳ ಅಧ್ಯಯನದ ಒಂದು ಭಾಗವಾಗಿ ಗಮನಿಸಲಾಗಿದೆ. ಇದರಲ್ಲಿ ಹೊಸ್ತಿಲು ಮರದಿಂದಾಗಿದ್ದರೆ ಎಂತಹ ಮರ, ಮರವನ್ನು ಪೂಜಿಸಿ ಅದನ್ನು ಕಡಿದು ತರುವ ರೀತಿ, ಹೊಸ್ತಿಲನ್ನು ಮಾಡಲು ತೊಡಗುವಿಕೆ ಇತ್ಯಾದಿ ವಿಷಯಗಳನ್ನು ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿ ಈ ಅಧ್ಯಯನದಲ್ಲಿ ವಿವರಿಸಲಾಗಿದೆ. ಹೀಗೆ ಹೊಸ್ತಿಲಿನ ಮೂಲ ಸಾಮಗ್ರಿ ಮತ್ತು ರಚನಾ ತಂತ್ರ ಸಂಶೋಧನಾ ಅಧ್ಯಯನದ ವ್ಯಾಪ್ತಿಯಲ್ಲಿ ಮೊದಲ ಬಾರಿಗೆ ಇಲ್ಲಿ ವಿವರಿಸಲಾಗಿದೆ ಎಂಬುದು ನನ್ನ ತಿಳುವಳಿಕೆ. ಇದಕ್ಕಾಗಿ ಕರ್ನಾಟಕದ ವಿವಿಧ ಭಾಗಗಳ ಕೆಲವು ನಿರ್ದಿಷ್ಟ ಸಮುದಾಯಗಳನ್ನು, ಬುಡಕಟ್ಟುಗಳನ್ನು, ಪ್ರಧಾನ-ಅಧೀನ ಎನ್ನುವ ಸಂಸ್ಕೃತಿಗಳನ್ನು ಬಳಸಿಕೊಂಡಿದ್ದೇನೆ.

೧.೨. ಅಧ್ಯಯನದ ಆಕರಗಳು

ಹೊಸ್ತಿಲು ಕುರಿತಂತೆ ವೇದ, ಪುರಾಣ, ಭಾಗವತ, ರಾಮಾಯಣ, ಮಹಾಭಾರತ, ವಿಶ್ವಕರ್ಮ ವಾಸ್ತುಶಿಲ್ಪ ರತ್ನಾಕರ, ಕರ್ನಾಟಕ ಸಂಸ್ಕೃತಿ ಚರಿತ್ರೆ, ಶಬ್ದಮಣಿ ದರ್ಪಣ, ವಚನ ಸಾಹಿತ್ಯ, ಪ್ರಾಚ್ಯವಸ್ತು ಮತ್ತು ಪುರಾತತ್ತ್ವ ಇಲಾಖೆ ನಡೆಸಿದ ಸಂಶೋಧನೆ, ಸಂಗ್ರಹಿಸಿದ ಮಾಹಿತಿ ಹಾಗೂ ಜಾನಪದ ವಿಶ್ವಕೋಶಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಕೆಳಗಿನಂತೆ ಆಕರ ಸಾಮಗ್ರಿಗಳನ್ನು ಕಲೆಹಾಕಿಕೊಳ್ಳಲಾಗಿದೆ.

೧. ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ

೨. ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾದ ಬಿಡಿ ಲೇಖನಗಳು

೩. ಪ್ರಾಚೀನ ಕನ್ನಡ ಸಾಹಿತ್ಯ, ನಡುಗನ್ನಡ ಸಾಹಿತ್ಯ ಮತ್ತು ಆಧುನಿಕ ಕನ್ನಡಸಾಹಿತ್ಯದ ಪ್ರಮುಖ ಗ್ರಂಥಗಳು ಹಾಗೂ ವೇದ ಪುರಾಣ, ರಾಮಾಯಣ ಮಹಾಭಾರತದಂಥ ಗ್ರಂಥಗಳು.

೪. ಕ್ಷೇತ್ರಕಾರ್ಯದಲ್ಲಿ ಉಪಸಂಸ್ಕೃತಿ ಮತ್ತು ಪ್ರಧಾನ ಸಂಸ್ಕೃತಿಗಳನ್ನು ಸಂದರ್ಶನ ಮಾಡುವುದರ ಮೂಲಕ, ಮೌಖಿಕ ಸಾಹಿತ್ಯ ಸಂಗ್ರಹದ ಮೂಲಕ, ಬೇರೆ ಬೇರೆ ವ್ಯಕ್ತಿಗಳ ಸಂದರ್ಶನ ಮೂಲಕ ಹೀಗೆ ವಿವಿಧ ನೆಲೆಗಳ ಸಹಾಯ ಪಡೆದು ಈ ಅಧ್ಯಯನವನ್ನು ಪೂರೈಸಿಕೊಳ್ಳಲಾಗುತ್ತದೆ.

ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ತಾತ್ವಿಕ ಚೌಕಟ್ಟು ಮತ್ತು ವ್ಯಾಪ್ತಿ ಕುರಿತಂತೆ ಚರ್ಚಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಒಟ್ಟು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅದು ಪ್ರಾಚೀನಕಾಲದಿಂದ ಹಿಡಿದು ಆಧುನಿಕಕಾಲದ ಕೃತಿಕಾರರ ಆಶಯ ಮತ್ತು ಅಭಿವ್ಯಕ್ತಿಗಳನ್ನು ವಿಶ್ಲೇಷಣೆಯೊಂದಿಗೆ ಚರ್ಚೆಗೊಳಪಡಿಸಲಾಗಿದೆ. ಇದರಿಂದ ಹೊಸ್ತಿಲು ಎಂಬುದು ಕೇವಲ ಒಂದು ಭೌತಿಕ ವಸ್ತು ಎಂಬುದರ ಬದಲು ಅದು ನಾನಾ ವಿಶೇಷಾರ್ಥಗಳಲ್ಲಿ ಬಳಸಿಕೊಂಡಿದ್ದು ಗುರುತಿಸಲು ಸಾಧ್ಯವಾಯಿತು.

ಅಧ್ಯಾಯ ಮೂರರಲ್ಲಿ ಸಮುದಾಯ ಪ್ರಧಾನತೆಯ ನೆಲೆಗಟ್ಟಿನ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ. ಇಲ್ಲಿ ಮೇಲ್ವರ್ಗ ಮತ್ತು ಕೆಳವರ್ಗಗಳಲ್ಲಿ ಹೊಸ್ತಿಲಿನ ಮಹತ್ವ ಮತ್ತು ಪ್ರಾಮುಖ್ಯತೆಯನ್ನು ಆಯಾ ಸಂಕೇತಗಳನ್ನು ನೋಡಲಾಗಿದೆ. ಸಂಸ್ಕೃತಿ ಯಾವುದೇ ಇರಲಿ ಅಲ್ಲಿ 'ಹೊಸ್ತಿಲಿನ' ಆರಾಧನೆಯೇ ಪ್ರಮುಖವಾಗಿದ್ದರೂ, ಪ್ರಧಾನ ಸಂಸ್ಕೃತಿಯಲ್ಲಿ ಅದು ಸೀಮಿತ ಚೌಕಟ್ಟು, ಗಡಿರೇಖೆಯಾಗಿ ಸ್ತ್ರೀಯ ವ್ಯಕ್ತಿತ್ವವನ್ನು ಕುಂಠಿತಗೊಳಿಸುವ ಸಾಧನದಂತೆ ಕಾರ್ಯನಿರ್ವಹಿಸುವುದನ್ನು ಅಧ್ಯಯನದಿಂದ ತಿಳಿದುಬರುತ್ತದೆ. ಹಾಗೆಯೇ ಉಪಸಂಸ್ಕೃತಿಯೊಂದರಲ್ಲಿ ಈ 'ಹೊಸ್ತಿಲು' ಎನ್ನುವುದು ಸ್ತ್ರೀ ಬದುಕಿನಲ್ಲಿ ಪ್ರಧಾನ ಸಂಸ್ಕೃತಿಯಲ್ಲಿನ ಹಾಗೆ ಜಡತೆ, ಸಂಕೋಲೆ ಎಂದೆನಿಸದಿದ್ದರೂ ಕೆಲವೊಂದು ವಿಷಮ ಪರಿಸ್ಥಿತಿಯಲ್ಲಿ ಆಕೆಯನ್ನು ತನ್ನ ಸೀಮಿತಗಡಿಯಲ್ಲಿ ಎಳೆದುಕೊಳ್ಳದೆ ಬಿಡುವುದಿಲ್ಲ ಎನ್ನುವುದು ಸಾಬೀತು ಪಡಿಸುತ್ತದೆ.

ಅಧ್ಯಾಯ ನಾಲ್ಕರಲ್ಲಿ ಸ್ತ್ರೀ ಮತ್ತು ಪುರುಷರ ಒಟ್ಟು ಬದುಕಿನಲ್ಲಿ ಹೊಸ್ತಿಲು ನಿರ್ವಹಿಸುವ ಪಾತ್ರ ಮತ್ತು ಅದನ್ನು ಸ್ತ್ರೀಯಾಗಿ ಸ್ವೀಕರಿಸುವ, ಪುರುಷನಾಗಿ ಸ್ವೀಕರಿಸುವುದರಲ್ಲಿನ ಸೂಕ್ಷ್ಮ ವ್ಯತ್ಯಾಸಗಳನ್ನು ಕಂಡುಕೊಳ್ಳಲಾಗಿದೆ. ಇದರಿಂದ ತಿಳಿದುಬರುವುದೇನೆಂದರೆ ಸ್ತ್ರೀ ಹುಟ್ಟಿನೊಂದಿಗೆ 'ಕಟ್ಟುಪಾಡು'ಗಳನ್ನು ರೂಢಿಸಿಕೊಂಡೆ ಬೆಳೆಯುತ್ತಾಳೆ. ಪುರುಷ ಅದನ್ನು 'ಮೀರಿ' ನಿಲ್ಲುತ್ತಾನೆ. ಈ 'ಮೀರುವುದು' ಸ್ತ್ರೀ ಬದುಕಿನಲ್ಲಿ ಸಾಧ್ಯವಾಗದಂತೆ ಮಾಡುವುದು ಹೊಸ್ತಿಲು ಎಂಬುದು ಖಚಿತಪಡಿಸುತ್ತದೆ. ಈ ಮೂಲಕ ಸ್ತ್ರೀ ಪರಾಧೀನತೆಯನ್ನು ಪುರುಷ ಪ್ರಾಧಾನ್ಯತೆಯನ್ನು ಅಧ್ಯಯನದಿಂದ ಗುರುತಿಸಲಾಗಿದೆ.

ಅಲ್ಲದೆ ಹೊಸ್ತಿಲು ಸ್ತ್ರೀ-ಪುರುಷರ ಬದುಕಿನಲ್ಲಿ ಅಷ್ಟೇ ಅಲ್ಲದೆ ಶಿಶುವೊಂದರ ಜನನ ಮತ್ತು ಅದರ ಬೆಳವಣಿಗೆಯಲ್ಲಿ ಆಚರಣಾತ್ಮಕ ನೆಲೆಯಲ್ಲಿ ಮತ್ತು ಕೆಲವೊಂದು ರೋಗಗಳ ನಿವಾರಣೆಯಲ್ಲಿಯೂ ಸಹಕಾರಿಯಾಗಿರುವುದು ಕಂಡು ಬರುತ್ತದೆ.

ಅಧ್ಯಾಯ ಐದರಲ್ಲಿ ಹೊಸ್ತಿಲು ಎನ್ನುವುದು ಮಾನವನ ಒಟ್ಟು ಬದುಕಿನಲ್ಲಿ ಆಚರಣೆ, ಸಂಪ್ರದಾಯ, ನಂಬಿಕೆ, ಮೂಢನಂಬಿಕೆಗಳ ಹಿನ್ನೆಲೆಯಲ್ಲಿ ಕಾಣಿಸಿಕೊಳ್ಳುತ್ತದೆ. ಕುಟುಂಬದ ಕಾರ್ಯಗಳಾದ ಮದುವೆಯ ಶುಭ ಸಂದರ್ಭದಲ್ಲಿ ಸ್ತ್ರೀಯು ತನ್ನ ಗಂಡನ ಮನೆಯಲ್ಲಿ ಹಕ್ಕು ಸ್ಥಾಪನೆಯ ಪ್ರಮುಖ ಸಾಧನವಾಗಿ ಕಾಣಿಸಿಕೊಂಡರೆ, ಸಾವಿನ ಶೋಕ ಸನ್ನಿವೇಶದಲ್ಲಿ ಮನೆಯ ಋಣ ತೀರಿದುದರ ಸಂಕೇತ ಸಾಧನವಾಗಿ ಕಾಣಿಸಿಕೊಳ್ಳುತ್ತದೆ. ಅಲ್ಲದೆ ಕೃಷಿ ಬದುಕಿನ ಕ್ಷಣಗಳಲ್ಲಿ, ದೈವದ ರೂಪದಲ್ಲಿ ಮತ್ತು ಹೊಸ್ತಿಲ ಒಳಗೆ ವೈಯಕ್ತಿಕ ಬದುಕು ಕಾಯ್ದುಕೊಂಡಿರುವಂತೆ ಹೊಸ್ತಿಲ ಹೊರಗೆ ಸಾರ್ವಜನಿಕ ಬದುಕು ಸಮುದಾಯ ಕಟ್ಟಿಕೊಡುವಲ್ಲಿ ಹೊಸ್ತಿಲು ಕೊಂಡಿಯಂತೆ ನಿರ್ವಹಿಸುವ ಪಾತ್ರ ಅನನ್ಯವಾಗಿದೆ. ಒಟ್ಟು ವ್ಯಕ್ತಿಯೊಬ್ಬನ ಹುಟ್ಟು, ಬದುಕು ಮತ್ತು ಸಾವಿನ ಪ್ರತಿ ಹಂತದಲ್ಲಿ ಹೊಸ್ತಿಲು ಸಂಗಾತಿಯಾಗಿರುವುದು ತಿಳಿದು ಬರುತ್ತದೆ.

ಅಧ್ಯಾಯ ಆರರಲ್ಲಿ ಹೊಸ್ತಿಲಿಗೆ ಮಾಡುವ ಪೂಜೆ-ಪುನಸ್ಕಾರ, ರಂಗೋಲಿ ಅಲಂಕಾರ, ತಳಿರು-ತೋರಣಗಳಲ್ಲಿ ವೈವಿಧ್ಯತೆ ಕಂಡು ಬರುತ್ತದೆ. ಅಂದರೆ ವಿಶೇಷ ಸಂದರ್ಭದಲ್ಲಿ ಮಾಡುವ ಅಲಂಕಾರ ಆ ದಿನದ ವೈಶಿಷ್ಟ್ಯವನ್ನು ಎತ್ತಿತೋರಿಸುವಂತೆ ಕಾಣುವುದು ಗಮನಿಸುವಂತಹ ಸಂಗತಿಯಾಗಿದೆ.

ಅಧ್ಯಾಯ ಏಳರಲ್ಲಿ ಹೊಸ್ತಿಲಿನ ತಾಂತ್ರಿಕ ಪ್ರಮೇಯಗಳ ಕುರಿತು ಚರ್ಚಿಸಲಾಗಿದೆ. ಕಟ್ಟಿಗೆ ಅದರ ರಚನಾತ್ಮಕ ನೆಲೆಗಳು ಗುಣಾತ್ಮಕ ಶೈಲಿ ಮತ್ತು ಆಯಾ ಕಟ್ಟಿಗೆ ಪಡೆಯುವ ಪ್ರಾಧಾನತೆಯನ್ನು ಹೇಳಲಾಗಿದೆ. ಕಟ್ಟಿಗೆ ಮಾತ್ರವಲ್ಲದೆ ಕಲ್ಲು, ಕಬ್ಬಿಣ, ವಿವಿಧ ಲೋಹಗಳು ಮತ್ತು ಇತ್ತೀಚಿನ ಜನರ ಮನಸ್ಸನ್ನು ಬಹುವಾಗಿ ಆಕರ್ಷಿಸುತ್ತಿರುವ ವಾಸ್ತುಶಾಸ್ತ್ರೀಯ ನೆಲೆಯಲ್ಲಿ ಚರ್ಚಿಸಲಾಗಿದೆ. ಹಾಗೆಯೇ ಪ್ರಾಚೀನ ಕಾಲದ ಕಲ್ಲಿನ ಹೊಸ್ತಿಲಿನ ಮೇಲೆ ಕುಳಿಗಳನ್ನು ನಿರ್ಮಿಸುವಿಕೆಯ ಹಿಂದೆ ಅಡಗಿದ ತರ್ಕವನ್ನು ಹೇಳಲು ಪ್ರಯತ್ನಿಸಲಾಗಿದೆ.

ಈ ಅಧ್ಯಯನದ ಪ್ರಮುಖ ಅಂಶವೆಂದರೆ ಹಿಂದಿನ ಕಾಲದ ಮನೆಗಳಲ್ಲಿ ಮತ್ತು ಇಂದಿನ ಆಧುನಿಕ ಮನೆಗಳಲ್ಲಿ ಹೊಸ್ತಿಲಿನ ಪ್ರಾಶಸ್ತ್ಯ ಕಡಿಮೆಯಾಗುತ್ತಿರುವ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ಒಟ್ಟು ಅಧ್ಯಯನದ ಸಾಂಸ್ಕೃತಿಕ ವಿಶೇಷತೆಗಳನ್ನು ಹೇಳಲಾಗಿದೆ.

ಅಧ್ಯಾಯ ೨

ಕನ್ನಡ ಸಾಹಿತ್ಯಿಕ ಪರಂಪರೆ ಮತ್ತು ಹೊಸ್ತಿಲು

೨.೧. ಹೊಸ್ತಿಲಿನ ಅರ್ಥ, ಉಗಮ ಮತ್ತು ವಿಸ್ತಾರ

೨.೨. ಪ್ರಾಚೀನ ಸಾಹಿತ್ಯ ಕೃತಿಗಳು

೨.೩. ಮಧ್ಯಕಾಲೀನ ಸಾಹಿತ್ಯ ಕೃತಿಗಳು

೨.೪. ಆಧುನಿಕ ಸಾಹಿತ್ಯ ಕೃತಿಗಳು

೨.೫. ಮೌಖಿಕ ಸಾಹಿತ್ಯ ಪರಂಪರೆ

೨

ಕನ್ನಡ ಸಾಹಿತ್ಯಿಕ ಪರಂಪರೆ ಮತ್ತು ಹೊಸ್ತಿಲು

೨.೧. ಹೊಸ್ತಿಲಿನ ಅರ್ಥ, ಉಗಮ ಮತ್ತು ವಿಸ್ತಾರ

ಹೊಸ್ತಿಲು ಎಂದಾಗ ಸಾಮಾನ್ಯವಾಗಿ ಮನೆಯ ಒಳಗೆ ಪ್ರವೇಶಿಸುವಾಗ ದಾಟುವ ಅಡ್ಡ ಕೊಂಡು ಎಂದು ಭಾವಿಸಲಾಗುತ್ತದೆ. ಈ ಸಾಮಾನ್ಯ ಅರ್ಥಕ್ಕೆ ಹೊರತಾಗಿ ಹೊಸ್ತಿಲು ಪದವನ್ನು ನಮ್ಮ ಎಲ್ಲ ಸಂಸ್ಕೃತಿಗಳಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಬಳಸಿರುವುದು ಕಂಡು ಬರುತ್ತದೆ. ಇಂಥಲ್ಲಿ ಹೊಸ್ತಿಲು ರೂಪ ಇಲ್ಲದೆ ರಚನೆಯ ಒಂದು ವಸ್ತುವೇ ಆಗಿದ್ದರೂ ಅದು ಬಳಕೆಯಾಗುವ ಸಂದರ್ಭಗಳೆಲ್ಲಾ ಹೊಸ ಹೊಸ ಅರ್ಥಗಳನ್ನೇ ಕೊಡುತ್ತಾ ಹೋಗಿವೆ. 'ಹೊಸ್ತಿಲು ದಾಟು' ಎಂಬ ಮಾತೊಂದನ್ನೆ ತೆಗೆದುಕೊಂಡರೆ ಇಲ್ಲಿನ 'ದಾಟು' ಎನ್ನುವುದು ಬರೀ ಕ್ರಿಯೆ ಮಾತ್ರವೇ ಆಗಿರದೆ ನೈತಿಕ ಪತನವನ್ನು ಸೂಚಿಸುವ ಅರ್ಥವೂ ಅದಕ್ಕಿರುವುದು ವಿಶೇಷ. ಈ ಹಿನ್ನೆಲೆಯಲ್ಲಿ ಹೊಸ್ತಿಲು ಅಡ್ಡ ಕೊರಡು ಎನ್ನುವ ಸ್ಥಿತಿಯಿಂದ ಮನೆಯ ದೈವ, ಗೃಹಿಣಿ ಎಂಬ ಅರ್ಥದತ್ತ ಚಲಿಸುವುದನ್ನು ಲಕ್ಷಿಸಬೇಕು. ಪ್ರಸ್ತುತ ಅಧ್ಯಯನವೂ ಹೊಸ್ತಿಲನ್ನು ಅದರ ರೂಪಸಾಧ್ಯತೆಗಳು ಮತ್ತು ಸಾಂಸ್ಕೃತಿಕ ಮಹತ್ವಗಳೊಂದಿಗೆ ಗ್ರಹಿಸಲು ಪ್ರಯತ್ನಿಸುತ್ತದೆ.

ಹೊಸ್ತಿಲು ಹೆಣ್ಣು ದೇವತೆ ಎನ್ನುವ ವಿವಿಧ ರೂಪಗಳ ಜೊತೆ ಇಡೀ ಮನೆಯೇ ಆಗಿ ರೂಪಧಾರಣೆಗೊಳ್ಳುವುದು ಅಧ್ಯಯನದ ದೃಷ್ಟಿಯಿಂದ ಮಹತ್ವದ್ದು. ಹೀಗೆ ಮನೆ ಮತ್ತು ಮನೆತನ ಎನ್ನುವಲ್ಲಿ, ಮನೆತನದ ಮರ್ಯಾದೆ ಎನ್ನುವಲ್ಲಿ, ಆ ಮರ್ಯಾದೆಯ ಹೊಣೆ ಹೊತ್ತು ನಿಂತ ಗೃಹಿಣಿ ಎನ್ನುವ ಪರಿಕಲ್ಪನೆಗಳಲ್ಲಿ ಹೊಸ್ತಿಲು ಬರೀ ನಿರ್ಜೀವ ಮರದ ತುಂಡಾಗದೆ ಹೆಣ್ಣೊಬ್ಬಳ ಸಹಜ ಬದುಕಿನಲಯವಾಗುವುದು ಗಮನಾರ್ಹ ಅಂಶವಾಗುತ್ತದೆ. ಗೃಹಿಣಿ ಗೃಹಕ್ಕೆ ಸಂಬಂಧಪಟ್ಟವಳಾಗಿ ಹೊಸ್ತಿಲು ಪೂಜೆಗೆ ನಿಲ್ಲುತ್ತಾಳೆ. ಹೊಸ್ತಿಲೊಂದಿಗೆ ಹೊಸ್ತಿಲನ್ನು ಬಂಧಿಸಿ ನಿಂತ ಬಾಗಿಲ ತೋಳುಗಳನ್ನು ಪೂಜಿಸುತ್ತಾಳೆ. ಬಾಗಿಲ ತೋಳು-ಶಿರೋಭಾಗವನ್ನು ಪೂಜಿಸುತ್ತಾಳೆ. ತೋರಣಗಳಿಂದ ಸಿಂಗರಿಸುತ್ತಾಳೆ. ರಂಗೋಲಿಗಳಿಂದ ಅಲಂಕರಿಸುತ್ತಾಳೆ. ಹೊಸ್ತಿಲ ಒಳಗೆ ಉಳಿದು ತನ್ನ ಸ್ವಾತಂತ್ರ್ಯವನ್ನು ಮಿತಿಗೊಳಿಸಿಕೊಂಡು ಸೈರಣೆಯಿಂದ ಬದುಕುತ್ತಾಳೆ. ಅವಳ ಆಶೋತ್ತರಗಳು, ಆಕಾಂಕ್ಷೆಗಳು ಹೊಸ್ತಿಲ ಒಳಗೆ ಇದ್ದಷ್ಟು ಅವಳ ಬದುಕಿಗೆ ಭದ್ರತೆ. ಈ ಅರ್ಥದಲ್ಲಿ ಹೊಸ್ತಿಲು ಎನ್ನುವ ಪರಿಕರ ಹೆಣ್ಣನ್ನು ರಕ್ಷಿಸುವ ಸಂಗಾತಿಯಾಗಿ ಹೆದರಿಸುವ ವೈರಿಯೂ ಆಗುತ್ತದೆ ಎಂದರೆ ತಪ್ಪಲ್ಲ. ಈ ವಿವರಕ್ಕೆ ಇಲ್ಲಿ ಹೋಗಲು ಕಾರಣವೆಂದರೆ ಹೊಸ್ತಿಲು ಅಡ್ಡ ಹಲಗೆ ಮಾತ್ರವೇ ಅಲ್ಲ ಸಂದರ್ಭಕ್ಕನುಗುಣವಾಗಿ ಅದು ಬಾಗಿಲು ಮತ್ತು ಬಾಗಿಲ ತೋಳು, ಮನೆ, ಬದುಕು, ಮಾನ-ಪ್ರಾಣ, ಎಲ್ಲವೂ ಆಗುತ್ತದೆ. ಈ ಅರ್ಥದಲ್ಲಿ ಹೊಸ್ತಿಲು ಎಂದರೆ ಬರೀ ಭೌತಿಕವಾದ ಘನಾಕೃತಿಯಾಗಿರದೇ ಅದೊಂದು ಚಲನಶೀಲ ಹಾಗೂ ಬಹು ಬದುಕಿನ ವಿನ್ಯಾಸಗಳುಳ್ಳ, ಜೀವಂತ ಪರಿಕಲ್ಪನೆಯಾಗಿದೆ ಎಂಬುದು ವಿಶೇಷ.

ಹೊಸ್ತಿಲು ಪದದ ನಿಷ್ಪತ್ತಿ

ಹೊಸ್ತಿಲು ಹಾಗೂ ಬಾಗಿಲು ವಿಶಾಲಾರ್ಥದಲ್ಲಿ ಸಮಾನಾರ್ಥಕ ಪದಗಳಾಗಿ ಬಳಕೆಯಾಗುತ್ತಾ ಬಂದಿವೆ. ಹೊಸ್ತಿಲು ಪದದ ನಿಷ್ಪತ್ತಿಯನ್ನು ಪೊಸಂತಿಲ್ ಎಂಬ ಶಬ್ದದ ಮೂಲಕ ಕಿಟೆಲ್ ಆದಿಯಾಗಿ ಎಲ್ಲ ನಿಘಂಟುಕಾರರೂ ಮತ್ತು ಕವಿಗಳು ಅರ್ಥೈಸುತ್ತಾರೆ. ಪೊಸಂತಿಲ್ ಎನ್ನುವಲ್ಲಿ 'ಪೊಸತು' ಮತ್ತು 'ಇಲ್' ಎಂಬ ಎರಡು ಶಬ್ದಗಳ ಸಮಾಸವಿದೆ. ಪೊಸಂತು ಎಂಬುದು ಹೊಸತು ಎಂಬ ಅರ್ಥವನ್ನು ಕೊಡುತ್ತಿದ್ದರೂ 'ಹೊಸ್ತಿಲ' ಸಂದರ್ಭದಲ್ಲಿ ಮನೆಯ ಆರಂಭ ಎನ್ನುವ ಅರ್ಥವನ್ನು ಡಾ. ರಾಯ ಧಾರವಾಡಕರ ಅವರ ಕೊಡುತ್ತಾರೆ. ಪೊಸಂತಿಲ್ ಎಂಬಲ್ಲಿ ವಾರ್ಗೀಕ ಇಲ ಪದವು ಮೂಲ ದ್ರಾವಿಡ ಶಬ್ದವಾಗಿದ್ದು ಮನೆ ಎಂಬ ಅರ್ಥ ಅದಕ್ಕಿದೆ. ಹೀಗೆ ಇಲವು ಮನೆಯಾಗಿದ್ದು ಪೊಸಂತು ಆ ಮನೆಯ ಆರಂಭವನ್ನು ಹೇಳುತ್ತದೆ. ಹೊಸ್ತಿಲು ಪದದ ಬೆಳವಣಿಗೆಯನ್ನು ಈ ರೀತಿ ನೋಡಬಹುದು. ಪೊಸಂತಿಲ್> ಪೊಸತಿಲ್> ಪೊಸ್ತಿಲು>ಹೊಸ್ತಿಲು>"ಹೊಸ್ತಿಲು". ಹೀಗೆ ಸಬಿಂದುಕವು ಅಬಿಂದುಕವಾಗಿ, 'ಪ' ಕಾರವು 'ಹ' ಕಾರವಾಗುವ ಮೂಲಕ ಪೊಸಂತಿಲ್-ಹೊಸ್ತಿಲು ರೂಪ ಸಿದ್ಧಿಸಿದೆ.

ಹೊಸ್ತಿಲಿನ ಪರ್ಯಾಯ ಪದಗಳಾದ ಬಾಗಿಲು, ಪ್ರವೇಶ, ಮಾರ್ಗ, ದ್ವಾರ ಎಂಬ ಅರ್ಥಗಳು ಹೊಸ್ತಿಲನ್ನೇ ಸೂಚಿಸುತ್ತದೆ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಬಾಗಿಲು ಪದದ ವಿಭಿನ್ನ ರೂಪಗಳು ವೈವಿಧ್ಯಮಯವಾಗಿ ಬಳಕೆಯಾಗಿವೆ. ವಾಗಿಲ್>ಬಾಗಿಲ್>ಬಾಗಿಲ>ಬಾಗಿಲು ಎಂಬ ಪ್ರಯೋಗಗಳು ವಡ್ಡಾರಾಧನೆ, ಆದಿಪುರಾಣ, ವಚನಗಳಲ್ಲಿ, ಕುಮಾರವ್ಯಾಸ ಭಾರತ, ಮೋಹನ ತರಂಗಿಣಿ ಮೊದಲಾದ ಕಾವ್ಯಗಳಲ್ಲಿ ಬಳಕೆಯಾಗಿದ್ದು ಕಂಡು ಬರುತ್ತದೆ.

ಬಾಗಿಲ ಪದದ ನಿಷ್ಪತ್ತಿಯನ್ನು ದ್ರಾವಿಡ ಪದವಾದ ವಾಯಿಲ್ ಎಂಬುದರಿಂದ ಸೂಚಿಸಬಹುದಾಗಿದೆ. ವಾಯಿಲ್ ಎಂಬಲ್ಲಿ ವಾಯ್ ಮತ್ತು ಇಲ ಎರಡು ಪದಗಳ ಮಿಶ್ರಣವಿರುವುದು ಕಂಡು ಬರುತ್ತದೆ. ವಾಯ್ ಎಂಬುದು ಬಾಯಿ ಆಗಿದ್ದು ಇಲ ಎಂದರೆ ಮನೆಯ ಮುಖ ಎಂಬ ಅರ್ಥವಿದೆ. ಹೀಗೆ ಹೊಸ್ತಿಲು ಮತ್ತು ಬಾಗಿಲು ಎರಡು ಪದಗಳಲ್ಲಿ ಅಂತ್ಯ ಪದವಾಗಿ 'ಇಲ್' ತಪ್ಪದೆ ಹೊಂದಿಕೊಂಡಿರುವುದನ್ನು ಗಮನಿಸಬೇಕು. ಇಲ ಪದವೆ ಪ್ರಧಾನವಾಗಿದ್ದು ವಾಯ್ ಮತ್ತು ಪೊಸತು ಆ ಇಲವನ್ನು ಅಂದರೆ ಮನೆಯನ್ನು "ಮನೆಯ ಮುಂಭಾಗ, ಪ್ರವೇಶದ್ವಾರ" ಮನೆಯನ್ನು ಸೂಚಿಸುತ್ತಿರುವುದು ಸ್ಪಷ್ಟವಾಗುತ್ತವೆ. ಇಲ ಪದದ ರೀತಿಯ ಪ್ರಯೋಗದ ಬಿಲ ಎಂಬಲ್ಲಿ ಓತ್ತಲ್ ಎಂಬಲ್ಲಿ ಮನೆ ಅರ್ಥದ ಸ್ಥಾಯಿ ರೂಪವನ್ನು ಗುರುತಿಸಬಹುದಾಗಿದೆ. ಹೊಸ್ತಿಲಿನ ಹಾಗೆ ಪಿಂತಿಲು ಪದವಾದುದು ಇದೆ. ಹೊಸ್ತಿಲು ಮನೆಯ ಮುಂಭಾಗವನ್ನು ಹೇಳಿದರೆ ಪಿಂತಿಲು ಮನೆಯ ಹಿಂಭಾಗವನ್ನು ಹೇಳುತ್ತದೆ. ಪಿಂತು+ಇಲ ಎಂದು ಅದನ್ನು ವಿಭಜಿಸಿ ತೋರಿಸಬಹುದಾಗಿದೆ. ಬಾಗಿಲು ಪದದೊಂದಿಗೆ ಹೊಂದಿಕೊಂಡ ಇನ್ನಷ್ಟು ಪದಗಳೆಂದರೆ ಬಾಗಿಲುಗಟ್ಟಳೆ, ಬಾಗಿಲು ಗಾಹಿ ಬಾಗಿಲು ಜೋಳ, ಬಾಗಿಲು ತಡೆ, ಬಾಗಿಲು ವಾಡ, ಬಾಗಿಲ್ಗಾಪು, ಬಾಗಿಲ್ಮಾಡ.

೧. ಬಾಗಿಲು ಗಟ್ಟಳೆ

ಯಾವುದಾದರೊಂದು ಸಾರ್ವಜನಿಕ ಕಾರ್ಯಕ್ಕೆ ಪ್ರತಿಯೊಂದು ಮನೆಯವರೂ ಇಂತಿಷ್ಟು (ಹಣವನ್ನು) ತೆರಬೇಕೆಂಬ ನಿಯಮ. ಬೆಳಗೊಳದ ತೀರ್ತ್ಥದಲ್ಲಿ ವೈಷ್ಣವ ಅಂಗರಕ್ಷೆಗೋಸುಕ ಸಮಸ್ತ ರಾಜ್ಯದೊಳಗುಳ್ಳಂತಹ ಜೈನರಾ ಬಾಗಿಲುಗಟ್ಟಳೆಯಾಗಿ ಮನೆ ಮನೆಗೆ ವರ್ಷಕ್ಕೆ ೧ ಹಣ ಕೊಟ್ಟು......ಕೀರ್ತ್ತಿಯನೂ ಪುಣ್ಯವನೂ ಉಪಾರ್ಜ್ಜಿಸಿಕೊಂಬುದು.

೨. ಬಾಗಿಲಗಾಹಿ = ಬಾಗಿಲಾಯ್ತು

ಕೂಡಲ ಸಂಗನ ಶರಣರ ಬಾಗಿಲುಗಾಹಿ ನಾನಾಗಿರ್ದು ಕರ್ತರು ಗೃಹಕ್ಕೆ ಬಂದರೆ ಬೇಕು ಬೇಡನೆ.

(ಬಾಗಿಲು (<ಬಾಗಿಲ್) + ಗಾಹಿ) (ಬಸಹೆ, ೧೦೫-೩೧೪)

ಬಾಗಿಲ ಕಾ, ಬಾಗಿಲ ಕಾಯ್, ಬಾಗಿಲ ಕಾಯು = ದ್ವಾರಪಾಲಕನಾಗು.

ನಿರ್ಜರಪತಿ ವಿಷ್ಣು ಬಾಗಿಲ ಕಾದಿರ್ಪ ಸಜ್ಜನ ಸಂಪತ್ತು ಒಡವೆ (ಮೋಹನತರಂಗಿಣಿ, ೩೦-೧೫).

ಬಿನ್ನಹ ಮಾಡಿಕೊಳ್ಳಲೆಂದು ಬಾಗಿಲು ಬಳಿ ಬಂದು ನಿಂತರು. ಹರಿಯಜ ಮುನಿಗಳೆಲ್ಲರೂ ನಿಜ ನಿಮ್ಮ ಬಾಗಿಲ ಕಾಯ್ದಿಪ್ಪರು(ಬಸವಣ್ಣನ ವಚನಗಳು, ೭೪೨).

ಹರಿಯ ಬಾಗಿಲ ಕಾಯ್ದು ಬಲಿ ಭಾಗ್ಯವಂತನಾದ ಹರನ ಬಾಗಿಲ ಬಾಣಗಳಿದ(ಪುರಂದರದಾಸರು, ೨-೬೩-೧).

ಬಾಗಿಲು ಕಾಯುವರು ಕಡುಮೂರ್ಖರಿಂತಿದ ನಮಗೆ ಮಸ್ಸಿಪುದು(ಸಭಾ ಪರ್ವ, ೭೯).

ಉಳಿದ ದ್ರಾವಿಡ ಭಾಷೆಗಳಾದ ವಾಯಿಲ್ (ತಮಿಳು) ವಾಯಲ್, ವಾಚಲ್; ಮಲಯಾಳಂ ವಾಕಿಲ್; ತುಳು, ಬಾಕಿಲು; ತೆಲುಗು, ವಾಕಿಲಿ; ಕೋಲಾ, ವಾಕಲ್; ನಾಯ್ಕಿ, ವಾಕಲ್

ಬಾಗಿಲ 'ಬಾಗಿಲ್'

ಬಾಗಿಲಾಯ್ತು = ಬಾಗಿಲು ಕಾಯುವವನು, ದ್ವಾರಪಾಲಕ; ಪಡಿಹಾರ; ಬಾಗಿಲಾಯ್ತುಂ ಅಚ್ಚುಳಾಯ್ತಂ, ಕಲ್ಲಾಯ್ತಂ [ಬಾಗಿಲ್+ಆಯ್ತು].

೩. ಬಾಗಿಲು ಜೋಳ

ಪ್ರತಿಯೊಂದು ಮನೆಯವರು (ದೇವರ ಕಾರ್ಯಕ್ಕಾಗಿ) ಇಂತಿಷ್ಟು ಜೋಳವನ್ನು ಕೊಡಬೇಕೆಂಬ ನಿಯಮ: ಸ್ಥಾನಪೂಜೆ ಬೆಳುಗೊಡೆ ಬಾಗಿಲುಜೋಳ ತಳಾರಗೂಲಿ ಅಸತನ್ಯಾಯ ವಿಂತಿನಿತವಂ ಸರ್ಬ್ಬಮಾನ್ಯವಾಗಿ ಹದಡು ದೇವರ ಪೂಜಾರಿಗಂ ಕವಿಲೆಗವಿರಲು ಮ [ಠ] ವಾಗಿ ಬಿಟ್ಟರು.

(ಸೌ ಇ ಇ. XV. ೧೧೧-೪೪; ೧೧೬೫)

[ಬಾಗಿಲು - (<ಬಾಗಿಲ್) + ಜೋಳ]

೪. ಬಾಗಿಲು ತಡೆ : ಬಾಗಿಲು ದಡೆ

ಮದುವೆಯ ಸಂದರ್ಭದಲ್ಲಿ, ವಧುವರರು ಪರಸ್ಪರ ಹೆಸರು ಹೇಳುವವರೆಗೂ ಒಳಗೆ ಬರದಂತೆ ವರನ ಸಹೋದರಿಯರು ಬಾಗಿಲನ್ನು ತಡೆಯುತ್ತಾರೆ. ಬಾಗಿಲಲ್ಲಿ ತಡೆಗಟ್ಟಿ ನಿಲ್ಲು; ಹಾಗೆ ತಡೆಗಟ್ಟುವ ಶಾಸ್ತ್ರವನ್ನು ಆಚರಿಸುತ್ತಾರೆ. ಇದಕ್ಕೆ ಬಾಗಿಲುದಡೆ ಎನ್ನುತ್ತಾರೆ.

ಕುವರರ ಮದುವೆಯೊಳ್ ಬಾಗಿಲುದಡೆದಾಗ ಕುವರಿಯರ್ಗಿತ್ತ ಭೂತಳವ(ಭ ರ ಚ, ೪೪-೨೮).

[ಬಾಗಿಲು (<ಬಾಗಿಲ್+ತಡೆ] ಬಾಗಿಲುದಡೆ

೫. ಬಾಗಿಲುವಾಡ 'ಬಾಗಿಲ್ವಾಡ'

ಬಾಗಿಲ್ಕೋಲು, ಬಾಗಿಲಿಗೆ ಹಾಕುವ ಅಗುಳಿ : ಭೂರಮಣ ದ್ವಾರಸ್ಥರಂ ಕರೆದು ನಿಂದು ಬಾಗಿಲ್‌ಕೋಲ ತೆಗೆಯದಿರಿ ನಮ್ಮರಿಕೆಯಿಂದಲ್ಲದೆ ವಿಪ್ರರಿಂಗೆನಲು ಕೈಗೊಂಡು ಕಾದಿರಲ್ಕೋಲುಭಟರು (ತುರಂಗ ಭಾರತ, ೬-೩೧).

[ಬಾಗಿಲ್ + ಕೋಲು(<ಕೋಲ್)]

೬. ಬಾಗಿಲ್ಗಾಪು. ಬಾಗಿಲಿನಲ್ಲಿ ಇರುವ ಕಾವಲು

ಬಂದ ದೆಸೆಯಂ ಪೋದ ದೆಸೆಯನಾರುಂ ಕಾಣದಂದದಿಂ ಪಲವು ಬಾಗಿಲ್ಗಾಪುಗಳನುಳಿದು...... ಪೋಪುದಿದು ಪರಿಭಾವಿಸೆ ಸಂದಳಿಕಾರರೊಳಗುಂಟೆ(ಪದ್ಮವಾ, ೫-೫೧).

ಬಾಗಿಲ್ಗಾಪಿನ ಪಡಿಯರತಿಯರು ಬಾಗಿ ತುಳಿಲ್ಗೆಯ್ವಾಗ ಒಡತಿಯ ಮುಖವನ್ನು ನೋಡುತ್ತಿದ್ದರು (ಸವತಿ, ೨೦೧).

೭. ಬಾಗಿಲ್ಮಾಡ 'ಬಾಗಿಲ್ವಾಡ' ಬಾಗಿಲುವಾಡ

ಹೆಬ್ಬಾಗಿಲು ಪುರದ್ವಾರ; ಗೋಪುರ

ಸಂಕೇತನಗರಮಂ ಬಳಸಿದ ಕನಕ ಪ್ರಕಾರದ ಬಾಗಿಲ್ವಾಡಂಗಳೊಳಂ(ಆ ದಿ ಪು. ೧೬-೩೭).

ಬಾಗಿಲು ಸೆಜ್ಜೆ = ಅಗಸೆ ಬಾಗಿಲ ಮೇಲಿನ ಗೋಪುರ; ಬಾಗಿಲು ವಾಡ.

ಪಿರಿದಾಗಿ ಬಾಗಿಲ ಸೆಜ್ಜೆಯುಬ್ಬ್ರವ ವ್ಯಾಪಿಸಿದುವು ಶುಭ್ರವಿಡಿದು(ಕಂನನಿ ೬-೧೩).

ಇಳೆಯಾಣ್ಮನ ಕರುಣರಸಂ ತೀವಿದ ಲಲಿತ ತಟಾಕ ಮದಾಗಲ್ಕರಮನೆ ತೊಳಗುವ ಬಾಗಿಲ್ವಾಡಮದರ ತೊಂಬೆಂಬವೊಲೊಪ್ಪಿದುದು(ಜಯಕಾ, ೧-೬೫).

೧. ಬಾಗಿಲು ವಾಡ

"ಗೋಪುರಂ, ಪುರದ್ವಾರಂ - ಈ ೨ ಬಾಗಿಲು ವಾಡಂ(ಹಲಾಯುಧ, ೪೮-೧೩೩).

ಪಿಂತೆ ಪತಿಹಿತವೆ ಸಹಿತಂ ಬರುತಭವನತ್ತ ಪುರದ ಬಾಗಿಲು ವಾಡಮಂ ಪೊರಮಡಲು ಕಂಡು (ಇಹರ ದೇ ೩೮-೭).

೨. ಅಗಸೆ ಬಾಗಿಲಿನ ಮೇಲಿನ ಉಪ್ಪರಿಗೆ

ಮಾಡ ಗೋಪುರ ಮದಿಲ್ ಮಾಳಿಗೆ ಬಾಗಿಲುವಾಡ ದೇಗುಲಗಳನೇರಿ ನೋಡಿದರ್ಪುರಸತಿಯರು (ಭ ರ ಚ, ೫೮-೩೯).

೩. ಬಾಗಿಲಿನ ಚೌಕಟ್ಟು

ಹೊಸಮನೆಗೆ ಇಂದು ಬಾಗಿಲುವಾಡವನ್ನು ಇಟ್ಟರು (ರೂಢಿ)

ಹೊಸತಿಲಿಗೆ ಮೇಲೆ ನೋಡಿದಂತೆ ಬಾಗಿಲುವಾಡ ಇತ್ಯಾದಿ ಪದಗಳ ಹಾಗೆ ದೇಹಳಿ ಎಂಬ ಪದವು ಬಳಕೆಯಾಗಿರುವುದನ್ನು ಈ ಮುಂದಿನ ಹಳಗನ್ನಡ ಪದ್ಯ ಸೂಚಿಸುತ್ತಿದೆ.

ನೆಱಿದೇಹಳಿಯೆ ಪೊಸಂತಿಲ್ ಮಾಡಮೆಂದೊಡು
ಪ್ಪರಿಗೆ ಭಂಡಾರಮೆನೆ ಕೋಶಗೃಹಮಕ್ಕು ಕಸ
ವರ ಸೊನ್ನೆ ಚೆಂಬೊನ್ನೆನಲ್ ಸುವರ್ಣಗಳಂತಿಗೆಯೆಂದು ಕೋಣೆಯಕ್ಕುಂ
ಕುರುವಿಂದಮಕ್ಕು ಕಿಸುಗಲ್ ಕೆಂಬರಲ್ ರನ್ನ
ವರಲೆನಲ್ ಪಡಿಯಚ್ಚೆ ನೆಱಿವೆಟ್ಟೆನಿಕ್ಕು ಪಿಂ
ಜರಿಯೆಂದು ಬೆಳ್ಳಿ ಕಾರ್ಬೊನ್ನೆವನೆಲ್ ಕರ್ಬುನಾ ಚೆಂಗುಡಿಯೆನಲ್ ವಿದ್ರು ಮಂ[1]

ಇಲ್ಲಿ ದೇಹಳಿಯೇ ಪೊಸಂತಿಲ್ ಎನ್ನುವ ಸಾಲು ಮುಖ್ಯವಾದುದು. ಹೊಸ್ತಿಲಿಗೆ ಕವಿಯು ಪೊಸಂತಿಲ್ ಎಂದು ಕರೆಯುತ್ತಾ ಅದು ದೇಹಳಿಯಾಗಿದೆ ಎನ್ನುತ್ತಾನೆ. ಇಂಥದೆ ಮಾತನ್ನು ಇನ್ನೊಬ್ಬ ಹಳಗನ್ನಡ ಕವಿಯು ಪೊಸಂತಿಲ್ ಎಂದು ದೇಹಳಿ ಎಂದಿರುವುದನ್ನು ಗಮನಿಸಬೇಕು.

ನೆಲಕಲನೆನಲ್ಕೆ ಲೋಭಿಯು ಸಹಾಯಕೆ ಪೆಸರು
ಕೆಲ ಚಂದಪೂರ್ವಕ್ಕೆ ಪಂಚವೆನಿಕುಂ ಪೊಸಂ
ತಿಲು ದೇಹಳಿಯುಮಕ್ಕುಂ ಕೇರುಂ ಕುದುರೆನೆ ಗೋಡೆ ಚುನ್ನವನೆ ನಿಂದೆಯಕ್ಕು
ಪೊಲದಿಯೆನೆ ಸಿತಗ ಪ್ರಾಕಾರಕೊಪ್ಪಿರ್ಕು ಪಾ
ಕಲು ತಾನು ಪವನವು ಕೊಂಬೆಂದು ಸಂಕೇತದಾ
ಸ್ಥಲಕಕ್ಕು ನಾಮಂ ನಿಲುಂಬಿತೆಂದೆನೆ ಕುಪ್ಪಳಿಸಿದುದಕೆ ಪೆಸರು ಸಲ್ಲುಗಂ[2]

ಈ ಎರಡು ಉಲ್ಲೇಖಗಳಲ್ಲಿ ಬರುವ ದೇಹಳಿ ಪದಕ್ಕೆ ದೇಹರ, ದೇವಡಿ, ದೇಹಲಿ ಮುಂತಾದ ಪರ್ಯಾಯ ಪದಗಳು ಇರುವುದಾಗಿ ಕಿಟೆಲ್ ನಿಘಂಟುವಿನಿಂದ ತಿಳಿದುಬರುತ್ತದೆ. ಅದರಲ್ಲಿ ಹೇಳಿದ ಹಾಗೆ ದೇಹರ ಇಲ್ಲವೆ ದೇಹಲಿ ಇಲ್ಲವೆ ದೇವಡಿ ಪದಗಳಿಗೆ ಹೊಸಂತಿಲ್, ಹೊಸತಿಲ್ ಎಂಬ ಅರ್ಥಗಳನ್ನು ನೀಡಿದ್ದು ಇಂಗ್ಲಿಷಿನಲ್ಲಿ The Threshold of a Door ಎಂಬ ಅರ್ಥವನ್ನು ನೀಡಿದ್ದಾರೆ. ಈ ಎಲ್ಲ ಉಲ್ಲೇಖಗಳು ಹೊಸ್ತಿಲು ಪದ ಹಳಗನ್ನಡ ಕಾಲದಲ್ಲಿ ಪೊಸಂತಿಲ್ ಎಂದು ಇದ್ದು ಅದು 'ಪ' ಕಾರವನ್ನು ಕಳೆದುಕೊಂಡು 'ಹ' ಕಾರಾಗಮದಿಂದ ಹೊಸಂತಿಲ್ ಎಂಬುದಾಗಿ ನಂತರ ಹೊಸತಿಲು ಇಲ್ಲವೆ ಹೊಸ್ತಿಲು ಎಂಬ ಇವತ್ತಿನ ರೂಪವನ್ನು ಪಡೆದುಕೊಂಡಿತು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಹಾಗೆಯೇ ಹೊಸ್ತಿಲಿನ ಇನ್ನೊಂದು ರೂಪವಾದ ಬಾಗಿಲು ಪದವು ಬೇರೆ ಬೇರೆ ಪ್ರತ್ಯೆಯಗಳನ್ನು ಉತ್ತರ ಪದವಾಗಿ ಹೊಂದಿ ಹೊಸ್ತಿಲಿಗೆ ಸಂವಾದಿಯಾಗಿ ಬಳಕೆಯಾಗಿರುವುದನ್ನು ಲಕ್ಷಿಸಬಹುದಾಗಿದೆ. ಇವುಗಳಲ್ಲಿ

ಹೊಸ್ತಿಲು ಮತ್ತು ಬಾಗಿಲು ಕರ್ನಾಟಕದಲ್ಲಿ ಎಲ್ಲ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿ ಇವೆ. ಆದರೆ ದೇಹಳಿ ಮತ್ತು ಅದರ ಉಪ ಪದಗಳು ಇಂದು ಅಷ್ಟಾಗಿ ಚಲಾವಣೆಯಲ್ಲಿ ಇರುವುದಿಲ್ಲ.

ಮನೆಗೆ ಇರುವ ದ್ವಾರವನ್ನು ಬಾಗಿಲು ಎಂದು ಕರೆಯುವ ಹಾಗೆ ಪುರ ಇಲ್ಲವೆ ಪಟ್ಟಣದ ಬಾಗಿಲನ್ನು ಅಗುಸೆ, ಅಗಸೆ ಎಂದು ಕರೆದುಕೊಂಡು ಬರಲಾಗಿದೆ. ರಾಘವಾಂಕನು ತನ್ನ ಸಿದ್ಧರಾಮಚರಿತೆಯಲ್ಲಿ 'ಸ್ವರ್ಗದಗುಸೆಯಂ ರುದ್ರಲೋಕದ ಕೇರಿಗಳನು'[೩] ಎಂದು ಹೇಳಿದ್ದಾನೆ. ಇಲ್ಲಿ ಸ್ವರ್ಗದ ಹೆಬ್ಬಾಗಿಲು ಅಥವಾ ಮಹಾದ್ವಾರದ ಅರ್ಥದಲ್ಲಿ ಅಗುಸೆ ಪದ ಬಳಕೆಯಾಗಿದೆ. ಭೀಮಕವಿಯ ಬಸವಪುರಾಣದಲ್ಲಿ 'ಕಡು ಮುಳಿಸಿಂಹ ಹಟ್ಟಿಯೊಳಗುಸೆಯುಂ ಹುಗಲೀಯಕ್ಕಿದನು'[೪] ಎಂದು ಬಳಸಿದ್ದಾನೆ. ದೇಪರಾಜನ ಸೊಬಗಿನ ಸೊನೆಯಲ್ಲಿ 'ಕಂಡೆ ಮಾತುಳಬಲ್ಲಹನರಮನೆಯಗುಸೆಯಾ'[೫] ಎಂದು ಬಳಸಿದ್ದಾನೆ. ಬಸವ ಪುರಾಣದಲ್ಲಿ 'ಹೊತ್ತಾಡೆ ಎದ್ದ ಕುರುಡಂಗೆ ಅಗಸೆಯಲ್ಲಿ ಅಸ್ತಮಾನವಾದಂತೆ'[೬] ಮತ್ತು ಸರ್ವಜ್ಞನನು 'ಅಗಸೆ ಊರಿಗೆ ಲೇಸು' - ಹೀಗೆ ಮೊದಲಾದವರ ವಚನಗಳಲ್ಲಿ ಅಗಸೆ ಪದ ಬಳಕೆಯಾಗಿರುತ್ತದೆ.

ಇಲ್ಲಿನ ಒಟ್ಟು ಮತಿತಾರ್ಥ ಇಷ್ಟು ಎನಿಸುತ್ತದೆ. ಹೊಸ್ತಿಲು ಮತ್ತು ಬಾಗಿಲು ಪದಗಳು ಭೌತಿಕವಾಗಿ ಬೇರೆ ಎಂದೆನಿಸಿದರೂ ಸಾಂದರ್ಭಿಕವಾಗಿ ಬಳಕೆಯಾಗುವ ಈ ಭೌತ ಸ್ವರೂಪವನ್ನು ಮೀರಿದ ಸಮಾನಾರ್ಥಕ ಪದಗಳಾಗಿ ರೂಢಿಗೊಂಡಿರುವುದು ಎದ್ದು ಕಾಣುತ್ತದೆ. ಹೀಗಾಗಿ ಅಧ್ಯಯನದುದ್ದಕ್ಕೂ ಹೊಸ್ತಿಲು ಮತ್ತು ಅದಕ್ಕೆ ಪರ್ಯಾಯವಾಗಿ ವಿಶಾಲಾರ್ಥದಲ್ಲಿ ಬಳಕೆಯಾಗುವ ಬಾಗಿಲು, ದ್ವಾರ, ಮನೆ, ಕುಟುಂಬ, ಮನೆತನ, ಸೀಮೆ-ಸರಹದ್ದು-ಇಂಥ ಸಮಾನಾರ್ಥಕ ಪದಗಳನ್ನು ಕೇಂದ್ರವಾಗಿಟ್ಟುಕೊಂಡು ಹೊಸ್ತಿಲನ್ನು ವ್ಯಾಪಕಾರ್ಥದಲ್ಲಿ ಒಂದು ಚಲನಶೀಲ ಸಾಂಸ್ಕೃತಿಕ ಸ್ವರೂಪವನ್ನಾಗಿ ವಿಶ್ಲೇಷಿಸಲು ಪ್ರಯತ್ನಿಸಲಾಗುತ್ತದೆ.

೨.೨. ಪ್ರಾಚೀನ ಸಾಹಿತ್ಯ ಕೃತಿಗಳು

ಹೊಸ್ತಿಲು ಎಂಬ ಪದವು ವಿಭಿನ್ನ ನೆಲೆಗಳಲ್ಲಿ ವಿವಿಧ ಅರ್ಥಗಳಲ್ಲಿ ಹೇಗೆ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಬಳಕೆಯಾಗಿದೆ ಎಂಬುದನ್ನು ಇಲ್ಲಿ ಗಮನಿಸಲಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಪ್ರಮುಖ ಕೃತಿಗಳಾದ ಶಿವಕೋಟ್ಯಾಚಾರ್ಯ, ಪಂಪ ನಾಗಚಂದ್ರ, ನಯಸೇನ ಮೊದಲಾದವರ ಕೃತಿಗಳಲ್ಲಿ, ಮಧ್ಯಕಾಲೀನ ಸಾಹಿತ್ಯದ ವಚನಕಾರರು, ಹರಿಹರ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರವರ್ಣಿಯಂತಹ ಮೊದಲಾದ ಕವಿಗಳಲ್ಲಿ. ಹರಿದಾಸರು, ತತ್ವಪದಕಾರರು ಮೊದಲಾದ ಕೃತಿಕಾರರಲ್ಲಿ, ಆಧುನಿಕ ಕಾಲದ ಬೇಂದ್ರೆ ಕುವೆಂಪು, ಕರ್ಕಿ, ಜಿ.ಎಸ್.ಶಿವರುದ್ರಪ್ಪ, ಲಂಕೇಶ ಮೊದಲಾದವರ ಸಾಹಿತ್ಯದಲ್ಲಿ ಬಳಕೆಯಾದ ಹೊಸ್ತಿಲು ಪದದ ಉಲ್ಲೇಖವನ್ನು ಪರಿಶೀಲಿಸಲಾಗಿದೆ.

ಸಮಗ್ರ ಕನ್ನಡ ಸಾಹಿತ್ಯದಲ್ಲಿ ಹೀಗೆ ಕೆಲವರನ್ನು ಪ್ರಾತಿನಿಧಿಕವಾಗಿ ಇಟ್ಟುಕೊಳ್ಳಲಾಗಿದೆ. ಮನೆಯ ಒಳ ಹೊರಗೆ ಎದುರಾಗುವ ಹೊಸ್ತಿಲು ಕೆಲವು ಬರಹಗಾರರಲ್ಲಿ ಮಹಿಳೆಯನ್ನುವ ಸಾಂಕೇತಿಕತೆಯನ್ನು ಸೂಚಿಸುವುದರ ಜೊತೆಗೆ ಬಾಗಿಲು, ದ್ವಾರವಟ್ಟ, ಕದ, ಬಾಗಿಲುವಾಡ ಇತ್ಯಾದಿ ಸಂದರ್ಭಗಳಲ್ಲಿ ಮನೆಯ ಭಾಗವಾಗಿ ಬಾಗಿಲನ್ನು ಮನೆಗೆ, ಮನಸ್ಸಿಗೆ, ದೇವಗೃಹಕ್ಕೆ, ದೇಹಕ್ಕೆ ಇತ್ಯಾದಿಯಾಗಿ ಕಾವ್ಯಾತ್ಮಕವಾಗಿ ಅನ್ವಯಿಸಿ ನೋಡಿದ್ದನ್ನು ಗಮನಿಸಬಹುದಾಗಿದೆ.

ಪ್ರಾಚೀನ ಸಾಹಿತ್ಯ ಕೃತಿಗಳು

ಕನ್ನಡದ ಪ್ರಾಚೀನ ಸಾಹಿತ್ಯವೆಂದರೆ ಜೈನ ಸಾಹಿತ್ಯವೆಂದೆ ಅರ್ಥ. ವೀರಯುಗಕ್ಕೆ ಸೇರಿದ ಪಂಪನಂತಹ ಜೈನ ಕವಿಗಳು ನಿಸರ್ಗದ ವರ್ಣನೆಯನ್ನು ಮಾಡುವಾಗ 'ಹೊಸ್ತಿಲು', 'ಬಾಗಿಲು' ಪದಗಳನ್ನು ಎತ್ತಿಕೊಂಡದ್ದು ಇದೆ. ಉದಾಹರಣೆಗೆ ಪಂಪನು ತನ್ನ ಆದಿಪುರಾಣದಲ್ಲಿ ಬಾಗಿಲಿಗೆ ಸಂಬಂಧಿಸಿದ ಪದ್ಯವನ್ನು ಕೊಡುತ್ತಾನೆ.

ಪೊಸನನೆಯೊಳ್ ಪಸುರ್ಪಲರೊಳಂಚಿರಮಲ್ಲದ ಬೆಳ್ಪು ಪಲ್ಲವ
ಪ್ರಸರದೊಳೆಯ್ದೆ ಕಣ್ಗೆ ಪಸರಂಬಡೆದೊಪ್ಪುವ ಕೆಂಪು ತುಂಬಿಯೋಳ್।
ಮಿಸುಗುವ ಕರ್ಪು್ಪ ಒರ್ಚಿಸಿದವೊಲ್ ಬೆಗೆಗೊಳ್ಪಿನೆಗಂ ಬಸಂತದೊಳ್
ಬಸದಿಯ ಬಾಗಿಲಂ ತೆಱೆದ ಮಾಟ್ಕೆಯೊಳಿರ್ದುವು ಬಂದ ಮಾವುಗಳ್॥

ಮೇಲಿನ ಈ ವೃತ್ತದಲ್ಲಿ ಅದೇ ತಾನೆ ಅರಳಿದ ಹೂವುಗಳಿಗೆ ಎರಗಲು ಬರುತ್ತಿರುವ ದುಂಬಿಗಳ ವರ್ಣನೆ ಇದೆ. ವಸಂತ ಕಾಲದಲ್ಲಿ ಅರಳುವ ಹೂಗಳ ಹಿಂದೆ ಅಡಗಿದ ಮಾವುಗಳನ್ನು 'ಬಸದಿಯ ಬಾಗಿಲಂ ತೆರೆದ ಮಾಟ್ಕೆಯೊಳಿರ್ದುವು ಬಂದ ಮಾವುಗಳ್' ಎಂದು ಚಿಗುರಿದ ಮಾಮರದ ಒಳಗೆ ಅವಿತ ಮಾಮರದ ಫಲಗಳನ್ನು ತೆರೆದು ತೋರುವ ಕ್ರಿಯೆಗೆ ಬಾಗಿಲನ್ನು ಬಳಸಿಕೊಳ್ಳಲಾಗಿದ್ದು ಅದನ್ನು ಕವಿ ಬಸದಿಯ ಬಾಗಿಲು ಎಂದು ವರ್ಣಿಸಿರುವುದು ವಿಶೇಷವಾಗಿದೆ.

ಕನ್ನಡದ ಮೊದಲ ಗದ್ಯಕೃತಿ ಎನಿಸಿಕೊಂಡಿರುವ ವಡ್ಡಾರಾಧನೆಯಲ್ಲಿ ಬಾಗಿಲು ವಿವಿಧ ಅರ್ಥದಲ್ಲಿ ಬಳಕೆಗೊಂಡುದು ಕಾಣಸಿಗುತ್ತದೆ. ಭದ್ರಬಾಹು ಭಟ್ಟಾರರ ಕಥೆಯಲ್ಲಿ ಧಾರಣಿ ಮಹಾದೇವಿಯು ತನ್ನ ಪರಿವಾರದೊಂದಿಗೆ ಹೊರಟು ಬರುವುದನ್ನು ವರ್ಣಿಸುವ ಸಂದರ್ಭದಲ್ಲಿ 'ವಿದ್ಯಾಧರಿಯರ್ಕಳ್ ಬರ್ಪಂತೆ ಬಂದು ಬಾಗಿಲ್ಮಾಡದ ಪೊಱಗಣ ದೆಸೆಯೊಳ್ ತಂತಮ್ಮ ವಾಹನಂಗಳಿಂದಟಿದು' ಬಸದಿಯನ್ನು ಹೊಕ್ಕಳೆಂದು ಹೇಳಲಾಗಿದೆ. ಇಲ್ಲಿ ಬಾಗಿಲ್ಮಾಡದ ಪ್ರಸ್ತಾಪ ಬಂದಿದೆ.

ಬಾಗಿಲು ಮಾಡದ ಹೊರಗೆ ಪರಿವಾರದ ಜನ ವಾಹನಗಳಿಂದ ಇಳಿದರು ಎಂದಿರುವುದರಿಂದ ಬಾಗಿಲ್ಮಾಡವು ಪ್ರವೇಶದ್ವಾರವನ್ನು ಸೂಚಿಸುತ್ತಿರುವುದು ಸ್ಪಷ್ಟವಾಗಿದೆ. ಕಾರ್ತಿಕ ಋಷಿಯ ಕಥೆಯಲ್ಲಿ ವೀರಶ್ರೀ ಮಹಾದೇವಿಯು ತನ್ನ ತೊಡೆಯ ಮೇಲೆ ಮಲಗಿದ ಪತಿಯೊಂದಿಗಿರುವಾಗ ಭಟಾರರು ಬಂದ

ದೃಶ್ಯವನ್ನು ಮೇಲ್ಮಹಡಿಯಿಂದ ಕಂಡು ಪತಿಯ ತಲೆಯನ್ನು ಅವನಿಗೆ ಎಚ್ಚರವಾಗದಂತೆ ಆಧಾರವಿಟ್ಟು ಇರಿಸಿ ಭಟ್ಟಾರರನ್ನು ಎದುರುಗೊಳ್ಳಲು ಕೆಳಗಿಳಿದು ಓಡಿ ಬರುವ ಹೊತ್ತಿಗೆ ಅವರು ಮನೆಯಂಗಣಮಂ ಪೊಕ್ಕುಂ ಮಗುಟ್ದುಪೋಗಿ ಬಾಗಿಲ್ ಮಾಡಮನೆಯ್ದಿದಾಗಳ್ ಎನ್ನುತ್ತಾನೆ. ವಡ್ಡಾರಾಧನೆಯ ಕರ್ತೃ ಇಲ್ಲಿ ಭಟಾರರು ಮನೆಯಂಗಳವನ್ನು ದಾಟಿ ಒಳಬಂದವರು ಸ್ವಾಗತಿಸಲು ಯಾರು ಇಲ್ಲದ್ದಕ್ಕೆ ಹೊರಳಿ ಬಾಗಿಲ್ಮಾಡದ ಕಡೆಗೆ ನಡೆದರು ಎನ್ನುವಲ್ಲಿ ಬಾಗಿಲ್ಮಾಡವು ಅವರು ಮೊದಲ ಹೆಜ್ಜೆ ಇಟ್ಟ ಪ್ರವೇಶ ದ್ವಾರವೇ ಆಗಿದೆ.

ವಿದ್ಯುಚ್ಚೋರನೆಂಬ ಋಷಿಯ ಕಥೆಯಲ್ಲಿ ಚೋರನು ಗುಹೆಯ ಬಾಗಿಲನ್ನು ಮುಚ್ಚಿದ್ದ 'ಪಿರಿಯ ಸಿಲೆಯಂ ತಂದಿಟ್ಟ' ಮಾತಿದೆ. ಅಂದರೆ ಗುಹೆಯ ಬಾಯಿಗೆ ಇಡಲಾದ ಕಲ್ಲು ಗುಂಡನ್ನು ಇಲ್ಲಿ ಬಾಗಿಲ್ ಎಂದು ಕರೆಯಲಾಗಿದೆ. ಅದೇ ಕಥೆಯಲ್ಲಿ ಮುಂದೆ 'ಅರಸ ಮನೆಯ ಬಾಗಿಲೊಳ್ ನಿಂದು' ಎಂದು ಉಲ್ಲೇಖವಾದ ಬಾಗಿಲು ಅರಮನೆಯ ಬಾಗಿಲು ಆಗಿದೆ. ಚಿತಲಾಪುತ್ರನ ಕಥೆಯಲ್ಲಿ 'ಗೋಪುರದ್ವಾರ ಮುಮಂ' ಮಾಡಿ ಎಂಬ ಸಾಲು ಬರುತ್ತದೆ. ಇದು ದೇವಸ್ಥಾನದ ಪ್ರವೇಶದ್ವಾರವನ್ನು ಹೇಳುತ್ತದೆ.

ಅಭಿನವ ಪಂಪ ಎಂದು ಬಿರುದಾಂಕಿತನಾದ ನಾಗಚಂದ್ರನು ತನ್ನ ಮಲ್ಲಿನಾಥ ಪುರಾಣದಲ್ಲಿ ಲತಾಮಂಟಪದ ವರ್ಣನೆಯನ್ನು ಮಾಡುವಲ್ಲಿ ಲತಾಗೃಹ ದ್ವಾರ ಎಂಬ ಪದ ಬಳಕೆಯಾಗಿರುವುದನ್ನು ಈ ಮುಂದಿನ ಪದ್ಯವು ಸೂಚಿಸುತ್ತದೆ.

> ಸಾರಸಚಾರಣಸ್ತವನದಿಂ ಕಳಕೋಕಿಳ ನಿಸ್ವನ ಪ್ರತೀ
> ಹಾರನಿನಾದದಿಂ ಸ್ತಬಕಮಂಗಳದರ್ಪಣದಿಂ ಶುಕಾವಳೀ
> ತೋರಣದಿಂ ವಿಚಿತ್ರತರ ಪತ್ರದಿನೊಪ್ಪುವದಂ ಲತಾಗೃಹ
> ದ್ವಾರಮನನಂದು ಪೊಕ್ಕನಲಗೊಂಚಲೆ ದರ್ಶನಮಾಗೆ ಮಾರುತಂ

ಇಲ್ಲಿ ಕೋಗಿಲೆಯ ಧ್ವನಿಯಿಂದ ಹೂ ಗೊಂಚಲು ಕನ್ನಡಿಯಿಂದ, ಗಿಳಿಗಳಿಂದ, ತೋರಣದಿಂದ ಆ ಲತಾ ಮಂಟಪದ ದ್ವಾರವು ಸಿಂಗರಗೊಂಡುದನ್ನು ಹೇಳಲಾಗಿದೆ. ಬಾಗಿಲು ಪದಕ್ಕೆ ಪರ್ಯಾಯವಾಗಿ ಕವಿಯು ದ್ವಾರ ಎಂಬುದನ್ನು ಬಳಸಿದ್ದಾನೆ. ಈ ವರ್ಣನೆಯನ್ನು ನೋಡಿದರೆ ಇಂತದೆ ಗಿಳಿ ಮತ್ತು ಬಳ್ಳಿಗಳಿಂದ ಕೆತ್ತಿದ ಮನೆಯ ಬಾಗಿಲುಗಳು ನಮ್ಮ ಸ್ಮರಣೆಗೆ ಬರದೆ ಇರಲಾರವು.



ಕುಸುರಿ ಕೆತ್ತನೆಯುಳ್ಳ ಬಾಗಿಲ ಚಿತ್ರ

ರುದ್ರಭಟ್ಟನ ಜಗನ್ನಾಥ ವಿಜಯದಲ್ಲಿ ಊರ ಹೆಸರಾಗಿ ದ್ವಾರಾವತೀ ದ್ವಾರರೆ ಎಂಬ ಪೌರಾಣಿಕ ಹೆಸರುಗಳು ಬರುತ್ತವೆ.

ಕುಮಾರವ್ಯಾಸನಲ್ಲಿ ಅರಮನೆ ಇಲ್ಲವೆ ಪುರದ ಬಾಗಿಲಲ್ಲಿ ಕಾಣಿಸಿಕೊಳ್ಳುವ ಕೃಷ್ಣನ ವರ್ಣನೆ ಸಾಕಷ್ಟಿದೆ. ಗರುವ ದೇವನ ಬರುವ ಕಂಡನು ಬಾಗಿಲಲಿ ವಿದುರ ಎಂಬಲ್ಲಿ ತನ್ನ ಮನೆಗೆ ಅನಿರೀಕ್ಷಿತ ಭೇಟಿ ಇತ್ತ ಕೃಷ್ಣನನ್ನು ವಿದುರ ಕಂಡ ಪರಿ ಇದೆ. ಹಾಗೆಯೇ ಆಳು ಕುದುರೆಯ ಬಾಗಿಲಿಗೆ ಬರಹೇಳ ಎನ್ನುತ್ತ ಸಮರ ಸಿದ್ಧತೆಯೊಂದಿಗೆ ಹೊರಟ ಭೀಮನು ನೊರೆನೆತ್ತರಲಿ ನಾದುವುದು ಮೇದಿನಿಯ ಎಂದು ಗುಡುಗುವ ಸಂದರ್ಭದಲ್ಲಿ ಹೇಳಲಾದ ಬಾಗಿಲು ಹಸ್ತಿನಾವತಿಯ ಹೊರಗಿನ ಲಗಸೆಯ ಬಾಗಿಲೇ ಆಗಿರುವಂತಿದೆ. ಹಾಗೆಯೇ ಭೀಮ ಮುಂದುವರೆದು ಗರ್ಜಿಸುವಂತೆ ಶಾಕಿನಿ ಡಾಕಿನಿಯರಿಗೆ ವೈರಿಗಳ ನೆತ್ತರ ಮಾಂಸವನ್ನು ಹರಿದು ಹಂಚಿ ಹಾಕುತ್ತಲೆ ಕೌರವನ ತನಿಗರುಳ ದಂಡೆಯನ್ನು ತೋರಣವಾಗಿ ಓಡಿದುಕೊಂಡು ನಿಂದುಪುರದ ಒಳಗೆ ಪ್ರವೇಶ ಮಾಡುವ ಮಾತನಾಡುತ್ತಾನೆ.

ಇಲ್ಲಿನ ವರ್ಣನೆ ಭೀಮನ ದೈತ್ಯ ಸ್ವರೂಪದ ವೀರಕ್ಕೆ ತಕ್ಕುದಾಗಿರುವ ಹಾಗೆ ಕವಿ ತನ್ನ ವರ್ಣನೆಯಲ್ಲಿ ಪ್ರಯೋಗಿಸುವ ಕರುಳ ದಂಡೆ, ತೋರಣ, ಬಾಗಿಲು ಪದ ಪ್ರಯೋಗಗಳು ಗಮನಿಸುವಂತಿವೆ. ಅಂದರೆ ಸಾಮಾನ್ಯವಾಗಿ ಬಾಗಿಲಿನ ಅಲಂಕಾರವನ್ನು ಹೂವಿನ ದಂಡೆಗಳಿಂದ, ತಳಿರಿನ ತೋರಣಗಳಿಂದ ಸಿಂಗರಿಸುತ್ತಿರುವುದನ್ನು ಇಲ್ಲಿ ನೆನೆಯಬಹುದಾಗಿದೆ.

ರತ್ನಾಕರವರ್ಣಿಯು ತನ್ನ ಭರತೇಶ ವೈಭವದಲ್ಲಿ ಭರತನ ಯೋಗಭೋಗದ ಸಮನ್ವಯದ ಬದುಕನ್ನು ಚಿತ್ರಿಸುವಾಗ ಅವನ ಅರಮನೆಯ ಶೃಂಗಾರವನ್ನು ಹೇಳುವಾಗ ಬಾಗಿಲಿನ ಪ್ರಸ್ತಾಪ ಬರುತ್ತದೆ. ಮುಂಬಾಗಿಲು, ಕಡೆಯ ಬಾಗಿಲು ದ್ವಾರ ಮೊದಲಾದ ಉಲ್ಲೇಖಗಳು ಬರುತ್ತವೆ. ಅವನ ವರ್ಣನೆಯಲ್ಲಿ ಪುತ್ತಳಿಗೆಲಸದ ಬಾಗಿಲು ಎಂಬ ವಿಶೇಷ ಉಲ್ಲೇಖವು ನಮ್ಮ ಗಮನವನ್ನು ಸೆಳೆಯುತ್ತದೆ.



ಪುತ್ತಳಿಕೆಲಸದ ಬಾಗಿಲು

ಪುತ್ತಳಿಗೆಲಸದ ಬಾಗಿಲು ಕಾಂಚನ
ಭಿತ್ತಿ ಮಾಣಿಕದ ಕಂಭಗಳು
ಕತ್ತುರಿ ಸಾರಣೆ ಪೂವಲಿ ನೆಲದೊಳು
ಮೆತ್ತ ಮೆತ್ತನೆ ಬರುತಿರ್ದು[]

ಎಂಬಲ್ಲಿ ಬಾಗಿಲಿಗೆ ಮಾಡಲಾದ ವಿವಿಧ ಕೆತ್ತನೆಗಳಲ್ಲಿ ಪುತ್ಥಳಿಗಳನ್ನು ಅಂದರೆ ಗೊಂಬೆಗಳನ್ನು ಕೆತ್ತಿದ ಇಲ್ಲವೆ ಅಳವಡಿಸಿದ ಎರಡು ಸಾಧ್ಯತೆಗಳನ್ನು ಹೇಳುತ್ತಿದ್ದಾನೆ.

ಲಕ್ಷ್ಮೀಶನು ತನ್ನ ಜೈಮಿನಿ ಭಾರತದಲ್ಲಿ ಹೊಸ್ತಿಲಿನ ಮೇಲೆ ಕುಳಿತರೆ ಅವನ ಸಿರಿಸಂಪತ್ತು ತೊಲಗುತ್ತದೆ ಎಂಬ ಮಾತನ್ನು ಆಡುತ್ತಾನೆ. ಆ ಪದ್ಯ ಹೀಗಿದೆ.

ಹೊಸ್ತಿಲೊರಳೊನಕೆಗಳ ಮೇಲೆ ಕುಳ್ಳಿರ್ಪವನ
ಮಸ್ತಕವನೆರಡು ಕೈಯಿಂ ತುರಿಸಿಕೊಂಬವನ
ವಿಸರದ ಜೂಜುಗಳ್ಗೆಳಸುವವನ ಪಿರಿದುಂಬುವನ ನಿಂದು ನೀರ್ಗುಡಿವನ|

ಅಸ್ತಮಯದುದಯಕಾಲದಿ ನಿದ್ರೆಗೈವನಾ
ತುಸ್ತುತಿಯ ಪರನಿಂದೆಯವನ ಸಾಧಿಸಿ ಪರರ
ವಸ್ತುವಂ ಕಳುವನ ನಿರುದ್ಯೋಗದವನ ಸಿರಿ ತೊಲಗಿದಲ್ಲದೆ ಮಾಣ್ಬಳೆ||[೧೦]

ಈ ಪದ್ಯದಲ್ಲಿ ನಿಂತು ಉಣ್ಣುವುದು, ನಿಂತು ನೀರು ಕುಡಿಯುವುದು, ಒರಳು ಒನಕೆಗಳ ಮೇಲೆ ಕುಳಿತುಕೊಳ್ಳುವುದು ಮುಂತಾದವುಗಳು ಸಿರಿ ತೊಲಗಿ ದಾರಿದ್ರಕ್ಕೆ ದಾರಿ ಎಂದು ಸೂಚಿಸುವಾಗ ಹೊಸ್ತಿಲ ಮೇಲೆ ಕುಳಿತುಕೊಳ್ಳುವುದು ಅಪಶಕುನವೆಂಬಂತಹ ಸ್ಪಷ್ಟ ನುಡಿ ವ್ಯಕ್ತವಾಗಿದೆ.

ಇದುವರೆಗಿನ ಅವಲೋಕನದಲ್ಲಿ ಹೊಸ್ತಿಲು ಬಳಕೆಯ ವ್ಯಾಪ್ತಿಯನ್ನು ನೋಡಲಾಗಿ ಈ ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಹೊಸ್ತಿಲು ಪದ ಬಳಕೆಯಾದ ಸಂದರ್ಭವೆಂದರೆ ಅರಮನೆಗಳಿಗೆ ಸಂಬಂಧಿಸಿದಂತೆ ಹೊಸ್ತಿಲನ್ನು ನೋಡಿದ್ದೆ ಆಗಿದೆ. ಪ್ರಾಚೀನ ಕಾಲವು ಅರಮನೆ ವೈಭವ ಮತ್ತು ಯುದ್ಧದ ವೈಪರಿತ್ಯಗಳಿಂದ ತುಂಬಿ ಹೋದ ಕಾಲವಾದ್ದರಿಂದ ಅಂತಹ ಪರಿಸರದಲ್ಲಿಯೇ ಸಹಜವಾಗಿ ಹೊಸ್ತಿಲು ಮತ್ತು ಬಾಗಿಲುಗಳ ಬಣ್ಣನೆ ಬಂದಿದೆ. ಮನೆಯು ಅರಮನೆಯಾದಾಗ ಅರಮನೆಯ ಯೋಗ್ಯತೆಗೆ ತಕ್ಕ ಹಾಗೆ ರೂಪದಲ್ಲಿ ಬೃಹತ್ತಾಗಿಯೂ, ಆಯಾ ಸಂದರ್ಭದಲ್ಲಿ ರಾಜಕೀಯ ಆದ್ಯತೆಗಳಿಂದ ಕೂಡಿದ್ದಾಗಿಯೂ ಅಂತೂ ವೈಭವದ ಪರಿವೇಶವನ್ನು ಹೊಸ್ತಿಲು ತಳೆದಿದೆ. ಯುದ್ಧವು ಬೈಭತ್ಸಗೊಳ್ಳುವಾಗ ಹೂಲತೆಗಳಿಂದ ಮಾವಿನ ತಳಿರಿನಿಂದ ಶೋಭಿಸುವ ಗೃಹಾಲಂಕಾರವು ಶೋಭಿಸುವ ವರ್ಣನೆಯು ತಟ್ಟನೆ ಕರುಳ ದಂಡೆಗಳ ಭಯಾನಕ ಚಿತ್ರಣದತ್ತ ಹೊರಳಿಕೊಳ್ಳುತ್ತದೆ. ಹೀಗೆ ಶೃಂಗಾರ ಮತ್ತು ಭೀಭತ್ಸ ಎರಡು ಪರಿಸರ ಆ ಕಾಲದ ಕೃತಿಗಳಲ್ಲಿ ಪಡಿಮೂಡುವಿಕೆ, ಹೊಸ್ತಿಲು ಇಲ್ಲವೆ ಬಾಗಿಲುಗಳ ವರ್ಣನೆ ಅದಕ್ಕೆ ಹೊರತಲ್ಲವೆಂದೆ ಹೇಳಬೇಕು.

೨.೩. ಮಧ್ಯಕಾಲೀನ ಸಾಹಿತ್ಯ ಕೃತಿಗಳು

ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆದ ಡಾ.ರಂ.ಶ್ರೀ ಮುಗುಳಿ ಮೊದಲಾದ ವಿದ್ವಾಂಸರು ಮಧ್ಯಾಕಾಲವನ್ನು ಬಸವಯುಗ ಮತ್ತು ಕುಮಾರವ್ಯಾಸಯುಗ ಎಂದು ವಿಭಾಗ ಮಾಡಿ ನೋಡುತ್ತಾರೆ. ಈ ಎರಡು ವಿಭಾಗಗಳಲ್ಲಿ ಬರುವ ಹರಿಹರ ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ ಮೊದಲಾದ ಕವಿಗಳ ಕಾವ್ಯಗಳಲ್ಲಿ ಉಲ್ಲೇಖವಾದ ಹೊಸ್ತಿಲು ಪದವನ್ನು ಮೇಲೆ ನೋದ್ದಾಗಿದೆ. ಇಲ್ಲಿ ವಚನಕಾರರು, ಹರಿದಾಸರು ಮತ್ತು ತತ್ವಪದಕಾರರಲ್ಲಿ ಬಳಕೆಯಾಗಿರುವ ಹೊಸ್ತಿಲು ಪದವನ್ನು ಪರಿಶೀಲಿಸಬಹುದಾಗಿದೆ.

ಸದ್ಗುರು ಸಿದ್ಧ ಸೋಮನಾಥ ಅಂಕಿತದ ವಚನದಲ್ಲಿ 'ನೆಲವಾಗಿಲ ಮುಚ್ಚಿ ತಲೆವಾಗಿಲ ತೆರೆದು' ಎಂಬ ಸಾಲು ಬರುತ್ತದೆ. ಇಲ್ಲಿ ಬಾಗಿಲು ಪದವನ್ನು ನೆಲದೊಂದಿಗೆ ಬಳಸಲಾಗಿದೆ. ನೆಲವಾಗಿಲು ಎನ್ನುವುದು (Under ground)ನೆಲಮನೆಗೆ ಇರಿಸಲಾದ ಬಾಗಿಲನ್ನು ಸೂಚಿಸುತ್ತಿರುವ ಹಾಗೆ ಕಾಣುತ್ತದೆ. ಸದಾಶಿವಮೂರ್ತಿ ಎನ್ನುವ ಅಂಕಿತದ ವಚನದಲ್ಲಿ ಅಂಗಮಧ್ಯದ ಚಿತ್ರದ ದ್ವಾರದಲ್ಲಿ ಎಂಬ ಉಲ್ಲೇಖ ಬರುತ್ತದೆ. ಪದ್ಯ ಹೀಗಿದೆ.

ಅರುಕಿರಣ ಮಂದಿರದ ಕಂಡಿಯಲ್ಲಿ ತೋರುತ್ತದೆ
ಆ ಘಟದಲ್ಲಿ ಎಡೆಯಾಡುವ "ಅಣೋರಣೀಯಾನ್" ಎಂಬಂತೆ
ಅಂಗಮಧ್ಯದ ಚಿತ್ತದ ದ್ವಾರದಲ್ಲಿ ಅರಿದಡೆ ತಾಕುವ ಜ್ಞಾನ
ನಿಂದ ಘಟದಲ್ಲಿ ಬೆಳಗುತ್ತದೆ, ಸದಾಶಿವಮೂರ್ತಿ ಲಿಂಗದಲ್ಲಿ[೧೧]

ಇಲ್ಲಿ ಚಿತ್ತಕ್ಕೆ ದ್ವಾರವನ್ನು ಕಲ್ಪಿಸಲಾಗಿದೆ. ಇದೆ ಅಂಕಿತದ ಇನ್ನೊಂದು ವಚನ ಹೀಗಿದೆ.

ವಚನರಚನೆಯ ಬಲ್ಲ ಅರುಹಿರಿಯರೆಲ್ಲರು
ಮೂರುಳ್ಳವನ ಬಾಗಿಲ ಕಾಯಿದ್ದೈಧಾರೆ
ಹೇಳಿ ಕೇಳಿ ಬಲ್ಲತನವಾದೆಹೆನೆಂಬವರೆಲ್ಲರು ಬಾಗಿಲಲ್ಲಿಯೆ ಸಿಕ್ಕಿದರು
ಸ್ಥಾವರಾದಿಗಳು ಮೊದಲಾಗಿ ಇದಿರಿಟ್ಟ ಕುರುಹೆಲ್ಲವು
ತಾವಿದ್ದ ಠಾವಿಗೆ ತಂದುಕೊಂಬವರಿಂದ ಕಡೆಯೆ
ಅರಿವುಳ್ಳ ಜ್ಞಾನಿಗಳೆಂಬವರು?
ಇದು ಕಾರಣ, ಸಂಚಿತ ಅಗಾಮಿ ಪ್ರಾರಬ್ಧ ಎಲ್ಲಿದ್ದಡೂತಪ್ಪದು
ಹಲುಬಿ ಹರಿದಾಡಬೇಡ
ಸದಾಶಿವ ಮೂರ್ತಿಲಿಂಗವ ಬಲವರವಿಲ್ಲದೆ ನೆರೆ ನಂಬು[೧೨]

ಇಲ್ಲಿ ನಮ್ಮ ಗಮವನ್ನು ಸೆಳೆಯುವ ಸಾಲು ವಚನ ರಚನೆಯ ಬಲ್ಲ ಅರುಹಿರಿಯರೆಲ್ಲರು ಮೂರುಳ್ಳವನ ಬಾಗಿಲು ಕಾಯಿದ್ದೈಧಾರೆ ಎನ್ನುವುದು ಇಲ್ಲಿ ಮೂರುಳ್ಳವನ ಮೂರು ಕಣ್ಣುಳ್ಳ ಮುಕ್ಕಣ್ಣ ಅಂದರೆ ಶಿವನು ಅನ್ನಬಹುದು. ಶಿವನ ಬಾಗಿಲು ಅದು ಕೈಲಾಸದ ಬಾಗಿಲು ಆಗಿದೆ. ಇದೇ ಅಂಕಿತದ ಮತ್ತೊಂದು

ಬೆಡಗಿನ ವಚನದಲ್ಲಿ ಅಂಧಕಾರವೆಂಬ ಮನೆಯ ಬಾಗಿಲಲ್ಲಿ ಎಂಬ ಪದ ಪ್ರಯೋಗವು ಬರುತ್ತದೆ. ಇಲ್ಲಿ ಅಂಧಕಾರದ ಮನೆ ಎಂಬುದನ್ನು ಅಜ್ಞಾನದಿಂದ ತುಂಬಿರುವ ದೇಹಕ್ಕೆ ಅನ್ವಯಿಸುವ ಹಾಗೆ ಕಾಣುತ್ತದೆ. ಸದಾಶಿವಮೂರ್ತಿಗಳ ಇನ್ನಿತರ ವಚನದಲ್ಲಿ ಮೂಲದ ದ್ವಾರಭಕ್ತನ ಬಾಗಿಲು ಎಂಬಂತಹ ನುಡಿಗಳು ಬರುತ್ತವೆ. ಮೂಲದ ದ್ವಾರವೆಂಬುದು ಯೋಗದ ಪರಿಭಾಷೆಯಾಗಿದೆ. ಹಾಗೆಯೆ ಭಕ್ತನ ಬಾಗಿಲು ಶರಣನ ಮನೆಯ ಕುರಿತು ಹೇಳಿದ ಮಾತಿಗಿದೆ. ಇಂತಹದೆ ಇನ್ನೊಂದು ವಚನ ಹೀಗಿದೆ.

ಬಾಗಿಲಲ್ಲಿ ತಡೆವಾತನ ಮನೆಯ ಬಾಗಿಲ ಹೊಕ್ಕು ಉಂಡ ಜಂಗಮ
ಪಾದೋದಕ ಪ್ರಸಾದವೆಂದು ಕೊಂಡಾತಂಗೆ ಅಘೋರ ಪಾತಕವೆಂದೆ
ಅದೆಂತೆಂದಡೆ
ತಾ ಸರ್ವಸಂಗವನರಿತು ಭಕ್ತಿವಿರಕ್ತಿಯ ಕಂಡು
ಇಂತೀ ಗುಣಂಗಳಲ್ಲಿ ಸನ್ನದ್ಧನಾಗಿ ಅರಿತು
ಮತ್ತೇ ಉದರದ ಕಕ್ಕುಲತೆಗೆ ಸದನವ ಹೊಗಬಾರದು ಇಂತೀ ವಿವರ
ದರ್ಶನದ ಮರೆಯಲ್ಲಿ ಆಡುವ ಪರಮವಿರಕ್ತನ ಸ್ಥಲ
ಸದಾಶಿವಮೂರ್ತಿಲಿಂಗದಲ್ಲಿ ಆಗುಚೇಗೆಯ ನರಿಯಬೇಕು[೧೩]

ಈ ವಚನದಲ್ಲಿ ಬಾಗಿಲಲ್ಲಿ ತಡೆವಾತನ ಮನೆಯ ಬಾಗಿಲ ಪೊಕ್ಕು ಎಂಬುದು ಕರಯದೆ ಬರುವ, ಪಾದೋದಕ ಪ್ರಸಾದ ಸ್ವೀಕರಿಸುವ ಜಂಗಮನ ತಪ್ಪನ್ನು ಮನಗಾಣಿಸಲಾಗಿದೆ. ಸೌರಾಷ್ಟ್ರ ಸೋಮೇಶ್ವರಲಿಂಗ ಅಂಕಿತದ ಒಂದು ವಚನವು ಹೀಗಿದೆ.

ಇಂದ್ರಿಯದ ಬಾಗಿಲಲ್ಲಿ ಮನವಿಪ್ಪುದು
ಮನದ ಮುಂಬಾಗಿಲಲ್ಲೇ ಭೋಗಲಿಂಗವಿದ್ದು,
ಅಧಿಕಾರ ಲಯಹೊದ್ದದೆ ಸಕಲಭೋಗಂಗಳ ಭೋಗಿಸಿ
ಪ್ರಸಾದವ ಕರಣಂಗಳಿಗೆ ಕೊಟ್ಟು ಅರುಹಿ
ಎನ್ನ ಮನವ ತನ್ನತ್ತ ಸೆಳೆದು ಮರಹ ಮಾಣಿಸಿ
ಕುರುಹಳಿದು ತೆರಹುಗೊಡದ
ಸೌರಾಷ್ಟ್ರ ಸೋಮೇಶ್ವರಲಿಂಗವ ಕಂಡೆ[೧೪]

ಈ ವಚನದಲ್ಲಿ ದೇಹವನ್ನು ಮನೆಗೆ ಹೋಲಿಸಲಾಗಿದೆ. ಮನೆಯ ಬೇರೆ ಬೇರೆ ಭಾಗಗಳಾಗಿ ಇಂದ್ರಿಯದ ಬಾಗಿಲು, ಮನದ ಮುಂಬಾಗಿಲು ಎಂಬುದಾಗಿ ಹೇಳಲಾಗಿದೆ. ಇದು ದೇಹದಲ್ಲಿನ ಸ್ಥೂಲ, ಸೂಕ್ಷ್ಮ ಎಂಬ ಶರೀರಗಳ ಕಲ್ಪನೆಯನ್ನು ಹೇಳುತ್ತದೆ.

ಬಸವಣ್ಣನ ವಚನಗಳಲ್ಲಿ ಹೀಗೆಯೇ ದೇಹವನ್ನು ಮನೆಯ ರೂಪಕದಲ್ಲಿ ಬಳಸಲಾಗಿದೆ. ಆತನ ಪ್ರಸಿದ್ಧ ವಚನವಾದ ಮನೆಯ ಒಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ ಎಂಬ ವಚನವು ಗಮನಾರ್ಹವಾಗಿದೆ.

ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ
ತನವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯ ನಿಲ್ಲ ಕೂಡಲಸಂಗಮದೇವ[೧೫]

ಈ ವಚನದಲ್ಲಿ ದೇಹವನ್ನು ಮನೆಯಾಗಿ ಕಲ್ಪಿಸುತ್ತ, ಮನೆಯಲ್ಲಿ ಜನ ಇರುವುದಾದರೆ ಹೊಸ್ತಿಲಲ್ಲಿ ಹುಲ್ಲು ಹೇಗೆ ಬೆಳೆಯಲು ಸಾಧ್ಯ ಎಂದು ಕೇಳಲಾಗಿದೆ. ಹಾಗೆಯೇ ಕೇಳುವ ಮೂಲಕ ಆಸೆ ಅಹಂಕಾರಗಳಿಂದ ತುಂಬಿದ ದೇಹವೆಂಬ ಮನೆಯಲ್ಲಿ ಮನೆಯೊಡೆಯ ಅಂದರೆ ದೇವರು ಇರಲಾರ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಬಸವಣ್ಣನದೆ ಇನ್ನೊಂದು ವಚನದಲ್ಲಿ ಹೊಸ್ತಿಲನ್ನು ಪೂಜಿಸುವ ಮಾತು ಬರುತ್ತದೆ.

ಹೊಸತಿಲ ಪೂಜಿಸಿ ಹೊರವಂಟು ಹೋದ
ಒಕ್ಕಲತಿಯಂತಾಯಿತೆನ್ನ ಭಕ್ತಿ
ಜಂಗಮವೆನ್ನೊಡೆಯರೆಂದು ಒಕ್ಕುದಕೊಂಡು
ಉದಾಸೀನವ ಮಾಡಿದಡೆ
ಇಹಲೋಕಕ್ಕೆ ದೂರ, ಪರಲೋಕಕ್ಕೆ ದೂರ
ಕೂಡಲಸಂಗಮದೇವರ ಅಘೋರ ನರಕದಲ್ಲಿಕ್ಕುವ[೧೬]

ಇಲ್ಲಿ ಒಕ್ಕಲತಿಯ ನಿರರ್ಥಕ ಭಕ್ತಿಯನ್ನು ಬಸವಣ್ಣ ಹೇಳುತ್ತಾನೆ. ನಿತ್ಯವು ಹೊಲದಲ್ಲಿ ದುಡಿಯುವ ಒಕ್ಕಲತಿಗೆ ಮನೆಯ ಹೊಸ್ತಿಲು ದೂರವೇ ಆಗಿದೆ. ಆದರೂ ಅವಳು ಅದನ್ನು ಪೂಜಿಸುವುದರಲ್ಲಿ ಅನ್ಯೋನ್ಯ ಸಂಬಂಧವನ್ನು ಸ್ಥಾಪಿಸಿಕೊಳ್ಳಲಾರದವಳಾಗಿದ್ದಾಳೆ. ಆತನದ್ದೆ ಬೆಡಗಿನ ಸ್ವರೂಪದ ವಚನದಲ್ಲಿ ಬಾಗಿಲು ಪದವನ್ನು ನೋಡಬಹುದಾಗಿದೆ.

ಒಂದು ಬಾಗಿಲಲ್ಲಿ ಇಬ್ಬರ ತಡೆವೆ
ಎರಡು ಬಾಗಿಲಲ್ಲಿ ಮೂವರ ತಡೆವೆ
ಆರು ಬಾಗಿಲಲ್ಲಿ ಒಬ್ಬನ ತಡೆವೆ
ಒಂಭತ್ತು ಬಾಗಿಲಲ್ಲಿ ನಿಂದು ನೋಡಲಾಗಿ
ಕೂಡಲಸಂಗಮದೇವರಲ್ಲಿ ಬಸವಣ್ಣ ಸಾಕ್ಷಿಯಾಗಿ ಎತ್ತ ಹೋದರೆಂದರಿಯೆ[೧೭]

ಇಲ್ಲಿ ಬಾಗಿಲುಗಳನ್ನು ಒಂದರಿಂದ ಒಂಭತ್ತರವರೆಗೆ ಹೇಳಲಾಗಿದೆ. ಇವು ದೇಹದ ಇಂದ್ರೀಯ, ಮನಸ್ಸು, ಬುದ್ಧಿ, ಚಿತ್ರ, ಅಹಂಕಾರ ಎಂಬಂತಹ ಬೇರೆ ಬೇರೆ ಅವಸ್ಥೆಗಳನ್ನು ಕಲ್ಪಿಸಿದ ಹಾಗೆ ಕಾಣುತ್ತದೆ. ಹಾಗೆಯೇ ಇಂದ್ರೀಯ ಮತ್ತು ಮನಸ್ಸಿನ ವಿಕಾರಗಳನ್ನು ತಡೆಯುವುದನ್ನು ಹೇಳಲಾಗಿದೆ. ಬಸವಣ್ಣನವರು ಹೇಳುವುದು ಆರು ಬಾಗಿಲುಗಳು ಕಾಮಕ್ರೋಧಾದಿಗಳ ಆರು ವೈರಿಗಳೇ ಆಗಿರಬಹುದು. ಹಾಗೆಯೇ

ಒಂಭತ್ತು ಬಾಗಿಲು ಎಂಬುದು ನವರಂಧ್ರದ ಈ ಶರೀರವನ್ನು ಹೇಳುವುದನ್ನು ಪ್ರಯತ್ನಿಸಿರುವಂತೆ ಕಾಣುತ್ತದೆ.

ಗಾರುಡೇಶ್ವರಲಿಂಗ ಅಂಕಿತದ ವಚನದಲ್ಲಿ ಬಾಗಿಲು ಚಾವಡಿ ಮನೆ ಎಂಬ ಮಾತು ಬರುತ್ತದೆ. 'ಬಾಗಿಲು ಚಾವಡಿ ಮನೆಯಲ್ಲಿ ನಿಲ್ಲು' ಇಲ್ಲಿ ಚಾವಡಿ ಮನೆ ಎಂಬುದು ಮನೆಯ ಒಂದು ಭಾಗವಾದ ಹಜಾರವು ಆಗಿರುವಂತಿದೆ.

ವಚನಕಾರರ ಹಾಗೆ ಹರಿದಾಸರು ತಮ್ಮ ಕೀರ್ತನೆ, ಸುಳಾದಿ ಮತ್ತು ಉಗಾಭೋಗಗಳಲ್ಲಿ ಬಾಗಿಲು ಪದವನ್ನು ಮತ್ತೆ ಮತ್ತೆ ಪ್ರಸ್ತಾಪಿಸುತ್ತಾರೆ. ಇವರು ಪೂಜಿಸುವ ಶ್ರೀಕೃಷ್ಣನ ನೆಲೆಗಳಿಗೆ ಭಕ್ತನು ಹೋಗಿ ನಿಂತು ಕಾಯುವ ಪರಿ ಅವರ ಹಾಡುಗಳಲ್ಲಿ ಇದೆ. ಮತ್ತು ಭಿಕ್ಷೆಯ ಮೂಲಕ ಜೀವಿಸಿದ ಹರಿದಾಸರು ಲೌಕಿಕದ ಮನೆಯ ಮುಂದೆ ನಿಲ್ಲಬೇಕಾದ ಸಂದರ್ಭದಲ್ಲಿ ಬಾಗಿಲು ಪದದ ಪ್ರಸ್ತಾಪ ಮಾಡುತ್ತಾರೆ. ವಚನಕಾರರಿಗೂ ಮತ್ತು ಹರಿದಾಸರಿಗೂ ಇರುವ ವ್ಯತ್ಯಾಸವೆಂದರೆ ವಚನಕಾರರು ದೇವಸ್ಥಾನ ವಿರೋಧಿಗಳಾದ್ದರಿಂದ ದೇಹದಲ್ಲಿಯೇ ದೇವಾಲಯವನ್ನು ಕಂಡರು. ಹೀಗಾಗಿ ಇವರು ಭಕ್ತಿಯ ಬಾಗಿಲುಗಳನ್ನು ದೇಹದಲ್ಲಿಯೇ ಕಾಣಿಸುತ್ತಾರೆ.

ಹೀಗಿರುವಾಗಲೂ ದೇಹದೊಳಗೆ ದೇವರನ್ನು ಶೋಧಿಸುವ ಹರಿದಾಸರಲ್ಲಿಯೂ ದೇಹಕ್ಕೆ ಸಂಬಂಧಿಸಿ ಬಾಗಿಲು ಪ್ರಸ್ತಾಪ ಇಲ್ಲವೆಂದು ಭಾವಿಸಲಾಗದು. ಉದಾಹರಣೆಗಾಗಿ ಪುರಂದರದಾಸರ ಕೀರ್ತನೆಯ ಒಂದು ನುಡಿಯನ್ನು ನೋಡಬಹುದು.

> ಒಂಭತ್ತು ಬಾಗಿಲ ಮನೆಯೊಳ್
> ತುಂಬಿದ ಸಂದಣಿ ಇರಲು
> ಕಂಭ ಮುರಿದು ಡಿಂಬ ಬಿದ್ದು
> ಅಂಬರಕ್ಕೆ ಹಾರಿಹೋಯಿತು[೮೮]

ಇಲ್ಲಿ ದೇಹವನ್ನು ಮನೆಗೆ ಹೋಲಿಸಲಾಗಿದ್ದು ಒಂಭತ್ತು ಬಾಗಿಲಿನ ಈ ದೇಹದಲ್ಲಿ ದೇಹವನ್ನು ಬಿಟ್ಟು ಆತ್ಮ ಚೈತನ್ಯ ಭಗವಂತನೆಡೆಗೆ ಹಾರಿಹೋದ ಸುಂದರ ರೂಪಕವಿದೆ. ಪುರಂದರದಾಸರೇ ಮತ್ತೊಂದು ಕಡೆ

> ಪೋಗದಿರೆಲೋ ರಂಗ ಬಾಗಿಲಿಂದಾಚೆಗೆ
> ಭಾಗವತರು ಕಂಡರೆತ್ತಿಕೊಂಡೊಯ್ವರೊ[೮೯]

ಇಲ್ಲಿ ರಂಗಯ್ಯನನ್ನು ಪುಟ್ಟ ಮಗುವೆಂದು ಭಾವಿಸುವ ದಾಸರು ಮಗು ಬಾಗಿಲಿನಿಂದ ಹೊರಗೆ ಹೋಗಬಾರದೆಂದು ಕಾಳಜಿ ತೋರುತ್ತಾರೆ. ಇದರ ಅರ್ಥ ತನ್ನ ದೇವರು ತನ್ನಿಂದ ಮರೆಯಾಗಬಾರದೆಂಬ ಕಳಕಳಿ ಇರುತ್ತದೆ. ಅವರ ಇನ್ನೊಂದು ಕೀರ್ತನೆಯಲ್ಲಿ

ರಾಮಕೃಷ್ಣರು ಮನೆಗೆ ಬಂದರು, ಬಾಗಿಲು ತೆರೆಯಿರೆ
ಕಾಮಧೇನು ಬಂದಂತಾಯಿತು ವರವ ಬೇಡಿರೆ[೨೦]

ಎನ್ನುವಲ್ಲಿ ದೇವರು ಮನೆಗೆ ಬಂದ ವಿಚಾರ ಭಕ್ತರು ಬಾಗಿಲು ತೆರೆದು ಬರಮಾಡಿಕೊಳ್ಳುವುದನ್ನು ಬೋಧಿಸುತ್ತಾರೆ.

ದೇವರ ಬಾಗಿಲು ಕಾಯುವಲ್ಲಿ ಹರಿದಾಸರಿಗೆ ಎಲ್ಲಿಲ್ಲದ ಉತ್ಸಾಹವಿದೆ. ಆದರೆ ಹೊಟ್ಟೆಪಾಡಿಗೆ ಕಂಡವರ ಮನೆ ಬಾಗಿಲು ಕಾಯಬೇಕಾದ, ತಮ್ಮ ಕೃತಿಯ ಬಗ್ಗೆ ಅವರಿಗೆ ಬೇಸರವೂ ಇದೆ. ಹಾಗೆಂದು ಅವರು ಭಿಕ್ಷೆ ಎತ್ತಿ ಬರುವ ಸರಳ ಜೀವನವನ್ನು ನಿರಾಕರಿಸಲಾರರು. ಬಾಗಿಲು ಕಾಯುವುದು ಹೀಗೆ ಎರಡು ರೀತಿಯಲ್ಲಿ ಹರಿದಾಸರಲ್ಲಿ ಕಾಣಿಸಿಕೊಂಡಿದೆ. ಒಂದು ದೇವರ ಬಾಗಿಲು ಕಾಯುವುದು, ಎರಡು ಲೌಕಿಕರ ಬಾಗಿಲು ಕಾಯುವುದು.

ಧನದಾಸೆಗಾಗಿ ನಾಧನಿಕರ ಮನೆಗಳ
ಕೊನೆ ಬಾಗಿಲಲಿ ನಿಂದು ತೊಳಲಿ ಬಳಲಿದೆನೊ[೨೧]

ಇಲ್ಲಿ ಧನದಾಸೆ ಎಂಬುದು ಪುರಂದರ ದಾಸರದೆ ಎಂದು ಭಾವಿಸಬಾರದು. ಭಕ್ತರು ತಮ್ಮ ವೈಯಕ್ತಿಕ ನೆಲೆಯಲ್ಲಿ ಆತ್ಮನಿಂದನೆ ಮಾಡಿಕೊಳ್ಳುವುದು ಸಾಮಾನ್ಯವಾದ ಅಂಶವೇ ಆಗಿದೆ. ಇಲ್ಲಿ ಕೊನೆ ಬಾಗಿಲು ಎಂಬ ಮಾತು ಮಹತ್ವದ್ದು. ಬಾಗಿಲಿನ ಮುಂದೆ ಬೇರೆ, ಬಾಗಿಲಿನ ಕೊನೆಗೆ ಎಂಬ ಮಾತು ಬೇರೆ. ಕೊನೆ ಬಾಗಿಲು ಎಂಬುದು ಬಹುಶಃ ಹೆಬ್ಬಾಗಿಲು ದಾಟು ಅಂಗಳಕ್ಕೆ ಇಕ್ಕದ ಬಾಗಿಲಿನ ಆಚೆಗೆ ಇರಬೇಕು. ಅಂತದ್ದೆ ತೊಳಲಾಟವನ್ನು ಅವರ ಈ ಮುಂದಿನ ಸಾಲುಗಳು ಹೇಳುತ್ತವೆ.

ಕಾಯಲಾರೆನು ಕೃಷ್ಣ ಕಂಡವರ ಬಾಗಿಲನು
ನಾಯಿ ಕುನ್ನಿಯಂತೆ ಪರರ ಪೀಡಿಸುತ[೨೨]

ಇಲ್ಲಿ ಕಂಡವರ ಬಾಗಿಲು ಎನ್ನುವ ಮಾತು ಅಯೋಗ್ಯರ ಮನೆಯ ಬಾಗಿಲನ್ನು ಸೂಚಿಸುತ್ತದೆ.

ಕನಕದಾಸರ ಕೀರ್ತನೆಗಳಲ್ಲಿ ಹೇಗೋ ಹಾಗೆಯೇ ಅವರ ಮೋಹನ ತರಂಗಿಣಿ ಕಾವ್ಯದಲ್ಲಿಯೂ ಬಾಗಿಲಿನ ಪ್ರಸ್ತಾಪ ಬರುತ್ತದೆ.

ಹುಲಿಮೊಗವಂಕವಾಗಿಲು ಕೋಟೆ ಕೊತ್ತಳ
ಸಲಿಲಪೂರಿತ ಪೇರುಗಳು
ನಲಿನಾಯತಾಕ್ಷಿ ನೋಡುತೆ ಬಂದಳು ಶಿವ
ನೊಲಿದಿರ್ಪ ನಂದನದೆಡೆಗೆ[೨೩]

ಮೇಲಿನ ಪದ್ಯದಲ್ಲಿನ ಹುಲಿ ಮೊಗವಂಕವಾಗಿಲು ಎಂಬುದು ಊರಿಗಿರುವ ಬಾಗಿಲನ್ನು ಅಂದರೆ ಅಗಸೆಯ ಬಾಗಿಲನ್ನು ವರ್ಣಿಸಿರುವಂತೆ ಕಾಣುತ್ತದೆ. ಅಗಸೆಯ ದ್ವಾರದ ಮೇಲೆ ಹುಲಿಯ ಮುಖವನ್ನು

ಕೆತ್ತಿರುವುದನ್ನು ಇಲ್ಲಿ ಹೇಳಲಾಗಿದೆ.

ಸಿಂಗರದೋಂಟದ ಬಾಗಿಲುಪ್ಪರಿಗೆಯ
ಹೊಂಗಳಸವ ನೋಡಿ ನಮಿಸಿ
ಹೆಂಗಳ ರನ್ನೆ ಪಲ್ಲಕ್ಕಿಯನೆರಿದಳು
ತ್ತುಂಗಯೌವನೆ ಸಖಿಯೊಡನೆ[೨೪]

ಇಲ್ಲಿ ಉಪ್ಪರಿಗೆ ಎಂಬುದು ಮಹಡಿಯ ಮನೆಯನ್ನು ಹೇಳುತ್ತಿದ್ದು ಅದಕ್ಕಿರುವ ಬಾಗಿಲನ್ನು ಸಿಂಗರಿಸಿರುವ ಪರಿಯನ್ನು ಕನಕದಾಸರು ಹೇಳಿದ್ದಾರೆ. ಈ ಮುಂದಿನ ಪದ್ಯದಲ್ಲಿ ಅಗಸೆಯ ಬಾಗಿಲನ್ನು ದ್ವಾರ ಕವಾಟವೆಂದು ಕರೆಯಲಾಗಿದೆ.

ನಾರದನುಡಿ ತಪ್ಪಲರಿಯದು ಕನ್ಯಾ
ಚೋರ ಸಿಕ್ಕಿದನೆಂದೆನುತೆ
ದ್ವಾರ ಕವಾಟವ ನೂಂಕಿಸಲ್ತರಿಸಿದ
ಹೇರಾನೆಗಳ ವಂಗಡವ[೨೫]

ಇಲ್ಲಿ ದೊಡ್ಡ ಆನೆಗಳಿಂದ ದ್ವಾರಕವಾಟವನ್ನು ತೆರೆಸುವುದನ್ನು ಹೇಳಲಾಗಿದೆ. ಅಗಸೆಯ ಬಾಗಿಲಿನ ಅಂಥದ್ದೆ ವರ್ಣನೆ ಕನಕದಾಸರ ಮೋಹನ ತರಂಗಿಣಿಯಲ್ಲಿ ಹೀಗೆ ಬರುತ್ತದೆ.

ಹೊನ್ನಗಸೆಯ ಬಾಗಿಲಲಿ ಗರ್ಜಿಸಿದ ರನ್ನ
ಗನ್ನಡಿ ಮಕರತೋರಣದಿ
ಸನ್ನಯಿಸಿರ್ದ ಸೀಗುರಿಯ ನಿಟ್ಟಿಸಲು ಭಾಂ
ಡಾನ್ನವ ಸುರಿದರುಗ್ಗಡದೆ[೨೬]

ಇಲ್ಲಿ ಅಗಸೆಯ ಬಾಗಿಲಲ್ಲಿ ಕೆತ್ತಿಸಲಾದ ಕನ್ನಡಿ ಮಕರತೋರಣ ಇವುಗಳ ಉಲ್ಲೇಖ ಇಲ್ಲಿ ಬಂದಿರುವುದನ್ನು ನೋಡಬಹುದು.

ವಚನಕಾರರಲ್ಲಿ ಮತ್ತು ಹರಿದಾಸರಲ್ಲಿ ಹೊಸ್ತಿಲಿಗೆ ಸಂಬಂಧಿಸಿ ಹೇಳಿದ ಮಾತುಗಳನ್ನೆ ನಾವು ತತ್ವಪದಕಾರರ ಕುರಿತಾಗಿಯೂ ಹೇಳಬೇಕಾಗಿದೆ. ಸ್ಥೂಲವಾಗಿಯೂ ವಚನಕಾರರು ಮತ್ತು ಹರಿದಾಸರ ನಡುವೆ ದ್ವೈತವಲ್ಲದ ಶಕ್ತಿ ವಿಶಿಷ್ಟಾದ್ವೈತವಲ್ಲದ ಅದ್ವೈತನೆಲೆಯಿಂದ ಹೊರಟ ಇವರು ಬರೆದ ಹಾಡುಗಳಲ್ಲಿ ಯೋಗಸಂಬಂಧವಾದ, ಮಾನಸಪೂಜಾ ಲಕ್ಷಿತವಾದ ಚಿಂತನೆಗಳೇ ಹೆಚ್ಚಾಗಿವೆ. ವಚನಕಾರರಿ ಶಿವನು ಗಮ್ಯವಾಗಿದ್ದರೆ ಹರಿದಾಸರಿಗೆ ಹರಿಸರ್ವೋತ್ತಮ. ಈ ಹರಿ ಮತ್ತು ಹರ ಭೇದದ ಆಚೆಗೆ ನಿಂತುಕೊಳ್ಳುವ ತತ್ವಪದಕಾರರು ಹರಿದಾಸರ ದ್ವೈತವನ್ನು ವಚನಕಾರರ ದ್ವೈತಾದ್ವೈತಾವನ್ನು ಮೀರಿ ಶುದ್ಧ ಅದ್ವೈತನೆಲೆಯಲ್ಲಿ ವಿಹರಿಸುವುದರಿಂದ ಪೂಜ್ಯಕ ಭಾವನೆ ಇಲ್ಲಿ ಇಲ್ಲದಿರುವುದರಿಂದ ಕುಂಡಲಿನಿ ಶಕ್ತಿಯ ಜಾಗೃತಿ ಷಟ್‌ಚಕ್ರಗಳ ವಿವೇಚನೆ ಇವನ್ನೇ ನೋಡುತ್ತೇವೆ. ಅಷ್ಟಲ್ಲದೆ ವೈರಾಗ್ಯವೇ ಇವರಿಗೆ

ಸ್ಥಾಯಿಯಾಗಿ ನಿಲ್ಲುವುದರಿಂದ ಸಂಸಾರ, ಮನೆ, ಬಾಗಿಲು ಅಪರೂಪದ ಮಾತೇ ಸರಿ. ಬಾಗಿಲು ಪ್ರಸ್ತಾಪ ಬಂದರೂ ಆತ್ಮ ಸಾಧನೆಯ ನೆಲೆಗಟ್ಟಿನ ಮೇಲೆ ನಿಲ್ಲುತ್ತದೆ. ಈ ಮುಂದಿನ ಪದ್ಯವನ್ನು ನೋಡಿ.

ಶ್ರವಣ ಮನನ ನಿಜಧ್ಯಾನ ಮಾಡೊ
ತನು ಮನ ಧನ ಶ್ರೀ ಗುರುವಿಗ ನೀಡೊ
ಉನ್ಮನಿ ಬಾಗಿಲಲಿ ಚಿನ್ಮಯನ ನೋಡೊ[೨೭]

ಈ ಚರಣಗಳಲ್ಲಿ ಉನ್ಮನಿಯ ಬಾಗಿಲು ಎಂಬ ಪದ ಸಹಸ್ರಾರದ ಸ್ಥಾನವನ್ನೇ ಹೇಳುತ್ತದೆ. ಭಕ್ತಿಪಂಥದ ಎಲ್ಲ ರಚನೆಗಳಲ್ಲಿ ಸಾಮಾನ್ಯವಾಗಿರುವ ಒಂಭತ್ತು ಬಾಗಿಲು ಎನ್ನುವ ಪದ ತತ್ವಪದ ಕಾರರಲ್ಲಿಯೂ ವಿಪುಲವಾಗಿ ಕಾಣಿಸುತ್ತದೆ. ಅವರ ವೈರಾಗ್ಯ ಸಮರ್ಥನೆಗೆ ಒಂಭತ್ತು ಬಾಗಿಲಿನ ದೇಹದ ಮಾಯಾ ಜಗತ್ತು ಅವರನ್ನು ಕಾಡಿಸುವುದಕ್ಕೆ ಕಾರಣವಾಗಿದೆ.

ನಾಲ್ಕು ಥಾಲೀಲಿ ಅಲಿದಾಡೋ ತೇರು
ನಾನೂರವರವತ್ತ ನರಬಿಗಿದ ತೇರು
ಒಂಭತ್ತು ಬಾಗಿಲ ಒಳಗೊಂಡ ತೇರು
ಮೂರು ಮಜಲಿನ ಮುರುಕದ ತೇರು[೨೮]

ಎನ್ನುವಲ್ಲಿ ದೇಹವನ್ನು ತೇರಿಗೆ ಹೋಲಿಸುವ ತತ್ವಪದಕಾರರಿಗೆ ಅದಕ್ಕೆ ಒಂಭತ್ತು ಬಾಗಿಲುಗಳನ್ನು ಹೇಳುತ್ತಾರೆ. ಇನ್ನೊಬ್ಬ ತತ್ವಪದಕಾರರು ಹೇಳುವಂತೆ ಈ ದೇಹವು ಚಾರು ತರದ ಚೌಕಟ್ಟಿನ ಬಾಗಿಲು ಮತ್ತು ಈರೈದು ದ್ವಾರದ ಮಾರ್ಗ,

ಊರ ದೇವರ ಮಾಡಬೇಕಣ್ಣ| ತನ್ನೊಳಗೆ ತಾನೆ
ಊರದೇವರ ಮಾಡಬೇಕಣ್ಣ
ಊರದೇವರ ಮಾಡಿರೆಂದು
ಸಾರುತಿದೆ ಶ್ರುತಿ ಹಗಲು ಇರುಳು
ದ್ವಾರಹಳೊಂಬತ್ತು ಮುಚ್ಚಿ
ನಿಲ್ಲಿಸಿ ಭ್ರೂ ಮಧ್ಯದಲ್ಲಿ[೨೯]

ಇಲ್ಲಿ ದೇಹದ ಮನೆಗೆ ಶೃಂಗರಿಸುವ ಹತ್ತು ಬಾಗಿಲುಗಳನ್ನು ಈತ ಹೇಳುತ್ತಿದ್ದಾನೆ. ಈ ಕೆಳಗಿನ ಪದ್ಯದಲ್ಲಿ ದಕ್ಷಿಣ ಕಡೆಯ ಬಾಗಿಲು ಪ್ರಸ್ತಾಪ ಬಂದಿದೆ.

ಕರುಣೆ ಬಾರದೇನೋ ಸದಾಶಿವ ಕರುಣೆಬಾರದೇನೋ||
ಧರಣಿ ಜನರು ಈ ಪರಿ ಮರುಗೋದು ಕಂಡು.
ಕಡೆಗಣ್ಣಿಲೆ ನೋಡಿದ್ಯಾ| ಈ ದಕ್ಷಿಣ| ಕಡೆ ಬಾಗಿಲ ಕಾಯ್ದ್ಯಾ|
ಬಿಡದೆ ಪೊಡವಿ ಸ್ಥಳಕೆ ಈ ಬರ ಹುಟ್ಟಿಸಿ|
ಕಡು ಹರುಷದಿ ಸುಡಗಾಡ ಸೇರಿದ್ಯು ಸಾಂಬಾ||ಕರುಣೆ||[೩೦]

ಸಂಸಾರದಿಂದ ತನ್ನನ್ನು ಕರುಣೆಯಿಂದ ಮೇಲೆತ್ತಬೇಕೆಂದು ಶಿವನಲ್ಲಿ ಪ್ರಾರ್ಥಿಸುವ ಈ ತತ್ವಪದಕಾರ ದಕ್ಷಿಣ ಕಡೆಯ ಬಾಗಿಲು ಎಂಬುದನ್ನು ಸಂಸಾರದಲ್ಲಿ ಮೈಮರೆತ ಜೀವಾತ್ಮನ ದುಃಸ್ಥಿತಿಯನ್ನು ಹೇಳುವುದರ ಜೊತೆಗೆ ಉತ್ತರದ ಯಾತ್ರೆಗೆ "ಮೂಲ ಸಾಧನೆಯ ಮೂಲಕ ಯೋಗ ಸಾಧನೆಯ ಸಹಸ್ರಾರು ಶಿವದ ಕಡೆಗೆ" ಹೊರಡಬೇಕಾದ ಅಗತ್ಯತೆಯನ್ನು ಪ್ರತಿಪಾದಿಸುತ್ತಾರೆ.

ಹುಟ್ಟಿದ್ದು ಹೊಲಿಮನಿ ಎಂಬುದು ಬಹಳ ಪ್ರಸಿದ್ಧವಾದದ್ದು. ವೈರಾಗ್ಯದ ಅಪ್ಪಟ ಬೋಧೆಯನ್ನು ನುಂಗಿದ ಈ ಪದ್ಯವು ಸಂಸಾರದ ನಶ್ವರತೆಯನ್ನು ದೇಹದ ಅನಿತ್ಯತೆಯನ್ನು ಮನದಟ್ಟು ಮಾಡಿಕೊಡುತ್ತದೆ.

ಹುಟ್ಟಿದ್ದು ಹೊಲೆಮನಿ ಬಿಟ್ ಹೊಂಟ್ಯೋ ಕಾಯ್ಮನಿ|
ಎಷ್ಟಿದ್ದರೆ ಇದು ಖಾಲಿ ಮನಿ
ವಸ್ತಿತಿ ಇರುವ ಮನಿ ಗಸ್ತಿ ತಿರುಗುವ ಮನಿ|
ಶಿಸ್ತಿಲೆ ಕಾಣುವ ಶಿವನ ಮನಿ
ಚಿಂತೆ ಕಾಂತಿಯ ಮನಿ ಸಂತೆ ಸವದಿಯ ಮನಿ
ಅಂತು ಬಲ್ಲವರಿಗೆ ಆಡುಮನಿ
ಒಂಭತ್ತು ಬಾಗಿಲ ದಾಟಿ ಹೊರಟು ಹೋಗುವಾಗ
ಗಂಟಿ ಬಾರಿಸಿದಂತೆ ಗಾಳಿ ಮನಿ
ವಸುಧಿಯೊಳಗೆ ನಮ್ಮ ಶಿಶುನಾಳಧೀಶನ
ಹಸನಾದ ಪದಗಳ ಹಾಡೋಮನಿ[೨೦]

ಈ ಹಾಡಿನ ವಿಶೇಷತೆಯೆಂದರೆ ಹುಟ್ಟು ಹೊಲೆಯಾಗಿದ್ದಲ್ಲಿ ಬೆಳೆದ ನಿಂತವನೆ ಖಾಲಿಯಾಗಿದ್ದರೂ 'ಶಿಸ್ತಿಲೆ ಕಾಣುವ ಶಿವನ ಮನೆ' ಎಂಬ ಮಾತು ಅರ್ಥಪೂರ್ಣವಾದದು. ಹೊಲೆ ಮನೆಯನ್ನು ಶಿವನ ಮನೆಯನ್ನಾಗಿ ಮಾಡುವುದೆ ಯಾವುದೇ ತತ್ವಸಾಧಕನ ಸವಾಲು. ವೈರಾಗ್ಯವೆಂದು ಅದನ್ನು ಒಗೆಯುವುದಲ್ಲ, ಅರಿವಿನಿಂದ ಅದನ್ನು ಎತ್ತುವುದನ್ನು ಈ ಪದ್ಯವು ಸರಳವಾಗಿ ಗಂಭೀರವಾಗಿ ತಿಳಿಸಿಕೊಡುತ್ತದೆ. ಶರೀಫರು ಇಲ್ಲಿಯೂ ಒಂಭತ್ತು ಬಾಗಿಲು ಪ್ರಸ್ತಾಪ ಮಾಡುತ್ತಾ ಈ ಬಾಗಿಲುಗಳನ್ನು ದಾಟಿ ಸುಖಕ್ಕೆ ಹೊರಗೆ ಹರಿಯುವ ಮನಸ್ಸನ್ನೇ ಏಕಾಗ್ರಗೊಳಿಸುವ ಮಾತನ್ನು ಆಡುತ್ತಾರೆ. ಆ ಏಕಾಗ್ರತೆ ಬಂದಾಗ ಈ ದೇಹವು 'ಅರಿತು ಬಲ್ಲವರಿಗೆ ಆಡುಮನಿ' ಆಗುತ್ತದೆ. ದೇವರು ಊರ್ಧ್ವವದ ಮನೆಯ ಕದವ ತೆರೆದು ನೋಡಿದಾಗ ಕಣ್ಣಿಗೆ ಬೀಳುತ್ತಾನೆ.

ನದಿಗಳ ಸಂಗಮದಿ ಉದ್ವಾಂಬಕ
ಕದವ ತೆರೆದು ನೋಡಲು
ಪದುಮದಳ ಮಧ್ಯದಲ್ಲಿ ಹಂಸನ
ಸದೆಬಡಿದು ವಿಧವಿಧದಿ ಚಿತ್ಕಳೆ
ಪದವಿ ಸ್ಫುರಿಸುವ ಮುದವ ಬೀರುವ
ಮದನ ಹರಗುರು ಪಂಪಾವರನಾಗಿ[೨೧]

ಇಲ್ಲಿ ನದಿಗಳ ಸಂಗಮದಲ್ಲಿ ಊರ್ಧ್ವದ ಕದವು ಇರುವ ಮಾತು ಬಂದಿದೆ. ನದಿಗಳ ಸಂಗಮವು ಇಡ ಮತ್ತು ಪಿಂಗಳ ನಾಡಿಗಳನ್ನು ಹೇಳುತ್ತಿದ್ದರೆ ಊರ್ಧ್ವದ ಕದವು ಅವೆರಡರ ಸಂಗಮದಲ್ಲಿ ತೆರೆದುಕೊಳ್ಳಲು ಸುಶುಮ್ನೆಯ ಬಾಗಿಲೇ ಆಗಿದೆ.

೨.೪. ಆಧುನಿಕ ಸಾಹಿತ್ಯ ಕೃತಿಗಳು

ಆಧುನಿಕ ಸಾಹಿತ್ಯವು ಕವಿತೆ, ಕಥೆ, ನಾಟಕ, ಪ್ರಬಂಧ ಮೊದಲಾದ ಪ್ರಕಾರಗಳಿಂದ ವೈವಿಧ್ಯಮಯವಾಗಿ ಕಾಣಿಸಿಕೊಂಡಿರುವ ಹಾಗೆ ಸಂಖ್ಯೆ ಮತ್ತು ಸತ್ವದಿಂದ ವಿಪುಲ ಪ್ರಮಾಣವನ್ನು ಹೊಂದಿದೆ. ಈ ಒಟ್ಟು ಸಾಹಿತ್ಯದಲ್ಲಿ ಹೊಸ್ತಿಲು ಪದ ಉಲ್ಲೇಖವನ್ನು ಹುಡುಕುವುದು ಕಷ್ಟಸಾಧ್ಯವೇ ಸರಿ. ಆದರೂ ಅಧ್ಯಯನದ ಅಗತ್ಯವಾಗಿ ಕೆಲವು ಕೃತಿಕಾರರ ಸಾಹಿತ್ಯ ಸಂದರ್ಭಗಳನ್ನು ಹೊಸ್ತಿಲು ವಿವೇಚನೆಗೆ ಎತ್ತಿಕೊಳ್ಳಲಾಗಿದೆ.

ಆಧುನಿಕ ಸಾಹಿತ್ಯವೆಂದರೆ ವೈಚಾರಿಕ ಮನೋಧರ್ಮಕ್ಕೆ, ವೈಜ್ಞಾನಿಕ ತಿಳುವಳಿಕೆಗೆ, ಮನೋವಿಜ್ಞಾನದ ಆವಿಷ್ಕಾರಕ್ಕೆ ಬಾಗಿಲು ತೆರೆದ ಕಾಲ. ಇವೆಲ್ಲವು ಸಾಹಿತ್ಯದಲ್ಲಿ ಬರುವಾಗ ಸಹಜವಾಗಿಯೆ ಸಾಂಕೇತಿಕತೆ ಸೂಚ್ಯತೆ ಅನಿವಾರ್ಯ. ಹೊಸ್ತಿಲಿಗೆ ಸಂಬಂಧಿಸಿದ ಹೊಸ್ತಿಲು ಬಾಗಿಲು ಮತ್ತು ಕವ ಎಂಬ ಪದಗಳು ಸಾಮಾನ್ಯ ಅರ್ಥದಲ್ಲಿಯೂ, ವಿಶೇಷ ಅರ್ಥದಲ್ಲಿಯೂ ಬಳಕೆಯಾದುದನ್ನು ನೋಡಬಹುದು. ಬೇಂದ್ರೆಯವರ ಈ ಮುಂದಿನ ಪದ್ಯವು ಬೆಳಗಿನ ಅನಿರ್ವಚನೀಯ ಅನುಭವವನ್ನು ತಂದು ಕೊಡುತ್ತಾ ಬಾಗಿಲು ತೆರೆದು ಗೃಹಿಣಿಯೊಬ್ಬಳು ಅಂಗಳದ ಮುಂದೆ ನೀರು ಚಿಮುಕಿಸಿದ ಹಾಗೆ ಬೆಳಕು ಬಂತು ಎನ್ನಲಾಗಿದೆ.

ಮೂಡಲ ಮನೆಯ ಮುತ್ತಿನ ನೀರಿನ
ಎರಕವ ಹೊಯ್ದಾ
ನುಣ್ಣನ್ನೆರಕವ ಹೊಯ್ದಾ
ಬಾಗಿಲ ತೆರೆದೂ ಬೆಳಕೂ ಹರಿದು
ಜಗವೆಲ್ಲಾ ತೊಯ್ದಾ
ಹೊಯ್ತೋ ಜಗವೆಲ್ಲಾ ತೊಯ್ದಾ[೩೩]

ಇಲ್ಲಿ ಮೂಡಣ ದಿಕ್ಕನ್ನು ಮುತ್ತಿನ ನೀರು ಬಿದ್ದ ಬಾಗಲಿಗೆ ಹೋಲಿಸಲಾಗಿದೆ. ಈ ದಿಕ್ಕಿನ ಬಾಗಿಲು ತೆರೆದು ಬೆಳಕು ಹರಿದು ಆ ಬೆಳಕನ್ನೆಲ್ಲಾ ತೊಯಿಸಿದಂತೆ. ಇಲ್ಲಿ ಬಾಗಿಲು ತೆರೆದು ಎಂಬ ಮಾತು ಬೆಳಗಿನ ಘಳಿಗೆಯಲ್ಲಿ ಬೆಳಕಿಗೆ ತೆರೆದುಕೊಳ್ಳುವ ಮನೆಗಳ ಬಾಗಿಲು ಸ್ಮರಣೆಗೆ ಬರುತ್ತವೆ.

ಕರ್ಕಿಯವರ ಪದ್ಯವೊಂದರಲ್ಲಿ ಹೊಸ್ತಿಲು ಪದ ಕಾಣಿಸಿಕೊಂಡಿದೆ.

ಹೊಸತು ಬಂದವನೆ ವಸುಧೆ ನನ್ನ ಮನೆ
ಬಾರ ಹೊಸ್ತಿಲಲ್ಲಿ
ನಿನ್ನ ಸ್ವಾಗತಕ್ಕೆ ಸಿದ್ಧವಾಗಿಹುದು
ಇಲ್ಲಿ ರಂಗವಲ್ಲಿ[೬೪]



ಸ್ವಾಗತ ಕೋರುತ್ತಿರುವ ರಂಗವಲ್ಲಿ

ಹೊಸದಾಗಿ ಆಗಮಿಸಿದ ಅತಿಥಿಗೆ ತನ್ನ ಪರಿಚಯ ಮಾಡಿಕೊಡುವ ಕವಿಯು ವಸುಧೆಯನ್ನು ತನ್ನ ಮನೆಯೆಂದು ಕರೆದದ್ದು ಅಮೋಘವಾಗಿದೆ. ಅತಿಥಿಯನ್ನು ಸ್ವಾಗತಿಸುತ್ತ ಕವಿ ಹೇಳುವಂತೆ ಹೊಸ್ತಿಲಲ್ಲಿ ಬಿಡಿಸಿದ ರಂಗವಲ್ಲಿ ಸ್ವಾಗತವನ್ನು ಕೋರುತ್ತಿದೆ. ಅದೇ ಪದ್ಯದಲ್ಲಿ ಮುಂದೆ.....


ಕದವ ತೆರೆ ಬೆಳಕು ಬರಲಿ
ಓ ಚಿತ್ರ
ಕದವ ತೆರೆ ಬೆಳಕ ಬದಲಿ[೬೫]

ಬೆಳಕು ಹಾಯಲು ಕದವನ್ನು ತೆರೆದಿಡಲು ಕವಿ ಹೇಳುತ್ತಿದ್ದಾನೆ. ಇದು ನಮ್ಮ ಜಡತ್ವ ಮತ್ತು ಸಂಕೋಚವನ್ನು ನೀಗಲು ಜ್ಞಾನವನ್ನು ಆಹ್ವಾನಿಸಲು ಹೇಳಿದ ಮಾತೆ ಆಗಿದೆ. ಕರ್ಕಿಯರ ಶಿಲೆ ಎಂಬ ಪದ್ಯದಲ್ಲಿ ತಲೆ ಬಾಗಿಲನ್ನು ಹೇಳಾಗಿದೆ.

ಮನೆಯ ತಲೆ ಬಾಗಿಲಲ್ಲಿ
ಕಲ್ಲು ಗೊಂಬೆಯನೆ
ಅವಳು ನಿಂದುವ ಕಂಡೆ

ರೆಪ್ಪೆಯಿಕ್ಕದಲೆ
ಹೆಪ್ಪುಗಟ್ಟಿತ್ತುಸಿರು
ನಿಂದು ನಿಲವಿನಲಿ
ನಿಬ್ಬೆರಗು ನೆಲೆಸಿತ್ತು
ನೆಟ್ಟ ನೋಟದಲಿ[೭೬]

ಇಲ್ಲಿ ಕವಿಯು ತನ್ನ ಪ್ರಿಯತಮೆಯನ್ನು ಮನೆಯ ತಲೆಬಾಗಿಲಲ್ಲಿ ಕೆತ್ತಲಾದ ಕಲ್ಲು ಬೊಂಬೆಗೆ ಹೋಲಿಸಿದ್ದಾನೆ. ಇದರಿಂದ ಬಾಗಿಲು ಚೌಕಟ್ಟುಗಳ ಮೇಲೆ ಕಾಣಿಸಿಕೊಳ್ಳುವ ಕುಸುರಿ ಕೆಲಸವನ್ನು ಗೊಂಬೆಗಳ ನಿರ್ಮಾಣವನ್ನು ಇದು ನೆನಪಿಗೆ ತರುತ್ತದೆ. ತಲೆ ಬಾಗಿಲು ಎಂದಿರುವುದರಿಂದ ಬಾಗಿಲಿಗೆ ಅಳವಡಿಸಲಾದ ಶಿರೋಭಾಗದ ಅಡ್ಡ ಪಟ್ಟಿಕೆಯನ್ನು ಇದು ಸೂಚಿಸುತ್ತದೆ. ಮೇಲಿನ ಪದ್ಯದಲ್ಲಿ ಆಕರ್ಷಕ ಪುತ್ಥಳಿ ರೂಪದ ಆ ಹೆಣ್ಣು.....



ಶಿರೋಭಾಗದ ಕುಸುರಿ ಕೆಲಸ

ತೆರೆದ ಬಾಗಿಲು ದಾಟಿ
ಎದೆಯ ಹೊರೆ ಇಳುಹಿ
ಹೋಗಿ ಬಿಟ್ಟಳು ಅವಳು
ಬರಲಿಲ್ಲ ಮರಳಿ[೭೭]

ಎಂಬಲ್ಲಿಗೆ ಅವಳು ತೆರೆದ ಬಾಗಿಲಿನ ಆಚೆ ನಡೆದ ಸಂದರ್ಭವಿದೆ. ಇಲ್ಲಿ ತೆರೆದ ಬಾಗಿಲು ಎಂದರೆ ಕದವು ಹಾಕದ ಬಾಗಿಲು ಎಂಬ ಸಾಮಾನ್ಯ ಅರ್ಥವನ್ನು ಹೇಳುತ್ತದೆ.

ತುಂಗಭದ್ರೆಯ ಹಾಡು ಎಂಬ ಪದ್ಯದಲ್ಲಿ ಬಾಗಿಲು ಮತ್ತು ಪ್ರತಿಮೆಗಳ ಸಂಬಂಧವನ್ನು ಬಣ್ಣಿಸಲಾಗಿದೆ.

ತೋರುವುವದೋ ಹಜಾರ ರಾಮನ ಧಾಮ, ಬಾರ್ರೆ ಬಾಗಿಲೊಳ್
ಮಾರುಗೊಳುವುವು ಪ್ರತಿಮೆಗಳ ಪ್ರತಿಬಿಂಬ ಬೆಳಗುವ ಕಂಬಗಳ್
ಒಪ್ಪು ಹಾಕಿದ ಕಂಬ ಕಂಬವನಪ್ಪಿಕೊಂಡಿವೆ ರಾಹುಗಳ್
ಸುದರ ಮೇಳವು ಮರ್ತ್ಯಕೈದಿದೆ ಶಿಲ್ಪಲೀಲಾ ಜಾಲದೊಳ್.[೩೮]

ಇಲ್ಲಿ ಹಂಪೆಯ ಹಾಳು ನೋಟದಲ್ಲಿಯೂ ನೆನಪಾಗುವ ಗತವೈಭವದ ಚಿತ್ರಣವಿದೆ. ಹಜಾರರಾಮ ಮಂದಿರದ ವರ್ಣನೆ ಮಾಡುತ್ತಿರುವ ಈ ಕವಿ 'ಬಾರ್ರೆ ಬಾಗಿಲೊಳ್ ಮಾರುಗೊಳ್ಳುವುವು ಪ್ರತಿಮೆಗಳ ಪ್ರತಿಬಿಂಬ' ಎಂಬುದು ಅರ್ಥಪೂರ್ಣ ಸಾಲಾಗಿದೆ. ಇಲ್ಲಿ ಬಾಗಿಲಲ್ಲಿ ಬರಮಾಡಿಕೊಳ್ಳುವ ಪ್ರತಿಮೆಗಳ ಮೇಲೆ ನೋಡಿದಂತೆ ಬಾಗಿಲು ಚೌಕಟ್ಟುಗಳ ಮೇಲೆ ಕೆತ್ತಲಾದ ಮೂರ್ತಿಗಳಲ್ಲಿ ಬಹುಶಃ ಬಾಗಿಲ ತೋಳು ದೇವಸ್ಥಾನದ ಬಾಗಿಲಿನ ಎರಡು ಬದಿಗೆ ನಿಲ್ಲಿಸಲಾದ ಶಿಲ್ಪಗಳು 'ದ್ವಾರಪಾಲಕರು' ಇರಬೇಕೆಂದು ಊಹಿಸಬಹುದಾಗಿದೆ. ಕವಿಯು ಮುಂದುವರೆದು

ಬಿರಿ ಬಿರಿದ ಕುರುಹುಗಳು ತೀವಿರೆ ನರನರಗಳಲಿ ಪ್ರೇರಣ
ಕನ್ನಡದ ಹೆಬ್ಬಾಗಿಲಲಿ ಕಂಗೊಳಿಸದೇ ನವ ತೋರಣ?
ಸಾಗುತಿರುವೆನು ರಾಗ ಎಳೆಯುತ ನನ್ನ ನಾ ಸಂತೈಸುತ
ಕತ್ತಲೆಯ ತೆರೆ ಮುತ್ತಿಬಹ ನೈರಾಶ್ಯವನು ನಾ ಜೈಸುತ[೩೯]

ಎನ್ನುವಲ್ಲಿ 'ಕನ್ನಡದ ಹೆಬ್ಬಾಗಿಲಲ್ಲಿ ಕಂಗೊಳಿಸದೆ ನವತೋರಣ' ಎಂಬ ಸಾಲು ನಮ್ಮನ್ನು ಸೆಳೆಯುತ್ತದೆ. ಬಾಗಿಲನ್ನು ಬಾಗಿಲು ಎನ್ನದೆ ಹೆಬ್ಬಾಗಿಲು ಎಂದಿರುವುದು ಅದು ಹಿರಿದಪ್ಪ ಬಾಗಿಲು ಆಗಿರಲು ಸಾಧ್ಯ. ಹಾಗೆಯೇ ಬಾಗಿಲುಗಳ ಮೇಲೆ ಕೆತ್ತುವ ಬಳ್ಳಿಗಳನ್ನು ಕವಿ ಸೂಚಿಸುತ್ತಿಬಹುದು ಅಥವಾ ಹಬ್ಬ-ಹರಿದಿನಗಳಲ್ಲಿ ಬಾಗಿಲುಗಳಿಗೆ ಬಾಗಿಲುಗಳ ಮೇಲೆ ಕಟ್ಟಲಾಗುವ ತಳಿರಿನ ತೋರಣವನ್ನು ಸೂಚಿಸುತ್ತಿರಬಹುದಾಗಿದೆ. ಪದ್ಯ ಮುಂದುವರೆದು.....



ತಳಿರುತೋರಣಗಳಿಂದ ಸಿಂಗರಗೊಂಡ ಬಾಗಿಲು

ಸುತ್ತುವರಿದರೆ ದ್ವಾರ, ದ್ವಾರದ ಆಚೆ ಈಚೆ ಸುಂಡಿಲ
ಎತ್ತಿರುವ ಜೋಡಾನೆ ನೋಡೆನಿತಂದ! ಆದರಿದೇಂ ಛಲ?
ತುಂಡರಿಸಿಹರು ಅಕಟ ಸುಂಡಿಲ, ಆದರೂ ಈ ಗಜದಲ
ಸಿರಿಬರಲಿ ಉರಿಬರಲಿ ಕಾವಿದೆ ವಿಜಯ ವಿಠಲನ ಬಾಗಿಲ.[೪೦]

ಕನ್ನಡದ ಈ ಹೆಬ್ಬಾಗಿಲೊಳಗೆ ದ್ವಾರವನ್ನು ದ್ವಾರದ ಆಚೆ ಇಚೆ ಸೊಂಡಿಲು ಎತ್ತಿ ನಿಂತಿರುವ ಜೋಡಾನೆಗಳನ್ನು ಕವಿಯು ಕಾಣುತ್ತಾನೆ. ಶಾಂತಾದೇವಿ ಮಾಳವಾಡ ತಮ್ಮ ಒಂದು ತ್ರಿಪದಿಯಲ್ಲಿ ಕೋಗಿಲೆಯೊಂದು ಬಾಗಿಲದೊಳಗಿಂದ ಕೂಗುವ ಚಿತ್ರವನ್ನು ತರುತ್ತಾರೆ.

ಬಾಗಿಲದಾಗಿನ ಕೋಗಿಲೆ ಕೂಗಿ ಕೂಗಿ ಮರನೇರಿ
ನಾಗರ್‍ಹೆಡಿಯಂಗಾಡ್ಯಾವೇಳಯ್ಯಾ ಸಿದ್ಧರಾಮಾ
ನಾಗರ್‍ಹೆಡಿಯಾಂಗಾಡ್ಯಾವೇಳಯ್ಯಾ[೪೧]

ಇಲ್ಲಿ 'ಬಾಗಿಲಾದಾಗಿನ ಕೋಗಿಲೆ' ಎಂಬುದು ಬಾಗಿಲ ಮೇಲೆ ಕುಳಿತಿರುವ ಜೀವಂತ ಕೋಗಿಲೆಯಾಗಿರದೆ ಬಾಗಿಲ ಮೇಲೆ ಬಿಡಿಸಿದ ಕೋಗಿಲೆಯಾಗಿರುವ ಸಾಧ್ಯತೆ ಹೆಚ್ಚಿಗಿದೆ. ಇದು ಹೀಗೆ ಕೂಗುತ್ತಿರುವಾಗ ನಾಗರಹಾವು ಮರವನ್ನು ಏರಿ ಹೆಡೆ ಬಿಚ್ಚಿರುವಾಗ ಸಿದ್ಧರಾಮನಿಗೆ ಎದ್ದೇಳಲು ಕವಯತ್ರಿ ಪ್ರಾರ್ಥಿಸುತ್ತಾಳೆ.

ಅಂಬಿಕಾತನಯದತ್ತ ಸಮಗ್ರಕಾವ್ಯದಲ್ಲಿ ಬರುವಂತೆ ಬೇಂದ್ರೆ ಅವರು ತಮ್ಮ ಒಂದು ಪದ್ಯದಲ್ಲಿ ಸ್ಫೂರ್ತಿಯು ಮೂರ್ತಿಗೊಂಡ ಪರಿಯನ್ನು ವರ್ಣಿಸುತ್ತಾ ಹೀಗೆ ಹೇಳುತ್ತಾರೆ.

ಸ್ಫೂರ್ತಿಯೇ ಮೂರ್ತಿಗೊಂಡಂತೆ ಕಂಡವು ಆನೆ ಕುದುರೆ ಹಾ
ವುಗೆ, ನಿನ್ನ ಹೊಸ್ತಿಲವ ದಾಟಿ ಇಲ್ಲಡಿಯಿಟ್ಟೆ;
ಬಿಜಯ ಮಾಡಿಸಿದೆ ವೈಭವದಿ, ದಿಗ್ವಿಜಯ ಮಾ
ಡುವೆ. ಕುರುಹಳ ತೋರಿ ಹೇಳುತಿಹೆಯಾ, ನಲ್ಲ!
ನನಸೆಂದು ತೋರಿ ಹಾರೈಸಿದುದು ಕನಸಾಗೆ,
ಕನಸು ಕನ್ನಡಿಯ ಗಂಟೆಂದೆನಲೊ, ಕಣಸೆಂದು
ಹಿಗ್ಗಿ ನುಗ್ಗಲೋ, ಜೀವ ತಾನಪೂರ್ವದ ಕಂಡು
ಸಂಕೋಚ ವಿಸ್ತಾರದಲ್ಲಿ ತೇಂಕಾಡುವದು.[೪೨]

ಇಲ್ಲಿ ಆನೆ ಕುದುರೆ ಹಾವುಗೆ ನಿನ್ನ ಹೊಸ್ತಿಲವ ದಾಟಿ ಇಲ್ಲಿ ಅಡಿಯಿಟ್ಟೆ ಎಂಬ ಮಾತು ಗಮನಿಸುವಂತಿದೆ. ಇಲ್ಲಿ ಆನೆ ಕುದುರೆ ಮೊದಲಾದವು ಹೊಸ್ತಿಲಲ್ಲಿ ಕೆತ್ತಿದ ಉಲ್ಲೇಖವು ಸ್ಪಷ್ಟವಾಗಿ ಬಂದಿರದೆ ಇದ್ದರೂ ಕವಿಯು ಆನೆ ಕುದುರೆ ಎನ್ನುವ ಬಾಯಿಯಲ್ಲಿಯೇ ಹೊಸ್ತಿಲು ಎನ್ನುವುದರಿಂದ ಇವು ಹೊಸ್ತಿಲಿಗೆ ಸಂಬಂಧವಾದ ಪ್ರಾಯಶಃ ಹೊಸ್ತಿಲಲ್ಲಿಯೆ ಕೆತ್ತನೆಗೊಂಡ ಶಿಲ್ಪಗಳಾಗಿರುವ ಸಂಭವವಿದೆ. ಮುಂದುವರೆದು ಹೇಳುವುದಾದರೆ ದೇವಸ್ಥಾನದ ಪ್ರವೇಶದ್ವಾರದಲ್ಲಿ ಬಾಗಿಲಿಗೆ

ಹೊಂದಿಕೊಂಡಂತೆ ಆನೆ ಇತ್ಯಾದಿ ಮೂರ್ತಿಗಳನ್ನು ಶಿಲಾಮೂರ್ತಿಗಳನ್ನು ನಿಲ್ಲಿಸುವುದು ಅರಸು ಕಾಲದ ರೂಢಿಯೆ ಆಗಿದೆ.

ನವೋದಯ ಕಾವ್ಯ ಸಂದರ್ಭದಲ್ಲಿ ಮೈಸೂರು ಮಲ್ಲಿಗೆಯ ಮೂಲಕ ದಾಂಪತ್ಯ ಬದುಕಿನ ಶೃಂಗಾರವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ ಕೆ.ಎಸ್. ನರಸಿಂಹಸ್ವಾಮಿ ಶೃಂಗಾರ ಪದ್ಯಕ್ಕೆ ಭಿನ್ನವಾಗಿ ಬೇರೆ ಬೇರೆ ವೈಚಾರಿಕ ಆಕೃತಿಗಳ ಪದ್ಯವನ್ನು ಬರೆದಿದ್ದಾರೆ. ಅದರಲ್ಲಿ 'ತೆರೆದ ಬಾಗಿಲು' ಎಂಬ ಸಂಕಲನ ಮತ್ತು ಶೀರ್ಷಿಕಾ ಪದ್ಯ ಅವರೊಬ್ಬ ಬೆಲೆಯುಳ್ಳ ನವ್ಯ ಕವಿ ಎಂಬುದನ್ನು ರುಜುವಾತು ಪಡಿಸಿತು. ತೆರೆದ ಬಾಗಿಲು ಎಂಬ ಪದ ಪ್ರಯೋಗವೇ ಆಧುನಿಕ ಕನ್ನಡ ಸಂದರ್ಭದಲ್ಲಿ ವಿನೂತನವಾದುದು. ನವೋದಯದ ಪ್ರಾಸಬದ್ಧತೆ ಛಂದೋಬದ್ಧತೆಗಳನ್ನು ಕನಸುಗಾರಿಕೆಯನ್ನು ನವ್ಯ ಕವಿಗಳು ತೊರೆದು ಮುಕ್ತ ಮನಸ್ಸಿನ ಸಂಕೇತವಾಗಿ ತೆರೆದ ಬಾಗಿಲಲ್ಲಿ ನಿಂದುದನ್ನು ನರಸಿಂಹಸ್ವಾಮಿಯವರ ಈ ಪದ್ಯವು ಧ್ವನಿಸುತ್ತದೆ ಎಂದರೆ ತಪ್ಪಿಲ್ಲ. ಅವರು 'ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ' ಎಂಬ ಪದ್ಯದಲ್ಲಿ ಬಾಗಿಲನ್ನು ನಾನಾ ಅರ್ಥಗಳಲ್ಲಿ ಬಿಡಿಸಿದ್ದಾರೆ.

ಬಂದ ಬಾಗಿಲು ಮಣ್ಣು; ಬಿಡುವ ಬಾಗಿಲು ಮಣ್ಣು
ನಡುವೆ ಕಾಪಾಡುವುದು ತಾಯಕಣ್ಣು
ಈ ಕಣ್ಣ ಸೆರೆಯ ಕಲ್‌ಕೋಟೆಯೆಲ್ಲಾ ಹೊನ್ನು;
ನನ್ನ ಕೈ ಬಿಡುವುದೇ ನಿನಗೆ ಚೆನ್ನು[೪೩]

ಈ ಪದ್ಯದಲ್ಲಿ ಬದುಕು ಬಂದಂತೆ ಸ್ವೀಕರಿಸು ಎನ್ನುವ ಬೋಧೆಯನ್ನು ಬಂದ ಬಾಗಿಲು ಮಣ್ಣು ಎಂಬ ಸಾಲು ಹೇಳುತ್ತಿದ್ದರೆ, ಬದುಕಿನ ಕೊನೆಯನ್ನು ಭೋಗ ಬದುಕು ಮಣ್ಣು ಸೇರುವ ಕಾಲ 'ಬಿಡುವ ಬಾಗಿಲು ಮಣ್ಣು' ಎಂಬ ಸಾಲು ಬರುತ್ತದೆ.

ಸಮನ್ವಯ ಕವಿಗಳೆಂದು ಪ್ರಸಿದ್ಧರಾದ ಕನ್ನಡದ ಇಬ್ಬರೆಂದರೆ ಜಿ.ಎಸ್. ಶಿವರುದ್ರಪ್ಪ ಮತ್ತು ಚೆನ್ನವೀರಕಣವಿ. ನಗರ ಬದುಕಿನ ದಾರುಣತೆಯನ್ನು ಅಲ್ಲಿ ಮನುಷ್ಯ ಬಾಳಿನ ಅನಾಥ ಪ್ರಜ್ಞೆಯನ್ನು ಸಮರ್ಥವಾಗಿ ಕಟ್ಟಿಕೊಡುವ ಈ ಇಬ್ಬರು ಕವಿಗಳು ನವೋದಯ ನವ್ಯ ಎರಡು ಸಂದರ್ಭಗಳಲ್ಲಿ ತಮ್ಮ ಕಾವ್ಯ ಕೃಷಿಯನ್ನು ಮುರಿದುವರೆಸಿಕೊಂಡು ಹೋಗಿದ್ದಾರೆ ಮತ್ತು ಇಂದಿಗೂ ಸಲ್ಲುತ್ತಾ ಬರೆಯುತ್ತಿದ್ದಾರೆ.

ಜಿ.ಎಸ್. ಶಿವರುದ್ರಪ್ಪನವರ 'ಮಬ್ಬಿನಿಂದ ಮಬ್ಬಿಗೆ' ಎಂಬ ಪದ್ಯದಲ್ಲಿ ಯಂತ್ರ ಬದುಕಿನ ಜಡತ್ವದಲ್ಲಿ ನರಳುತ್ತಾ ಅರಳುವ ಜೀವನವೊಂದರ ಘಟ್ಟವನ್ನು ಕೊಡುವ ಸಂದರ್ಭದಲ್ಲಿ ಹೊಸಿಲು ಪದ ಬಳಕೆ ಮಾಡಿದ್ದಾರೆ.

ಅಂಬೆಗಾಲಿಟ್ಟು, ಹೊಸಿಲು ದಾಟಿತು ಬಿಸಿಲು
ಬಾಗಿಲಲಿ ಹಾಲ್ ಕರೆವ ಹಸು ಕೊರಳ ಗಂಟೆ ದನಿ,

ತುಂಬು ಕೆಚ್ಚಲಿನಲ್ಲಿ ಮೊಗವಿಟ್ಟ ಮುದ್ದುಕರು,
'ಕಾ' ಎನ್ನುವ ಕಾಗೆ, ಚಿಲಿಪಿಲಿ ಗುಬ್ಬಿ, ಬಾಲವಾಡಿಪ ನಾಯಿ.[೨೪]

ಮೇಲಿನ ಸಾಲುಗಳಲ್ಲಿ ಶೈಶವದಿಂದ ಬಾಲ್ಯಕ್ಕೆ ಹೊರಳಿದ ಮಗುವಿನ ಚಿತ್ರಣವನ್ನು ಕೊಡಲಾಗಿದೆ. ಮಗು ಅಂಬೆಗಾಲಿಟ್ಟು ಹೊಸಿಲು ದಾಟುವುದು ಮಾನವ ಬದುಕಿನ ಸಡಗರದ ಘಳಿಗೆ. ಇಲ್ಲಿಂದ ಮುಂದೆ ಅವನು ಎದ್ದು ನಿಲ್ಲುತ್ತಾನೆ, ಬೆಳೆಯುತ್ತಾನೆ ಮತ್ತು ಬದುಕುತ್ತಾನೆ. ಈ ಘಟ್ಟವನ್ನು ಶಿವರುದ್ರಪ್ಪನವರು ವರ್ಣಿಸುತ್ತಾ ಮಗುವು ಹೊಸ್ತಿಲು ದಾಟಿತು ಎನ್ನದೆ ಬಿಸಿಲು ಹೊಸಿಲು ದಾಟಿತು ಎಂದು ಧ್ವನಿಪೂರ್ಣವಾಗಿ ಹೇಳಿದ್ದಾರೆ. ಹೀಗೆ ಹೊಸಿಲು ಇಲ್ಲವೆ ಹೊಸ್ತಿಲು ಮನೆಯ ಜಡ ದ್ವಾರ ಮಾತ್ರ ಆಗಿರದೆ ಮಾನವನ ಅವಸ್ಥೆಗಳಿಗೆ ಜೀವ ತುಂಬುವ ಸಜೀವ ಸಾಧನವು ಆಗಿರುವುದರಿಂದ ಇಂಥಹ ಪದ್ಯಗಳಿಂದ ಲಕ್ಷಿತವಾಗುತ್ತದೆ. ಪದ್ಯ ಮುಂದುವರೆದು ಬಾಗಿಲಿಗೆ ಬರುತ್ತದೆ.

ಸಂಜೆ ಬಾನಿನ ತುಂಬ ಹಗಲ ನೆನಪಿನ ಚಿತ್ರ
ಮನೆಯಂಗಳದ ಮಬ್ಬು ಬೆಳಕಿನ ನಡುವೆ ತಡವರಿಸುತಿದೆ ಕಣ್ಣು
ಮಹಡಿ ಮೆಟ್ಟಿಲ ಮೇಲೆ ಯಾರ್‍ಯಾರದೋ ಹೆಜ್ಜೆ
ಗೋಡೆ ಗಡಿಯಾರದಲಿ ಗಂಟೆ ಹೊಡೆದಿದೆ ಏಳು -
ಅದೋ ಕೇಳು
ಯಾರೋ ಬಡಿಯುತ್ತಿದ್ದಾರೆ ಬಾಗಿಲ ಹೊರಗೆ
ಒಂದೆ ಸಮನೆ
ಏಳು ಬಾಗಿಲು ತೆಗೆ, ಹೆದರದಿರು ಕೊನೆಗೆ[೨೫]

ಮೇಲಿನ ಪದ್ಯದಲ್ಲಿ 'ಯಾರೋ ಬಡಿಯುತ್ತಿದ್ದಾರೆ, ಬಾಗಿಲ ಹೊರಗೆ ಒಂದೆ ಸಮನೆ' ಎನ್ನುವ ಸಾಲು ನಮ್ಮ ಗಮನವನ್ನು ಸೆಳೆಯುತ್ತದೆ. ಇಲ್ಲಿ ಬದುಕಿನ ಅನುಭವ ಮುಗಿಸಿ ಬಾಳ ಹೊಸ್ತಿಲನ್ನು ದಾಟುತ್ತಿರುವ ವೃದ್ಧನ ಚಿತ್ರ ಇದೆ. ಸಾವು ಬಾಗಿಲು ಬಡಿಯುತ್ತಿದೆ. ಮುಪ್ಪು ಮತ್ತು ಸಾವಿನ ಭಯದಿಂದ ನಡುಗುವ ಮುದುಕನಿಗೆ ಕವಿ ಹೇಳುತ್ತಾನೆ, ಏಳು ಬಾಗಿಲು ತೆರೆ ಹೆದರದಿರು ಕೊನೆಗೆ. ಇಲ್ಲಿ ಬಾಗಿಲು ಹೊರಗೆ ಮತ್ತು ಒಳಗೆ ಎರಡು ಅರ್ಥವನ್ನು ಬೇಡುತ್ತಿವೆ. ಬಾಗಿಲ ಹೊರಗೆ ಕಾಲ ನಿಂತಿದ್ದಾನೆ, ಬಾಗಿಲ ಒಳಗೆ ವೃದ್ಧ ನಿಂತಿದ್ದಾನೆ. ಬಾಗಿಲು ತೆರೆಯದಂತೆ ಅಗುಳಿ ಇಕ್ಕಿದವನು ಒಳಗಿನವನೆ ಆಗಿದ್ದಾನೆ. ಹೀಗೆ ಬಾಗಿಲು ಮುಚ್ಚಿದ ಬಾಗಿಲು, ತೆರೆಯಬೇಕಾಗಿದೆ. ಬಾಗಿಲು ಅಗುಳಿ ಇಕ್ಕಿದ ಬಾಗಿಲು ಒಂದೊಂದು ಚಿತ್ರಗಳು ಪದ್ಯದ ತುಂಬ ಮೂಡಿ ಮರೆಯಾಗುತ್ತವೆ.

ಹೊಸ ಜನಾಂಗದ ಕಣ್ಣುತೆರೆಸಿದ ಕವಿ ಎಂದು ಹೆಸರಾದ ಎಂ. ಗೋಪಾಲಕೃಷ್ಣ ಅಡಿಗರು ನವ್ಯದ ಹರಿಕಾರರು. ಅವರ 'ನಾವೆಲ್ಲರೂ ಒಂದೇ ಜಾತಿ' ಎಂಬ ಪದ್ಯದಲ್ಲಿ ತೆರೆ ಬಾಗಿಲ ಪ್ರಸ್ತುಪ ಬಂದಿದೆ.

ತೆರೆಬಾಗಿಲು ಹೊರೆನೋಟದ ಹೊರೆಹಸುರಿನ ಹಂದರ
ನಮ್ಮ ಹೃದಯ ಮಂದಿರ

ಅಲ್ಲಿ ಎಲ್ಲ ಜನರು ಇದೆ ಸ್ವಾಗತವು ನಿರಂತರ
ಚಿರ ಉದಾರ ಸುಂದರ[೪೬]

ಇಲ್ಲಿ ಬಳಕೆಯಾದ ತೆರೆಬಾಗಿಲ ಎಂಬುದು ತೆರೆದ ಬಾಗಿಲಲ್ಲಿ ಬಾಗಿಲನ್ನು ನೀನು ತೆರೆ ಎಂಬ ಕರೆ ಇಲ್ಲಿದೆ. ಅವರದೆ ಇನ್ನೊಂದು ಪದ್ಯ 'ಏಳುವುದೆಂದಿ ಜನಪದ'ದಲ್ಲಿ ಬಾಗಿಲು ತೆರೆದ ಉಲ್ಲೇಖವಿದೆ.

ಹೆಗ್ಗುರಿಗಳ ಕಡಲೆಲ್ಲೋ ಕಾದಿದೆ,
ಹರಿವುದನೇ ನದಿಯ ಕಟಾ ಮರೆತಿದೆ;
ಸಮತೆಯ ದಿನವೋ ಬಾಗಿಲ ತೆರೆದಿದೆ,
ಪಕ್ಕಿ ತನ್ನ ರೆಕ್ಕೆಯನೇ ಮರೆತಿದೆ;
ಕಳೆಯದೆ ನಮ್ಮಾ ದೂಷ್ಟವ?
ಏಳುವುದೆಂದೀ ಜನಪದ?[೪೭]

ಹೊಸ ಬದುಕಿಗೆ ಹಾತೊರೆಯುವ ಅಡಿಗರು ಹೇಳುವಂತೆ ಇದು ಸಮತೆಯ ಬಾಗಿಲಾಗಿದೆ. 'ವಿಫಲ' ಎಂಬ ಇನ್ನೊಂದು ಪದ್ಯದಲ್ಲಿ

ಕಗ್ಗವಿಯಲಿ ಐದೋ ಆರೊ
ಕಿಂಡಿ ಒಂದು ಬಾಗಿಲು;
ಅದಕೆ ಒಳಗೂ ಹೊರಗೂ ಕೂಡ
ಇತ್ತು ಬೀಗಮುದ್ರೆಯ
ಕಿಂಡಿಗಿಂಡಿಯಿಂದ ಬೆಳಕು
ಜಿನುಗುತಿತ್ತು ತೊಟಕು, ತೊಟಕು
ಅಂದು ಮೊದಲ ಹಗಲೊಳು
ಬಳಿಕ ವನಸ್ಪತಿಯ ನೆಳಲು
ಕವಿಯೆ ಸುತ್ತಮುತ್ತಲು
ಬೆಳಕು ತೊದಲ ತೊಡಗಲು
ಕಿಂಡಿ ಇದೆ ಇಲ್ಲಿ ಬೆಳಕು
ಕದಲಲಿಲ್ಲ ಬಾಗಿಲು[೪೮]

ಎಂಬಲ್ಲಿ ಒಂದು ಗವಿಯಲ್ಲಿ ಐದೋ ಆರೋ ಕಿಂಡಿಗಳಿವೆ. ಒಂದು ಬಾಗಿಲಿದೆ. ಈ ಬಾಗಿಲಿಗೆ ಹೊರಗೂ ಒಳಗೂ ಬೀಗ ಮುದ್ರೆ ಮಾಡಲಾಗಿದೆ. ಇದು ಬೆಳಕು ಹಾಯವ ನಮ್ಮ ಅಜ್ಞಾನ ಬದುಕನ್ನು ಗವಿಯ ರೂಪದಲ್ಲಿ ಸಂಕೇತಿಸುವ ಪ್ರಯತ್ನವಾಗಿದೆ. ನಾವು ಗಮನಿಸಬೇಕಾದದ್ದು ಗವಿಯ ಬಾಗಿಲು ಅಥವಾ ಗವಿಯಂಥ ಮನೆಯ ಬಾಗಿಲು ಮತ್ತು ಇದಕ್ಕೆ ಬೀಗ ಜಡಿದಿರುವುದು.

ಅಡಿಗರದೆ 'ದೀಪಾವಳಿ' ಎಂಬ ಪದ್ಯದಲ್ಲಿ ಕದವ ತಟ್ಟುವ ಸಂದೇಶವಿದೆ.

ಮೌನಮಸಣಬೂದಿ ಬಿಟ್ಟು ಕೆಂಗೆಂಡದ ನುಡಿಕಿಡಿ ಬಾ,
ತಟ್ಟು ಕದ, ತಟ್ಟು ಹದ;

ಗೂಟದ ಕರು ಬಾ; ಕೆಚ್ಚಲ ಕುಟ್ಟು ಗುಮ್ಮು;
ಒಸರಿತು ಸೊನೆ; ಹಸುರು ನೆಲ;
ಕೋಟೆಯ ಹೆಬ್ಬಾಗಿಲ ಬಳಿ[೪೯]

ಇಲ್ಲಿ ತಟ್ಟು ಕದ, ತಟ್ಟು ಹದ ಎಂಬುದು ಹೊಸ ಬದುಕಿನ ಬಾಗಿಲುಗಳನ್ನು ತಟ್ಟುತ್ತಿರುವ ನವ್ಯನ ಉತ್ಸಾಹವಿದೆ. ಹೀಗೆ ಕದಗಳನ್ನು ತಟ್ಟುತ್ತಾ ಅನುಭವಗಳನ್ನು ಹೇಳಿಕೊಳ್ಳುವ ಆತನು ಕೋಟೆಯೆಂಬ ಹೆಬ್ಬಾಗಿಲ ಮುಂದೆ ನಿಂತ ಮಹಾರಾಜರ ಆನೆಯೆ ಆಗುತ್ತಾನೆ.

ಪ್ರಕೃತಿ ಕವಿಯಂದೆ ಹೆಸರಾದ ರಸಋಷಿ ಕುವೆಂಪು ಅವರು ಪ್ರಕೃತಿ ಒಂದೆ ಪರಮಾತ್ಮನನ್ನು ಕಂಡಿದ್ದಾರೆ. ಪ್ರಕೃತಿಯೊಂದಿಗೆ ಅವರ ತಾಧ್ಯಾತ್ಮ ಅದ್ಭುತವಾಗಿವೆ. ನಾಗರಿಕ ಬದುಕಿನ ಜಂಜಡಗಳನ್ನು ಅವರು ಪ್ರಕೃತಿಯ ಸಾನಿಧ್ಯನದಲ್ಲಿ ಮರೆಯುತ್ತಾರೆ. ಅವರ ಪಕ್ಷಿಕಾಶಿ ಸಂಗ್ರಹವಂತೂ ಪ್ರಕೃತಿ ಪ್ರೇಮದ ಎಲ್ಲಾ ಎತ್ತರಗಳಲ್ಲಿ ಮನಗಾಣಿಸುತ್ತದೆ. ಅವರ ಶೀರ್ಷಿಕಾ ಪದ್ಯದಲ್ಲಿ ಪ್ರಕೃತಿಯನ್ನು ಪಕ್ಷಿಕಾಶಿಯೆಂದು ಕರೆಯಲಾಗಿದ್ದು ಅದರ ಬಾಗಿಲಲ್ಲಿ ನಿಂತಿರುವ ಕವಿ ಹಕ್ಕಿಗಳ ಪ್ರಾಣ ಹೊಡೆಯಲು ನಿಂತಿರುವ ಬೇಡನಿಗೆ ಇಲ್ಲಿ ಹೊಗಲಿಲ್ಲಿ ನಿನಗೆ ಇದು ಪಕ್ಷಿಕಾಶಿ ಎಂದು ಒಳಗೆ ಬಿಡದೆ ನಿಲ್ಲಿಸುತ್ತಾರೆ. ಇಡೀ ಪದ್ಯದಲ್ಲಿ ಬಾಗಿಲು ಮತ್ತು ಕದ ಪ್ರಸ್ತಾಪ ಇರದಿದ್ದರೂ ಕವಿಯು ಬೇಟೆಗಾರನನ್ನು ಒಳಗೆ ಬಿಡದ ರೀತಿಯಿಂದ ಬಾಗಿಲಲ್ಲಿ ನಿಲ್ಲಿಸಿ ಮಾತನಾಡಿದ ಚಿತ್ರವೂ ತಂತಾನೆ ಕಟ್ಟಿಕೊಳ್ಳುತ್ತದೆ. ಅವರೆ ತಮ್ಮ ಇನ್ನೊಂದು ಪದ್ಯದಲ್ಲಿ ಹೇಳುವಂತೆ.....

ಬಾಗಿಲೋಳು ಕೈ ಮುಗಿದು
ಒಳಗೆ ಬಾ ಯಾತ್ರಿಕನೆ

ಎಂಬ ಸಂದೇಶವು ಸಹ ಪ್ರಕೃತಿಯ ಮುಂದೆ ಮನುಷ್ಯನು ಹೇಗೆ ಭಯಭಕ್ತಿಯಿಂದ ಎಚ್ಚರದಿಂದ ನಡೆದುಕೊಳ್ಳಬೇಕೆಂಬ ಸೂಚನೆ ಇದೆ. ಕವಿಯೆ ಹೇಳುವಂತೆ ಪ್ರಕೃತಿಯ ಬಾಗಿಲನ್ನು ಯಾವುದೇ ಜೀವನದ ಯಾತ್ರಿಕ ಕೈ ಮುಗಿದು ಪ್ರವೇಶಿಸಬೇಕು. ಮನುಷ್ಯನ ಆಕ್ರಮಣ ಶೀಲತೆಯನ್ನು ಪ್ರಕೃತಿಯ ಮೇಲಿನ ದೌರ್ಜನ್ಯವನ್ನು ಕವಿ ತಿರಸ್ಕರಿಸುವ ಸೂಚನೆಯಾಗಿ ಬಾಗಿಲಿಲ್ಲಿ ಕೊಡುವ ಕರೆಗಳಾಗಿ ಕಾಣಿಸುತ್ತವೆ. ಹೀಗೆ ಹೊಸಗನ್ನಡ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಾಗಿಲು ಎಂಬುದು ಸ್ವಾತಂತ್ರ್ಯಕ್ಕೂ ಮುಕ್ತ ಅಭಿವ್ಯಕ್ತಿಗೆ ತುಡಿಯುವ ರೂಪದಲ್ಲಿ ಸಂಕೇತ ಪ್ರತಿಮೆಗಳ ಮೂಲಕ ಬಳಕೆಗೊಂಡದ್ದಾಗಿದೆ.

೨.೫. ಮೌಖಿಕ ಸಾಹಿತ್ಯ ಪರಂಪರೆ

'ಮನೆ ಬಾಗಿಲಿಗೆ ಶತ್ರು ಬಂದರೂ ಆತನನ್ನು ಒಳಗೆ ಕರೆಯಬೇಕು' ಎನ್ನುವ ಮಾನವೀಯತೆಯ ನುಡಿಯೇ ಜನಪದರ ಹೃದಯ ವೈಶಾಲ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಇದು ಜನಪದರ ಅನುಭವದ


ಆಳದಿಂದ ಹೊರಟ ನುಡಿ. ಇಂತಹ ಎಷ್ಟೋ ನುಡಿಗಳು, ಹಾಡುಗಳು, ಕಥೆಗಳು ಹೃದಯದಿಂದ ಹರಿದು ಬಾಯಿಯ ಮುಖಾಂತರ ಹೊರಹೊಮ್ಮಿ ಸಾಹಿತ್ಯ ಪ್ರಪಂಚದಲ್ಲಿ ತನ್ನದೇ ಆದ ಒಂದು ಸ್ಥಾನ ಪಡೆದುಕೊಂಡಿತು. ಅದೇ ಜನಪದ ಅಥವಾ ಮೌಖಿಕ ಪರಂಪರೆ ಎಂದು. ಇವು ಅಪ್ರಕಟಿತ ಮತ್ತು ಅಲಿಖಿತವಾಗಿದ್ದು ಅನಕ್ಷರಸ್ಥರು ದುಡಿಯುವವರು ತಮ್ಮ ದುಡಿಮೆಯ ಶ್ರಮದ ಅರಿವು ಆಗದಿರಲಿ ಎಂದು ಕುಟ್ಟುವಾಗ, ಬೀಸುವಾಗ, ಕಳೆ ಕೀಳುವಾಗ, ನಾಟಿ ಮಾಡುವಾಗ ರಾಶಿ ಮಾಡುವಾಗ ಹೀಗೆ ಪ್ರತಿಯೊಂದು ಘಳಿಗೆಯಲ್ಲಿ ಹೃದಯದ ಮೂಲಕ ಹರಿದು ಬರುತ್ತದೆ. ಇದು ಕಥೆ ಹಾಗೂ ಹಾಡಿನ ರೂಪದಲ್ಲಿ ತಮ್ಮ ದೈನಂದಿನ ಬದುಕಿನಲ್ಲಿ ಎದುರಾಗುವ ಸುಖ ಸಂತೋಷ, ಸಮಸ್ಯೆ ಪರಿಹಾರಗಳ ಸಂಕೇತವಾಗಿ ಮೂಡಿಬರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಮಾನ್ಯತೆ ಪಡೆದುಕೊಳ್ಳುವ ಈ ಪರಂಪರೆಗೆ ಕಾರಣ ಅವರು ತಮ್ಮ ಬದುಕಿನಲ್ಲಿ ಅವಶ್ಯಕವಿರುವ ಪ್ರತಿಯೊಂದು ವಸ್ತುವಿನಲ್ಲಿ ದೈವಿಭಾವನೆಯನ್ನು ಹೊಂದಿರುತ್ತಾರೆ. ಅನ್ನ, ರಕ್ಷಣೆ ಒದಗಿಸುವ ಪ್ರತಿ ವಸ್ತುವಿಗೂ ಪ್ರತ್ಯುಪಕಾರದ ರೂಪದಲ್ಲಿ ದೇವರೆಂದು ತಿಳಿಯುತ್ತಾರೆ. ಮೌಖಿಕ ಪರಂಪರೆಯಲ್ಲಿ ಸ್ತ್ರೀ ಪುರುಷರು ಸಮಾನವಾದ ಸ್ಥಾನ ಪಡೆದಿರುತ್ತಾರೆ. ತರುತಮ ಭಾವನೆ ಇಲ್ಲ. ಶಿಷ್ಟ ಪರಂಪರೆಯಲ್ಲಿ ಪುರುಷ ಪ್ರಧಾನತೆಯನ್ನು ಹೊಂದಿ ಸುಖಾಂತವಾದ ಸಾಹಿತ್ಯ ರಚಿಸಿದರೆ, ಗತಿಸಿದ ಬದುಕಿನ ಕಥೆಯೊಂದು ಸ್ತ್ರೀ ಪುರುಷರೆನ್ನದೆ ನೈಜತೆಗೆ ಹತ್ತಿರವಾಗಿದ್ದು ದುಃಖಾಂತವಾಗಿರುತ್ತವೆ. ಶಿಷ್ಟ ಸಾಹಿತ್ಯವೊಂದು ಆಳಿಹೋದ ಅರಸು ಮನೆತನಗಳ ಪೌರಾಣಿಕ ಪುರುಷರನ್ನು ದೈವತ್ವಕ್ಕೇರಿಸಿ ಸಾಹಿತ್ಯ ಸೃಷ್ಟಿಸಿದರೆ ಮೌಖಿಕ ಪರಂಪರೆ ಜನಸಾಮಾನ್ಯರ ಬದುಕಿನಲ್ಲಿನ ಘಟನೆಗಳ ಬಗ್ಗೆ ಚಿತ್ರಣ ನೀಡುತ್ತದೆ.

ಮನೆ ಎಂಬುದು ಒಂದು ನಿರ್ಜೀವ ವಸ್ತುವಾಗಿದ್ದರೂ ಅಲ್ಲಿ ವಾಸಿಸುವ ಜನರು ಅದಕ್ಕೆ ಜೀವ ತುಂಬುತ್ತಾರೆ. ವ್ಯಕ್ತಿಯೊಬ್ಬನಿಗೆ ಕೇಡು ಬಯಸುವವರು ಶಪಿಸುವುದು ಮನೆಯ ನಾಶವನ್ನು, ವಂಶನಿರ್ವಂಶವಾಗಲಿ ಎಂದು, ಬಾಗಿಲಿಗೆ ಮುಳ್ಳು ಬಡಿಲಿ, 'ಸಂತಾರಾ'(ಮನೆ ಕತ್ತಲಾಗಲಿ) ಹೀಗೆ ಇಡೀ ಮನೆಗೆ ಶಪಿಸುತ್ತಾರೆ. ಇದಕ್ಕೆ 'ಮನೆ ಮುರುಕತನದ ಬುದ್ದಿ' ಎಂದು ಇನ್ನು ಅತ್ತೆ-ಸೊಸೆಯರ ದ್ವೇಷದಲ್ಲಿ ಅತ್ತೆ ಮಾವಂದಿರಿಂದ ಸೊಸೆ ತನ್ನ ಗಂಡನೊಂದಿಗೆ ಬೇರೆ ಮನೆ ಮಾಡಿದರೆ 'ಮನೆ ಒಡೆದಳು' ಎಂದೂ ಹೇಳುವುದಿದೆ. ಕೆಟ್ಟ ನಡವಳಿಕೆ ಇದ್ದರೆ ಸಮಾಜ ಗುರುತಿಸುವುದು ಹೀಗೆ, 'ಮನೆತನದ ಗುಣ ಎಲ್ಲಿ ಹೋಗಬೇಕು' ಅಂದರೆ ವ್ಯಕ್ತಿಯೊಬ್ಬನ ನಡೆ-ನುಡಿ, ಆಚರಣೆ-ಸಂಪ್ರದಾಯ ನೇರವಾಗಿ ಮನೆತನಕ್ಕೆ ಹೊಂದಿಕೊಂಡೆ ಬಂದಿರುತ್ತದೆ. ಆದ್ದರಿಂದ ಮನೆ ಜನಪದರ ದೇವಾಲಯ. ಇಲ್ಲಿ ಮನೆಯ ರಕ್ಷಣೆ-ಮರ್ಯಾದೆಗಳೆಂಬ ಗುರುತರ ಹೊಣೆ ಹೊತ್ತ ಹೊಸ್ತಿಲು ಕೂಡ ಅವರಿಗೆ ಪೂಜ್ಯವೆ. ಆದ್ದರಿಂದ ಹೊಸ್ತಿಲನ್ನು ದೈವತ್ವಕ್ಕೇರಿಸಿ ಆರಾಧಿಸುವುದು ಇಲ್ಲಿ ಕಂಡುಬರುತ್ತದೆ. ದೈನಂದಿನ ಚಟುವಟಿಕೆಯಲ್ಲಿ

ಮೊದಲ ಆದ್ಯತೆ ಪಡೆದ ಹೊಸ್ತಿಲು ಹಬ್ಬ, ಜಾತ್ರೆ, ಉತ್ಸವ ಮದುವೆಗಳಲ್ಲಿ ವಿಶೇಷ ಪೂಜೆ ಮತ್ತು ಅಲಂಕಾರ ಪಡೆದುಕೊಳ್ಳುತ್ತದೆ.

ಕ್ಷೇತ್ರಕಾರ್ಯದಲ್ಲಿ ಬೆಳಕಿಗೆ ಬಂದ ವಿಷಯವೆಂದರೆ, ಹೊಸ್ತಿಲಿನೊಂದಿಗೆ ಜನರ ಭಾವನಾತ್ಮಕ ಸಂಬಂಧ ವಿಸ್ಮಯ ಹುಟ್ಟಿಸುವಂತದ್ದು. ದೇವಾಲಯದ ಹೊಸ್ತಿಲು, ಮನೆಯ ಹೊಸ್ತಿಲು ಅದರಲ್ಲೂ ಧರ್ಮಾಧಾರಿತ, ವರ್ಗಾಧಾರಿತವಾಗಿ ಕಂಡುಬಂದ ಹೊಸ್ತಿಲುಗಳು ಆ ಮನೆಯ ಸಂಸ್ಕೃತಿಯನ್ನು ಎತ್ತಿ



ವೈದಿಕರ ಮನೆ ಬಾಗಿಲು


ತೋರಿಸುವಂತಿದ್ದವು. ಹೊಸ್ತಿಲು ಮನೆಯ ರಕ್ಷಣೆಯ ಜೊತೆಗೆ ಮರ್ಯಾದೆಯನ್ನು ಕಾಪಾಡುವಂತಹದ್ದು. ಇದು ಎರಡು ಪ್ರಮುಖ ಸಂದರ್ಭಗಳಲ್ಲಿ ಪ್ರಕಟಗೊಳ್ಳುತ್ತದೆ. ಮನೆಯವರು ಮನೆ ಬಿಟ್ಟು (ಜಗಳವಾಡಿ) ಹೋಗುವಾಗ ತಡೆದರೆ, ಪರಕೀಯರಾಗಲೀ, ಶತ್ರುಗಳಾಗಲೀ ಒಳ ಬರುವದನ್ನು ತಡೆಯುತ್ತದೆ. ಧೈರ್ಯ, ಭಯ, ಮರ್ಯಾದೆ, ಪ್ರತಿಷ್ಠೆ ಸವಾಲು ಹೀಗೆ ಪ್ರತಿಸ್ತರದಲ್ಲಿ ಒಡನಾಟ ಬೆಳೆಸಿಕೊಂಡಿದೆ.

ಜನಪದರಲ್ಲಿ ವೈಯಕ್ತಿಕ ಮತ್ತು ಸಾಮೂಹಿಕ ಬದುಕು ಎಂದು ಎರಡು ರೀತಿಗಳಿವೆ. ಮನೆ ಮತ್ತು ಸಮಾಜಗಳೇ ಇವುಗಳನ್ನು ಪ್ರತಿನಿಧಿಸುವವು. ಇವುಗಳನ್ನು ಪ್ರತ್ಯೇಕಿಸುವುದೇ ಹೊಸ್ತಿಲು. ಜನಪದರಲ್ಲಿ ವೈಯಕ್ತಿಕ ಬದುಕಿಗಿಂತ ಸಾಮೂಹಿಕ ಬದುಕಿಗೆ ಹೆಚ್ಚು ಮಾನ್ಯತೆಯನ್ನು ಕೊಟ್ಟಿದ್ದಾರೆ. ಕೂಡಿ ಬಾಳುವ,

ಕೂಡಿ ಉಣ್ಣುವ, ಕೂಡಿ ದುಡಿಯುವ ಹೀಗೆ ಕೂಡಿ ಮಾಡುವ ಪ್ರತಿಯೊಂದು ಕಾರ್ಯವೂ ಹೆಚ್ಚು ಮಾನ್ಯತೆ ಪಡೆದುಕೊಳ್ಳುತ್ತವೆ.



ದೇವಾಲಯದ ಹೊಸ್ತಿಲು



ಬುಡಕಟ್ಟು ಜನಾಂಗದ ಬಾಗಿಲು

ಜನಪದ ಸಾಹಿತ್ಯದಲ್ಲಿ ಹೊಸ್ತಿಲು

ಸೃಷ್ಟಿಯ ಎಲ್ಲವನ್ನು ದೈವದ ರೂಪದಲ್ಲಿ ಕಾಣುವ ಜನಪದರು ಹೊಸ್ತಿಲು ಮತ್ತು ಬಾಗಿಲನ್ನು ಶುಭ ಮತ್ತು ಅಶುಭ ಎರಡು ಹಿನ್ನೆಲೆಯಲ್ಲಿ ನಂಬಿ ಆಚರಣೆಗಳನ್ನು ಬೆಳೆಸಿಕೊಂಡು ಬಂದಿದ್ದಾರೆ. ಯಾವ ಕಾರ್ಯವನ್ನೇ ಕೈಗೊಳ್ಳಲೀ ಎಲ್ಲಿಗಾದರೂ ಹೋಗಲಿ ಇಲ್ಲವೇ ಬರಲಿ ಹೊಸ್ತಿಲು ದಾಟುವಾಗಲೆಲ್ಲಾ ಅದನ್ನು ತುಳಿಯದೆ, ಎಡವದೆ ಕಾಲಿಗೆ ನೀರು ಹರಿಸಿಕೊಂಡು ಒಳ ಹೋಗುವ ಅವರು ಹಾಗೆಯೇ ಮನೆಯಿಂದ ಹೊರ ಬೀಳುವಾಗಲೂ ಅದರ ಪಾವಿತ್ರ್ಯವನ್ನು ಕಾಪಾಡುತ್ತಿದೆ. ಶಾಶ್ವತವಾಗಿ ಹೊರ ಬೀಳುವ ಗಂಡನ ಮನೆಗೆ ಹೊರಟುನಿಂತ ಮಗಳು ಸಹ ಹೊಸ್ತಿಲು ಮತ್ತು ಬಾಗಿಲಿಗೆ ನಮಸ್ಕರಿಸಿ ಬರುವೆನೆಂದು ಹೇಳಿ ಹೊರಡುವುದು ಮಾರ್ಮಿಕವಾದ ಅಂಶವಾಗಿದೆ.

ಹೋಯ್ತೀನಿ ಹೊಸ್ತಿಲೆ ಬತ್ತೀನಿ ಬಾಗೀಲೆ
ನಾಡು ಮೆಚ್ಚಿದ ನಡುಮನೆಯೆ ಜ್ಯೋತ್ಯಮ್ಮ
ಹೋಯ್ತೀನಿ ನನ್ನ ತೌರಿಗೆ[೬೦]

ಮೇಲಿನ ತ್ರಿಪದಿಯಲ್ಲಿ ಗಂಡನ ಮನೆ ಬಿಟ್ಟು ತವರಿಗೆ ಹೊರಟು ನಿಂತ ಸೊಸೆಯೊಬ್ಬಳು ಮನೆ ಬಿಡುವಾಗ ಮನೆ ಮಂದಿಗೆಲ್ಲಾ ಕೇಳಿ ಹೋಗುವಷ್ಟೆ ಮುಖ್ಯವಾಗಿ ಹೊಸ್ತಿಲು, ಬಾಗಿಲಿಗೆ ಹೇಳಿ ಹೋಗುತ್ತಿರುವುದು ಜನಪದರಲ್ಲಿ ಅದರಲ್ಲೂ ಜನಪದರ ಗರತಿ ಹೊಸ್ತಿಲು ಬಾಗಿಲೊಂದಿಗೆ ಇಟ್ಟುಕೊಂಡ ಅನ್ಯೋನ್ಯಸಂಬಂಧ ಸೂಚಕವಾಗಿ ಕಾಣಿಸುತ್ತದೆ.

ಹೊರಗಿನಿಂದ ಮನೆಯೊಳಗೆ ಬರುವಾಗಲೆಲ್ಲಾ ಕಾಲಿಗೆ ನೀರು ಹಾಕಿಕೊಳ್ಳುವುದೆಲ್ಲಾ ಸಾಮಾನ್ಯವಾಗಿದೆ. ಹಾಗೆ ಹಾಕಿದ ನೀರು ಅಲ್ಲಿಯೇ ಇಂಗದೆ ಉದ್ದಕ್ಕೆ ಹರಿದರೆ ಆ ಮನೆಗೆ ನೆಂಟರು ಬಂದಿರುವರೆಂದೆ ಉಳಿದವರ ತತ್ತ್ವ. ಇದನ್ನು ಈ ಮುಂದಿನ ತ್ರಿಪದಿ ಎತ್ತಿ ಹೇಳುತ್ತದೆ.

ಕಾಲೀಗೆ ಹಾಕಿದ ನೀರು ಬಾಗಿಲಿಗೆ ಹರಿದಾವು
ಬಂದಿರವರು ಯಾರು ಹೊಸ ನಂಟ್ರು ಲಸಿಯವರು
ತಿಂಗಾಳ ರಜೆಯ ಕೇಳ್ಬೇಕು[೬೧]

ಮನೆಗೆ ನೆಂಟರು ಬಂದರಷ್ಟೆ ನೀರು ಹರಿಯುವುದಿಲ್ಲ. ಮಗುವಿಗೆ ಎರೆದ ನೀರು ಬಾಗಿಲಿಗೆ ಹರಿಯಬಹುದಾಗಿದೆ.

ಬಾಲನ್ನ ಎಂದ ನೀರು ಬಾಗಲಿಗೆ ಹರಿದಾವು
ಬಾಗಲ ತುಂಬಿ ಹೊರಚೆಲ್ಲಿ ಸೋ
ಬಾಗಲ ತುಂಬಿ ಹೊರಚೆಲ್ಲಿ ಹೆಚ್ಚಾದ ನೀರು
ಬಾಳಿಯ ವನಕ ಹರಿದಾವ ಸೋ[೬೨]

ಇಲ್ಲಿ ಬಾಲನನ್ನು ಎರದ ನೀರು ಬಾಗಿಲದಾಟ ಬಾಳಿಯ ವನದಷ್ಟು ದೂರ ಹರಿಯುವಲ್ಲಿ ಆ ಮಗುವಿನಲ್ಲಿ ಪ್ರೀತಿ ಹೆಚ್ಚಾದ್ದರಿಂದ ಮುದ್ದಾಗಿ ನೋಡಿಕೊಳ್ಳುವ ಸಂಭ್ರಮವೇ ಇದೆ. ಬಾಗಿಲ ತುಂಬಿ ಹೊರಚೆಲ್ಲಿ ಎಂಬಲ್ಲಿ ಕಂದನ ಮೇಲಿನ ಮಮತೆ ತಾಯಿಯ ಅಂತರಾಳದಿಂದ ಉಕ್ಕಿ ಹೊರಚೆಲ್ಲುತ್ತಿರುವ ದ್ಯೋತಕವಾಗಿದೆ.

ದೇವಸ್ಥಾನ ಚಿಕ್ಕದಾಗಿದ್ದರೆ ಒಂದು ಬಾಗಿಲಾಗಬಹುದು. ದೇವಸ್ಥಾನ ದೊಡ್ಡದಾಗಿದ್ದರೆ ನಾಲ್ಕು ದಿಕ್ಕಿಗೆ ನಾಲ್ಕು ದ್ವಾರಗಳು ಏಳಬಹುದು. ಆದರೆ ತವರಿನ ಬಗ್ಗೆ ಪ್ರೀತಿ ತುಂಬಿರುವ ಗರತಿಗೆ ತನ್ನ ತವರುಮನೆ ಚಿಕ್ಕದೆ ಆಗಿದ್ದರೂ ಅದು ದೊಡ್ಡದೆ. ದೊಡ್ಡ ಮನೆಗೆ ದಿಕ್ಕಿಗೊಂದು ಬಾಗಿಲು ಮಾತ್ರವೇ ಅಲ್ಲ. ಆ ಬಾಗಿಲುಗಳು ಬೆಲೆ ಬಾಳುವ ಮರಮುಟ್ಟುಗಳಿಂದ ಕೆತ್ತಿದವು.

ಮೂಢುಬಾಗೀಲ ಮನೆಯು ಮುತ್ತೀನ ಧಾರಂದ
ಬಡಗು ಬಾಗೀಲ ಮನೆಯು ಬೆಡಗೀನ ಧಾರಂದ
ತೆಂಕ ಬಾಗೀಲ ಮನೆಯು ತೇಗೀನ ಧಾರಂದ
ಅವರು ಬಿಟ್ಟು ಬರುವಾರೆ ಮನಸ್ಸಿಲ್ಲ.
ಅಪ್ಪಯ್ಯನ ಹಟ್ಟಿಲ್ಲಿ ಚಿಕ್ಕಯ್ಯನ ತೊಟ್ಟಿಲ್ಲಿ
ನೀ ಸೋದರ ಮಾವಯ್ಯನ ಗರಡಿಲ್ಲ ಬಾಗಿಲ ಮುಂದೆ
ಅವರು ಶಾಲು ಇಂಬೀಯ ವನವಾದೋ[೫೩]

ಇಲ್ಲಿ ಮೂಢು ಬಡಗು ತೆಂಕ ದಿಕ್ಕುಗಳಿಗೆ ಇಟ್ಟ ಬಾಗಿಲುಗಳು ಅಮೂಲ್ಯವಾಗಿರುವುದರಿಂದ ಅವುಗಳನ್ನು ಬಿಟ್ಟು ಹೊರಡಲು ಇಲ್ಲಿ ತಂಗಿಯಾದವಳಿಗೆ ಸಾಧ್ಯವಾಗುತ್ತಿಲ್ಲ. ಹೊಸ್ತಿಲ ಮೇಲೆ ನಿಂತರೆ, ಹೊಸಿಲ ಒಳಗೆ ನಿಂತು ದಾನ ಮಾಡಿದರೆ ಅಶುಭ ಎಂಬ ಮಾತು ಇದೆ. ಇಂತಹ ಅಶುಭ ಸೂಚನೆಯ ಕಥೆಯೊಂದು ಕರಾವಳಿ ತೀರದ ಜನಪದರ ಪಾಡ್ದನಗಳಲ್ಲಿ ಎಡೆಪಡೆದಿದೆ.

ಪಾರ್ವತಿಯು ಹಾಲು ನೀರು ತರಲೆಂದು ಒಳನಡೆದಾಗ ಹೊಸ್ತಿಲಲ್ಲಿ ಎಡವಿ ಅವಳ ತಲೆ ಬಾಗಿಲ ಚೌಕಟ್ಟಿಗೆ ಬಡಿಯಿತು. "ಅಯ್ಯಯ್ಯೋ ಪಾಪವೇ! ಎದುರಾದ ದೋಷವೆ!" ಎಂದುದ್ಗರಿಸಿದ ಪಾರ್ವತಿ, "ಹೊಸ್ತಿಲು ನನ್ನನ್ನು ತಡೆಯಿತೇಕೆ? ಬಾಗಿಲ ಚೌಕಟ್ಟು ತಲೆಗೆ ಬಡಿಯಿತೇಕೆ?" ಎಂದು ಚಿಂತಿಸಿ, ಆ ತಡೆಗಳು ತನಗೊದಗಲಿರುವ ಅಮಂಗಲಕರ ಕೃತ್ಯದ ಸಂಕೇತಗಳಿರಬೇಕೇ ಎಂದು ಆಲೋಚಿಸಿದಳು.[೫೪]

ಮೇಲಿನ ಪೌರಾಣಿಕ ಘಟನೆಯಿಂದ ಬಾಗಿಲ ಚೌಕಟ್ಟಿಗೆ ತಲೆ ಬಡಿಯುವುದು ಅಪಶಕುನ ಸೂಚಕವೆಂಬುದು ಅರಿವಿಗೆ ಬರುತ್ತದೆ. ಇಂತದೆ ಒಂದು ಘಟನೆ ೧೨ನೇ ಶತಮಾನದ ವಚನಕಾರರ ಕಾಲಕ್ಕೆ ಅಜಗಣ್ಣನ ಜೀವನದಲ್ಲಿ ನಡೆದುದಾಗಿ ತಿಳಿದುಬರುತ್ತದೆ.

"ಒಂದು ದಿನ ಆತ ಮನೆಯನ್ನು ಪ್ರವೇಶಿಸುವಾಗ ಬಾಗಿಲಿಗೆ ತಲೆ ತಗುಲಿ ನಮಃಶಿವಾಯ ಎಂಬ ಮಂತ್ರ ಬಾಯಿಂದ ಹೊರಗೆ ಬಂದಿತು. ಅದರೊಡನೆ ಆತನ ಪ್ರಾಣವು ಹೊರಬಂದು ಲಿಂಗೈಕ್ಯವಾಗಿ ಹೋಯಿತು"[೫೫] ಎಂಬುದಾಗಿ ಶಿವಶರಣ ಕಥಾರತ್ನ ಕೋಶದಲ್ಲಿ ಹೇಳಲಾಗಿದೆ.

ಈ ವಿವರಗಳಿಂದ ಹೊಸ್ತಿಲು ದೈವಸೂಚಕವಾಗಿರುವುದರೊಂದಿಗೆ ಅಶುಭವನ್ನು ಸೂಚಿಸುತ್ತಿರುವುದನ್ನು ನೋಡಬಹುದಾಗಿದೆ. ಜನಪದರ ಹಾಡು ಹಸೆಗಳಲ್ಲಿ ಹೊಸ್ತಿಲು ಇಲ್ಲವೆ ಬಾಗಿಲಿನ ಪ್ರಸ್ತಾಪ ಮತ್ತೆ ಮತ್ತೆ ಬರುತ್ತದೆ.

ಜ್ವಾಳದ ಹಸೆ ಹ್ಯಾಂಗ ಹೊಯ್ಕಲ್ಹೇಳು
ಬಾಗಲ್ದನ್ನ ಬಾಳಿ ಬಲಕಾಗಿ ಸೋಬಾನವ
ಬಾಗಲ್ದನ್ನ ಬಾಳಿ ಬಲಕಾಗಿ ಸೂರ್ಯದೇವ
ಹ್ಯಾಂಗ ಮೂಡ್ಯಾನ ಜಗಕೆಲ್ಲ ಸೋಬಾನವ[೫೬]

ಮದುವೆಯ ಸಂಭ್ರಮದ ಚಿತ್ರವನ್ನು ಕಣ್ಮುಂದೆ ತರುವಂಥ ಈ ಹಾಡು ಮದುವೆಯಲ್ಲಿ ಬಾಗಿಲಿಗೆ ಬಾಳೆಯ ದಿಂಡಿನಿಂದ ಅಲಂಕರಿಸಿದ ಬಗೆ ಮತ್ತು ಬಾಗಲ್ದನ್ನ ಬಾಳಿ ಬಲರಾಗಿ ಎನ್ನುವ ಸಾಲು ಬಾಗಿಲಿಗೆ ಕಟ್ಟಿದ ಬಾಳೆಯ ದಿಂಡು ಸರಿದು ಸೂರ್ಯನ ಕಿರಣಗಳನ್ನು ಮನೆಯ ಒಳಗೆ ಪ್ರವೇಶಿಸಿದ ಬಗೆಯನ್ನು ಹೇಳುವಂತಿದೆ. ಹೊಸತಿಲ ಪೂಜೆಯ ಮಹತ್ವವನ್ನು ಹೇಳುವ ಮುಂದಿನ ತ್ರಿಪದಿಯಲ್ಲಿ.

ಬಾಗಲದ ಸೇವಾನೂ| ಬಾಗಿ ಮಾಡಲಿಬೇಕು|
ಭಾಗ್ಯದಾ ಸದರು ಹೊಸತಿಲವ್ರೂ|| ಆ ಮನೆಗೆ||
ಭಾಗ್ಯದಾ ಪತಿವಂತಿ ಹಣೆಹಂಗ||[೫೭]



ಹೊಸ್ತಿಲ ಪೂಜೆ

ಇಲ್ಲಿ ಗರತಿಯೊಬ್ಬಳಿಗೆ ತಾಯಿಯು ಗಂಡನ ಮನೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯ ಸೂಕ್ಷ್ಮಗಳನ್ನು ಹೇಳುತ್ತಿದ್ದಾಳೆ. ಬೆಳಿಗ್ಗೆ ಬಾಗಿಲಿಗೆ ಹೊಸತಿಲಿಗೆ ಬಾಗಿ ಸೇವೆಯನ್ನು ಅಂದರೆ ಪೂಜೆಯನ್ನು ಮಾಡಿದರೆ ಮನೆಗೆ ಒಳ್ಳೆಯದಾಗುತ್ತದೆ ಎಂದು ಉಪದೇಶ ನೀಡುವುದು ಕಂಡುಬರುತ್ತದೆ.

ಹೆಣ್ಣಿಗೆ ತಾಯಿಯ ಮನೆ ಸ್ವರ್ಗಕ್ಕೆ ಮಿಗಿಲು. ತಾಯಿ ಇರೋವರೆಗೆ ದೇವೇಂದ್ರನ ಅರಮನೆಯ ವೈಭೋಗ. ತಾಯಿ ತೀರಿಕೊಂಡ ಮರುದಿನವೇ ತಾ ಹುಟ್ಟಿದ ಮನೆ ತನಗೆ ಎರವಾಯಿತು ಎನ್ನುವಲ್ಲಿ ಮುಂದಿನ ತ್ರಿಪದಿ ಒತ್ತಿ ಹೇಳುತ್ತದೆ.

ತಾಯಮ್ಮ ಇರೋಗಂಟ ದೇವೇಂದ್ರಾಯ್ನ ಐಭೋಗ
ತಾಯಮ್ಮ ತಪ್ಪೀದ ಮಾರನೆಗೆ ಅಣ್ಣೈನ ಹೆಂಡ್ತಿ
ಬಾಗಿಲು ಬಿಟ್ಟು ನಡಿ ಎಂದ[೫೮]

ಇಲ್ಲಿ ಬಾಗೀಲ ಬಿಟ್ಟು ನಡಿ ಎನ್ನುವಲ್ಲಿ ಹೆಣ್ಣಿನ ಅಸಹಾಯಕತೆ ನೋವು ಕಾಣುತ್ತದೆ. ತಾಯಿಯನ್ನು ಕಳೆದುಕೊಂಡ ದುಃಖ ಒಂದು ಕಡೆಯಾದರೆ ತೌರಿನ ಸಂಬಂಧವನ್ನು ಕಳೆದುಕೊಳ್ಳುವಲ್ಲಿ ಅಣ್ಣನ ಹೆಂಡ್ತಿಯ ಮನಸ್ಸಿಗೆ ಚುಚ್ಚುವ ಮಾತು ಬಾಗೀಲ ಬಿಟ್ಟು ನಡಿ ಎನ್ನುವಲ್ಲಿ ವ್ಯಕ್ತವಾಗುತ್ತದೆ. ಮದುವೆಯ ಸಂದರ್ಭದಲ್ಲಿ ಇದೇ ಅಣ್ಣ ತನ್ನ ತಂಗಿಯನ್ನು ಹೆರವರಿಗೆ ಹೇಗೆ ಒಪ್ಪಿಸಲಿ ಎಂದು ದುಃಖಿಸಿದ ಆ ಘಳಿಗೆ ಅವಳಿಗೆ ನೆನಪಾಗುತ್ತದೆ.

ಹಂದರದಾಗಿರುವ ದೈವಸಾಕ್ಷಿ
ನಮ್ಮ ತಂಗಿ
ಹೆಣ್ಣು ಹೋದಿತು ಹೆರವರಿಗೆ
ಬಾಗಿಲ ತೋಳ ಬಿಡ ತಂಗಿ ಕಾಲ[೫೯]

ಅಂದು ತಂಗಿ ತನ್ನ ತೌರುಮನೆಯ ಬಾಗಿಲ ಹಿಡಿದುಕೊಂಡು ದುಃಖಿಸಿ

ಬಾಗಿಲ ಬಾಗಿಲ ಸಾಕ್ಷಿ
ಬಾಗಿಲ ಮಂದಿಯ ಸಾಕ್ಷಿ
ಬಾಗಿಲದಾಗಿರುವ ದೈವ ಸಾಕ್ಷಿ
ಬಾಗಿಲ ತೋಳ ಬಿಡ ತಂಗಿ ಕಾಲ[೬೦]

ಎಂದು ಬಾಗಿಲದ ಸಾಕ್ಷಿಯಾಗಿ, ಬಾಗಿಲದಲ್ಲಿ ನಿಂತಿರುವ ಜನರ ಸಾಕ್ಷಿಯಾಗಿ ಮತ್ತು ಬಾಗಿಲಲ್ಲಿ ನೆಲೆಸಿರುವ ದೈವದ ಸಾಕ್ಷಿಯಾಗಿ ತಂಗಿಯನ್ನು ಗಂಡನ ಮನೆಯವರಿಗೆ ಒಪ್ಪಿಸಿದ ಅಣ್ಣ ಇಂದು ಅದೇ 'ಬಾಗಿಲು ಬಿಟ್ಟು ನಡಿ' ಎನ್ನುತ್ತಾನೆ. ತಾನು ಹುಟ್ಟಿ ಬೆಳೆದ ತೌರು, ತಾನು ಎಡವಿ ನಡೆಯಲು ಕಲಿತ ಬಾಗಿಲು ಹೊಸ್ತಿಲು, ಹೊಸ ಜಗತ್ತಿನ ಪರಿಚಯ ಮಾಡಿಕೊಟ್ಟ ಬಾಗಿಲು, ಮದುವೆಯೆಂದು ಬಾಗಿಲು ಹಿಡಿದು ಅತ್ತ ಪರಿ ಅಂದರೆ ತನ್ನ ದುಃಖ-ನಲಿವಿನ ಪ್ರತೀಕವಾದ ಈ ಬಾಗಿಲ ಋಣ ಇಂದಿಗೆ ತೀರಿತು

ಎಂದು ಹೆಣ್ಣು ದುಃಖಿಸುತ್ತಾಳೆ. ಮೇಲಿನ ಪದ್ಯದಲ್ಲಿನ ಹೆಣ್ಣಿನ ದುಃಖವೇ ಪ್ರಧಾನವಾಗಿದೆ. ಮತ್ತೊಂದು ಪದ್ಯ.

ಬಾಳಾಗ ಬದುಕಾಗ ಏಳೆಮ್ಮೆ ಕರೆಯಾಗ
ಮತಿಗೆಟ್ಟು ಬಾಗಿಲಿಗೆ ಬರುವಾಗ ನಾದೀನಿ
ಬಾಗೀಲರಚಾವ ಹೊಡಿ ಅಂದ[೬೧]

ಎನ್ನುವಲ್ಲಿಯೂ ತಾಯಿ ಇಲ್ಲದ ತೌರನ್ನೆ ಸೂಚಿಸುತ್ತದೆ.

ತೌರಿನಿಂದ ಗಂಡನ ಮನೆಗೆ ಬಂದ ಹೆಣ್ಣು ಗಂಡನ ಮನೆಯೆ ಸರ್ವಸ್ವವೆಂದುಕೊಂಡು ಅಲ್ಲಿನವರಿಗಾಗಿಯೇ ಬದುಕಲು ಮುಂದಾಗುತ್ತಾಳೆ. ಅಲ್ಲಿನವರ ಯೋಗಕ್ಷೇಮ ಅದರಲ್ಲಿಯೂ ತನ್ನ ಪತಿಯ ಯೋಗಕ್ಷೇಮವಂತೂ ಆಕೆ ಎಲ್ಲಿಲ್ಲದ ಕಾಳಜಿ ವಹಿಸುತ್ತಾಳೆ. ಗಂಡ ಮನೆಗೆ ಬರುವುದು ಸ್ವಲ್ಪ ತಡವಾದರೂ ತವಕ ಪಡುತ್ತಾಳೆ. ಬಾಗಿಲ ಮೂಲಕ ದೃಷ್ಟಿ ಹೊರಗೆ ಹಾಯಿಸುತ್ತಾಳೆ ಎನ್ನುವಲ್ಲಿ ಈ ಮುಂದಿನ ಪದ್ಯ ಸುಂದರವಾಗಿ ಮೂಡಿಬಂದಿದೆ.

ಎರಡು ಕಣ್ಣಿನ ದಿಟ್ಟಿ| ಎರಗೀ ಕರಿತಾವೇನ?
ಸೆರಗ ಹಾಸಿದ್ಹಂಗ ಹಾಸ್ಯಾವ ||ದೊರಿಯರು||
ಬರುವಾಗ ಬಾಗಿಲಿಗೆ ಬೀಸ್ಯಾವ||[೬೨]

ಕಣ್ಣಿನ ದೃಷ್ಟಿ ಬಾಗಿಲ ಮೂಲಕ ಹರಿದು ತನ್ನ ದೊರೆಯ ಹಾದಿಯಲ್ಲಿ ಸ್ವಾಗತಕ್ಕೆ ನಡೆಮಡಿಯನ್ನು ಹಾಸಿದ ಪರಿ ಬಲು ಸುಂದರವಾಗಿದೆ. ಇಲ್ಲಿ "ಬಾಗಿಲಿಗೆ ಬೀಸ್ಯಾವ" ಎನ್ನುವ ಸಾಲು ನಮ್ಮನ್ನು ತನ್ನ ಕಡೆಗೆ ಸೆಳೆಯುತ್ತದೆ.

ಗಂಡನ ಬರುವಿಗಾಗಿ ಬಾಗಿಲ ಮುಖಾಂತರ ಹೊರಗೆ ದೃಷ್ಟಿ ಹಾಯಿಸಿದ ಹೆಣ್ಣಿನ ಸುಂದರ ಕಲ್ಪನೆ ಒಂದು ಕಡೆಯಾದರೆ, ತನ್ನ ಗಂಡ ದುರಂತ ಮರಣಕ್ಕೆ ತುತ್ತಾದಾಗ ತಾನು ಸತಿಯಾಗಲು ನಿರ್ಧರಿಸುತ್ತಾಳೆ. ಒಂದು ಕ್ಷಣ ಮುಂದಿನ ದೃಶ್ಯ ನೆನಪಿಸಿಕೊಂಡು 'ನಾನೆಂಗೋಗಲೊ ಸಿವಸಿವನೆ' ಎಂದು ಅಳುಕುತ್ತಾಳೆ. ಅವಳ ಈ ಅಧೀರತೆಯನ್ನು ಕಂಡ ಆಕೆಯ ಮಾವ ದಿಡ್ಡಿಯ ಬಾಗಿಲನ್ನು ಹಾಕಿಸುತ್ತಾನೆ. ಅದಕ್ಕೆ ಆಕೆಯ ಉತ್ತರ ಹೀಗೆ ಬರುತ್ತದೆ.

ಕದ್ದುಹೋಗೋರ ಮಗಳೆಂದು ದಿಡ್ಡಿಬಾಗಿಲಾಕಿಸ್ತ
ಕದ್ದುವೋಗೋರ ಮಗಳಲ್ಲ ಈರಗ್ಯಾತರಾಯ
ದಿಡ್ಡೀಯ ಬಾಗಿಲ ತಗುಸಯ್ಯಾ[೬೩]

ಎಂದು ಧೈರ್ಯ ಹೇಳಿ ಬೆಂಕಿಗೆ ದುಮುಕುತ್ತಾಳೆ. ಇಲ್ಲಿ ಅಂದಿನ ಸಮಾಜದ ಹೆಣ್ಣಿನ ದಾರುಣ ಸ್ಥಿಯನ್ನು ತನ್ನದ್ದಲ್ಲದ ತಪ್ಪಿಗೆ ಜೀವ ತೆತ್ತುವ ಹೆಣ್ಣಿನ ಹೀನ ಸ್ಥಿತಿಯನ್ನು ಚಿತ್ರಿಸುತ್ತದೆ. ಅಂದಿನ ಒಂದು ಆದರ್ಶ

ಜೀವನದ ಮೌಲ್ಯವನ್ನು ಹೆಣ್ಣು ಅಂದರೆ ಹೀಗೆ ಬದುಕಬೇಕು ಎನ್ನುವ ಪರಿಮಿತಿಯನ್ನು ಮಾವ ಸೊಸೆ ಎಲ್ಲಿ ಓಡಿ ಹೋಗಬಹುದೇನೋ ಎನ್ನುವ ಅಳುಕಿನಿಂದ ದಿಡ್ಡಿ ಬಾಗಿಲು ಹಾಕಿಸುವ ಪರಿ ಅಂದಿನ ಕಟ್ಟುನಿಟ್ಟಿನ ಸ್ಥಿತಿಯ ಅರಿವಾಗುತ್ತದೆ. ಹೆಣ್ಣಿನ ತ್ಯಾಗ ಬಲಿದಾನಗಳೇ ಸಮಾಜದ ಶಾಂತಿ ನೆಮ್ಮದಿಯನ್ನು ಕಾಣುತ್ತವೆ ಎನ್ನುವ ಮನೋಭಾವನೆಯನ್ನು ಬಿತ್ತುವ ಇಂತಹ ಘಟನೆಗಳು ಮನಮಿಡಿಸುತ್ತವೆ. ದಿಡ್ಡಿ ಬಾಗಿಲು ಹಾಕಿಸುವುದರ ಮೂಲಕ ಅವಳ ಜೀವನದ ಎಲ್ಲ ಬಾಗಿಲುಗಳನ್ನು ಮುಚ್ಚುವ ಕ್ರಿಯೆಯೆ ಆಗಿದೆ. ಗಂಡ ಮರಣದೊಂದಿಗೆ ಆಕೆ ತನ್ನ ಜೀವನದ ಕೊನೆಯ ಬಾಗಿಲು ದಾಟುವಂತಾಯಿತು. ಇದನ್ನು ಸಮಾಜ ಪುರಸ್ಕರಿಸುತ್ತದೆ ಕೂಡ. ಇದು ಕೇವಲ ಒಂದು ಹೆಣ್ಣಿನ ಕಥೆಯಾದರೆ ಇಂಥಹ ಎಷ್ಟೋ ಜನ ಹೆಣ್ಣು ಮಕ್ಕಳು ಹೇಳ ಹೆಸರಿಲ್ಲದೆ 'ಮಹಾಸತಿ'ಯರ ಗುಂಪಿಗೆ ಸೇರಿದ್ದಾರೆ.

ಏನೆಲ್ಲಾ ಕಷ್ಟಗಳು ಬಂದರೂ ಜೀವನದ ದೋಣಿ ಸಾಗುತ್ತಲೇ ಇರುತ್ತದೆ. ಇದೆ ಸೃಷ್ಟಿಯ ನಿಯಮ ಕೂಡ. ಇಲ್ಲಿ ಗರತಿಯೊಬ್ಬಳು ಬಳೆಗಾರನಿಗೆ ತನ್ನ ತವರಿಗೆ ಹೋಗಿ ತನ್ನ ಕಷ್ಟ ಸುಖ ತಿಳಿಸಿ ಬಳೆ ತೊಡಿಸಿ ಬಾರೆಂದು ಹೇಳುವಾಗ ಆ ಬಳೆಗಾರ ಆಕೆಯ ತವರುಮನೆಯ ಗುರುತು ಕೇಳುತ್ತಾನೆ. ಆಗ ಆಕೆ..

ಹೆಂಚಿನ ಮನೆ ಕಾಣೋ
ಕಂಚಿನ ಕದ ಕಾಣೋ

ಎಂದು ಹೇಳುತ್ತಾಳೆ. ಇಲ್ಲಿ ಹೆಂಚಿನ ಮನೆ ಎಂಬುದು ಹಂಚುಗಳು ಹೊದಿಸಿದ ಮನೆಯಾಗಿರದೆ ಗ್ರಾಮ್ಯರು ಬಳಸುವ ಹಾಗೆ ಸಿರಿವಂತಿಕೆಯ ಮಹಡಿಯ ಮನೆಯಾಗಿದೆ. ಆ ಮನೆಯ ಸಿರಿವಂತಿಕೆಯನ್ನು ಸಮರ್ಥಿಸುವಂತೆ ಕಂಚಿನ ಕದ ಪದ ಬಳಕೆಯಾಗಿದೆ. ಇದರಿಂದ ಅಂದು ಬಳೆಗಾರರು ಊರಿಂದ ಊರಿಗೆ ತಿರುಗುವದ್ದಾರಿಂದ ಸಂಪರ್ಕ ಸಾಧನಗಳಂತೆಯೂ ಕೆಲಸ ಮಾಡುತ್ತಿರಬಹುದೆಂಬ ಅನುಮಾನ ಬರುತ್ತದೆ.

ಜನಪದ ಗೀತೆಗಳನ್ನು ಹೊರತುರಪಡಿಸಿ ಜನಪದರ ಒಗಟು, ಒಡಪು ಮತ್ತು ಗಾದೆ ಮಾತುಗಳಲ್ಲಿ ಹೊಸ್ತಿಲು ಇಲ್ಲವೆ ಬಾಗಿಲಿನ ಪ್ರಸ್ತಾಪ ಬರುತ್ತದೆ.

೧. 'ಗಿಡ್ಡ ಹುಡುಗ ಅಡ್ಡ ಬಿದ್ದದ' ಎನ್ನುವುದು ಹೊಸ್ತಿಲನ್ನು ಸೂಚಿಸುವ ಒಗಟಾಗಿದೆ.

೨. 'ಚೆನ್ನಮ್ಮನ ಅರಮನೆಗೆ ಬಾಗಿಲಿಲ್ಲ ಕಿಡಕಿ ಇಲ್ಲ' ಎನ್ನುವಲ್ಲಿ ಬಾಗಿಲಿಲ್ಲದ ಮನೆ ಮೊಟ್ಟೆಯಾಗಿದೆ

೩. ಬಾಯಿ ಕುರಿತಾದ ಒಗಟಿನಲ್ಲಿ 'ಮನೆ ಮನೆಗೊಂದು ಬಾಗಿಲು ಬಾಗಿಲು ಮುಂದೆ ಬಾವಿ' ಎಂಬುದನ್ನು ನೋಡಬೇಕು.

೪. 'ಬಾ ಅಂದರೆ ಬರಲ್ಲ, ಎಳಿಬೇಕು. ಹೋಗು ಅಂದರೆ ಹೋಗಲ್ಲ ತಳ್ಳಬೇಕು'. ಬಾಗಿಲನ್ನು ನಿರ್ದೇಶಿಸುವ ಒಗಟಾಗಿದೆ. ಬಾಗಿಲಿನ ಹಾಗೆ ಬಾಗಿಲಿಗೆ ಹಾಕುವ ಬೀಗವು ಜನಪದರ ಒಗಟಿನಲ್ಲಿದೆ.

೫. 'ಬಂಗಾರದ ಗಿಣಿ ಬಾಗಿಲ ಕಾಯುತ್ತೆ. ಕಬ್ಬಿಣದ ಕೋಲು ಹಾಕಿದರೆ ಬಾಯಿ ತೆರೆಯುತ್ತೆ' ಎಂಬುದು ಬೀಗವನ್ನು ಹೇಳುತ್ತದೆ. ಹೊಸ್ತಿಲು ಕುರಿತಾಗಿ ಸ್ವಾರಸ್ಯಕರ ಉಲ್ಲೇಖವೆಂದರೆ "ಪೆದ್ದಮುಂಡೆ ಗಂಡ ಅಡ್ಡ ಬಿದ್ದವನೆ ತುಳಕೊಂಡೆ ತಿರುಗಾಡಬೇಕು" ಎಂಬ ಒಗಟನ್ನು ನೋಡಬಹುದು. ಜನಪದರ ಗಾದೆಗೆ ಸಂಬಂಧಿಸಿದಂತೆ ಹೇಳಬಹುದಾದರೆ

೬. 'ದೊಡ್ಡವರು ಬಂದರೆ ಒದರಿ ಹಾಸ್ತಾರೆ, ಬಡವರು ಬಂದರೆ ಬಾಗಿಲಿಗೆ ಹಾಸ್ತಾರೆ' ಎನ್ನುವಲ್ಲಿ ಹೊಸ್ತಿಲ ಒಳಗೆ ಉಳ್ಳವರು ಹೊಸ್ತಿಲ ಹೊರಗೆ ಬಡವರು ಎಂಬ ಮನುಷ್ಯ ನಿರ್ಮಿತ ಭೇದವನ್ನು ಕಾಣಬಹುದಾಗಿದೆ.

೭. ಬಾಗಿಲಿಗೂ ಬಾಯಿಗೂ ಸಂಬಂಧವಿದೆ. 'ಊರ ಬಾಗಿಲ ಮುಚ್ಚಬಹುದು, ಊರವರ ಬಾಯಿ ಮುಚ್ಚಕಾಗುತ್ತೇ?' ಎಂಬಲ್ಲಿ ಊರ ಬಾಗಿಲಿಗಿಂತ ದೂರುವವರ ಬಾಯಿ ಜೋರು ಎಂಬುದನ್ನು ಹೇಳಲಾಗಿದೆ.

೮. 'ಬಾಗಿಲು ಸಂದಿಯಲ್ಲಿ ಚಿಕ್ಕಮ್ಮ ಕುಳಿತು ಮುಟ್ಟಿದವರಿಗೆಲ್ಲಾ ಬೆಂಕಿ ಕೊಡುತ್ತಾಳೆ' ಎಂಬುದು ಚೇಳನ್ನು ಅದು ಕುಟುಕುವ ತೀಕ್ಷ್ಣತೆಯನ್ನು ಸೂಚಿಸುತ್ತದೆ.

ಒಗಟುಗಳಲ್ಲಿ ಮನೆ ಬಾಗಿಲು ಬಂದಿರುವ ಹಾಗೆ ಕೋಟೆಯ ಬಾಗಿಲು ಪ್ರಸ್ತಾಪವು ಬಂದಿದೆ.

ಕೋಟಿ ಜನರು ಕಟ್ಟಿದ ಕೋಟೆ
ಆರೆಂಟು ಬಾಗಿಲು ತೆರೆದ ಕೋಟೆ
ಸುರಂಗ ಮಾರ್ಗಗಳುಳ್ಳ ಕೋಟೆ
ರಾಜರಾಣಿಯರಾಳುವ ಕೋಣೆ
ನೋಡಿದ ಮಂದಿ ಬೆದರುವ ಕೋಟೆ (ಹುತ್ತ)

ಇಲ್ಲಿ ಬೃಹತ್ತಾದ ಕೋಟೆಗೆ ಸುರಂಗ ಮಾರ್ಗಗಳು ಅರಮನೆಯ ಭಾಗಗಳು ಇರುವುದನ್ನು ಹೇಳುತ್ತಾ ಆರೆಂಟು ಬಾಗಿಲು ತೆರೆದ ಕೋಟೆ ಎನ್ನಲಾಗಿದೆ. ಇದು ಆ ಅರಮನೆಗೆ ಇರುವ ಪ್ರವೇಶದ್ವಾರವನ್ನು ಒಳಗೊಂಡಂತೆ ಕೋಟೆಯ ಬೇರೆ ಬೇರೆ ದಿಕ್ಕುಗಳ ಬಾಗಿಲುಗಳು ಆಗಿರುವಂತಿದೆ.

ಇಂತದೆ ಇನ್ನೊಂದು ಒಗಟಿನಲ್ಲಿ ಕೆರೆಬಾಗಿಲು ಪ್ರಸ್ತಾಪ ಬಂದಿದೆ. 'ಕೆರೆ ಬಾಗಿಲಲ್ಲಿ ತಲೆ ಇಟ್ಟು ದಾಸರ ಹಾವು ಮಲಗಿದೆ ಮೈ ಕೊರೆಯುತ್ತೆ ತಲೆ ಸುಡುತ್ತೆ'(ಹಣತೆ) ಇಲ್ಲಿ ಹಣತೆಯನ್ನು ಸೂಚಿಸುವ ಈ ಒಗಟಿನಲ್ಲಿ ಕೆರೆ ಬಾಗಿಲು ಎಂಬ ಮಾತನಿಂದ ನೀರು ತುಂಬಲು ಇಲ್ಲವೆ ಬಟ್ಟೆ ತೊಳೆಯಲು ಜನ ಕೆರೆಗೆ ಇಳಿಯುತ್ತಿದ್ದ ಮುಖ್ಯದ್ವಾರವಿದ್ದಂತೆ ಕಾಣುತ್ತದೆ. ಇಲ್ಲಿ ಕದಗಳಿರದೆ ಆಗುಸೆಗೆ ಇರುವ ಕಮಾನಿನ ಬಾಗಿಲು ಇದ್ದಿರಬಹುದೆಂದು ಊಹಿಸಬಹುದಾಗಿದೆ.

ಹೀಗೆ ಜನಪದ ಸಾಹಿತ್ಯದಲ್ಲಿ ಹೊಸ್ತಿಲು ಇಲ್ಲವೆ ಬಾಗಿಲು ಪ್ರತಿಯೊಂದು ಸಂದರ್ಭದಲ್ಲಿ ಅದು ಸಂತೋಷ ಸಂಭ್ರಮದಕ್ಷಣಗಳಾಗಲಿ, ದುಃಖದ ಸನ್ನಿವೇಶವಿರಲಿ ಜನರೊಂದಿಗೆ ಅವರ ಭಾವನೆಯೊಂದಿಗೆ ನೇರವಾಗಿ ಸಂವಾದಕ್ಕಿಳಿಯುತ್ತದೆ. ಇವರ ಪ್ರತಿಯೊಂದು ಹಾಡಿನಲ್ಲಿ ಆಚರಣೆಯಲ್ಲಿ ಹೊಸ್ತಿಲನ್ನು ಜೀವಂತವಾಗಿರಿಸಿಕೊಂಡ ಬಂದಪರಿ ಅಮೋಘವಾದುದು ಅನನ್ಯವಾದದು.

ಒಟ್ಟು ಲಿಖಿತ ಮತ್ತು ಮೌಖಿಕ ಸಾಹಿತ್ಯ ಕೃತಿಗಳಲ್ಲಿ ಹೊಸ್ತಿಲು ಒಂದು ಜೀವಂತ ಸಂವೇದನೆಯಾಗಿ ವಿಶ್ವಾಸತ್ಮಕ ಪರಿಕಲ್ಪನೆಯಾಗಿ ಬಳಕೆಯಾಗಿದ್ದು ಸ್ಪಷ್ಟವಾಗುತ್ತದೆ. ಧಾರ್ಮಿಕವಾಗಿ ಆಧ್ಯಾತ್ಮಿಕವಾಗಿ, ಸಾಹಿತ್ಯಕವಾಗಿ, ಕೌಟುಂಬಿಕವಾಗಿ, ಸಾಮಾಜಿಕವಾಗಿ ವ್ಯಕ್ತಿಯ ಪಾರತಂತ್ರ್ಯ ಮತ್ತು ಸ್ವಾತಂತ್ರ್ಯದ ಸಂಕಥನವಾಗಿ ಬಳಕೆಯಾದದ್ದು ಕಂಡುಬರುತ್ತದೆ. ದ್ವಾದ-ನವದ್ವಾದ ಎನ್ನುವ ಪರಿಕಲ್ಪನೆಗಳ ಮೂಲಕ ವ್ಯಕ್ತಿಯ ಆತ್ಮಶುದ್ಧಿ ಮತ್ತು ಉನ್ನತೀಕರಣದ ಪ್ರೇರಣೆಯಾಗಿ ಬಳಕೆಯಾಗಿದ್ದೂ ಒಟ್ಟು ಸಾಹಿತ್ಯಕ ಸಂದರ್ಭದಲ್ಲಿ ಗ್ರಹೀತವಾಗುತ್ತದೆ.

ಅಡಿಟಿಪ್ಪಣಿಗಳು

೧. ಬಸವರಾಧ್ಯ ಎನ್.(ಸಂ), **ಹಳಗನ್ನಡ ನಿಘಂಟು**, ೧೯೭೬;೧೫೦

೨. ಅದೇ, ಪು.೨೨೯

೩. ಬಸವರಾಧ್ಯ ಎನ್.(ಸಂ), **ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು**, ೧೯೭೦;೭೮

೪. ಅದೇ, ಪು.೭೮

೫. ಅದೇ, ಪು.೭೮

೬. ಅದೇ, ಪು.೭೮

೭. ಆದಿಪುರಾಣ, ಸಂದಿ ೧, ಆಶ್ವಾಸನೆ ೬೬, ೧೯೯೦, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೮. ಕೀರ್ತಿನಾಥ ಕುರ್ತುಕೋಟಿ, ಕನ್ನಡ ಸಾಹಿತ್ಯ ಸಂಗಾತಿ, ನಾಗಚಂದ್ರ ಮಲ್ಲಿನಾಥ ಪುರಾಣ, ೧೯೯೫; ೫೯

೯. ರತ್ನಾಕರವರ್ಣಿ, ಭರತೇಶ ವೈಭವ, ಡಾ.ಕ.ವಿ.ಪುಟ್ಟಪ್ಪ(ಪ್ರ.ಸಂ.), ಎಂ.ಡಿಲಿಟ್ ಟಿ.ಎಸ್.ಶಾಮರಾವ್ (ಸಂ) ಎಂ.ಎ., ೧೯೯೫;೩೮೩-೧೫

೧೦. ಲಕ್ಷ್ಮೀಶ ವಿರಚಿತ ಜೈಮಿನಿ ಭಾರತ, ಪು.೫೪

೧೧. ಸಂಕೀರ್ಣ ವಚನ ಸಂಪುಟ ೧, ಪದ್ಯ ೩೫೩, ಪು.೧೧೮

೧೨. ನಾರಾಯಣ ಪಿ.ವಿ., **ಸಂಕೀರ್ಣ ವಚನ ಸಂಪುಟ ೧**, ಪು.೧೫೪

೧೩. ಅದೇ, ಪು.೧೮೮

೧೪. ಅದೇ, ಪು.೨೫೮

೧೫. ಬಸವಣ್ಣನವರ ವಚನ

೧೬. ಬಸವಣ್ಣನವರ ವಚನ

೧೭. ನಾರಾಯಣ ಪಿ.ವಿ., **ಸಂಕೀರ್ಣ ವಚನ ಸಂಪುಟ ೧**, ಪು.೩೮೫

೧೮. ಶ್ರೀನಿವಾಸ ಹಾವನೂರು(ಸಂ), **ಪುರಂದರದಾಸರ ಜನಪ್ರಿಯ ಕೀರ್ತನೆಗಳು**, ಹೊ.ರಾ.ಸತ್ಯನಾರಾಯಣ, ೨೦೦೨;೭೯

೧೯. ಅದೇ, ಪು.೧೪೬

೨೦. ಅದೇ, ಪು.೧೯೭

೨೧. ಅದೇ, ಪು.೨೧೪

೨೨. ಅದೇ, ಪು.೭೦

೨೩. ಹಿರೇಮಠ ಆರ್.ಸಿ.(ಸಂ), **ಕನಕದಾಸರ ಮೋಹನ ತರಂಗಿಣಿ**, ೧೯೭೩;೩೧-೪೮

೨೪. ಅದೇ, ಪು.೩೫೫-೩೨

೨೫. ಅದೇ, ಪು.೪೪೯-೫

೨೬. ಅದೇ, ಪು.೫೬೩-೨೪

೨೭. ಬಸವರಾಜ ಸಬರದ(ಸಂ), **ಹೈದರಾಬಾದ್ ಕರ್ನಾಟಕ ತತ್ವಪದಗಳು**, ೨೦೦೦;೭೯

೨೮. ಅದೇ, ಪು.೯೯

೨೯. ಹೆಗಡೆ ಆರ್.ಆರ್., **ಶಿಶುನಾಳ ಶರೀಫ ಮತ್ತು ಸಂತ ಕಬೀರ ಒಂದು ತೌಲನಿಕ ಅಧ್ಯಯನ**, ೧೯೯೫;೧೩೯

೩೦. **ಕರ್ನಾಟಕ ಕಬೀರ ಶರೀಫ್ ಸಾಹೇಬರ ಚರಿತ್ರೆ ಹಾಗೂ ತತ್ವ ಪದಗಳು** (ಪಿ.ಸಿ.ಶಾಬಾದಿಮಠ), ಪು.೭೨

೩೧. ಅದೇ, ಪು.೧೪೩

೩೨. ಬಸವರಾಜ ಸಬರದ(ಸಂ), ಪೂರ್ವೋಕ್ತ, ಪು.೧೨೪

೩೩. ನಾಗರಾಜ ಡಿ.ಆರ್., ಶಕ್ತಿ ಶಾರದೆಯ ಮೇಳ, ಆಧುನಿಕ ಕನ್ನಡ ಕಾವ್ಯದ ಅಧ್ಯಯನ, ಪು.೬೬

೩೪. ಕರ್ಕಿ ಡಿ.ಎಸ್., ಡಿ.ಎಸ್.ಕರ್ಕಿ ಅವರ ಸಮಗ್ರ ಕಾವ್ಯ, ಪು.

೩೫. ಅದೇ, ಪು.

೩೬. ಕರ್ಕಿ ಡಿ.ಎಸ್. ಸಮಗ್ರ ಕಾವ್ಯ, ಹಚ್ಚೇವು ಕನ್ನಡದ ದೀಪ, ೨೦೦೧;೩೩

೩೭. ಅದೇ, ಪು.೩೪

೩೮. ಅದೇ, ಪು.೫೫

೩೯. ಅದೇ, ಪು.೫೭

೪೦. ಅದೇ, ಪು.೫೯

೪೧. ಶಾಂತಾದೇವಿ ಮಾಳವಾಡ, ದಾನದಾಸೋಹಿ ದಾನಮ್ಮ, ೧೯೯೨;೭೦

೪೨. ವಾಮನಬೇಂದ್ರೆ(ಸಂ), ಅಂಬಿಕಾತನಯದತ್ತ ಸಮಗ್ರ ಕಾವ್ಯ ಸಂಪುಟ ೧, ೧೯೯೨;೮೫

೪೩. ನಾಗರಾಜ್ ಡಿ.ಆರ್., ಪೂರ್ವೋಕ್ತ, ಪು.೧೩೨

೪೪. ಅದೇ, ಪು.೧೨೭

೪೫. ಅದೇ, ಪು.೨೩೧

೪೬. ಗೋಪಾಲಕೃಷ್ಣ ಅಡಿಗ ಎಂ., ಅಡಿಗರ ಸಮಗ್ರ ಸಾಹಿತ್ಯ ೧, ೧೯೮೭;೭೭

೪೭. ಅದೇ, ಪು.೧೨೨

೪೮. ಅದೇ, ಪು.೨೧೦

೪೯. ಅದೇ, ಪು.೫೪೧

೫೦. ಮಹದೇವ ಸ.ಚ.(ಸಂ), ನಾನೆದ್ದು ನೇನೆವೇನು, ಜಾನಪದ ಗೀತೆಗಳ ಸಂಗ್ರಹ, ೧೯೭೧;೪೩

೫೧. ಅದೇ, ಪು.೪೩

೫೨. ಡಾ.ಶಿವಾನಂದ ಗುಬ್ಬಣ್ಣವರ, ಸೋ ಅನ್ನs ಸೋಬಾನ ಅನ್ನss, ಸೋಬಾನ ಪದಗಳ ಸಂಗ್ರಹ, ೧೯೯೪;೧೮

೫೩. ಮಹದೇವ ಸ.ಚ.(ಸಂ), ಪೂರ್ವೋಕ್ತ, ಪು.೪೪

೫೪. ಪೀಟರ್ ಜೆ.ಕ್ಲಾಸ್, ತುಳುವ ದರ್ಶನ, ೧೯೮೭;೨೬೪

೫೫. ಶಿವಶರಣರ ರತ್ನಕೋಶ

೫೬. ಶಿವಾನಂದ ಗುಬ್ಬಣ್ಣವರ(ಸಂ), ಪೂರ್ವೋಕ್ತ, ಪು.೨೫

೫೭. ಶಿರಹಟ್ಟ ಸ.ಮ.(ಸಂ), ನಾಡಜೇವದ ನಾಡಿ ಮುದಿದಾವ, ಜಾನಪದ ಗೀತ ಸಂಕಲನ, ೧೯೮೩;೩೧

೫೮. ಮಹದೇವ ಸ.ಚ.(ಸಂ), ಪೂರ್ವೋಕ್ತ, ಪು.೪೭

೫೯. ಶಿವಾನಂದ ಗುಬ್ಬಣ್ಣವರ(ಸಂ), ಪೂರ್ವೋಕ್ತ, ಪು.೪೩

೬೦. ಅದೇ, ಪು.೪೩

೬೧. ಮಹದೇವ ಸ.ಚ.(ಸಂ), ಪೂರ್ವೋಕ್ತ, ಪು.೨೬

೬೨. ೫೭. ಶಿರಹಟ್ಟಿ ಸ.ಮ.(ಸಂ), ಪೂರ್ವೋಕ್ತ, ಪು.೨೨

೬೩. ಭಟ್ಟ ಜಿ.ಎಸ್.(ಸಂ), ಜಾನಪದ, ೧೯೯೧;೬೪

ಅಧ್ಯಾಯ ೩

ಸಮುದಾಯ ಪ್ರಧಾನ ನೆಲೆಗಳು

೩.೧. ಉಪಸಂಸ್ಕೃತಿ

೩.೨. ಪ್ರಧಾನ ಸಂಸ್ಕೃತಿ

೩

ಸಮುದಾಯ ಪ್ರಧಾನ ನೆಲೆಗಳು

೩.೧. ಉಪಸಂಸ್ಕೃತಿ

ಸಂಸ್ಕೃತಿಯ ಪರಿಕಲ್ಪನೆ ಮನುಷ್ಯನಿದ್ದಡೆ ಇದ್ದೆ ಇರುತ್ತದೆ. ಈತನೆ ಸಂಸ್ಕೃತಿಯ ಮೂಲ. ಮಾನವ ಬದುಕಿನ ರೀತಿ ನೀತಿಗಳ ಮೇಲೆ ಬೆಳಕು ಚೆಲ್ಲುವುದೇ ಸಂಸ್ಕೃತಿ. ಮಾನವನ ಈ ಸಂಸ್ಕೃತಿ ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಯಾಗುವಂತಹದ್ದು. ಇದನ್ನೆ ಮಾನವ ಶಾಸ್ತ್ರಜ್ಞೆ ರೂತ್ ಬೆನೆಡಿಕ್ಟ್ ಹೇಳುವಂತೆ 'ಯಾವೊಬ್ಬ ವ್ಯಕ್ತಿಯೂ ತಾನು ಭಾಗವಹಿಸುವ ಸಂಸ್ಕೃತಿಗೆ ಹೊರತಾಗಿ ತನ್ನ ನಿಗೂಢ ಶಕ್ತಿಗಳ ಹೊಸ್ತಿಲನ್ನು ಸಹ ಮುಟ್ಟಲಾರ' ಎಂದು. ವ್ಯಕ್ತಿ ಮತ್ತು ಸಂಸ್ಕೃತಿಗಳ ಪರಸ್ಪರ ಪುಷ್ಟಿಗೊಳ್ಳುವಿಕೆಯನ್ನು ಇವರು ಚರ್ಚಿಸಿದ್ದಾರೆ. ಅಂದರೆ ವ್ಯಕ್ತಿ ತನ್ನ ಹಿಂದಿನ ತಲೆಮಾರುಗಳಿಂದ ನಡೆದುಕೊಂಡು ಬಂದ ಆಚಾರ-ಸಂಪ್ರದಾಯ ಮುಂದುವರಿಸಿಕೊಂಡು ಹೋಗಬಯಸುತ್ತಾನೆ ವಿನಃ ತನಗರಿವಿಲ್ಲದ ನಿಗೂಢ ಶಕ್ತಿಗಳಿಗೆ ಮೊರೆ ಹೋಗುವುದಿಲ್ಲ. ಆ ಸಂಸ್ಕೃತಿಯ ಸಂಪೂರ್ಣ ಅರಿವು ಆತನಿಗಿರಬೇಕೆಂದು ಕಡ್ಡಾಯವೇನು ಇಲ್ಲ. ತಿಳಿದುಕೊಳ್ಳಬೇಕೆಂಬ ಕೂತುಹಲಿಗಳು ಆ ಕುರಿತು ಹಿರಿಯರನ್ನು ಕೆದಕಿದಾಗ ಬರುವ ಉತ್ತರ ನಿರಾಶಾದಾಯಕವಾಗಿರುತ್ತವೆ. ಆದರೂ ಸಂಸ್ಕೃತಿಯ ಮುನ್ನಡೆಯಾಗುತ್ತಿರುತ್ತದೆ. ಒಟ್ಟಾರೆ ಹೇಳುವುದಾದರೆ

'ವ್ಯಕ್ತಿಯೊಬ್ಬನ ಅಭಿವ್ಯಕ್ತಿಯೇ ಸಂಸ್ಕೃತಿ' ಈ ಅಭಿವ್ಯಕ್ತಿ ಜನಾಂಗಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಭಿನ್ನತೆಯನ್ನು ಹೊಂದಿರುತ್ತವೆ. ಈ ನೆಲೆಯಲ್ಲಿಯೇ ಸಂಸ್ಕೃತಿಯಲ್ಲಿ 'ತರತಮ' ಭಾವನೆ ಬೆಳೆಯುವುದು. ಉಪಸಂಸ್ಕೃತಿ, ಪ್ರಧಾನಸಂಸ್ಕೃತಿಗಳೆಂದು. ಯಾವುದೇ ಸಂಸ್ಕೃತಿಯಲ್ಲಿ ಮೇಲು ಅಥವಾ ಕೀಳು ಇರುವುದಿಲ್ಲ. ಆದರೆ ಪ್ರತಿಯೊಂದು ಸಂಸ್ಕೃತಿಯಲ್ಲಿ ಮೇಲೆ ಹೇಳಿದಂತೆ ಭಿನ್ನತೆ ಮಾತ್ರ ಖಂಡಿತವಾಗಿಯೂ ಇರುತ್ತದೆ. ಈ ವೈರುಧ್ಯದಲ್ಲಿಯೇ ಒಂದು ಸಂಸ್ಕೃತಿ ಎನ್ನುವ ಪರಿಕಲ್ಪನೆ ಮೂಡುವುದು. 'ಉಪಸಂಸ್ಕೃತಿಯ' ಪರಿಕಲ್ಪನೆ ಪ್ರಸ್ತುತವಾಗುವುದು ಈ ನೆಲೆಯಲ್ಲಿಯೆ ಎಂಬುದು ಡಾ.ಅಂಬಳಿಕೆ ಹಿರಿಯಣ್ಣ ಅವರ ಅಭಿಮುಖ್ಯ.[೧]

ಮೇಲ್ನೋಟಕ್ಕೆ ಭಾರತೀಯ ಸಂಸ್ಕೃತಿ ಎಂದರೂ ಒಳಾರ್ಥದಲ್ಲಿ ಹಲವು ಸಂಸ್ಕೃತಿಗಳು ಒಟ್ಟಾಗಿ ಸೇರಿ ತಮ್ಮದೇ ಆದ ಜೀವನ ಕ್ರಮ, ಆಚರಣೆ ವಿಧಿ ನಡೆಸಿಕೊಂಡು ಹೋಗುತ್ತಿವೆ. ಉಪಸಂಸ್ಕೃತಿ ಹೇಗೆ ಪ್ರಧಾನ ಸಂಸ್ಕೃತಿಯಿಂದ ಭಿನ್ನವಾಗಿದೆ? ಏಕೆ ಭಿನ್ನವಾಗಿದೆ? ಎನ್ನುವ ಪ್ರಶ್ನೆಗಳು ಕುತೂಹಲಕರ ವಾದಂಥವು. ಅಲೆಮಾರಿಯಾಗಿದ್ದ ಮಾನವ ಬೇಟೆಯಾಡಿ ಜೀವನ ಸಾಗಿಸುತ್ತಿದ್ದ. ಇದರಿಂದ ಬೇಸತ್ತನೆಂಬಂತೆ ಒಂದೆಡೆ ನೆಲೆಯೂರಲು ಕಲಿತ. ಮುಂದುವರೆದು ಕೃಷಿಯನ್ನು ರೂಢಿಸಿಕೊಂಡ. ಕೃಷಿಯ ಬದುಕಿನ ಮುಂದಿನ ಹಂತವೇ ಪಶುಸಂಗೋಪನೆ. ಬೆಂಕಿಯ ಶೋಧ ಮಾನವ ಸಂಸ್ಕೃತಿಯ ವಿಕಾಸಕ್ಕೆ ಕಾರಣ. ಬೆಂಕಿಯಿಂದಲೇ ಹಸಿ ಮಾಂಸದ ಬದಲು ಬೇಯಿಸಿ ತಿನ್ನುವ ಪ್ರವೃತ್ತಿ ಬೆಳೆಯಿತು. ಮನುಷ್ಯನ ಹಸಿವೆ ಮತ್ತು ಬದುಕಿಗೆ ಬೇರೆ ರೂಪ ದೊರೆಯಿತು. ಇದರಿಂದಲೇ ಅಡಿಗೆ ಮನೆ, ಮಲಗುವ ಮನೆ ಇತ್ಯಾದಿಗಳ ವಿಂಗಡಣೆ ಸಾಧ್ಯವಾಯಿತು. ಹೀಗೆ ಜೀವನ ನಿರ್ವಹಣೆಯ ರೀತಿಯಲ್ಲಿ ಬದಲಾವಣೆಗಳಾದವು. ಕೃಷಿ, ಪಶುಸಂಗೋಪನೆ ವೃತ್ತಿಗೆ ಮೂಲವಾದವು. ಒಕ್ಕಲುತನ, ಹೈನುಗಾರಿಕೆ, ಕುರಿ ಸಾಕಣೆ ಹೀಗೆ ಪ್ರತಿ ಕುಟುಂಬವು ಒಂದು ವೃತ್ತಿಯನ್ನು ಅವಲಂಬಿಸತೊಡಗಿತು. ಅದು ಚಾಪೆ ಹೆಣೆಯುವುದು, ಮೀನುಗಾರಿಕೆ, ಜೇನು ಶೇಖರಣೆ ಹೀಗೆ ಪ್ರತಿ ಕೆಲಸದಲ್ಲೂ ಹೆಣ್ಣಿನ ಪಾತ್ರ ಎದ್ದುಕಾಣುವಂತಹದ್ದು. ಸ್ತ್ರೀ ತಯಾರಿಸಿದ್ದನ್ನು ಶೇಖರಿಸಿಟ್ಟಿದ್ದನ್ನು ಪೇಟೆಗೆ ತೆಗೆದುಕೊಂಡು ಹೋಗಿ ಮಾರಿ ಬರುವುದು ಪುರುಷನ ಕಾರ್ಯವಾಗಿತ್ತು. ಆದ್ದರಿಂದ ಇವರಿಗೆ ಹೊರಗಿನ ದುಡಿಮೆ ಒಳಗಿನ ದುಡಿಮೆ ಎಂಬ ವ್ಯತ್ಯಾಸವಿರಲಿಲ್ಲ. ಹಿಂದೆ ಉಪಸಂಸ್ಕೃತಿಯಲ್ಲಿಯೂ ಕೂಡ ಗಂಡು ಬೇಟೆಗಾಗಿ ಕಾಡಿಗೆ ಹೋದಾಗ ಮಕ್ಕಳು ಮುದುಕರ ಲಾಲನೆ ಪಾಲನೆಗೋಸ್ಕರ ಹೆಣ್ಣು ಮನೆಯಲ್ಲಿಯೇ ಉಳಿದುಕೊಳ್ಳಬೇಕಾಗುತ್ತಿತ್ತು. ಆಗ ಮನೆಯವರ ಸಂಪೂರ್ಣ ಜವಾಬ್ದಾರಿ ಹೆಣ್ಣಿನದೇ ಆಗಿರುತ್ತಿತ್ತು. ಬೇಟೆ ಶ್ರೇಷ್ಠ, ಮನೆಗೆಲಸ ಕನಿಷ್ಠ ಎಂದಿನಿಸದೆ ಬದುಕಲು ಬೇಕಾದ ಎಲ್ಲ ಕೆಲಸಗಳೂ ಮುಖ್ಯವಾದವುಗಳೇ ಆದವು. ಕೆಲವು ಗಂಡಸಿನ ಪಾಲಿಗೆ ಕೆಲವು ಹೆಣ್ಣಿನ ಪಾಲಿಗೆ ಬಂದವು.

ಬುಡಕಟ್ಟು ಅಥವಾ ಇತರೆ ದುಡಿವ ಜನಾಂಗಗಳಲ್ಲಿ ದೈನಂದಿನ ಬದುಕಿನ ನಿರ್ವಹಣೆಯೇ ಪ್ರಮುಖವಾಗಿರುತ್ತದೆ. ಅಂತಲ್ಲಿ ನೀತಿ ಸೃಷ್ಟಿಯಾಗಲೀ, ಬದುಕನ್ನು ಜಡಗೊಳಿಸುವ ಚೌಕಟ್ಟನ್ನಾಗಲಿ ನಿರ್ಮಿಸುವುದಕ್ಕೆ ಸಮಯ ವಿನಿಯೋಗಿಸುವುದಿಲ್ಲ. ಹೊಟ್ಟೆ-ಹಟ್ಟಿ-ಬಟ್ಟೆ ಈ ಮೂರು ಮಾತ್ರ ಮೂಲಭೂತ ಅವಶ್ಯಕತೆಗಳಾಗಿರುತ್ತವೆ. ಇಂಥಲ್ಲಿ ಸ್ವತಂತ್ರ ಬದುಕು, ಮುಕ್ತ ವಾತಾವರಣ ಸ್ವೇಚ್ಛೆಯಿಂದ ಕೂಡಿದ ಜೀವನ ಶೈಲಿ, ಸಂದರ್ಭಕ್ಕೆ ತಕ್ಕಂತೆ ಮೌಲ್ಯಗಳ ಬದಲಾವಣೆಯ ಸಡಿಲಿಕೆ ಎದ್ದು ಕಾಣುತ್ತದೆ. ಸಂಸ್ಕೃತಿಯಲ್ಲಿನ ಸ್ಥಿತ್ಯಂತರಗಳು ಕಾಲಾಂತರದಲ್ಲಿ ಊರು, ಪಾಳೆ-ಪಟ್ಟುಗಳ ಹುಟ್ಟಿಗೂ ಕಾರಣವಾದವು. ಅರಸ-ಮಂತ್ರಿ-ಸಾಮಾನ್ಯ ಪ್ರಜೆ ಹೀಗೆ ವಿವಿಧ ವರ್ಗಗಳು ಸೃಷ್ಟಿಗೊಂಡವು. ದುಡಿಯುವವ ಕನಿಷ್ಠನಾದ, ದುಡಿಸಿಕೊಳ್ಳುವವ ಶ್ರೇಷ್ಠನಾದ. ದುಡಿಯುವ ವರ್ಗವಾದ ಬುಡಕಟ್ಟು ಉಪಜೀವನಕ್ಕೆ ಯಾವುದಾದರೊಂದು ವೃತ್ತಿ ನಿರ್ವಹಿಸಲೇಬೇಕಾಗುತ್ತಿತ್ತು. ಈ ದುಡಿಮೆಯಲ್ಲಿ ಕೇವಲ ಮನೆಯ ಪ್ರಮುಖ ವ್ಯಕ್ತಿಯಲ್ಲದೆ ಇಡೀ ಕುಟುಂಬವೇ ಭಾಗವಹಿಸುತ್ತಿತ್ತು. ಸ್ತ್ರೀಯು ಕೂಡ ದುಡಿಮೆಯಲ್ಲಿ ಪ್ರಧಾನ ಪಾತ್ರವಹಿಸುತ್ತಿದ್ದಳು. ಪುರುಷನಿಗೆ ಸಮಾನವಾದ ಸ್ಥಾನ ಪಡೆದ ಮಹಿಳೆ ಮನೆಯ ಯೋಗಕ್ಷೇಮದ ಜೊತೆಗೆ ಪ್ರಧಾನ ಭಾಗಿದಾರಳಾಗಿ ಕಾಣಿಸಿಕೊಳ್ಳುತ್ತಿದ್ದಳು. ತನ್ನ ಹೊಟ್ಟೆ ಕಟ್ಟಿಯಾದರೂ ಮನೆಯವರ ಹೊಟ್ಟೆ ತುಂಬಿಸುತ್ತಿದ್ದಳು. ಪುರುಷ ತನ್ನ ದುಡಿತದ ಬಹುಪಾಲು ಸಂಪಾದನೆ ಕುಟುಂಬದ ನಿರ್ವಹಣೆಗಿಂತ ಕುಡಿತದಲ್ಲೋ ಮತ್ಯಾವುದೋ ಚಟದಲ್ಲಿ ವಿನಿಯೋಗಿಸುತ್ತಿದ್ದನಾದ್ದರಿಂದ ಹೆಂಡತಿಯ ಮಾತು ಮೀರುವಂತಿರಲಿಲ್ಲ.

ಈ ಒಂದು ವ್ಯವಸ್ಥೆಯನ್ನು ಗಮನಿಸಿದರೆ ಒಂದೆ ಬುಡಕಟ್ಟುಗಳು ಮಾತೃಮೂಲೀಯ ವ್ಯವಸ್ಥೆಯನ್ನು ಹೊಂದಿದ್ದವು ಎಂದೆನಿಸುತ್ತದೆ. ಕುಟುಂಬವೊಂದರಲ್ಲಿ ಮಹಿಳೆಗೆ ಕೆಳಮಟ್ಟದ ಸ್ಥಾನವಿರದೆ ಸಮಸ್ಥಾನವಿತ್ತು. ಮನೆಯ ವಹಿವಾಟುಗಳಾದ ಕೊಡು ಕೊಳ್ಳುವಿಕೆಗಳು ಆಕೆಯಿಂದಲೇ ನಡೆಯುತ್ತಿತ್ತು. ಉತ್ಪಾದನೆಯಲ್ಲಿ ಪ್ರಧಾನ ಹಂಚಿಕೆದಾರಳಾಗಿದ್ದಳು. ಆಹಾರದ ಹಂಚಿಕೆಯಿಂದ ಹಿಡಿದು ಆಸ್ತಿಯ ಹಂಚಿಕೆಯವರೆಗೂ. ಇದಕ್ಕೆ ಪೂರಕವೆಂಬಂತೆ ಕರಗ ಆಚರಣೆಯನ್ನು ಗಮನಿಸಬಹುದು. ಈ ಆಚರಣೆಯ ಪ್ರಮುಖ ಆಕರ್ಷಣೆ ಪುರುಷ ಸ್ತ್ರೀ ವೇಶ ಧರಿಸಿ ಸ್ತ್ರೀಯಂತೆ ವರ್ತಿಸಬೇಕು.[೨]

ದುಡಿವ ಸಂಸ್ಕೃತಿಯಲ್ಲಿ...ಮೆದುಳಿಗಿಂತ ಶ್ರಮಪ್ರಧಾನವಾದ ದೇಹಕ್ಕೆ ಹೆಚ್ಚು ಆದ್ಯತೆ. ಆದರೆ ಪ್ರಧಾನ ಸಂಸ್ಕೃತಿಯಲ್ಲಿ ದೇಹಕ್ಕೆ ಶ್ರಮ ಕಡಿಮೆ ಕೊಟ್ಟು ಮೆದುಳಿಗೆ ಹೆಚ್ಚು ಶ್ರಮಕೊಡುವುದರಿಂದಲೇ ಶ್ರೇಷ್ಠ ಕನಿಷ್ಠ ಎನ್ನುವ ಅಹಂಭಾವನೆ ಕಾಣುತ್ತೇವೆ. ಈ ಅಹಂಕಾರದ ಫಲವೇ ಸ್ತ್ರೀಯ ಶೂದ್ರಿಕರಣ. 'ನಿನಗೆ ಬುದ್ದಿ ಇಲ್ಲ', 'ಹೆಣ್ಣಿನ ಬುದ್ಧಿ ಮೊಣಕಾಲ ಕೆಳಗೆ', 'ಹೇಳಿದಷ್ಟು ಕೇಳಿಕೊಂಡು ಬಿದ್ದಿರು' ಎನ್ನುವ ಕಟಕಿ ಮಾತುಗಳು ಕೇಳಿಬರುತ್ತವೆ. ವಿದ್ಯೆಯಿಂದ ಜ್ಞಾನ, ಜ್ಞಾನದಿಂದ ಯಜಮಾನಿಕೆ. ಈ ಯಜಮಾನಿಕೆ ನೆಲೆಯಿಂದಲೆ ಹಿಂದುಳಿದ ಮುಂದುವರಿದ, ಉಚ್ಚ-ನೀಚ, ಜಾಣ-ದಡ್ಡ ಎಂಬ ಏಣಿ-

ಶ್ರೇಣಿ ಬೆಳೆಯಿತು. ಹೆಣ್ಣಿಗೆ ಓದಿನ ಹಕ್ಕಿಲ್ಲ, ಅದೇನಿದ್ದರೂ ಪುರುಷನ ಅದರಲ್ಲೂ ಮೇಲ್ವರ್ಗದವರ ಸ್ವತ್ತು ಎಂದು ಆಕೆಯನ್ನು ಶಿಕ್ಷಣದಿಂದ ದೂರವಿರಿಸಿದರು. ಆಕೆಯ ಮೌನವೇ ಸಮ್ಮತಿ ಎಂದು ತಿಳಿದರು. ಬಾಯಿ ಇದ್ದು ಮೂಗಿಯಾದಳು. ಕಷ್ಟಗಳನ್ನು ಅನುಭವಿಸುವುದಕ್ಕೆ ಭೂಮಿಯ ಮೇಲೆ ಜನ್ಮ ಪಡೆದಿದ್ದೇನೆ ಎಂದು, ಇದು ನನ್ನ ಪೂರ್ವ ಜನ್ಮದ ಕರ್ಮದ ಫಲವೆಂದು ನುಂಗಿಕೊಂಡಳು. ಈ ಕರ್ಮಸಿದ್ಧಾಂತದ ಹುಟ್ಟು ಪ್ರಧಾನ ಸಂಸ್ಕೃತಿಯ ಜಾಣತನವೇ ಕರ್ಮದ ನೆಪವೊಡ್ಡಿ ಪಾಪ ಪುಣ್ಯಗಳು, ಸ್ವರ್ಗ ನರಕ, ಇಹ ಪರವೆಂಬ ನೀತಿ ಸಂಹಿತೆಯನ್ನು ತಂದರು. ಸ್ತ್ರೀಯಾಗಿ ಹುಟ್ಟುವುದಾಗಲೀ ಶೂದ್ರನಾಗಿ ಹುಟ್ಟುವುದಾಗಲೀ ಪೂರ್ವ ಜನ್ಮದ ಕರ್ಮದ ಫಲ. ನಮ್ಮ ಈ ಸ್ಥಿತಿಗೆ ನಮ್ಮ ಸುಕೃತ್ಯಗಳೇ ಕಾರಣವೆಂದು ನಂಬಿಸಿದರು. ಇಹ ಮತ್ತು ಪರ ಎಂಬ ನಂಬಿಕೆಗಳೇ ತಾತ್ವಿಕ ಚಿಂತನೆ ಬೆಳೆಯಲು ಕಾರಣ ವಾಯಿತು. ಭಕ್ತಿ ಮಾರ್ಗ, ಜ್ಞಾನ ಮಾರ್ಗ, ಕರ್ಮ ಮಾರ್ಗ ಸೃಷ್ಟಿಯಾಗಿ ಕರ್ಮಸಿದ್ಧಾಂತ ಪ್ರಚಾರವಾಯಿತು. ಮುಂದೆ ವರ್ಗ ಭೇದ, ವರ್ಣ ಭೇದ, ಲಿಂಗ ಭೇದಗಳು ಸೃಷ್ಟಿಯಾದವು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರವೆಂಬ ಚತುರ್ವರ್ಣಗಳು ಹುಟ್ಟಿಕೊಂಡವು. ತಲೆ ಶ್ರೇಷ್ಠವಾಗಿ ಕಾಲು ಕನಿಷ್ಠವಾಯಿತು. ದುಡಿಯುವ ವರ್ಗದಲ್ಲಿ ಶೂದ್ರ ಸೇರಿಕೊಂಡ, ಜೊತೆಗೆ ಸ್ತ್ರೀಯನ್ನು ಸೇರಿಸಲಾಯಿತು. ಹೀಗೆ ಸಮಾಜದಲ್ಲಿ ನಿಯಮಗಳು ಹುಟ್ಟಿಕೊಳ್ಳಲು ಪ್ರಾರಂಭಿಸಿದವು.

ಈ ನಿಯಮಗಳಲ್ಲಿ ಮೊದಲನೆಯದು ವ್ಯವಹಾರ ಹಂಚಿಕೆ. ಮನೆಯ ಹೊರಗಿನ ವ್ಯವಹಾರ ಪುರುಷನ ಪಾಲಿಗೆ, ಮನೆಯ ಒಳಗಿನ ವ್ಯವಹಾರ ಸ್ತ್ರೀ ಪಾಲಿಗೆ ಬಂದವು. ಇದುವೇ ಸ್ತ್ರೀಯ ಬದುಕನ್ನು ಹೊಸ್ತಿಲ ಒಳಗೆ ಭದ್ರಪಡಿಸುವ ಬುನಾದಿಯಾಗಿತ್ತು. ಮನೆ, ಮನೆಯವರ ಯೋಗಕ್ಷೇಮವೇ ಜೀವನದ ಧ್ಯೇಯ ಎನ್ನುವಂತಾಗಿ ಸ್ವಂತಿಕೆ ಕಳೆದುಕೊಳ್ಳತೊಡಗಿದಳು. ಎಲ್ಲರೂ ಉಂಡ ಮೇಲೆ ಮಿಕ್ಕಿದ್ದು ತನಗೆ, ಮಿಕ್ಕದೆ ಇದ್ದರೆ ನೀರೇ ಅವಳ ಹೊಟ್ಟೆಯ ಬೆಂಕಿ ನಿವಾರಿಸುವ ಆಹಾರವಾಯಿತು. ಪುರುಷ ಸ್ವಾರ್ಥದ ಮುಂದೆ ಸ್ತ್ರೀಯ ಬೇಕು ಬೇಡಗಳು ಅಪ್ರಧಾನವಾದವು. ಮನೆಯ ಒಳಗಿನ ಕಾರ್ಯ ಸ್ತ್ರೀ ಪಾಲಿಗೆ ಬಂದರೂ ಕೌಟುಂಬಿಕ ವ್ಯವಹಾರದಲ್ಲಿ ತಲೆಹಾಕುವಂತಿಲ್ಲ. ಕುಟುಂಬದ ಹಿರಿಯ ಸದಸ್ಯರ ಮುಂದೆ ಕುಳಿತುಕೊಳ್ಳುವಂತಿಲ್ಲ. ಗಂಡನೊಡನೆಯೂ ಎಲ್ಲರಿರುವಾಗ ಮಾತನಾಡುವಂತಿಲ್ಲ. ಒಟ್ಟಾರೆ ಅವಳ ಸ್ಥಾನ ಕುಟುಂಬವಿರಲಿ, ಸಮಾಜವಿರಲಿ ಎರಡನೆಯ ದರ್ಜೆಯದೆ.

ಇದರ ವಿರುದ್ಧ ಗುಣವೇ ಉಪಸಂಸ್ಕೃತಿಯದು. ಇಲ್ಲಿ ಸ್ತ್ರೀ ಕುಟುಂಬದ ಕೇಂದ್ರ ಬಿಂದು. ವೃತ್ತಿ ಹಂಚಿಕೆಯಾಗಲಿ, ಮೇಲು ಕೀಳಿನ ಪ್ರಶ್ನೆಯಾಗಲೀ ಇಲ್ಲ. ಪ್ರತಿಯಾಗಿ ಸ್ತ್ರೀ ಗೌರವಯುತ ಸ್ಥಾನವನ್ನು ಹೊಂದಿದ್ದಾಳೆ. ಉಪಸಂಸ್ಕೃತಿಗಳು ತಮ್ಮದೇ ಆದ ದೈವ ಮತ್ತು ಸಂಸ್ಕೃತಿಯನ್ನು ಹೊಂದಿದ್ದು ಪ್ರಧಾನ ನೆಲೆಗಳಿಗಿಂತ ವಿಭಿನ್ನ ಆಚರಣೆಗಳನ್ನು ಹೊಂದಿವೆ. ಇವರ ಹುಟ್ಟಿನೊಂದಿಗೆ ಧರ್ಮ ಮತ್ತು ಸಂಸ್ಕೃತಿಗಳು ಬೆರೆತುಕೊಂಡು ಬಂದಿವೆ. ನಿಸರ್ಗಕ್ಕೆ ತೀರ ಹತ್ತಿರವಾಗಿದ್ದ ಇವರಿಗೆ ನಿಸರ್ಗ, ನೀರು, ಕಲ್ಲು, ಗುಡ್ಡ


ಇವುಗಳೇ ದೈವ ಸ್ವರೂಪದ್ದು. ಇವೇ ಆರಾಧನೆಗೊಳ್ಳುವ ದೈವಗಳೂ ಆದವು. ಆದರೆ ಆರ್ಯರ ಆಗಮನದಿಂದ ವೈದಿಕರಿಗೆ ಇವೆಲ್ಲ ಕ್ಷುದ್ರವಾಗಿ ಕಂಡವು. ತಮ್ಮ ಸಂಸ್ಕೃತಿಯೆ ಉಚ್ಚವೆಂದು ಸಾರಿದುದಲ್ಲದೆ ತಮ್ಮ ಅನುಕರಣೆಯೇ ಮುಕ್ತಿ ಮಾರ್ಗಕ್ಕೆ ದಾರಿ ಎಂದು ಕಿರು ಸಂಸ್ಕೃತಿಗಳ ನಾಶಕ್ಕೆ ಕಾರಣವಾದರು. ಹೀಗೆ ಕಿರು ಸಂಸ್ಕೃತಿಗಳ ಮೇಲೆ ಪ್ರಧಾನ ಸಂಸ್ಕೃತಿಯೊಂದು ದಾಳಿ ನಡೆಸಿದುದರ ಫಲವಾಗಿ ಉಪಸಂಸ್ಕೃತಿಗಳ ಸುಧಾರಣೆಗೆ ಹತ್ತು ಹಲವು ಪ್ರಯತ್ನಗಳು ನಡದವು. ಇಷ್ಟಾದರೂ ಕಿರು ಸಂಸ್ಕೃತಿಗಳು ತಮ್ಮ ಆಚಾರ ವಿಚಾರ, ದೇವತಾರಾಧನೆ ಕ್ರಮ ಮೂಲ ಸಂಸ್ಕೃತಿ ಮಾತ್ರ ಕೈ ಬಿಡದೆ ಮುಂದುವರೆಸಿಕೊಂಡು ಬಂದರು. ಉಪಸಂಸ್ಕೃತಿಗಳ ಮನೆ ಮತ್ತು ಬದುಕಿನ ನೆಲೆಗಳನ್ನು ಅಧ್ಯಯನದ ದೃಷ್ಟಿಯಿಂದ ಮೂರು ವಿಭಾಗಗಳಲ್ಲಿ ವಿಂಗಡಿಸಿಕೊಂಡಿದ್ದೇನೆ. ಅವುಗಳೆಂದರೆ,

೧. ಜೀವನ ಶೈಲಿ ಮತ್ತು ವೃತ್ತಿ

೨. ಆಚರಣೆ ಮತ್ತು ಸಂಪ್ರದಾಯ


೩. ಕೌಟಂಬಿಕ ರಚನೆ ಮತ್ತು ಸ್ತ್ರೀ ಪುರುಷರ ಸಂಬಂಧ

೧. ಜೀವನ ಶೈಲಿ ಮತ್ತು ವೃತ್ತಿ : ಜೀವನದಲ್ಲಿ ಸರಳತೆಯನ್ನು ಮೈಗೂಡಿಸಿಕೊಂಡಿರುವ ಉಪಸಂಸ್ಕೃತಿಗಳು ಸಾಮಾನ್ಯವಾಗಿ ಅಲೆಮಾರಿಗಳಾಗಿದ್ದು ಜೀವನ ನಿರ್ವಹಣೆಯೆ ಪ್ರಧಾನವಾಗಿರುತ್ತವೆ. ಆರ್ಥಿಕವಾಗಿ ಹಿಂದುಳಿದ ಇವರುಗಳಲ್ಲಿ ನೂರಕ್ಕೆ ನೂರರಷ್ಟು ಬಡವರೆ ಆಗಿದ್ದಾರೆ. ಜನರಿಂದ ದೂರವಿದ್ದು ಕಾಡಿನ ಜೀವನಕ್ಕೆ ಒಗ್ಗಿಕೊಂಡು, ಪ್ರಕೃತಿಯ ವಿಕೋಪದೊಡನೆ ಹೋರಾಡುವ ಪ್ರವೃತ್ತಿಯುಳ್ಳ ಇವರು ಧೈರ್ಯವಂತರು ಅಹುದು. ತಮ್ಮ ಸಮಾಜದ ಎಲ್ಲಾ ಜನರು ಒಂದೇ ರೀತಿಯ ಜೀವನ ವಿಧಾನ ಅಳವಡಿಸಿಕೊಳ್ಳಬೇಕೆಂದು ಇಚ್ಛಿಸುವುದರಿಂದ ಆಧುನಿಕತೆ ಇವರಿಗೆ ಸರಿಹೊಂದುವುದಿಲ್ಲ. ವೃತ್ತಿ ಮತ್ತು ವಸತಿ ಎರಡಕ್ಕೂ ಪ್ರಶಸ್ತವಾದ ಸ್ಥಳ ಎಲ್ಲಿ ದೊರೆಯುವುದೋ ಅಲ್ಲಿಯೇ ತಮ್ಮ ಗುಡಿಸಲುಗಳನ್ನು ನಿರ್ಮಿಸಿ ಕೊಳ್ಳುತ್ತಾರೆ. ಈ ಗುಡಿಸಲುಗಳು ತಮಗೆ ತಮ್ಮ ಪಶು ಪಕ್ಷಿಗಳಿಗೆ ರಕ್ಷಣೆಯ ರೂಪದಲ್ಲಿ ಮತ್ತು ಅವಶ್ಯಕತೆಗೆ ತಕ್ಕಷ್ಟು ಚಿಕ್ಕದಾಗಿ ಚೊಕ್ಕದಾಗಿ ಕಟ್ಟಿಕೊಳ್ಳುತ್ತಿದ್ದರು.


ಬುಡಕಟ್ಟು ಜನಾಂಗದ ಹೊಸ್ತಿಲು


ಉಪಸಂಸ್ಕೃತಿಗಳಲ್ಲಿ ಪ್ರಧಾನ ಸಂಸ್ಕೃತಿಗಳಲ್ಲಿಯ ಕ್ಕಿಂತ ಭಿನ್ನ ವಸತಿ ರಚನೆಯನ್ನು ನೋಡಬಹುದು. ಯಾವುದೇ ಆಡಂಬರವಿಲ್ಲದ ಸರಳ ರಚನಾ ಶೈಲಿಯನ್ನು ಹೊಂದಿರುವ ಇವರ ಗುಡಿಸಲುಗಳಿಗೆ ಬಾಗಿಲುಗಳು


ಚಿಕ್ಕವಾಗಿರುತ್ತವೆ. ಮನುಷ್ಯ ಮಾತ್ರದವನು ತೆವಳಿಕೊಂಡೆ ಒಳ ಹೋಗುಬೇಕು. ಕಿಟಕಿಗಳೂ ಇರದೆ ಗಾಳಿ ಮತ್ತು ಬೆಳಕಿನ ವ್ಯವಸ್ಥೆ ಅಷ್ಟಾಗಿ ಇರುವುದಿಲ್ಲ. ಬೆಳಕಾಗಲೀ, ಗಾಳಿಯಾಗಲಿ ಬಾಗಿಲಿನ ಮೂಲಕವೇ ಪ್ರವೇಶಿಸಬೇಕು. ಇಂದಿನ ಆಧುನಿಕತೆಯ ಯುಗದಲ್ಲಿ ಮನೆಯೊಂದಕ್ಕೆ ಯಥೇಚ್ಛವಾಗಿ ಗಾಳಿ ಬೆಳಕು ಬರಲಿ ಎಂದು ಬಾಗಿಲು ಮತ್ತು ಕಿಟಕಿಗಳು ಅಧಿಕ ಸಂಖ್ಯೆಗಳಲ್ಲಿರುತ್ತವೆ. ಇದಕ್ಕೆ ವಿರುದ್ಧವಾದ ಮನೋಭಾವನೆ ಇವರದು. ಇದಕ್ಕೆ ಬಲವಾದ ಕಾರಣವಿರಬಹುದು. ಸಾಮಾನ್ಯವಾಗಿ ಕಾಡಿನಲ್ಲಿ ವಾಸಿಸುವ ಇವರು ಮಳೆ, ಗಾಳಿ, ಕಾಡುಪ್ರಾಣಿಗಳಿಂದ ಮತ್ತು ಪರಕೀಯರಿಂದ ತಮ್ಮ ದನ ಕರುಗಳನ್ನು ಆಹಾರ ಧಾನ್ಯಗಳನ್ನು ಅದರಂತೆಯೇ ಸ್ತ್ರೀಯರನ್ನು ರಕ್ಷಿಸುವ ಕಾರಣದಿಂದ ಚಿಕ್ಕದಾದ ಒಂದೇ ಬಾಗಿಲನ್ನು ಇಡುತ್ತಿದ್ದರು. ಒಳಗೆ ಮತ್ತು ಹೊರಗೆ ತಿರುಗಾಡುವುದಕ್ಕೆ ಒಂದೇ ಮಾರ್ಗ.




ಮುಳ್ಳು ಬೇಲಿಯ ಬಾಗಿಲು

ಸಮೂಹದ ಜನರೆಲ್ಲೂ ಒಂದೇ ಕಡೆಗೆ ಒತ್ತೊತ್ತಾಗಿ ಮನೆಗಳನ್ನು ನಿರ್ಮಿಸಿಕೊಂಡು ಬದುಕು ನಡೆಸುವ ಇವರು ಅನ್ಯರ ಪ್ರವೇಶ ನಿಷೇಧಕ್ಕೆಂದೆ ತಮ್ಮ ತಮ್ಮ ಮನೆಗಳ ಸುತ್ತಲು ಬೇಲಿಯನ್ನು ನಿರ್ಮಿಸಿ





ಯಾನಾದಿಗರ ಮನೆಯ ರೇಖಾಚಿತ್ರ



ಕೊಳ್ಳುತ್ತಿದ್ದರು. ಇದು ಇಂದಿನ ಕಾಂಪೌಂಡ ರಚನೆಯನ್ನು ನೆನಪಿಗೆ ತರುತ್ತದೆ. ಉದಾಹರಣೆಗಾಗಿ ಯಾನಾದಿಗರ ಮನೆಯ ರಚನಾ ರೇಖಾ ಚಿತ್ರ ಗಮನಿಸಿದರೆ ಇದರ ಸಂಪೂರ್ಣ ಮಾಹಿತಿ ದೊರೆಯುತ್ತದೆ. ಯಾನಾದಿಗರು ಮಳೆಯ ನೀರು ನೇರವಾಗಿ ಮನೆಯ ಒಳಗೆ ನುಗ್ಗದಿರಲೆಂದು ಎತ್ತರವಾದ ಸ್ಥಳದಲ್ಲಿ ಕಟ್ಟಿಕೊಳ್ಳುತ್ತಾರೆ.[೩]

ವೃತ್ತಿ : ಅಧಿಕ ಸಂಖ್ಯೆಯಲ್ಲಿ ತಮ್ಮ ಮನೆತನದ ವೃತ್ತಿಯನ್ನೇ ಅವಲಂಬಿಸುತ್ತಾರೆ. ಕುರಿ ಸಾಕಣೆ, ಜೇನು ಶೇಖರಣೆ, ದೊಂಬರಾಟ, ತೊಗಲುಗೊಂಬೆಯಾಟ, ಬೇಟೆ ಹೀಗೆ ತಮ್ಮ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಈ ವೃತ್ತಿಯಲ್ಲಿ ಸ್ತ್ರೀ ಪುರುಷರು ಮಕ್ಕಳೆನ್ನದೆ ಎಲ್ಲರೂ ಸರಿಸಮಾನವಾಗಿ ದುಡಿಯುತ್ತಾರೆ. ಇನ್ನೂ ಕುತೂಹಲಕರ ಸಂಗತಿಯೆಂದರೆ ಆಸ್ತಿಯ ಹಂಚಿಕೆಯಲ್ಲಿ ವಂಶಪಾರಂಪರ್ಯವಾಗಿ ಆಡಿಕೊಂಡು ಬಂದಂಥ ಊರು ಕೇರಿಗಳನ್ನು ಹಂಚಿಕೊಂಡು, ಒಂದು ಕುಟುಂಬ ಇರುವ ಸ್ಥಳದಲ್ಲಿ ಇನ್ನೊಂದು ಕುಟುಂಬ ಆಡುವಂತಿಲ್ಲ. ಆದರೂ ಆಟದ ಎಲ್ಲಾ ಸಾಮಾನು ಒಬ್ಬರ ಹತ್ತಿರವಿರುವುದಿಲ್ಲವಾದ್ದರಿಂದ ಒಂದು ಕಡೆ ಆಟ ನಡೆಯುತ್ತದೆ ಎಂದರೆ ತಮ್ಮ ತಮ್ಮ ಹತ್ತಿರವಿರುವ ಬೊಂಬೆಗಳೋ ಮತ್ತಾವುದೋ ವಸ್ತುವನ್ನು ಕೊಟ್ಟು ಸಹಕರಿಸುತ್ತಾರೆ. ಬಂದ ಲಾಭದಲ್ಲಿ ಹಂಚಿಕೆಯ ಪಡೆಯುತ್ತಾರೆ. ಹೀಗೆ ಕೂಡಿ ಬಾಳುವ ಹಂಚಿ ತಿನ್ನುವ ಪ್ರವೃತ್ತಿ ಎದ್ದು ಕಾಣುತ್ತದೆ. ಆದರೆ ಇಂದಿನ ಆಧುನಿಕ ಯುಗದಲ್ಲಿ ಚಲನಚಿತ್ರ, ದೂರದರ್ಶನ ಬಂದ ನಂತರ ತೊಗಲುಬೊಂಬೆ ಆಟವಾಗಲಿ, ದೊಂಬರಾಟವಾಗಲಿ ಅಷ್ಟಾಗಿ ಜನರ ಮನಸ್ಸು ಸೆಳೆಯುತ್ತಿಲ್ಲ. ಆದ್ದರಿಂದ ಇವರು ಕೂಡ ಹೊಟ್ಟೆ ಪಾಡಿಗಾಗಿ ಬೇರೆ ಬೇರೆ ರೀತಿಯ ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಮೂಲವೃತ್ತಿಯೋ, ಕೂಲಿನಾಲಿಯೋ ಪ್ರತಿಯೊಂದರಲ್ಲಿ ಸ್ತ್ರೀ ಪ್ರಮುಖವಾಗಿ ಕಾಣಿಸಿಕೊಳ್ಳುತ್ತಾಳೆ. ದುಡಿಮೆಯಲ್ಲಿ ಸಹಭಾಗಿತ್ವದ ಜೊತೆಗೆ ಕುಟುಂಬದಲ್ಲಿಯೂ ಸಮಾನತೆಯನ್ನು ಹೊಂದಿದ್ದಾಳೆ.

೨. ಆಚರಣೆ ಮತ್ತು ನಂಬಿಕೆ : ಆಚರಣೆ ಮತ್ತು ಸಂಪ್ರದಾಯಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಡುವ ಇವರಲ್ಲಿ ಮೂಢನಂಬಿಕೆಗಳಿಗೂ ಸ್ಥಾನ ಇದೆ. ಹುಟ್ಟಿನಿಂದ ಸಾವಿನವರೆಗೆ ನಡೆಯುವ ಪ್ರತಿ ಯೊಂದು ವಿಧಿ-ವಿಧಾನಗಳನ್ನು ತಪ್ಪದೇ ಪಾಲಿಸುತ್ತಾರೆ. ಋತುಮತಿ, ಮದುವೆ, ಬಾಣಂತಿ, ಮಗುವಿನ ತೊಟ್ಟಿಲು ಶಾಸ್ತ್ರ, ಸಾವು ಹೀಗೆ ಪ್ರತಿಯೊಂದು ಹಂತಗಳು ಅತಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ.

ಋತುಮತಿಯಾದ ಆಚರಣೆ ಪ್ರಧಾನ ಸಂಸ್ಕೃತಿಗಿಂತ ಉಪಸಂಸ್ಕೃತಿಯಲ್ಲಿ ಭಿನ್ನವಾಗಿ ಆಚರಣೆಗೊಳ್ಳುತ್ತದೆ. ಆಕೆಯ ಮೊದಲ ಮುಟ್ಟು ಸೂತಕವೆಂದು ಪರಿಗಣಿಸಿ ಮನೆಯಿಂದ ಹೊರಗೆ ಅದಕ್ಕೆಂದೆ ಪ್ರತ್ಯೇಕ ಗುಡಿಸಲು ನಿರ್ಮಿಸಿ ಆಕೆ ನಿಗದಿತ ದಿನಗಳವರೆಗೆ ಅಂದರೆ ಕೆಲವೊಂದು ಜನಾಂಗದಲ್ಲಿ ೪, ಕೆಲವೊಂದು ೫, ಹೀಗೆ ೯, ೧೧ ದಿನಗಳ ವರೆಗೆ ಮನೆಯಿಂದ ಹೊರಗೆ ಆ ಗುಡಿಸಿಲಿನಲ್ಲಿ ವಾಸಿಸಬೇಕು. ಈ ಸಂದರ್ಭದಲ್ಲಿ ಹಾಡುವ ಹಾಡು ಈ ಕೆಳಗಿನಂತಿದೆ. ಅಂದರೆ ನಿಗದಿತ ಹೊಸ್ತಿಲಿನಿಂದ ದೂರವಿಡುತ್ತಾರೆ.

ಬಾಲಿ ತಾ ಮೈನೆರೆದು ಬಾಗಿಲದಾಗ ನಿಂತಾಳ
ಬಾಳಿ ಹಣ್ಣಿನಂಗ ಮಕ ಬಾಡೀ ಸೋ.....
ಬಾಳಿ ಹಣ್ಣಿನಂಗ ಮಕ ಬಾಡೀ| ಅವರವ್ವ
ಬಾ ಬಾಲಿ ಲಂದು ಕರಾದಳೇ ಸೋ.....'

ಹೀಗೆ ನಿಂಬೆ ಹಣ್ಣು, ಕರಣಿ ಹಣ್ಣು ಮುಂತಾದ ಹಣ್ಣುಗಳಿಗೆ ಅವಳ ಮುಖ ಹೋಲಿಸಿ ಹಾಡುವುದರ ಮೂಲಕ ಅವಳ ಮುಖದಲ್ಲಿ ಉಂಟಾಗುವ ಬದಲಾವಣೆಗಳನ್ನು ಹಾಡು ಸೂಚಿಸುತ್ತದೆ. ಹಾಗೆಯೇ ಅವಳು ಬಾಗಿಲ ಹತ್ತಿರ ನಿಲ್ಲುವುದನ್ನು ಖಂಡಿಸುವುದೇ ಆಗಿದೆ. ಇಲ್ಲಿ ಬಾಗಿಲ ಬಳಿ ನಿಲ್ಲುವುದನ್ನು ತಡೆಯುವುದೇ ಪ್ರಮುಖವಾದ ಉದ್ದೇಶವಾಗಿದೆ. ಇದು ರಕ್ಷಣೆಯ ನೆಪದಲ್ಲಿ ಅವಳ ಚಲನಶೀಲ ಬದುಕಿಗೆ, ಸ್ವಚ್ಛಂದ ಬದುಕಿಗೆ ಕಡಿವಾಣ ಹಾಕುವುದೆ ಆಗಿದೆ. ಕಚ್ಚೆಗೌಳಿಗರಲ್ಲಿ ಮೈನೆರೆದ ಹುಡುಗಿ ಮನೆಯ ಹೊಸ್ತಿಲಲ್ಲಿ ನಿಂತು ಪರಪುರುಷರನ್ನು ನೋಡಬಾರದೆಂಬ ಕಟ್ಟಳೆಯುಂಟು. ಫಲವಂತಿಕೆಯನ್ನು ಕಾಯ್ದಿಡುವ ಅದನ್ನು ರಕ್ಷಿಸಿಡುವ ಈ ಕಟ್ಟಳೆಗಳು ಆಕೆಯನ್ನೇ ಗುರಿಯಾಗಿ ಇಟ್ಟುಕೊಂಡಿವೆ.[೫] ಲೈಂಗಿಕ ಆಕರ್ಷಣೆ ಕಾಣಿಸಿಕೊಳ್ಳುವ ಈ ದಿನಗಳಲ್ಲಿ ವಿರುದ್ಧ ಲಿಂಗದವರೊಡನೆ ಸಂಪರ್ಕ ನಿಯಂತ್ರಿಸುವುದೇ ಈ ನಿರ್ಬಂಧನೆಗೆ ಪ್ರಮುಖ ಕಾರಣವಾಗಿದೆ.

ಈ ದಿನಗಳಲ್ಲಿ ಆಕೆಗೆ ಕೃತಕ ಮಗುವೊಂದನ್ನು ಅಂದರೆ ಕಟ್ಟಿಗೆಯ ಬೊಂಬೆ ಕೊಡುತ್ತಾರೆ. ಅದಕ್ಕೆ ಅವಳು ಸಿಂಗಾರ ಮಾಡುವುದು, ಊಟ ಮಾಡಿಸುವುದು ಮಾಡಬೇಕು. ಮತ್ತೆ ಹಾಲು ಸುರಿವ ಮರದ ಕೆಳಗೆ ನಿಲ್ಲಿಸುವುದು, ಈ ಎಲ್ಲ ಕ್ರಿಯೆಗಳು ಅವಳನ್ನು ತಾಯ್ತನಕ್ಕೆ ಪ್ರೇರೇಪಿಸುವಂತವುಗಳೇ ಆಗಿವೆ. ಒಂದು ಕಡೆ ಪ್ರಚೋದನೆ ಮತ್ತೊಂದೆಡೆ ನಿರ್ಬಂಧ. ಪ್ರಕೃತಿ ಸಹಜವಾದ ಈ ಬದಲಾವಣೆಯನ್ನು ಪುರುಷ ತನ್ನ ಸ್ವಾರ್ಥದ ಹಿನ್ನೆಲೆಯಲ್ಲಿ ಸೀಮಿತ ಗಡಿ ನಿರ್ಮಿಸಿ ಅವರ ಮಿತಿಯಲ್ಲಿಯೆ ಅವಳನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಾನೆ. ಋತುಮತಿಯಾಗುವುದಕ್ಕಿಂತ ಮುಂಚೆ ಆಕೆಗೆ ಈ ಯಾವುದೇ ನಿರ್ಬಂಧವಿರುವುದಿಲ್ಲ. ಬಾಗಿಲು, ಹೊಸ್ತಿಲು ಇವು ಒಳಹೊರಗೆ ಓಡಾಡುವ ಸಾಧನ ಮಾತ್ರಗಳಾಗಿದ್ದವು. ನಂತರ ಇವುಗಳೇ ಅವಳ ಬಾಳಿನ ಪ್ರತಿಬಂಧಕ ವಸ್ತುಗಳಾದವು. ಮರ್ಯಾದೆ ಪ್ರತೀಕವಾಗಿ ಹೊಸ್ತಿಲ ಹೊರಗೆ ಅವಳ ಶೀಲಕ್ಕೆ ಅಪಾಯವಿದೆ ಎಂದು, ಆಕೆಯ ಸ್ವಚ್ಛಂದ ಬದುಕಿಗೆ ಬೇಲಿ ಹಾಕಿ ವ್ಯಕ್ತಿತ್ವದ ವಿಕಾಸಕ್ಕೆ ಕುಂದು ತರುತ್ತವೆ. ಹೊಸ್ತಿಲ ಒಳಗೆ 'ಸುರಕ್ಷಿತ' ಎನ್ನುವ ಒಂದು ಕಲ್ಪಿತ ವಾತಾವರಣ ಸೃಷ್ಟಿಸುತ್ತದೆ.

ವಿವಾಹ ಎನ್ನುವ ಮುದ್ರೆ ಕುಟುಂಬದವರಿಂದ ಪಡೆದುಕೊಳ್ಳುವುದಕ್ಕಿಂತ ಮುಂಚೆ ಆಕೆ ತನ್ನ ಲೈಂಗಿಕ ಹಕ್ಕು ಬೇರೆಯವರೊಂದಿಗೆ ಹಂಚಿಕೊಳ್ಳುವುದನ್ನು ತಡೆಯುವುದೇ ಈ ನಿರ್ಬಂಧನೆಗೆ ಮುಖ್ಯ ಕಾರಣವಿರಬಹುದು. ಕೇವಲ ಒಬ್ಬನಿಗೆ ಮಾತ್ರ ಮೀಸಲಾಗಿಡುವುದು ಕೂಡ ಇದರ ಉದ್ದೇಶವಿರಬಹುದು. ಆದ್ದರಿಂದ ಆದಷ್ಟುಮಟ್ಟಿಗೆ ವಿರುದ್ಧ ಲಿಂಗದವರೊಡನೆ ಸಂಪರ್ಕವಿರದಂತೆ, ಹೊರಗಿನವರ ಕಣ್ಣಿಗೆ

ಬೀಳದಂತೆ ಒಂದು 'ವಸ್ತು'ವನ್ನು ಜೋಪಾನವಾಗಿ ಕಾಪಾಡಿ, ಆ ವಸ್ತುವಿನ ಮಾಲೀಕನಿಗೆ ಒಪ್ಪಿದ ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುವವರೆಗೆ ಈ ಚೌಕಟ್ಟು, ಈ ಕಟ್ಟಳೆ.

ವಿವಾಹ ಎನ್ನುವ ಚೌಕಟ್ಟಿನೊಳಗೆ ಪ್ರವೇಶಿಸುತ್ತಿದ್ದಂತೆ ಸ್ತ್ರೀಯೋರ್ವಳಿಗೆ ಎಲ್ಲ ರೀತಿಯ ಸ್ವತಂತ್ರವಿರುವುದು ಎಂದು ಹೇಳುವುದು ತಪ್ಪು. ವಿವಾಹಕ್ಕೆ ಗೊತ್ತಾದ ಹೆಣ್ಣಿಗೆ ನಾನಾ ರೀತಿಯ ಶುದ್ಧೀಕರಣ ಕಾರ್ಯ ಕೈಗೊಂಡು ತಮ್ಮ ಹೊಸ್ತಿಲು ತುಳಿಯಲು ಯೋಗ್ಯಳನ್ನಾಗಿಸುತ್ತಾರೆ.

ಗೊರವರ ಗುರುಗಳಾದ 'ಒಡೆಯರು' ತಮ್ಮ ಮನೆಗೆ ಹೆಣ್ಣನ್ನು ತರುವಾಗ ಸಾಮಾನ್ಯವಾಗಿ ಕುರುಬರ ಕುಲದ ಹೆಣ್ಣನ್ನೇ ತಂದುಕೊಳ್ಳುತ್ತಾರೆ. ತರುವಾಗ ಹಾಗೇ ತಂದುಕೊಳ್ಳದೇ ಶುದ್ಧೀಕರಣ ಮಾಡುತ್ತಾರೆ. ಮದುವೆಯಾಗುವ ಹೆಣ್ಣಿಗೆ ಗೋವಿನ ಗಂಜಳ ಕುಡಿಸಿ, ಬೇವಿನಕಡ್ಡಿಯಿಂದ ನಾಲಿಗೆ ಸುಡಿಸಿ ಅರಳಿಕಡ್ಡಿಯ ಕೆಂಡವನ್ನು ಅವಳ ಬೊಗಸೆಗೆ ಹಾಕಿ ಶುದ್ಧೀಕರಿಸಿದ ನಂತರ ಮದುವೆ ಮಾಡಿಕೊಳ್ಳುತ್ತಾರೆ. ಕುರುಬರ ಹೆಣ್ಣು ಶುದ್ಧಳಾಗಿ ಒಡೆಯರ ಮನೆ ಹೊಸ್ತಿಲು ತುಳಿದ ಮೇಲೆ ಮಾಂಸಮಡ್ಡಿ ತಿನ್ನುವಂತಿಲ್ಲ. ತವರು ಮನೆಯವರೊಂದಿಗೆ ಸೇರಿ ಆಹಾರ ಪಾನೀಯಗಳನ್ನು ಸ್ವೀಕರಿಸುವಂತಿಲ್ಲ.[೬]

ಮೇಲಿನ ಆಚರಣೆಯನ್ನು ಗಮನಿಸಿದರೆ ಪ್ರಧಾನ ಸಂಸ್ಕೃತಿ ಮತ್ತು ಉಪಸಂಸ್ಕೃತಿಗಳ ಸಮ್ಮಿಳಿತ ಕಂಡು ಬರುತ್ತದೆ. ಗೋವಿನ ಗಂಜಳ ಕುಡಿಸುವುದು ಅಂದರೆ ನೀರಿನ ಅಂಶದ ಗಂಜಳ ಮತ್ತು ಶಿಷ್ಟ ಸಂಪ್ರದಾಯದ ಅಗ್ನಿಯ ಮೂಲಕ ಆಕೆಯನ್ನು ಪವಿತ್ರಗೊಳಿಸಿ ತಮ್ಮ ಮನೆಗೆ ಯೋಗ್ಯಳನ್ನಾಗಿ ಮಾಡಿಕೊಳ್ಳುವುದು. ಈ ರೀತಿ ಪವಿತ್ರಳಾಗಿ ಗಂಡನ ಮನೆ ಹೊಸ್ತಿಲು ತುಳಿದ ಮೇಲೆ ಮತ್ತೆ ಅವಳು ತವರಿನ ಮಗಳಾಗಿ ಉಳಿಯುವುದಿಲ್ಲ. ಹೊಸ್ತಿಲು ದಾಟುವುದು ಮತ್ತು ಹೊಸ್ತಿಲು ತುಳಿಯುವುದು ಎರಡು ಪ್ರಮುಖ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಸಂಬಂಧ ಕಡಿದುಕೊಳ್ಳುವಿಕೆ ಮತ್ತು ಸಂಬಂಧಗಳನ್ನು ಬೆಸೆದುಕೊಳ್ಳುವಿಕೆ ಈ ಎರಡು ಹೆಣ್ಣಿನ ಜೀವನದಲ್ಲಿ ಹೊಸ್ತಿಲಿನ ಮುಖೇನ ನಡೆಯುವ ಪ್ರಮುಖ ಘಟನೆಗಳಾಗಿವೆ.

ಕಚ್ಚೆಗೌಳಿಗರಲ್ಲಿಯೂ ಕೂಡ ಮದುವೆಯಾದ ನಂತರ ಮನೆ ತುಂಬಿಸಿಕೊಳ್ಳುವಲ್ಲಿ ಹೊಸ್ತಿಲಿನ ಪಾತ್ರ ಇರುವುದು ಕಂಡುಬರುತ್ತದೆ. ಹೆಣ್ಣು ಮೊದಲ ಬಾರಿಗೆ ಮನೆಯ ಹೊಸ್ತಿಲು ತುಳಿಯುವ ಮೊದಲು ಮನೆದೇವರ ಪೂಜೆ ಮಾಡಬೇಕು. ಹೊಸ್ತಿಲಲ್ಲಿಟ್ಟ ಬತ್ತವನ್ನೋ ಅಕ್ಕಿಯನ್ನೋ ತುಳಿದು ತನ್ನ ಬಲಗಾಲನ್ನು ಮುಂದೆ ಇರಿಸುವುದರ ಮೂಲಕ ಮನೆಯೊಳಗೆ ಪ್ರವೇಶ ಮಾಡಬೇಕು.[೭] ಇದು ಪ್ರಧಾನ ಸಂಸ್ಕೃತಿಯಲ್ಲಿನ ನವ ವಧುವರರನ್ನು ಮನೆ ತುಂಬಿಸಿಕೊಳ್ಳುವ ಪದ್ಧತಿ ನೆನಪಿಗೆ ತರುತ್ತದೆ. ಆಶಯ, ಆಕರ ಒಂದೇ ಆದರೂ ಆಚರಣೆಯಲ್ಲಿ ಕೊಂಚ ಭಿನ್ನತೆ ಕಂಡು ಬರುತ್ತದೆ. ಪ್ರಧಾನ ಸಂಸ್ಕೃತಿಯಲ್ಲಿ ಸೇರನ್ನು ಒದ್ದು ಒಳ ಬಂದರೆ ಉಪ ಸಂಸ್ಕೃತಿಯಲ್ಲಿ ಬತ್ತ ಅಥವಾ ಅಕ್ಕಿಯನ್ನು ತುಳಿದು ಒಳಗೆ

ಪ್ರವೇಶ ಮಾಡುವುದು. ಹೊಸ್ತಿಲನ್ನು ತುಳಿಯುವುದು ಎಂದರೆ ಕೊಟ್ಟ ಮನೆಗೆ ಹಕ್ಕು ಸ್ಥಾಪಿಸುವುದೇ ಆಗಿದೆ. ಮನೆಯ ಮಗಳನ್ನು 'ಲಕ್ಷ್ಮೀ' ಎಂದು ಕರೆಯುವುದು ವಾಡಿಕೆ. ಮದುವೆಯ ನಂತರ ಲಕ್ಷ್ಮೀ ಮನೆ ಬಿಟ್ಟು ಹೋಗುವಾಗಲೂ ಒಂದು ಸಂಪ್ರದಾಯವಿದೆ. ಅದೇನೆಂದರೆ, ಹೆಣ್ಣು ಗಂಡನ ಮನೆಗೆ ಹೋಗುವಾಗ ತನ್ನ ತವರಿನ ಹೊಸ್ತಿಲು ಮುಟ್ಟಿ ನಮಸ್ಕರಿಸಿ ತನ್ನ ಬೊಗಸೆಯಲ್ಲಿ ಅಕ್ಕಿಯನ್ನು ತೆಗೆದುಕೊಂಡು ಹೊಸ್ತಿಲು ಕಡೆಗೆ ಬೆನ್ನು ಮಾಡಿ ಅಕ್ಕಿಯನ್ನು ಹಿಂದಕ್ಕೆ ಚೆಲ್ಲುತ್ತಾಳೆ. ಚೆಲ್ಲುವ ಅಕ್ಕಿಯನ್ನು ತಾಯಿ ತನ್ನ ಉಡಿಯಲ್ಲು ಹಿಡಿದುಕೊಳ್ಳಬೇಕು. ಇದು ಕೂಡ ತನ್ನ ತವರಿನಲ್ಲಿ ಲಕ್ಷ್ಮೀ ಶಾಶ್ವತವಾಗಿ ನೆಲೆಸಲಿ ಎಂದು ಕೋರುವುದೇ ಆಗಿದೆ. ಹೊಸ್ತಿಲು ಕಡೆ ಬೆನ್ನು ಮಾಡುವುದರ ಉದ್ದೇಶ ಮಗಳು ಕಣ್ಣೀರು ಹಾಕುವುದು 'ತವರಿಗೆ' ಶ್ರೇಯಸ್ಸಲ್ಲ. ಮನೆಗೆ ಕೇಡಾಗುತ್ತದೆ ಎಂದು ತನ್ನ ಕಣ್ಣೀರು ಯಾರಿಗೂ ಕಾಣದಂತೆ ಅದುಮಿಟ್ಟು ತವರಿಗೆ ಸಮೃದ್ಧಿ ಕೋರಿ ಗಂಡನ ಮನೆಗೆ ಹೋಗುತ್ತಾಳೆ. ಹೊಸ್ತಿಲು ಮುಟ್ಟಿ ನಮಸ್ಕರಿಸುವುದು ತವರಿನ ಋಣ ತೀರಿತು ಎಂದು ನೆನಪಿಸುವಂತಿದೆ.

ಲಂಬಾಣಿ ಜನಾಂಗದಲ್ಲಿಯೂ ಕೂಡ ಮದುವೆಯಲ್ಲಿ ಹೊಸ್ತಿಲಿನ ವಿಶೇಷ ಆಚರಣೆ ಇದೆ. ಮದುವೆ ಕಾರ್ಯ ಪ್ರಾರಂಭ ಮಾಡುವಲ್ಲಿ ಹೊಸ್ತಿಲಿನ ಪಾತ್ರ ವಿಶೇಷವಾಗಿದೆ. ಮದುವೆಯ ಆಮಂತ್ರಣ ನೀಡುವಿಕೆಯಲ್ಲಿ ಹೊಸ್ತಿಲು ಸಂವಹನ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ. ಮನೆ-ಮನೆಗೆ ಊಟಕ್ಕೆ ಹೇಳಲು ಹೋದಾಗ ಮನೆಯಲ್ಲಿ ಯಾರು ಇಲ್ಲದ ಪಕ್ಷದಲ್ಲಿ ಅವರ "ಹೊಸ್ತಿಲ ಮೇಲೆ ತಂಬಾಕ ಇಟ್ಟರೆ ಸಾಕು" ಅವರಿಗೆ ಮದುವೆಯ ಆಮಂತ್ರಣವಿದೆ ಎಂದು ತಿಳಿಯುತ್ತದೆ. ಲಂಬಾಣಿಗರಲ್ಲಿ ತಂಬಾಕು ಪರಸ್ಪರರಲ್ಲಿ ಸಂಪರ್ಕ ಸಾಧನವಾಗಿದೆ. ಮದುವೆಯ ದಿನದಂದು ಮನೆಯ ಹೊಸ್ತಿಲ ಮೇಲೆ ಒಂದು ಮಗಿ (ಸಣ್ಣ ಮಡಿಕೆ) ಇಟ್ಟಿರುತ್ತಾರೆ. ಊರಿನ ಪ್ರಮುಖ ವ್ಯಕ್ತಿಯಾಗಿರುವ ನಾಯ್ಕ ಬಂದು ಆ ಮಡಿಕೆಯಲ್ಲಿ ಒಂದು ನಾಣ್ಯ, ಎಲೆ-ಅಡಿಕೆ ಹಾಕಿ ಮದುವೆ ಕಾರ್ಯ ಪ್ರಾರಂಭಿಸಿ ಎಂದು ಅಪ್ಪಣೆ ಕೊಟ್ಟ ಮೇಲೆಯೇ ಮದುವೆ ಕಾರ್ಯ ಪ್ರಾರಂಭವಾಗುತ್ತದೆ. ಹೀಗೆ ಪ್ರಾರಂಭಗೊಂಡ ಮದುವೆ ಸಕಲ ವಿಧಿ-ವಿಧಾನಗಳಿಂದ ಮುಗಿದು ವಧು-ವರರು ಗೃಹ ಪ್ರವೇಶಿಸುವಾಗ ಹೊಸ್ತಿಲು ಬಳಿ ನಿಲ್ಲಿಸಿ ಮುಂದೆ ಇಬ್ಬರು ಹಿಂದೆ ಇಬ್ಬರು ಒಂದು ವಸ್ತ್ರ (ಬಟ್ಟೆ)ವನ್ನು ತಲೆಯ ಮೇಲೆ ಹಿಡಿದಿರುತ್ತಾರೆ. ವಧು-ವರರ ಗೃಹ ಪ್ರವೇಶಿಸುವಾಗ ಅವರ ತಲೆ ಬಾಗಿಲಿನ ಹಣೆಪಟ್ಟಿಗೆ ಮತ್ತು ಕಾಲು ಹೊಸ್ತಿಲಿಗೆ ತಾಕಬಾರದು. ಎಚ್ಚರಿಕೆಯಿಂದ ತಲೆ ಮತ್ತು ಹೆಜ್ಜೆ ಇಡಬೇಕಾಗುತ್ತದೆ. ನಂತರ ಇಬ್ಬರಿಗೂ ಕೂಡಿಸಿ ಆರತಿ ಬೆಳಗಿ ಮಡಿಲಲ್ಲಿ ಗಂಡು ಮಗುವೊಂದನ್ನು ಹಾಕುತ್ತಾರೆ. ವಧು-ವರರು ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ.

ಹೊಸ್ತಿಲು ಲಕ್ಷ್ಮೀ ಎಂದು ಪೂಜಿಸುವುದರಿಂದ ಅದಕ್ಕೆ ಕಾಲು ತಾಕಿಸುವಂತಿಲ್ಲ. ಹಾಗೆಯೇ ವಿಧೇಯಳಾಗಿ ತಗ್ಗಿ-ಬಗ್ಗಿ ನಡೆಯಬೇಕೆಂಬುದರಿಂದ ಬಾಗಿಲಿನ ಹಣೆ ಪಟ್ಟಿಗೆ ತಲೆ ತಾಕುವಂತಿಲ್ಲ. ಭಯ

ಮತ್ತು ಭಕ್ತಿ ಎರಡು ಪ್ರಮುಖ ಅಂಶಗಳು ಹೊಸ್ತಿಲಿನ ಮುಖೇನ ಮಾಡುವ ಆಚರಣೆಗಳಲ್ಲಿ ತೋರುತ್ತವೆ. ಸಾಮಾನ್ಯವಾಗಿ ನವ-ವಧು ತಲೆ ಎತ್ತಿ ಓಡಾಡುವುದು ಸುಸಂಸ್ಕೃತಿಯ ಲಕ್ಷಣವಲ್ಲವೆಂದೆ ಹಿರಿಯರ ಅಭಿಪ್ರಾಯ. ಅದು ಅಲ್ಲದೆ ಬುಡಕಟ್ಟು ಸಂಸ್ಕೃತಿಯಲ್ಲಿ ಬಾಗಿಲು ಚಿಕ್ಕದಾಗಿ ಇರುವುದು ವಾಡಿಕೆ. ಸಂಸ್ಕೃತಿ ಮತ್ತು ರಕ್ಷಣೆ ಎರಡು ತಲೆ ಬಗ್ಗಿಸಿ ಒಳ ಪ್ರವೇಶ ಮಾಡುವುದರ ಮೂಲಕ ಎದ್ದು ಕಾಣುತ್ತದೆ. ಗಂಡು ಮಗುವನ್ನು ಮಡಿಲಿಗೆ ಹಾಕುವುದರ ಸಂಕೇತ ವಂಶಾಭಿವೃದ್ಧಿಗೆ ಕಾರಣವಾಗುವಂತಹ ಗಂಡು ಸಂತಾನಾಪೇಕ್ಷೆಯೇ ಆಗಿದೆ.

ಮಗುವಿಗೆ ತೊಟ್ಟಿಲು ಇಡುವ ಪದ್ಧತಿ ವಿಶೇಷವಾಗಿದೆ. ಮಗುವಿನ ಸೋದರತ್ತೆ ಹೆಸರಿಡಬೇಕು. ಹಾಗಿಡುವಾಗ ಬೇಯಿಸಿದ ಹುರುಳಿ ಗಂಟನ್ನು ಗಂಡಾಗಿದ್ದರೆ ಐದು ಗಂಟು, ಹೆಣ್ಣಾಗಿದ್ದರೆ ಮೂರು ಗಂಟು ಹಾಕಿ ಇಡುತ್ತಾರೆ. ಆ ಗಂಟುಗಳನ್ನು ಕೈಯಿಂದ ಮುಟ್ಟದೆ ಬಾಯಿಯಿಂದ ಎತ್ತಿಕೊಂಡು ಹೆಸರನ್ನು ಸಾರಿ ಹೇಳುತ್ತಾ ಮನೆಯಿಂದ ಹೊರಗೆ ಒಳಗೆ ಓಡಾಡಬೇಕು. ಅದೇ ಆ ಮಗುವಿನ ಶಾಶ್ವತ ಹೆಸರು.[೮] ಮ್ಯಾಸ ಬೇಡರ ಗಂಡು ಮಗುವಿಗೆ ಐದು ಗಂಟು, ಹೆಣ್ಣಿಗೆ ಮೂರು ಗಂಟು ಎನ್ನುವ ತಾರತಮ್ಯ ಭಾವನೆ ಭೈರವ ಜನಾಂಗದಲ್ಲಿ ಸಕ್ಕರೆ ಮತ್ತು ಬೆಲ್ಲದ ಆಚರಣೆಯಲ್ಲಿ ತೋರುತ್ತದೆ. ಭೈರರಲ್ಲಿ ಗಂಡು ಮಗು ಹುಟ್ಟಿದರೆ ಸಕ್ಕರೆ ಕಾಯಿ ಹಂಚಿದರೆ, ಹೆಣ್ಣು ಮಗು ಹುಟ್ಟಿದರೆ ಕೆಲವರು ಮಾತ್ರ ಅದು ಮೊದಲ ಮಗುವಾಗಿದ್ದರೆ, ಬೆಲ್ಲ ಹಂಚುತ್ತಾರೆ.[೯] ಸಂಖ್ಯೆಯಲ್ಲಿ ಐದು ಶ್ರೇಷ್ಠ, ಮೂರು ಕನಿಷ್ಠವೋ ಅದೇ ರೀತಿ ಸಕ್ಕರೆ ಶ್ರೇಷ್ಠ, ಬೆಲ್ಲ ಕನಿಷ್ಠ ಸ್ಥಾನವನ್ನು ಪಡೆದುಕೊಂಡಿವೆ. ಮಾತೃಮೂಲೀಯ ಸಂಸ್ಕೃತಿ ಎಂದು ಹೇಳುವ ಉಪಸಂಸ್ಕೃತಿಯಲ್ಲಿ ಸ್ತ್ರೀಯೊಬ್ಬಳಿಗಿರುವ ತಾರತಮ್ಯದ ಉಪಚಾರ ವಿಪರ್ಯಾಸವೇ ಸರಿ.

ಇವರಲ್ಲಿ ಮಗುವಿಗೆ ತೊಟ್ಟಿಲು ಶಾಸ್ತ್ರ ಮಾಡುವುದಕ್ಕೆ ಮುನ್ನ ಮನೆಯ ಶುದ್ಧೀಕರಣವಾಗಬೇಕು. ಅದಕ್ಕಾಗಿ ಭಟ್ಟರ ಮನೆಯಿಂದ 'ಪುಣ್ಯಾಹದ' ನೀರು ತಂದು ಮನೆಯ ಒಳಗೆ ಪ್ರೋಕ್ಷಿಸಿ ಮನೆ ಮತ್ತು ಮನೆಯವರು ಶುದ್ಧರಾಗುತ್ತಾರೆ. ಆ ದಿನ ಎಲ್ಲರೂ ಬಾವಿಯ ಹತ್ತಿರ ಹೋಗಿ ತಲೆಸ್ನಾನ ಮಾಡಿ ವೆಂಕಟರಮಣ ಮತ್ತು ಭೈರವನಿಗೆ ದೀಪ ಹಚ್ಚಿ ನಮಸ್ಕರಿಸುತ್ತಾರೆ. ಆ ದಿನ ಬಾಗಿಲಿನ ನಾಲ್ಕು ಮೂಲೆಗೆ 'ಕಾಸನ್ ಸೊಪ್ಪು' ಸಿಕ್ಕಿಸುತ್ತಾರೆ. ನಂತರ ತೊಟ್ಟಿಲು ಶಾಸ್ತ್ರ ಮಾಡುತ್ತಾರೆ.[೧೦] ಇವರಲ್ಲಿ ಈ ಶುದ್ಧೀಕರಣದ ಆಚರಣೆಗೆ ಪ್ರಧಾನ ಸಂಸ್ಕೃತಿಯ ಪ್ರಭಾವವೇ ಕಾರಣವಿರಬಹುದು.

ಉಪಸಂಸ್ಕೃತಿಯಲ್ಲಿ ಹೊಸದಾಗಿ ನಿರ್ಮಿಸಿದ ಮನೆಯ ಗೃಹಶಾಂತಿಯೆಂದು 'ಬಲಿ'ಯು ಪ್ರಮುಖವಾಗಿದೆ. ಗೃಹ ಪ್ರವೇಶದ ದಿನ ಹೊರಗಡೆ ತೆಂಕು ದಿಕ್ಕಿನಲ್ಲಿ ಕೋಳಿಯನ್ನು ಬಲಿ ಕೊಡುತ್ತಾರೆ. ಮನೆಯ ಸುತ್ತ ತೆಂಗಿನೆಣ್ಣೆಯಲ್ಲಿ ಬಿದಿರಿಗೆ ಸುತ್ತಿದ ಬಟ್ಟೆಯನ್ನು ಅದ್ದಿ ದೀಪ ಮಾಡಿ ಹಚ್ಚಿಡುತ್ತಾರೆ. ಮನೆಯ ಸುತ್ತ ಎಂಟುಕೊಡಿ ಬಾಳೆ ಎಲೆಯ ಮೇಲೆ ಅಕ್ಕಿ ಹೋದಳು ಸುರಿದು ಇಡುತ್ತಾರೆ. ಇದು ದಿಕ್ ಶಾಂತಿಗಾಗಿ. ಮನೆಯ ಎದುರು ಬಂದು ಎಲೆಯ ಮೇಲೆ ಅನ್ನ ಮಾಡಿ ಹಾಕುತ್ತಾರೆ. ಇದು

ಭೂತ ಶಾಂತಿ. ಮನೆಯ ಸುತ್ತ ನೂಲೆಳೆ ಹಾಗೂ ಚೆನ್ನೇರಿ ಬಳ್ಳಿ ಕಟ್ಟುತ್ತಾರೆ. ನಾಲ್ಕು ಮೂಲೆಗೂ 'ತೆಂಕ್ರ' ಒಡೆದು ಮೇಲೆ ಆಚಾರಿ 'ಮಡೆ' ಕಟ್ಟಿದ ಮಾಡಿನ ತುದಿಗೆ ತೆಂಗಿನ ಕಾಯಿ ಒಡೆದು ಉರುಳಿಸುತ್ತಾನೆ. ಆ ಕಾಯಿ ಮೇಲ್ಮುಖವಾಗಿ ಬಿದ್ದರೆ ಶುಭ ಕೆಳಮುಖವಾಗಿ ಬಿದ್ದರೆ ಅಶುಭ, ಮನೆಯ ಮುಂಬಾಗಿಲಿಗೆ ಆಚಾರಿ ಮೊಳೆ ಹೊಡೆದು ತೆಂಗಿನ ಕಾಯಿ ಕಟ್ಟುತ್ತಾರೆ. ಇಷ್ಟೆ ಅಲ್ಲದೆ ಗುಡಿಸಿಲಿನ ಮುಂಭಾಗದ ಪಕ್ಕಾನಿಗೆ ಮಂತ್ರದ ಕಾಯಿ ಕಟ್ಟಿರುತ್ತಾರೆ. ಇದರಲ್ಲಿ ಮಂತ್ರವಾದಿ 'ಉರ್ಕು' ಹಾಕಿರುತ್ತಾರೆ. ಸಾಮಾನ್ಯವಾಗಿ ಭೈರರ ಬಾಗಿಲಿನಲ್ಲಿ ಈ ತಡೆ ಇರುತ್ತದೆ.[೧೧]

ಉಪಸಂಸ್ಕೃತಿಯಲ್ಲಿನ 'ಬಲಿ' ಕೊಡುವ ಪದ್ಧತಿಯೇ ಪ್ರಧಾನ ಸಂಸ್ಕೃತಿಯಲ್ಲಿ ಕುಂಬಳಕಾಯಿಯನ್ನು ಒಡೆಯವುದಾಗಿದೆ. ಪ್ರಧಾನ ಸಂಸ್ಕೃತಿಯು ಉಪಸಂಸ್ಕೃತಿಯ ಪ್ರಭಾವಕ್ಕೊಳಗಾದುದನ್ನು ನೋಡಬಹುದು. ಬಾಗಿಲಿಗೆ ಕಟ್ಟುವ ಮಂತ್ರದ ಕಾಯಿ ಮುಂತಾದವುಗಳು ದುಷ್ಟಶಕ್ತಿಯ ನಿಗ್ರಹವೇ ಆಗಿದೆ. ಇಡಗಾಯಿ ಹರಕೆ, ಇದು ಗೊರವ ಸಂಸ್ಕೃತಿಯಲ್ಲಿ ಮನೆಯಲ್ಲಿ ಯಾರ ಮೇಲಾದರೂ ಮಾಟದ ಪ್ರಯೋಗವಾಗಿದೆ ಎಂದು ಗಮನಕ್ಕೆ ಬಂದಾಗ ಈ ಮಾಟದ ಪರಿಹಾರಕ್ಕಾಗಿ ಹೆಗ್ಗಪ್ಪನಿಗೆ ಇಡಗಾಯಿ ಹರಕೆ ಹೊರುತ್ತಾರೆ. ಎಂದರೆ ಹಿರೇಮೈಲಾರ, ದೇವರ ಗುಡ್ಡಗಳಲ್ಲಿರುವ ಹೆಗ್ಗಪ್ಪ ದೇವರ ಗುಡಿಯ ಬಾಗಿಲಿನಲ್ಲಿ ನಿಂತು ಒಳಗಿರುವ ಮೂರ್ತಿಗೆ ತಾಗುವಂತೆ ತೆಂಗಿನ ಕಾಯಿಯನ್ನು ಉರುಳಿಸಿಬಿಡುತ್ತಾರೆ. ತಮಗೆ ತಟ್ಟಿದ ಮಾಟ ಬಾಗಿಲಿನಿಂದಲೇ ತೆಂಗಿನ ಕಾಯಿ ಉರುಳಿದ ಹಾಗೆ ಉರುಳಿ ಹೋಗಲಿ ಎಂದು ಈ ಆಚರಣೆಯ ಹಿಂದಿರುವ ಉದ್ದೇಶ.

ಲಂಬಾಣಿಗರಲ್ಲಿ ರಂಗೋಲಿಯು ಒಂದು ವಿಶಿಷ್ಟ ಕಲೆಯಾಗಿ ಭಿನ್ನ ರೀತಿಯಲ್ಲಿ ರೂಪುಗೊಳ್ಳುತ್ತದೆ. ಅಂಗಳ ಹೊಸ್ತಿಲ ಮೇಲೆ ಹಾಕದೆ ದೇವರ ಸ್ಥಳದಲ್ಲಿ ಧಾರ್ಮಿಕ ನೆಲೆಯಲ್ಲಿ ರೂಪುಗೊಳ್ಳುವ ರಂಗೋಲಿಯು ಪುರುಷನಿಂದ ರಚಿಸಲ್ಪಡುತ್ತದೆ.[೧೨] ಅಲ್ಲದೆ ಅದನ್ನು ತುಳಿದಾಡುವುದು ತಪ್ಪು ಎನ್ನುವ ಭಾವನೆ ಇದೆ. ಪ್ರಧಾನ ಸಂಸ್ಕೃತಿಗಳಲ್ಲಿ ಅಲಂಕಾರ ಮತ್ತು ಧಾರ್ಮಿಕ ಎರಡೂ ನೆಲೆಗಳಲ್ಲಿ ರೂಪುಗೊಂಡರೆ ಇಲ್ಲಿ ಕೇವಲ ಧಾರ್ಮಿಕ ಹಿನ್ನೆಲೆಯಲ್ಲಿ ಮಾತ್ರ ಕಾಣುತ್ತೇವೆ. ಇದಕ್ಕೆ ಕಾರಣ ಹೀಗೆ ಹೇಳಬಹುದು, ನಿತ್ಯವೂ ಬೆಳಿಗ್ಗೆಯಿಂದ ಸಾಯಂಕಾಲದಿಂದ ದುಡಿಯುವ ಇವರಿಗೆ ಅಲಂಕಾರಕ್ಕಾಗಿ ಸಮಯ ಇರುವುದಿಲ್ಲ. ಹೊಟ್ಟೆ ಪಾಡು ಪ್ರಮುಖವಾಗಿರುವಾಗ ಮನೆ ಮುಂದೆ, ಹೊಸ್ತಿಲ ಮೇಲೆ ರಂಗೋಲಿ ಹಾಕುತ್ತಾ ಕುಳಿತರೆ ಆದೀತೆ. ಆದ್ದರಿಂದ ಅದಕ್ಕೆ ಅಂತಲೇ ಕೆಲವು ಧಾರ್ಮಿಕ ಸ್ಥಳದಲ್ಲಿ ದೈವಿ ಭಾವನೆಯನ್ನು ಪಡೆದುಕೊಂಡಿದೆ.

ಮೂಢ ನಂಬಿಕೆಗಳಲ್ಲಿ ಬಲವಾದ ನಂಬಿಕೆಯನ್ನು ಹೊಂದಿರುವ ಲಂಬಾಣಿಗರಲ್ಲಿ 'ದೆವ್ವ' ಹಿಡಿದಿರುವವನಿಗೆ ಆ 'ದೆವ್ವ' ಬಿಡಿಸುವ ಬಗೆ ಕುತೂಹಲಕಾರಿಯಾಗಿದೆ. ಏಳು ತರಹದ ಕಾಳುಗಳಿಂದ ಹಿಟ್ಟು ತಯಾರಿಸಿ ರೊಟ್ಟಿ ಮಾಡಿ ಒಂದೆ ಮಗ್ಗಲು ಹಸಿ-ಬಿಸಿ ಬೇಯಿಸಿ ಮಣ್ಣಿನ ಪಾತ್ರೆಯಲ್ಲಿ ರೊಟ್ಟಿ

ಇಟ್ಟು ಅದರ ಮೇಲೆ ನಿಂಬೆಹಣ್ಣು, ಕುಂಕುಮ, ಅರಿಶಿನ, ಉಪ್ಪು, ಮೆಣಸಿನಕಾಯಿ ಇಟ್ಟು ಅದನ್ನು ಎಡಗೈಯಲ್ಲಿ, ಹಿಡಿದುಕೊಂಡು ದೆವ್ವ ಹಿಡಿದ ವ್ಯಕ್ತಿಗೆ ಮನೆಯ ಬಾಗಿಲಲ್ಲಿ ನಿಲ್ಲಿಸಿ ಪಾದದಿಂದ ತಲೆಯವರೆಗೆ ಏಳು ಸಲ ನೀವಳಿಸಿ ಬಲಗೈಯಲ್ಲಿ ಕುಡುಗೋಲು ಇಲ್ಲವೆ ಕೊಡಲಿ ಹಿಡಿದುಕೊಂಡು ಯಾರೊಡನೆಯು ಮಾತಾಡದಂತೆ ವ್ಯಕ್ತಿ ಎಲ್ಲಿ ಹೆದರಿ ಹೀಗಾಗಿದ್ದಾನೋ ಅದೇ ದಿಕ್ಕಿಗೆ ತಾಂಡಾದ ಹೊರಗೆ ಹೋಗಿ ಮೂರು ದಾರಿಗಳು ಸೇರುವ ದಿಕ್ಕಿನಲ್ಲಿ ಅವುಗಳನ್ನು ಇಟ್ಟು ಕೊಡಲಿಯಿಂದ ಏಳು ಸಲ ನೆಲ ಕೊರೆದು ಪುನಃ ಹಿಂದಿರುಗಿ ನೋಡದಂತೆ ಮನೆಗೆ ಬರುತ್ತಾನೆ. ಹೀಗೆ ಮಾಡುವುದರಿಂದ ವ್ಯಕ್ತಿಗೆ ಹಿಡಿದಂಥಹ ದೆವ್ವ ಬಿಟ್ಟು ಹೋಯಿತೆಂದು ನಂಬುತ್ತಾರೆ.[೧೩] ಈ ರೀತಿ ಮಾಡುವುದರಿಂದ ಬಂದ ದುಷ್ಟ ಶಕ್ತಿ ಬಾಗಿಲಿನಿಂದ ಹೊರಗೆ ಹೋಗುತ್ತದೆ ಎಂದು ನಂಬಿಕೆ. ರೋಗಿಗೂ ಮಾನಸಿಕ ನೆಮ್ಮದಿ ದೊರೆಯುತ್ತದೆ.

ಹೊಸ್ತಿಲಿನ ಬಗೆಗೆ ಈ ರೀತಿಯ ಆಚರಣೆಗಳಲ್ಲದೆ ಕೆಲವೊಂದು ನಂಬಿಕೆಗಳನ್ನು ಈ ಬುಡಕಟ್ಟುಗಳಲ್ಲಿ ಕಾಣುತ್ತೇವೆ.

೧. ಅಡುಗೆ ಮನೆ ಮತ್ತು ದೇವರ ಮನೆಗಳಿಗೆ ಚಪ್ಪಲಿ ಹಾಕಿಕೊಂಡು ಬರಬಾರದು.[೧೪]

೨. ಮುಸ್ಸಂಜೆಯಲ್ಲಿ ಮಲಗಬಾರದು, ತಲೆ ಬಾಚಿಕೊಳ್ಳಬಾರದು.[೧೫]

೩. ಮನೆಯಿಂದ ಯಾರಾದರೂ ಬೇರೆ ಊರಿಗೆ ಹೋದಾಗ ಮನೆಯಲ್ಲಿ ಇದ್ದವರು ತಲೆಸ್ನಾನ ಮಾಡಬಾರದು.[೧೬]

೪. ರಾತ್ರಿ ಕಸಗುಡಿಸಿದರೆ ಹೊರಗೆ ಚೆಲ್ಲಬಾರದು ಲಕ್ಷ್ಮಿ ಹೊರಟು ಹೋಗುತ್ತಾಳೆ.[೧೭]

'ಶಾಪ' : ಅವನ ಮನೀ ಬಾಗ್ಲಿಗೆ ಮುಳ್ಳ ಬಡೀಲಿ.[೧೮]

ಮೇಲಿನ ಎಲ್ಲ ಅಂಶಗಳನ್ನು ಅಂದರೆ ಆಚರಣೆ, ಸಂಪ್ರದಾಯ, ನಂಬಿಕೆಗಳನ್ನು ಗಮನಿಸಿದಾಗ ಉಪಸಂಸ್ಕೃತಿಗಳು ಅಲೆಮಾರಿಗಳಾಗಿದ್ದು, ಸರಳ ಜೀವನ ಶೈಲಿಯನ್ನು ಹೊಂದಿದ್ದು ಹೊಟ್ಟೆ ಪಾಡೇ ಪ್ರಧಾನವಾಗಿದ್ದರೂ ಸಹ ತಮ್ಮ ಮೂಲ ಆಚರಣೆ-ಸಂಪ್ರದಾಯಗಳನ್ನು ಬಿಡದೆ ಪಾಲಿಸಿಕೊಂಡು ಬಂದಿರುತ್ತಾರೆ. ಕೆಲವೊಂದು ನಿಯಮಗಳನ್ನಂತು ಚಾಚೂ ತಪ್ಪದೆ ಪಾಲಿಸುತ್ತಾರೆ. ಋತುಮತಿಯಾದ ಹುಡುಗಿಯನ್ನು ಒಂಟಿಯಾಗಿ ಗುಡಿಸಿಲಿನಲ್ಲಿಡುವುದು ಬಹುಶಃ ಮುಂದಿನ ವೈವಾಹಿಕ ಜೀವನದಲ್ಲಿ ಹೆತ್ತವರನ್ನು ಬಿಟ್ಟು ಹೋಗಬೇಕಾಗುತ್ತದೆ, ಎಂಬುದರ ಸೂಚಕವೆಂಬಂತೆ ಅಪರಿಚಿತ ಸ್ಥಳಕ್ಕೆ ಹೊಂದಿಕೊಳ್ಳಲು ಪೂರ್ವಸಿದ್ಧತೆ ಮಾಡಿದಂತೆಯೆ ಕಾಣಿಸುತ್ತದೆ. ಮದುವೆಯ ಶುಭ ಸಂದರ್ಭದಲ್ಲಿ, ದುಷ್ಟ ಶಕ್ತಿಯ ನಿಗ್ರಹದಲ್ಲಿ, ಮಾಟ-ಮಂತ್ರದ ನಿವಾರಣೆಯಲ್ಲಿ, ದೆವ್ವ-ಭೂತಗಳನ್ನು ತೊಲಗಿಸುವುದರಲ್ಲಿ ಹೀಗೆ ಪ್ರತಿಯೊಂದು ಆಚರಣೆಯ ಪ್ರಮುಖ ಕೇಂದ್ರ ಬಾಗಿಲು ಮತ್ತು ಹೊಸ್ತಿಲುಗಳೇ ಆಗಿವೆ. ಹೊಸ್ತಿಲು

ಹೊರಗೆ ಕಾಲಿಡುವುದರ ಮೂಲಕ ಋಣ ತೀರಿದರ ಸಂಕೇತವಾದರೆ, ಹೊಸ್ತಿಲು ತುಳಿಯುವ ಮೂಲಕ ಹಕ್ಕು ಸ್ಥಾಪಿಸುವುದಾಗಿದೆ. ಬರುವ ದುಷ್ಟಶಕ್ತಿಯ ಒಳ ಪ್ರವೇಶಿಸಿದಂತೆ ಬಾಗಿಲಿನಿಂದಲೆ ಆಚೆ ಹೋಗುವಂತೆ ಮಾಡುವುದು ಕಂಡುಬರುತ್ತದೆ. ಹೊಸ್ತಿಲು ಇಲ್ಲಿ ಮನುಷ್ಯನಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ರಕ್ಷಣೆಯನ್ನು ಒದಗಿಸುತ್ತದೆ. ಅಲ್ಲದೆ ಸತ್ತ ವ್ಯಕ್ತಿಯ ಸಂಬಂಧ ಕಡಿದುಕೊಳ್ಳುವಲ್ಲಿ ಹೊಸ್ತಿಲು ನಿರ್ವಹಿಸುವ ಪಾತ್ರ ಹಿರಿದಾಗಿದೆ.

ಮಲೆನಾಡಿನಲ್ಲಿ ನೆಲೆಸಿರುವ ಒಕ್ಕಲಿಗರಲ್ಲಿ ಸುಡುವ ಮತ್ತು ಹೂಳುವ ಎರಡು ರೀತಿಯ ಶವಸಂಸ್ಕಾರ ಪದ್ಧತಿಗಳಿವೆ. ಮೃತನ ಶರೀರ ಮನೆಯಿಂದ ಎತ್ತಿಕೊಂಡು ಹೋದ ಕೂಡಲೇ ಮನೆಯಲ್ಲಿರುವ ಹೆಣ್ಣು ಮಕ್ಕಳು ಮನೆ ಗುಡಿಸಿ, ಸಾರಿಸಿ ಶುಚಿಗೊಳಿಸಿ ಮೃತನು ಪ್ರಾಣ ಬಿಟ್ಟ ಸ್ಥಳದಲ್ಲಿ ಒಂದು ಮಣೆ ಇಟ್ಟು ಅದರ ಮೇಲೆ ಹಣತೆ ಹಚ್ಚಿಡುತ್ತಾರೆ. ಪಕ್ಕದಲ್ಲಿ ಒಂದು ಚೊಂಬು (ತಂಬಿಗೆ) ನೀರು ಇಡುತ್ತಾರೆ. ಈ ಕಡೆ ಶವ ಸಂಸ್ಕಾರದಲ್ಲಿ ಪಾಲ್ಗೊಂಡಿದ್ದವರು ಸ್ಮಶಾನದಿಂದ ಹಿಂದಿರುಗಿ ಮನೆಯ ಅಂಗಳದಲ್ಲಿ ಕೈಕಾಲು ತೊಳೆದುಕೊಂಡು ಸಗಣಿ ನೀರು ತಲೆಗೆ ಚಿಮುಕಿಸಿಕೊಂಡು ಇಲ್ಲವೆ ತುಳಿದುಕೊಂಡು ಮನೆಯ ಒಳಗೆ ಬರುತ್ತಾರೆ.

ಸತ್ತ ವ್ಯಕ್ತಿಯ ಹಿರಿಯ ಮಗ ಮನೆಯ ಹೊಸ್ತಿಲು ತುಳಿಯುವ ವೇಳೆಗೆ ಮುಂಬಾಗಿಲಿನ ಸೂರಿನ ತೊಲೆಗೆ ಹಗ್ಗ ಕಟ್ಟಿ ಪಕ್ಕದಲ್ಲಿ ಕತ್ತಿ ಇಟ್ಟು ಬಾಗಿಲಿಗೆ ಎದುರಾಗಿ ಕಾಣುವಂತೆ ಮಣೆ-ಮೊರ ಗೋಡೆಗೆ ಒರಗಿಸಿ ಇಟ್ಟಿರುತ್ತಾರೆ. ಅಂತ್ಯಕ್ರಿಯೆ ಮುಗಿಸಿ ಮಗ ಮನೆಯನ್ನು ಪ್ರವೇಶಿಸುವಾಗ ಕತ್ತಿಯಿಂದ ಹಗ್ಗ ಕತ್ತರಿಸಿ ಹೊಸ್ತಿಲಿನ ಒಳಗೆ ಕಾಲಿಡುತ್ತಾನೆ.[೯] ಇದು ಸತ್ತ ವ್ಯಕ್ತಿ ಈ ಲೋಕದ, ಮನೆಯ ಸಂಬಂಧವನ್ನು ಕಡೆದುಕೊಂಡುದುದರ ಸಂಕೇತವಿರಬಹುದು. ಸಾಮಾನ್ಯವಾಗಿ ದಿನನಿತ್ಯದ ಬದುಕಿನಲ್ಲಿ ಮಣೆ-ಮೊರ ಗಳನ್ನು ಬಾಗಿಲಿಗೆ ಎದುರಾಗಿ ಕಾಣುವಂತೆ ಇಡುವುದು ಅಶುಭವೆಂದು ಹೇಳುತ್ತಾರೆ. ಆದರೆ ಸಾವಿನ ಸಂದರ್ಭದಲ್ಲಿ ಅದು ಅನುಕೂಲಕರವೆನಿಸುವುದು ವಿಶೇಷ.

ಹುಟ್ಟು ಮತ್ತು ಸಾವು ಎರಡು ಜೀವನದ ಪ್ರಾರಂಭ ಮತ್ತು ಅಂತಿಮ ಘಟ್ಟಗಳು. ಉಪಸಂಸ್ಕೃತಿಯಲ್ಲಿ ಹುಟ್ಟಿದ ಮಗುವಿನ ನಾಮಕರಣ ಸಂದರ್ಭದಲ್ಲಿ ಹೆಸರು ಕೂಗುತ್ತಾ ಮನೆಯ ಹೊರಗೆ ಮತ್ತು ಒಳಗೆ ತಿರುಗಾಡಿ ಆ ಮಗುವಿನ ಹೆಸರು ಜಗತ್ತಿಗೆ ಪರಿಚಯಿಸುವುದಾದರೆ, ಹೊಸ್ತಿಲು ತುಳಿಯುವ ಮುನ್ನ ಮುಂಬಾಗಿಲಿನ ಹಗ್ಗ ಕತ್ತರಿಸುವುದರ ಮೂಲಕ ಇಹದ ಸಂಬಂಧ ಕತ್ತರಿಸಿದಂತೆ. ಹೀಗೆ ಹೊಸ್ತಿಲು ಸಂತೋಷದ ಕ್ಷಣಗಳಲ್ಲಿ ದುಃಖದ ಸನ್ನಿವೇಶದಲ್ಲಿ ತನ್ನ ಇರುವಿಕೆಯನ್ನು ತೋರಿಸುತ್ತಲೇ ಇದೆ.

೩. ಕೌಟುಂಬಿಕ ರಚನೆ ಮತ್ತು ಸ್ತ್ರೀ-ಪುರುಷರ ಸಂಬಂಧಗಳು : ಉಪಸಂಸ್ಕೃತಿಯ ಕುಟುಂಬಗಳಲ್ಲಿ ಮಾತೃಪ್ರಧಾನ ವ್ಯವಸ್ಥೆ ಇತ್ತು ಎಂಬುದಕ್ಕೆ ಹಲವಾರು ನಿದರ್ಶನಗಳು ದೊರೆಯುತ್ತವೆ. ಜನ್ಮ ಕೊಡುವವಳು, ಸಂರಕ್ಷಣೆ

ಮಾಡುವವಳು ಆದ ಸ್ತ್ರೀ ಗೌರವಯುತವಾದ ಸ್ಥಾನವನ್ನು ಪಡೆದಿದ್ದಳು. ದುಡಿಮೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದ ಸ್ತ್ರೀ ಆಹಾರ ಹಂಚಿಕೆಯಿಂದ ಹಿಡಿದು ಆಸ್ತಿ ಹಂಚಿಕೆಯವರೆಗೂ ಅವಳ ಕಾರ್ಯವ್ಯಾಪ್ತಿ ಹರಡಿತ್ತು. ಸಾಮಾನ್ಯವಾಗಿ ಅವಿಭಕ್ತ ಕುಟುಂಬಗಳೇ ಹೆಚ್ಚಾಗಿದ್ದವು. ಇವರ ಸಂಬಂಧಗಳ ನಡುವೆ ಭಾವುಕತೆ ಎದ್ದು ಕಾಣುತ್ತದೆ. ಕುಟುಂಬದ ಒಬ್ಬ ಸದಸ್ಯನಿಗೆ ಆದ ಮಾನ-ಅಪಮಾನ ಮನೆಯವರಿಗೆಲ್ಲ ಆದಂತೆ ಎಂದು ಭಾವಿಸುತ್ತಾರೆ. ಪ್ರಧಾನ ಸಂಸ್ಕೃತಿಯು ಪ್ರಭಾವದಿಂದ ಇವರಲ್ಲಿಯೂ ಇತ್ತೀಚೆಗೆ ಕುಟುಂಬದಲ್ಲಿ ತಂದೆಯೆ ಅಂದರೆ ಮನೆಯ ಯಜಮಾನನೇ ಪ್ರಮುಖ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ. ವಾರಸುದಾರಿಕೆಯು ತಂದೆಯಿಂದ ಮಗನಿಗೆ ವರ್ಗಾವಣೆಯಾಗುತ್ತದೆ. ಆದರೂ ಆಸ್ತಿಯಲ್ಲಿ ಮನೆಯ ಹೆಣ್ಣು ಮಗಳಿಗೂ ಪಾಲು ಇತ್ತು ಎನ್ನುವುದು ಗಮನಾರ್ಹ ಸಂಗತಿ.

ಅಲೆಮಾರಿಗಳಾದ ಇವರಿಗೆ ಸ್ಥಿರ ಆಸ್ತಿಯ ಕೊರತೆಯೂ ಇತ್ತು. ಬಳಿಗಳು ಮಾತ್ರ ಸ್ತ್ರೀಯಿಂದಲೇ ಬರುತ್ತಿದ್ದವು. ಒಂದು ವೇಳೆ ಗಂಡು ಸಂತಾನವಿಲ್ಲದೆ ಇದ್ದರೆ ಹೆಣ್ಣನ್ನು ವಿವಾಹ ಮಾಡಿ ಬೇರೆ ಮನೆಗೆ ಕಳುಹಿಸಿದರೆ ತಮ್ಮ ಆಸ್ತಿಯು ಅವರಿಗೆ ವರ್ಗಾವಣೆಯಾಗುತ್ತದೆ ಎಂದು ಅಲ್ಲದೆ ತಮಗೆ ಮುಪ್ಪಿನ ಕಾಲದಲ್ಲಿ ಆಶ್ರಯಕ್ಕಾಗಿ ಅವಶ್ಯಕತೆ ಬೀಳುವುದು ಎಂದು 'ಮಗಳನ್ನು ದೇವದಾಸಿ'ಯಾಗಿ ಬಿಟ್ಟು ತಾವು ಮತ್ತು ಮಗಳು ಒಟ್ಟಿಗೆ ಇರುವಂಥ ಸ್ವಾರ್ಥ ಆಚರಣೆಯೂ ಕಂಡು ಬರುತ್ತದೆ. ಮೇಲೆ ಹೇಳಿದಂತೆ ಅವಿಭಕ್ತ ಕುಟುಂಬಗಳೇ ಅಧಿಕವಾಗಿದ್ದು ಕುಟುಂಬದ ಪ್ರತಿಯೊಬ್ಬ ಸದಸ್ಯ ದುಡಿಮೆಯಲ್ಲಿ ಪಾಲ್ಗೊಳ್ಳಬೇಕಾಗುತ್ತಿತ್ತು. ದುಡಿಮೆಯಲ್ಲಿ ಸ್ತ್ರೀ ಪ್ರಧಾನ ಭಾಗಿದಾರಳಾಗಿ ಕಾಣುವುದರಿಂದ ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಡುವ, ಅನ್ಯಾಯಕ್ಕೆ ಪ್ರತಿಭಟಿಸುವ, ತನ್ನ ಮೇಲಾಗುವ ದೈಹಿಕ ಮತ್ತು ಮಾನಸಿಕ ಕಿರುಕುಳವನ್ನು ಅನುಭವಿಸುವ ಪ್ರವೃತ್ತಿಯ ಬದಲು ಅದನ್ನು ಪಂಚಾಯಿತಿ ಕಟ್ಟೆಗೆ ಸಾದರ ಪಡಿಸುವ ಧೈರ್ಯ ಹೊಂದಿದ್ದಾಳೆ. ಪ್ರಧಾನ ಸಂಸ್ಕೃತಿಯ ಮಹಿಳೆ ಕುಟುಂಬದ ಜಗಳ ಹೊಸ್ತಿಲು ದಾಟಿ ಹೊರಗೆ ಬಂದರೆ ಸಮಾಜದಲ್ಲಿ ಪ್ರತಿಷ್ಠೆಗೆ ಕುಂದು ಎಂದು ಮೂಕ ವೇದನೆಯನ್ನು ಅನುಭವಿಸುವ ವಿರುದ್ಧ ಪ್ರವೃತ್ತಿ ಕಾಣಿಸುತ್ತದೆ. ಪ್ರಧಾನ ಸಂಸ್ಕೃತಿ ಎಂದು ವೈಭವಿಕರಿಸುವ ಶಿಷ್ಟ ಜನಾಂಗದ ಹೊಸ್ತಿಲ ಒಳಗಿನ ಸ್ತ್ರೀ ಬದುಕು ಕನಿಷ್ಠ ಮಟ್ಟದ್ದಾಗಿದ್ದರು, ಹೊಸ್ತಿಲ ಹೊರಗೆ ಮಾತ್ರ ತಾನು ಸುಖವಾಗಿದ್ದೇನೆ ಎನ್ನುವ ನಕಲಿ ಮುಖವಾಡ ಧರಿಸಿಕೊಂಡಿದ್ದಾಳೆ.

ಉಪಸಂಸ್ಕೃತಿಗಳಲ್ಲಿ ಇತ್ತೀಚೆಗೆ ದೊಡ್ಡ ಕುಟುಂಬಗಳ ನಿರ್ವಹಣೆ ಕಷ್ಟವಾಗುತ್ತಿದ್ದರಿಂದ ವಿಭಕ್ತ ಕುಟುಂಬಗಳು ತಲೆ ಎತ್ತುತ್ತಿವೆ. ಮದುವೆಯಾದ ಮಗ ತನ್ನ ಹೆಂಡತಿಯೊಡನೆ ಬೇರೆ ಗುಡಿಸಲು ಹಾಕಿಕೊಂಡು ಸ್ವತಂತ್ರ ಬದುಕು ಬದುಕುತ್ತಾನೆ. ಇದಕ್ಕೆ ಹಿರಿಯರ ಸಂಪೂರ್ಣ ಒಪ್ಪಿಗೆಯೂ ದೊರೆಯುತ್ತದೆ. ಇಂತಹ ಪ್ರವೃತ್ತಿ ಪ್ರಧಾನ ಸಂಸ್ಕೃತಿಯ ಕುಟುಂಬವೊಂದರಲ್ಲಿ ಸಂಸಾರ ಒಡೆಯುವುದರ ಸಂಕೇತವೆಂಬಂತೆ, ತಮ್ಮ ಸಮಾಜದಲ್ಲಿ ಅಪಮಾನ ಎಂದು ಈ ರೀತಿಯ ವರ್ತನೆಗಳಿಗೆ ಸುತಾರಾಂ

ಒಪ್ಪಿಗೆ ಇಲ್ಲ. ಇಲ್ಲಿ ಯಾವತ್ತೂ ನಿರ್ಬಂಧನದಲ್ಲಿಯೇ ಬದುಕು ಸಾಗಿಸಬೇಕು. ಆದರೆ ಉಪಸಂಸ್ಕೃತಿಯಲ್ಲಿ ನಿರ್ಬಂಧ ಬದುಕಿಗಿಂತ ಮುಕ್ತ ಬದುಕು ಹೆಚ್ಚು ಮಾನ್ಯತೆ ಪಡೆತುಕೊಳ್ಳುತ್ತದೆ.

ಪತಿ-ಪತ್ನಿಯರು ಕುಟುಂಬದಲ್ಲಿ ಸಮಾನವಾದ ಸ್ಥಾನ ಹೊಂದಿರುವುದರಿಂದ ಪರಸ್ಪರ ಏಕವಚನದಲ್ಲಿ ಸಂಬೋಧಿಸುವುದನ್ನು ಗಮನಿಸಬಹುದು. ಇದು ಪರಸ್ಪರರ ಅನ್ಯೋನ್ಯತೆಯ ಪ್ರತೀಕವಾಗಿದೆ. ಆದರೂ ಹಿರಿಯ ಮಹಿಳೆಗಿರುವ ಅಧಿಕಾರ, ಸ್ವಾತಂತ್ರ್ಯ ಸೊಸೆಯಾಗಿ ಬಂದವಳಿಗೆ ಇರುವುದಿಲ್ಲವೆಂದು ಇವರ ಕೆಲವೊಂದು ನಿಯಮಗಳ ಪಾಲನೆಯಲ್ಲಿ ಗೊತ್ತಾಗುತ್ತದೆ.

ಸೊಸೆಯಾಗಿ ಬಂದವಳು ಕೊಂಚ ತಗ್ಗಿ-ಬಗ್ಗಿ ಹಿರಿಯರಿಗೆ ವಿಧೇಯಳಾಗಿ ಅತ್ತೆ-ನಾದಿನಿಯರಿಗೆ ಪ್ರತಿಯಾಡದೆ ಇರುವಂತೆ ಬಯಸುತ್ತಾರೆ. ಮನೆಯ ಪುರುಷರ ಎದುರು ಓಡಾಡುವುದಾಗಲೀ, ತನ್ನ ವಯಸ್ಸಿನ ಮೈದುನರ ಜೊತೆಗೆ ಆಗಲಿ, ತನಗಿಂತ ಹಿರಿಯರಾದ ಭಾವನ ಜೊತೆಯಲ್ಲಿ ಗಂಡನಿಲ್ಲದಾಗ ಸಲಿಗೆಯಿಂದ ಮಾತನಾಡುವುದು ನಿಷಿದ್ಧ. ಕೈ ಸ್ಪರ್ಶವೂ ಆಗದ ಹಾಗೆ ಎಚ್ಚರಿಕೆ ವಹಿಸಬೇಕು. ಇದು ಲೈಂಗಿಕ ಆಕರ್ಷಣೆಗೆ ಕಾರಣವಾಗಬಹುದು ಎನ್ನುವ ಮುಂದಾಲೋಚನೆಯೇ ಆಗಿರಬಹುದು. ಆದರೆ ವಿಚಿತ್ರವೆಂದರೆ 'ಗಂಡ ಸತ್ತ ನಂತರ ಆ ಮನೆಯ ಪುರುಷ (ಭಾವ-ಮೈದುನ) ಇಷ್ಟಪಟ್ಟರೆ ಮದುವೆ ಆಗಬಹುದು. ಈ ರೀತಿ ಬದುಕನ್ನು ಜಡಗೊಳಿಸುವ ಬದಲು ಸಂದರ್ಭಕ್ಕೆ ತಕ್ಕಂತೆ ನಿಯಮಗಳಲ್ಲಿ ಸಡಿಲಿಕೆಯೂ ಆಗುವುದು ವೇದ್ಯವಾಗುತ್ತದೆ.' ಆದರೂ ಇಲ್ಲಿಯೂ ಕೆಲವೊಂದು ನಿಯಮಗಳಿವೆ. ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲೇಬೇಕು. ನಿಯಮಗಳ ಉಲ್ಲಂಘನೆಗೆ ಪಂಚಾಯ್ತಿಯಿಂದ ಶಿಕ್ಷೆಗೊಳಪಡಿಸಲಾಗುತ್ತದೆ.

ಸ್ತ್ರೀ ಯಾವುದೇ ಸಂಸ್ಕೃತಿಯಲ್ಲಿರಲಿ ಅಲ್ಲಿ ನಿರ್ಬಂಧನೆಗಳು ಇದ್ದೇ ಇರುತ್ತವೆ ಎಂಬುದು ಸರ್ವವಿಧಿತ. ಸ್ತ್ರೀ-ಪುರುಷನ ಸಮಾನ ಸ್ಥಾನ ಹೊಂದಿದ ಉಪಸಂಸ್ಕೃತಿಯಲ್ಲಿಯೂ ಕೂಡ ರಾತ್ರಿ ಹೊತ್ತು ಮನೆಯ ಯಜಮಾನನ ಅಪ್ಪಣೆ ಇಲ್ಲದೆ ಹೊಸ್ತಿಲು ದಾಟಿ ಹೊರಗೆ ಹೋಗುವಂತಿಲ್ಲ. ಬೇರೆ ಕಡೆಗೆ ಇರುವಂತಿಲ್ಲ. ವಿವಾಹವಾಗದ ಕನ್ಯೆ ಬೇರೆ ಜಾತಿಯ ಯುವಕನೊಡನೆ ಮಾತನಾಡಬಾರದು. ಇಷ್ಟೆಲ್ಲಾ ನಿಷೇಧಗಳ ಮಧ್ಯೆಯೂ ಸ್ತ್ರೀ ಕೆಲವೊಂದು ವಿಷಯಗಳಲ್ಲಿ ಸ್ವಂತ ನಿರ್ಣಯ ತೆಗೆದುಕೊಳ್ಳಲು ಸ್ವಾತಂತ್ರ್ಯ ಪಡೆದುಕೊಂಡಿದ್ದಾಳೆ. ಅದು ವಿವಾಹಕ್ಕೆ ಸಂಬಂಧಪಟ್ಟ ವಿಷಯವಿರಬಹುದು, ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ವಿಷಯವಿರಬಹುದು ಅಥವಾ ಮರುವಿವಾಹಕ್ಕೆ ಸಂಬಂಧಿಸಿದ ವಿಷಯವೇ ಆಗಿರಬಹುದು.

ಉಪಸಂಸ್ಕೃತಿಯಲ್ಲಿ ಸ್ತ್ರೀ ಕೂಡ ತನಗೆ ಇಷ್ಟವಾದ ಪುರುಷನೊಡನೆ ಮದುವೆಯಾಗಬಹುದು. ತನಗೆ ಗಂಡನೊಂದಿಗೆ ಬಾಳಲು ಇಷ್ಟವಿಲ್ಲದಿದ್ದರೆ ವಿಚ್ಛೇದನವೂ ಪಡೆಯಬಹುದು. ಇಷ್ಟಾದರೂ ಇವರಲ್ಲಿ ಅನೈತಿಕ ಸಂಬಂಧಗಳು ಕಾಣಿಸಿಕೊಳ್ಳುವುವು. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಊರ ಪಂಚಾಯಿತಿ

ನೀಡುವುದು. ವಿಧವೆಯನ್ನು ಮದುವೆಯಾಗಲೂ ಯಾರಾದರೂ ಮುಂದೆ ಬಂದರೆ ಸೀರುಡಿಕೆ ಮಾಡಿಕೊಳ್ಳಬಹುದು. ಪ್ರಧಾನ ಸಂಸ್ಕೃತಿಯಲ್ಲಿನ ಹೃದಯ ವಿದ್ರಾವಕವಾದ ಕೇಶಮುಂಡನೆ, ಬಿಳಿ ಬಟ್ಟೆ ಧರಿಸುವುದು, ವ್ರತಾಚಾರಣೆಯಲ್ಲಿ ಕಾಲ ಕಳೆಯುವುದು ಇವ್ಯಾವು ಇಲ್ಲ. ಆಕೆ ವಿಧವೆಯಾದರೂ ಸಾಮಾನ್ಯ ಸ್ತ್ರೀಯಂತೆ ಜೀವಿಸುವ ಸಂಪೂರ್ಣ ಹಕ್ಕು ಪಡೆದಿದ್ದಾಳೆ. ಈ ಎಲ್ಲದರ ಮಧ್ಯೆ ಸ್ತ್ರೀ ಪಡೆದ ಸ್ಥಾನ ಜೀವಿಸುವ ರೀತಿ ಪ್ರಧಾನ ಸಂಸ್ಕೃತಿಗಿಂತ ಉತ್ತಮಮಟ್ಟದ್ದಾಗಿದೆ. ಕೆಲವೊಂದು ಸಮಯದಲ್ಲಿ ಇಲ್ಲಿಯು ಹೊಸ್ತಿಲು ಸ್ತ್ರೀಗೆ ನಿರ್ಬಂಧವೆನಿಸಬಹುದು. ಆದರೆ ಅವಕಾಶಗಳಲ್ಲಿ ಸಮಾನತೆಗಳಿವೆ. ಆದರೆ ಆಚರಣೆಯಲ್ಲಿ ಮೈಲಿಗೆ, ಸೂತಕ, ಹೆಣ್ಣಿಗೆ ವಿನಃ ಗಂಡಿಗೆ ಇಲ್ಲ. ಇದರ ಅರ್ಥ ಸಂಸ್ಕೃತಿ ಯಾವುದೇ ಇರಲಿ ಲಲ್ಲಿ ಹೊಸ್ತಿಲು ಇದ್ದೆ ಇರುತ್ತದೆ. ಎಲ್ಲಿ ಹೊಸ್ತಿಲಿನ ಪರಿಕಲ್ಪನೆ ಇದೆಯೋ ಅಲ್ಲಿ ಕಟ್ಟಳೆಗಳು ಉಸಿರಾಡುತ್ತವೆ. ದಿನವಿಡೀ ಹೊರಗೆ ಜೀವನೋಪಾಯಕ್ಕಾಗಿ ದುಡಿಯುವ ಇವರಲ್ಲಿ ರಾತ್ರಿ ಹೊತ್ತು ಯಜಮಾನನ ಅಪ್ಪಣೆ ಇಲ್ಲದೆ ಮನೆಯಿಂದ ಹೊರ ಹೋಗುವಂತಿಲ್ಲ. ಪರಪುರುಷರೊಡನೆ ಮಾತನಾಡುವಂತಿಲ್ಲ. ಹೀಗೆ ಹೆಣ್ಣಿನ ಸುತ್ತ ನಿರ್ಬಂಧಗಳ ಬೇಲಿಯೇ ಇದೆ. ಅದರ ಮಿತಿಯಲ್ಲಿ ಅಲ್ಲದಿದ್ದರೂ ಗುಂಪು ಜೀವನ ಸುಸೂತ್ರವಾಗಿ ನೆರವೇರಲಿ ಎಂದೋ ಕೌಟುಂಬಿಕ ಜೀವನ ಹಾಳಾಗದಿರಲಿ ಎಂದೋ ಮಹಿಳೆ ಆ ಎಲ್ಲ ಕಟ್ಟುಪಾಡುಗಳನ್ನು ಪಾಲಿಸುತ್ತಾಳೆ. ಸಾಲದೆಂಬಂತೆ ಈ ಕಟ್ಟುಪಾಡುಗಳಿಗೆ ಧರ್ಮ, ದೇವರು, ಶೀಲ, ಪಾತಿವ್ರತ್ಯವೆಂಬ ಕಾರಣಗಳು ಬೇರೆ ಬಂದು ಸೇರಿಕೊಳ್ಳುತ್ತವೆ. ಅಂದರೆ ಸ್ತ್ರೀಯನ್ನು ಮಾನಸಿಕವಾಗಿ ಅಶಕ್ತಳನ್ನಾಗಿಸುವ ಅಸ್ತ್ರಗಳಿವು. ಹೊರಗೆ ಶೀಲಕ್ಕೆ ಧಕ್ಕೆ ಇದೆ ಎಂದು ಆಕೆಯನ್ನು ಮನೆಯಲ್ಲಿಯೆ ಬಂಧಿಸಿಡುವುದು. ಅಕಸ್ಮಾತ್ ಆ ಧಕ್ಕೆ ಬಂದರೆ ಅವಳಿಗೆ ಸಾಂತ್ವಾನ ಹೇಳಿ ಧೈರ್ಯ ತುಂಬಿ ಮುಂದಿನ ಜೀವನಕ್ಕೆ ಅಣಿಗೊಳಿಸುವ ಬದಲು ಆ ಬಲತ್ಕಾರಿಯೊಂದಿಗೆ ಜೀವನ ನಡೆಸುವಂತೆ ಒತ್ತಾಯಿಸುತ್ತದೆ ಸಮಾಜ. ಮೋಸ ಮಾಡಿದ ವ್ಯಕ್ತಿಯನ್ನು ಶಿಕ್ಷಿಸುವ ಬದಲು ಮೋಸಕ್ಕೊಳಗಾದವಳನ್ನೇ ಜೀವನಪೂರ್ತಿ ಶಿಕ್ಷೆ ಅನುಭವಿಸುವಂತೆ ಮಾಡುತ್ತದೆ ಈ ಸಮಾಜ. ಇದೇ ನಮ್ಮ ಸಂಸ್ಕೃತಿ ಎಂದು ಬಡಾಯಿ ಕೊಚ್ಚಿಕೊಳ್ಳುತ್ತದೆ. ಇದನ್ನು ಕಂಡ ಉಳಿದವರು ಬೇಲಿಯ ಒಳಗೆ ನಮ್ಮ ಸುರಕ್ಷೆ ಇದೆ ಎಂದು ಅದರ ಪರಿಧಿಯಲ್ಲಿಯೇ ನೆಮ್ಮದಿ ಹುಡುಕುತ್ತಾರೆ. ಸ್ತ್ರೀ ಅಬಲೆ ಅಲ್ಲ. ಆದರೆ ಪ್ರಕೃತಿ ನೀಡಿದ ಮುಟ್ಟು-ಗರ್ಭ-ಹೆರಿಗೆ ಇವು ಆಕೆಯ ಸ್ವಚ್ಛಂದ ಬದುಕಿನಿಂದ ಪ್ರತ್ಯೇಕ ಬದುಕಿನೆಡೆಗೆ ಕೊಂಡೊಯ್ಯುವಂತವುಗಳೇ ಆಗಿವೆ. ಒಬ್ಬರ ದೌರ್ಬಲ್ಯಗಳು ಮತ್ತೊಬ್ಬರಿಗೆ ಬಲವಾಗಿ ಪರಿಣಮಿಸುತ್ತಿವೆ ಎಂಬ ಲೋಕರೂಢಿಗೆ ಈ ಮೇಲಿನ ವಿಷಯಗಳೇ ಸಾಕ್ಷಿ.

೩.೨. ಪ್ರಧಾನ ಸಂಸ್ಕೃತಿಗಳು

ಸಮಾಜದಲ್ಲಿ ಮೇಲ್ವರ್ಗ, ಉತ್ತಮ ಜೀವನಕ್ರಮ, ಪ್ರಭುತ್ವ, ಅತಿಕ್ರಮಣ ದಬ್ಬಾಳಿಕೆ ಮುಂತಾದ ಲಕ್ಷಣಗಳನ್ನು ಹೊಂದಿರುವಂತಹದ್ದೆ ಪ್ರಧಾನ ಸಂಸ್ಕೃತಿ. ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರೆದ

ಈ ಸಂಸ್ಕೃತಿ ದುಡಿಮೆಯನ್ನು ಕನಿಷ್ಠವೆಂದು ಭಾವಿಸಿ ದುಡಿಯುವವರನ್ನು ಕೀಳಿಕರಿಸಿವೆ. ಆ ದುಡಿಮೆಯ ಪರಿಧಿಯಲ್ಲಿಯೇ ಸ್ತ್ರೀ ಕಾಣಿಸಿಕೊಳ್ಳುವುದರಿಂದ ಆಕೆಯನ್ನು ಕನಿಷ್ಠವಾಗಿಯೆ ನೋಡಲಾಗಿದೆ. ಪ್ರಾಪಂಚಿಕ ಜ್ಞಾನ ಪಡೆಯುವುದರಿಂದ ತನಗಿಂತ ಅಥವಾ ತನಗೆ ಸಮವಾಗಬಹುದು ಎನ್ನುವ ದುರುದ್ದೇಶದಿಂದ ಆಕೆಯನ್ನು ಗೃಹಬಂಧನದಲ್ಲಿಡುವ ಹುನ್ನಾರ ಮಾಡಿದ ಪುರುಷ. ಯಾವತ್ತು ದುಡಿಯುವ ವರ್ಗದಿಂದ ಅಜ್ಞಾನವನ್ನೇ ನಿರೀಕ್ಷಿಸುವ ದುಡಿಸಿಕೊಳ್ಳುವ ವರ್ಗದ ಹುನ್ನಾರ ಇದು.

ಸಾಮಾನ್ಯವಾಗಿ ಪಿತೃಪ್ರಧಾನ ಸಂಸ್ಕೃತಿಯನ್ನು ಹೊಂದಿದ ಪ್ರಧಾನ ಸಂಸ್ಕೃತಿಯೊಂದರಲ್ಲಿ ಸ್ತ್ರೀ ಶೂದ್ರ ಸ್ಥಾನದಲ್ಲಿದ್ದಾಳೆ. ಸಮಾಜದಲ್ಲಿಯೇ ಆಗಲೀ, ಕುಟುಂಬದಲ್ಲಿಯೇ ಆಗಲಿ, ಎರಡನೆ ದರ್ಜೆಯ ಪ್ರಜೆಯಾಗಿಯೆ ಇದ್ದಾಳೆ. ಆರ್ಥಿಕ ವಹಿವಾಟು, ಸಾಮಾಜಿಕ ಸ್ಥಾನಮಾನ, ಧಾರ್ಮಿಕ ಕಾರ್ಯಾಚರಣೆಯಲ್ಲಿ ಪುರುಷನದೇ ಮೈಲುಗೈ. ಮಡಿವಂತಿಕೆಯ ಎಷ್ಟೋ ಕುಟುಂಬಗಳಲ್ಲಿ ಇಂದಿಗೂ ಹೆಣ್ಣು ಹೊಸ್ತಿಲಿನೊಳಗೆ ಇರಬೇಕೆಂಬ ಕಟ್ಟುಪಾಡುಗಳಿವೆ. ಈ ಬಗೆಯ ನಡವಳಿಕೆ ಸಂಪ್ರದಾಯಸ್ಥ ಅವಿಭಕ್ತ ಕುಟುಂಬಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಮನೆಯ ಯಜಮಾನ ಹೇಳಿದ ವಾಕ್ಯ ಯಾರು ಮೀರುವಂತಿಲ್ಲ. ಆತ ಹಾಕಿದ ಗೆರೆ ಯಾರು ದಾಟುವಂತಿಲ್ಲ. ಹೆಣ್ಣಂತು ಇದರ ಬಗ್ಗೆ ಊಹೆ ಕೂಡ ಮಾಡುವುದು 'ಪಾಪ' ಎಂದು ಆಕೆಯನ್ನು ಆ ಮಟ್ಟದ ಮಾನಸಿಕ ತಯಾರಿಯನ್ನು ಮಾಡಿರುತ್ತಾರೆ. ತಂದೆ-ಗಂಡ-ಮಗ ಹೀಗೆ ಹುಟ್ಟಿನಿಂದ ಸಾವಿನ ಅಂಚಿನವರೆಗೆ ಒಬ್ಬರ ಮಾತು ಕೇಳಿಯೇ ಜೀವನ ನಡೆಸುವಂತಹ ಹೀನಾಯ ಸ್ಥಿತಿ.

ಹೆಣ್ಣೊಬ್ಬಳ ಬೆಳಗಿನ ಮೊದಲ ಕಾರ್ಯಕ್ರಮವೇ ಮನೆಯ ರಕ್ಷಣೆಯ ಹೊರೆ ಹೊತ್ತ ಹೊಸ್ತಿಲಿನ ಪೂಜೆ ಪುನಸ್ಕಾರ, ಭಕ್ತಿಯಿಂದ ಮಣಿಯುವುದು, ರಂಗೋಲಿ-ತಳಿಯಿಂದ ಅಲಂಕರಿಸುವುದು. ಅವಳ



ರಂಗೋಲಿ ಬಿಡಿಸುತ್ತಿರುವ ಮಹಿಳೆ

ಭಕ್ತಿ ಮತ್ತು ಶ್ರದ್ಧೆಯ ಪ್ರತೀಕವಾದ ಮನೆಯ ಹೊಸ್ತಿಲೇ ಅವಳ ಬಾಳಿಗೆ ಅವಳ ಪ್ರಗತಿಗೆ ಕಂಠಕಪ್ರಾಯವಾಗಿದೆ. ಅವಳ ರಕ್ಷಣೆಯ ನೆಪದಲ್ಲಿ ಬಂಧಿಯನ್ನಾಗಿಸಿದೆ. ಅದರ ಉಲ್ಲಂಘನೆ ಅಸಾಧ್ಯ ಪ್ರಯತ್ನವಾಗಿದೆ. "ಹೊಸ್ತಿಲು ದಾಟಿದೆಯೋ ಮತ್ತೆ ಒಳಗೆ ಪ್ರವೇಶವಿಲ್ಲ" ಎನ್ನುವ ವಾಣಿ ಅವಳ ಕಿವಿಯಲ್ಲಿ ಗರ್ಜಿಸುತ್ತದೆ. ಈ ಗರ್ಜನೆಯೆ ಅವಳನ್ನು ತಡೆಯುತ್ತದೆ. ಅವಳನ್ನು ಸೀಮಿತ ವ್ಯಾಪ್ತಿಯಲ್ಲಿಡಲು ಸಹಾಯವಾಗುತ್ತದೆ. ಇದರ ಮೂಲಕ ಅವಳ ಬದುಕನ್ನು ಹತ್ತಿಕ್ಕುವ ಪ್ರಯತ್ನ ಮಾಡಲಾಗುತ್ತದೆ. ಅಂದರೆ ಪ್ರಧಾನ ಸಂಸ್ಕೃತಿಯು ಚೌಕಟ್ಟು, ಕಟ್ಟುಪಾಡುಗಳು, ನೀತಿಸಂಹಿತೆ ಹೀಗೆ ಮುಂತಾದ ರೀತಿಯ ಬೇಲಿಯು ಅವಳನ್ನು ಆವರಿಸಿಕೊಂಡು ಬಂದಿವೆ. ಏನು ಮಾಡಲಾಗದ ಅಸಹಾಯಕ ಪರಿಸ್ಥಿತಿ, ಎಲ್ಲವನ್ನು ನುಂಗಿಕೊಳ್ಳುವ ಸಂದಿಗ್ಧ ಪರಿಸ್ಥಿತಿ. 'ಮೌನವೇ ಬಂಗಾರ' ಎಂಬ ಪ್ರಸಿದ್ಧ ಉಕ್ತಿಯಂತೆ ಮಾತನಾಡಲು ಅವಕಾಶವಿಲ್ಲ. ಆಡಿ ಫಲವಿಲ್ಲ ಎಂದು ತಿಳಿದಾಗ ಮೌನಿಯಾಗಿರುವುದು ಒಳಿತು. ಒಂದು ಕಾಲದಲ್ಲಿ ಮನೆಯ ಹೊಸ್ತಿಲು ಸ್ತ್ರೀಗೆ ಬೇಲಿಯಾಗಿತ್ತು ಎಂದು ಮೇಲೆ ಹೇಳಲಾಗಿದೆ. ಆಧುನಿಕ ಯುಗದಲ್ಲಿ ಆ ಹೊಸ್ತಿಲೇ ಅವಳ ಮೋಕ್ಷಕ್ಕೆ ಸಮಾನತೆ, ಸಾಮಾಜಿಕ ಪರಿವರ್ತನೆಗಳಂತಹ ಸ್ಥಿತ್ಯಂತರಗಳಿಗೆ ಕಾರಣವಾಗಿದೆ. ಈ ಸ್ಥಿತ್ಯಂತರ ಸ್ವಯಂ ಪ್ರೇರಣೆಯಿಂದಲೂ ಆಗಬಹುದು ಅಥವಾ ಬೇರೆಯರ ಪ್ರೇರಣೆಯಿಂದಲೂ ಆಗಿರಬಹುದು. ಸ್ವಯಂ ಪ್ರೇರಣೆಯಿಂದ ಹೊಸ್ತಿಲ ಗಡಿರೇಖೆಯನ್ನು ದಾಟಿದ ಯಲ್ಲಮ್ಮ ತನ್ನ ಪ್ರಗತಿಗಾಗಿ ಅನೇಕ ಕಷ್ಟಕೋಟಲೆಗಳನ್ನು ಉಂಡು ಕೊನೆಗೆ ಯಶಸ್ಸು ಸಾಧಿಸಿದಳು. ಇದು ಪುರುಷ ಪ್ರಧಾನ ಸಮಾಜಕ್ಕೆ ಹಾಕಿದ ಸವಾಲೆಂಬಂತೆ, ಅದನ್ನು ಜಯಿಸಿದ ಸಂಭ್ರಮವೂ ಕೂಡ ಇದರಲ್ಲಿ ಸೇರ್ಪಡೆಯಾಗುತ್ತದೆ. ಜಮದಗ್ನಿಯಂತಹ ಉಗ್ರ ಸ್ವರೂಪಿ ಗಂಡ ಕೇವಲ ಮಾನಸಿಕ ಚಾಂಚಲ್ಯಕ್ಕೆ ಕೊಟ್ಟ ಉಗ್ರ ಶಿಕ್ಷೆಯೆ ತನ್ನ ಗರ್ಭದಿಂದಲೇ ಜನಿಸಿದ ಮಗನಿಂದ (ಪುರುಷನಿಂದ) ಶಿರಚ್ಛೇದನ. ನಂತರ ಅದೇ ಮಗನಿಂದ (ಪುರುಷನಿಂದ) ಪ್ರಾಣ ಭಿಕ್ಷೆ. ಇಲ್ಲಿ ಪುರುಷ ಎಸಗುವ ಅನ್ಯಾಯ ತಾಳ್ಮೆಯೆಂಬ ಹೊಸ್ತಿಲು ದಾಟಿದಾಗ ಧಿಕ್ಕರಿಸುವ ಯಲ್ಲಮ್ಮ ನಿಜವಾಗಿಯೂ ಸ್ತ್ರೀ ಪ್ರತಿಭಟನೆಗೆ ಮಾದರಿಯಾಗಿದ್ದಾಳೆ.

ಪ್ರಧಾನ ಸಂಸ್ಕೃತಿಗಳು ಒಂದೆಡೆ ಹೇಳುವಂತೆ "ಎಲ್ಲಿ ಸ್ತ್ರೀ ಪೂಜಿಸಲ್ಪಡುವಳೋ ಅಲ್ಲಿ ದೇವತೆಗಳು ವಾಸಿಸುತ್ತಾರೆ" ಎಂದು. ಆದರೆ ಅದೇ ಸಂಸ್ಕೃತಿಯಲ್ಲಿ ಸ್ತ್ರೀ ದೌರ್ಜನ್ಯದ ಪರಾಕಾಷ್ಠೆಯನ್ನು ಮುಟ್ಟಿದ್ದಾಳೆ. ಒಂದೆಡೆ ದೇವಿ ಎಂದು ಘೋಷಿಸುವುದು ಮತ್ತೊಂದೆಡೆ ಶೂದ್ರಳಂತೆ ಕಾಣುವುದು, ಧರ್ಮದಲ್ಲಿ ಅಡಗಿದ ವೈರುಧ್ಯವಾಗಿದೆ.

ಸ್ತ್ರೀ ಗರ್ಭದಿಂದಲೇ ಪ್ರಪಂಚದ ಮುನ್ನಡೆ. ಅಂತಹ ಶಕ್ತಿ ಪಡೆದ ಸ್ತ್ರೀ ಅಥವಾ ಪ್ರಕೃತಿ ಆಕೆಗೆ ನೀಡಿದ ಆ ಮಹಾಶಕ್ತಿಯನ್ನು ಗರ್ವದಿಂದ ಮೆರೆಯಬೇಕು. ಆದರೆ ಆ ಗರ್ಭ ನಿಲ್ಲುವಿಕೆಗೆ ಕಾರಣವಾಗುವ ಋತುಚಕ್ರವೇ ಆಕೆಯನ್ನು ಶೂದ್ರಾಳಾಗಿಸಿ ಧಾರ್ಮಿಕ ಕಾರ್ಯದಿಂದ ವಿಮುಕ್ತಳನ್ನಾಗಿಸಿತು.

ಮೊದಲ ಮುಟ್ಟಾಗುವಿಕೆ ಫಲವಂತಿಕೆಯ ಸಂಕೇತವೆಂಬಂತೆ ವೈಭವಿಕರಿಸಿ ಪ್ರತಿ ಋತುಚಕ್ರದಲ್ಲಿ ಕುಟುಂಬದವರಿಂದ ಆಕೆಯನ್ನು ಬೇರ್ಪಡಿಸುವಂತೆ ಮಾಡಿ ಅವಳಲ್ಲಿ ಋತುಚಕ್ರ, ಗರ್ಭ, ಇವುಗಳ ಬಗ್ಗೆ ಹೆಮ್ಮೆಪಡುವ ಬದಲು ಕೀಳರಿಮೆ ಬೆಳೆಯುವಂತಾಗುತ್ತದೆ.

ಸಂತಾನೋತ್ಪತ್ತಿಯಲ್ಲಿ ಗಂಡು-ಹೆಣ್ಣಿನ ಸಮಪಾಲು ಇದೆಯಾದರೂ ಗಂಡಿನ ಕಾರ್ಯ ಒಂದು ಹಂತಕ್ಕೆ ಮಾತ್ರ ಮೀಸಲಾಗಿದ್ದು ಮುಂದಿನ ಸಮಸ್ತ ಕ್ರಿಯೆಯ ಭಾರ ಹೊರವುದು ತಾಯಿಯ ಗರ್ಭವೆ. ಕಾರಣ ಮಗುವಿನ ಪ್ರತಿ ನೋವು-ನಲಿವಿಗೆ ಮೊದಲು ಸ್ಪಂದಿಸುವವಳು ತಾಯಿಯೆ ಆಗಿದ್ದಾಳೆ. ತಾಯಿ ಯಿಂದಲೇ ತಂದೆಯ ಪರಿಚಯ ಮಾಡಿಕೊಳ್ಳುವ ಮಗು. ಮುಂದೆ ಆ ಮಗುವಿಗೆ ತಂದೆಯಿಂದಲೆ ಪರಿಚಯವಾಗುವಿಕೆ. ತಾಯಿ ಸಂಪೂರ್ಣವಾಗಿ ಕಣ್ಮರೆಯಾಗುತ್ತಾಳೆ. ಇದು ವಿಪರ್ಯಾಸವೆ? ಸರಿ. ಪ್ರಕೃತಿ ನಿಯಮದಲ್ಲಿ ಗಂಡು-ಹೆಣ್ಣುಗಳು ವಿಭಿನ್ನರೇ ಹೊರತು, ಅಸಮಾನರಲ್ಲ. ಇಬ್ಬರಿಗೂ ಅವರದೇ ಆದ ಶಕ್ತಿಗಳಿವೆ. ಹೊಣೆಗಾರಿಕೆ-ಜವಾಬ್ದಾರಿಗಳ ಹಂಚಿಕೆ ಇದೆ. ಅವುಗಳನ್ನು ನಿರ್ವಹಿಸುವ ಸಾಮರ್ಥ್ಯ ಪ್ರಕೃತಿ ಇಬ್ಬರಿಗೂ ಕೊಟ್ಟಿದೆ.

ಪ್ರಧಾನ ಸಂಸ್ಕೃತಿಯೊಂದರಲ್ಲಿ ಸ್ತ್ರೀ ಪುರುಷನ ಬೇಕು ಬೇಡಗಳನ್ನು ಪೂರೈಸುವ ಸಾಧನವಾದಳು. ಹಿಂದೆ ಋಷಿ ಮುನಿಗಳು ತಾವು ತಪಸ್ಸಿಗೆ ಕುಳಿತರೆ ತಮ್ಮನ್ನು ಕಾಯುವ ಕೆಲಸ ಸ್ತ್ರೀಗೆ ವಹಿಸುತ್ತಿದ್ದ. ಯಲ್ಲಮ್ಮ ಕೂಡ ಜಮದಗ್ನಿಯ ಪೂಜೆಗೆ ಮೀಸಲು ನೀರು ತರುವ ಕಾರ್ಯವನ್ನು ನಿರ್ವಹಿಸುತ್ತಿದ್ದಳಲ್ಲವೆ. ಹೀಗೆ ಮಾಡುವಾಗ ಮಾನಸಿಕವಾಗಿಯೂ, ದೈಹಿಕವಾಗಿ, ಪರಿಶುದ್ಧವಾಗಿರಬೇಕು. ಚಿತ್ತ ಚಾಂಚಲ್ಯಕ್ಕೂ ಇಲ್ಲಿ ಅವಕಾಶವಿಲ್ಲ. ಕ್ಷಣ ಮಾತ್ರ ಮೈಮರೆತರೆ ಶಿಕ್ಷೆ ಕಟ್ಟಿಟ್ಟಬುತ್ತಿ. ಇದಕ್ಕೆ ಪ್ರೇರಕವೆಂಬಂತೆ ಸೀತೆ ಬಂಗಾರದ ಜಿಂಕೆಯನ್ನು ಕಂಡು ಮೈ ಮರೆತು ಬೇಕೆಂದು ಕೇಳಿದಾಗ ಅದನ್ನು ತರಲು ಹೋದ ರಾಮ, ರಾಮನ ಹಿಂದೆ ಲಕ್ಷ್ಮಣ ಹೋದ, ಹೋಗುವಾಗ ತಮ್ಮ ಕುಟೀರದ ಮುಂದೆ ಒಂದು ಗೆರೆ ಎಳೆದು ಯಾವುದೇ ಕಾರಣಕ್ಕೂ ಅದನ್ನು ದಾಟಕೂಡದು ಎಂದು ಆಜ್ಞೆ ಮಾಡಿದನು. ವಿಧಿಯ ಅಟ್ಟಹಾಸದ ಮುಂದೆ ಯಾವ ಆಜ್ಞೆಯು ನಡೆಯಲಿಲ್ಲ. ಸೀತೆ ಲಕ್ಷ್ಮಣನು ಹಾಕಿದ ಗೆರೆ ದಾಟಿದಳು. ಮುಂದೆನಾಯಿತು ಎನ್ನುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇಲ್ಲಿ ಗೆರೆ ಹೊಸ್ತಿಲಿನ ಪ್ರತೀಕವೇ ಆಗಿದೆ. ಗೆರೆಯ ಒಳಗೆ ಇದ್ದರೆ ಸೀತೆಯು ಸುರಕ್ಷಿತವಾಗಿರುತ್ತಿದ್ದಳು. ಆದ್ದರಿಂದಲೆ ಮನೆಯ ಹೊಸ್ತಿಲಿನ ಒಳಗೆ ಸ್ತ್ರೀ ರಕ್ಷಣೆ. ಅದು ಆಕೆಯನ್ನು ರಕ್ಷಿಸುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆಯಷ್ಟೆ.

ಮುಂದೆ ಯಾರದೋ ಮಾತಿಗೆ ಬೆಲೆಕೊಟ್ಟು, ಸೀತೆಯು ತುಂಬು ಗರ್ಭಿಣಿ ಎನ್ನುವುದನ್ನು ಲೆಕ್ಕಿಸದೆ ರಾಮ ಕಾಡಿಗಟ್ಟಿದ. ಸಾಮಾನ್ಯ ಪ್ರಜೆಯ ಮಾತಿಗೂ ರಾಮ ಸ್ಪಂದಿಸಿದ ಎನ್ನುವ ಹೆಗ್ಗಳಿಕೆಗೆ ಪಾತ್ರನಾದ ರಾಮ, ಆದರೆ ಆತನಲ್ಲಿಯೂ ಪುರುಷ ಸಹಜ ಅನುಮಾನವಿತ್ತೆ ಎಂದು ಸಂದೇಹ ಮೂಡುವುದು. ಇಂತಹ ಕಠಿಣ ಸಂದರ್ಭದಲ್ಲಿ ರಾಮನ ಮಾತೆ ಕೊನೆಯದಾಗಿ, ಜನಕ ಮಹಾರಾಜನಾದರೂ ತನ್ನ

ಮಗಳನ್ನು ಈ ಕಷ್ಟದಿಂದ ಪಾರು ಮಾಡಬಹುದಾಗಿತ್ತು. ಆದರೆ ನಾವೆಲ್ಲ ಇಂದಿಗೂ ಕೂಡ 'ರಾಮರಾಜ್ಯ' ಬಯಸುವುದು ಸರಿಯೇ. ಹಾಗೇನಾದರೂ ಆದರೆ ಕಾಡಿನಲ್ಲೆ ಒಂದು ಪುಟ್ಟ ಪ್ರಪಂಚ ಹುಟ್ಟಿದರೂ ಏನೂ ಆಶ್ಚರ್ಯ ಪಡಬೇಕಾಗಿಲ್ಲ. "ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ" ಎನ್ನುವ ಮಾತು ಜನಕ ಮಹಾರಾಜ ಸಾಬೀತು ಪಡಿಸಿದನು. ಇದಕ್ಕೆ ವಿರುದ್ಧವಾದ ಸಂಪ್ರದಾಯ ಉಪಸಂಸ್ಕೃತಿಯಲ್ಲಿ ಕಂಡುಬರುತ್ತದೆ. ಅದೇ ಕರುಳ ಬಳ್ಳಿ ಸಂಬಂಧ. ಈ ಸಂಬಂಧಕ್ಕೆ ಒಪ್ಪುವಂಥ ಒಂದು ಮಾತಿದೆ. "ಹೆಣ್ಣು ಕೆಟ್ಟರೆ ತೌರಿಗೆ, ಹಣ್ಣು ಕೆಟ್ಟರೆ ತಿಪ್ಪೆಗೆ" ತಮ್ಮ ಮಗಳು ಕಾಡು ಪಾಲಾಗುವುದಕ್ಕೆ ಇವರು ಬಿಡುವುದಿಲ್ಲ. ತನಗಾಗಿ ತೌರಿನ ಬಾಗಿಲು ಸದಾ ತೆರೆದಿದೆ ಎನ್ನುವ ಧೈರ್ಯ ಉಪಸಂಸ್ಕೃತಿಯಲ್ಲಿದ್ದರೆ, ಪ್ರಧಾನ ಸಂಸ್ಕೃತಿಯಲ್ಲಿ ಎಂದು ತವರಿನ ಹೊಸ್ತಿಲು ದಾಟಿ ಹೊರ ಬಂದಳೋ ಅಂದೇ ಅವಳಿಗೂ ಆ ಹೊಸ್ತಿಲಿಗೂ ಋಣ ತೀರಿತು. ಇದಕ್ಕೆ ಹೆಣ್ಣು ಗಂಡನ ಮನೆಗೆ ಹೋಗುವಾಗ ತೌರು ಮನೆಯ ಹೊಸ್ತಿಲು ಮುಟ್ಟಿ ನಮಸ್ಕರಿಸಿ ಹೋಗುತ್ತಾಳೆ. ಇಲ್ಲಿ ಹೊಸ್ತಿಲಿನೊಂದಿಗಿರುವ ಭಾವನಾತ್ಮಕ ಸಂಬಂಧವನ್ನು ನೋಡಬಹುದು. ತಾನು ಹುಟ್ಟಿ, ಆಡಿ ಬೆಳೆದ ತವರಿನ ಹೊಸ್ತಿಲಿಗೆ ತನ್ನ ಕೊನೆಯ ನಮನ ಸಲ್ಲಿಸಿ ಆತ್ಮೀಯತೆಯನ್ನು ಜೊತೆಗೆ ತೌರಿನ ವಂಶ ಕರಕಿಯ ಕುಡಿಯಂತೆ ಬೆಳೆಯಲಿ ಎಂದು ಹಾರೈಸುವುದು ಹೊಸ್ತಿಲ ಮುಖೇನ.

ಶಿಷ್ಟ ಎಂದು ಕರೆಯಿಸಿಕೊಳ್ಳುವ ಪ್ರಧಾನ ಸಂಸ್ಕೃತಿಯ ವಿಚಾರಧಾರೆ ಮತ್ತು ಉಪಸಂಸ್ಕೃತಿಯ ಕನಿಕರದ ಧಾಟಿ ಎರಡನ್ನು ಗಮನಿಸಿದಾಗ ಯಾವ ಸಂಸ್ಕೃತಿಯಲ್ಲಿ ಸ್ತ್ರೀಗೆ ಆಕೆಯ ಭಾವನೆಗಳಿಗೆ ಆದ್ಯತೆ ಇದೆ ಎನ್ನುವುದು ಗೊತ್ತಾಗುತ್ತದೆ. ಎಲ್ಲರು ಧೃತರಾಷ್ಟ್ರನ ಹಾಗೆ ಜಗತ್ತನ್ನು ಊಹಿಸಿದರೆ ಹೇಗೆ. ಆತನೇನೋ ಹುಟ್ಟುಕುರುಡ. ಆದರೆ ಗಾಂಧಾರಿಯು ಅದನ್ನೇ ಮಹಾಪ್ರಸಾದವೆಂದು ಸ್ವೀಕರಿಸಿ ತಾನು ಕಣ್ಣಿಗೆ ಬಟ್ಟೆ ಕಟ್ಟಿಕೊಂಡಳು. ಕುರುಡ ಗಂಡನನ್ನು ನಿರಾಕರಿಸುವ, ಪ್ರತಿಭಟಿಸುವ ಬದಲು ಆತನಿಗಿಲ್ಲದ ಜಗತ್ತಿನ ಸೌಂದರ್ಯ ನನಗೇಕೆ ಎಂದು ಕಣ್ಣಿದ್ದು ಕುರುಡಿಯಾದಳು. ಇದರಿಂದಾದ ಪರಿಣಾಮವೇ 'ಕುರುಕ್ಷೇತ್ರ' ಮಕ್ಕಳ ಮರಣ. ಸಂಸ್ಕೃತಿ ತನ್ನಿಂದ ತಾನೇ ಹುಟ್ಟುವುದಿಲ್ಲ. ಅದನ್ನು ಬೆಳೆಸಬೇಕು. ಅದನ್ನು ಬೆಳೆಸಬೇಕೆಂದರೆ ಕಣ್ಣಿಗೆ ಬಟ್ಟೆ ಕಟ್ಟದೆ, ಕಟ್ಟದ ಬಟ್ಟೆ ಬಿಚ್ಚಿ ನೋಡಬೇಕು. ಇದನ್ನು ತ್ಯಾಗವೆಂದು, ಗಾಂಧಾರಿಯ ಪತಿಭಕ್ತಿಗೆ ಮೆಚ್ಚಿ ಹೊಗಳುವವರಿಗೇನು ಕಮ್ಮಿಯಿಲ್ಲ.


ಪ್ರಧಾನ ಸಂಸ್ಕೃತಿಯೊಂದು ಸ್ತ್ರೀಯಿಂದ ಅಪೇಕ್ಷಿಸುವುದು ತ್ಯಾಗವೇ. ಧರ್ಮ ಹೇಳುವ ಹಲವಾರು ವೇದಾಂತ ನೀತಿಸಂಹಿತೆಗಳು ಪುರುಷ ಪರವಾದದ್ದೆ. ಅದರ ಉಗಮ, ಅಭಿವೃದ್ಧಿ, ನಿಯಂತ್ರಣಗಳ ಒಡೆತನವೂ ಅವರಿಗೆ ಸೇರಿದ್ದು. ಸ್ತ್ರೀಯ ವ್ಯಕ್ತಿತ್ವಕ್ಕಾಗಲೀ, ಯೋಚನೆಗಾಗಲಿ, ಜ್ಞಾನಕ್ಕಾಗಲೀ, ಧರ್ಮ ಮಾನ್ಯತೆ ಕೊಟ್ಟಿಲ್ಲ. ಮಾನವೀಯ ಮೌಲ್ಯಗಳಿಗೆ ಮಹತ್ವ ನೀಡುವ ಧರ್ಮವೇ ಸ್ತ್ರೀ ದೌರ್ಜನ್ಯಕ್ಕೆ ಕಾರಣವೂ ಆಗಿದೆ. ಧರ್ಮ ಸ್ತ್ರೀಗೆ ಕೊಟ್ಟಿರುವ ಹಕ್ಕುಗಳಿಗಿಂತ ಹೇರಿರುವ ನಿರ್ಬಂಧಗಳೇ ಹೆಚ್ಚು.

ಒಂದು ಕಡೆ ಸ್ತ್ರೀ ಗೌರವ ಕುರಿತು ಭಾಷಣ ಬಿಗಿಯುವ ಸಂಸ್ಕೃತಿ ಕಂಡರೆ ಮತ್ತೊಂದೆಡೆ ಸ್ತ್ರೀ ವಿರೋಧಿ ಪ್ರವೃತ್ತಿಗಳನ್ನು ಪ್ರತಿಪಾದಿಸುವ ಸಂಸ್ಕೃತಿ ಕಾಣುತ್ತೇವೆ. ಇದು ಧರ್ಮದ ದ್ವಿಮುಖ ಧೋರಣೆಯಾಗಿದೆ. ಸ್ತ್ರೀ ಇರುವುದು ಜವಾಬ್ದಾರಿಯನ್ನು ಹೊರುವುದಕ್ಕೆ ಹೊರತು ಅಧಿಕಾರವಹಿಸುವುದಕ್ಕಲ್ಲ. ಧಾರ್ಮಿಕ ವಿಧಿ-ವಿಧಾನಗಳಲ್ಲಿ ಕೇವಲ ಪುರುಷನಿಗೆ ಸಹಚಾರಿಣಿ ಆದಳೇ ಹೊರತು ಸ್ವತಂತ್ರವಾಗಿ ನಿರ್ವಹಿಸುವುಂತಿಲ್ಲ. ಹುಟ್ಟಿನಿಂದ ಸಾವಿನ ಅಂಚಿವರೆಗೂ ಪ್ರತಿಕ್ಷಣವೂ ಅವಮಾನಗೊಳಿಸುವಂತಹ ಪರಿಸ್ಥಿತಿಯೆ ಅವಳ ಪಾಲಿಗೆ. ಧರ್ಮ ಆಕೆಗೆ ಕೊಟ್ಟಿರುವ ಹಕ್ಕುಗಳನ್ನು ಕೂಡ ಕುಟುಂಬ ಎಂಬ ಸಾಂಸ್ಥಿಕ ಚೌಕಟ್ಟಿನೊಳಗೆ ಅನುಭವಿಸಬೇಕು. ಈ ನಿರ್ಬಂಧನೆಗೆ ಮಹಿಳೆಯರು ಬದ್ಧರಾಗಿರುವುದು ದುರದೃಷ್ಟವೇ ಸರಿ.


ಜೀವನ ಶೈಲಿ ಮತ್ತು ವೃತ್ತಿ : ಸಾಮಾಜಿಕ ಏಣಿಶ್ರೇಣಿಯ ಮೇಲ್ತುದಿಯಲ್ಲಿರುವ ಪ್ರಧಾನ ಸಂಸ್ಕೃತಿಯ ಜೀವನ ಶೈಲಿಯು ವೈಭವಯುತವಾಗಿಯೇ ಇದೆ. ತಮ್ಮ ಸುಖಕ್ಕೆ ಸಮಾಜದ ಇತರ ಕೆಳವರ್ಗದ ಜನರಿಂದ ತಮಗೆ ಅನುಕೂಲವಾಗುವಂತಹ ವೃತ್ತಿಗಳನ್ನು ಮಾಡಿಸಿ ತಾನು ಅದರ ಫಲವನ್ನು ಅನುಭವಿಸುವವರಾದರು. ಬೌದ್ಧಿಕ ಚಾಕಚಕ್ಯತೆಯನ್ನು ಹೊಂದಿದ ಪ್ರಧಾನ ಸಂಸ್ಕೃತಿ ತನಗೆ ಸೂಕ್ತವಾಗುವ ನೀತಿ ಸಂಹಿತೆಯನ್ನು ಸೃಷ್ಟಿಸಿ ಅದನ್ನು ಉಪಸಂಸ್ಕೃತಿಯ ಮೇಲೆ ಹೇರಿ ತಾನು ನಿಶ್ಚಿಂತವಾಯಿತು. ಈ ಹೇರಿಕೆಯ ಅಡಿಯಲ್ಲಿ ಸ್ತ್ರೀಯನ್ನು ಸೇರಿಸಲಾಯಿತು. ದೈಹಿಕ ಶ್ರಮಕ್ಕಿಂತ ಬೌದ್ಧಿಕ ಶ್ರಮಕ್ಕೆ ಹೆಚ್ಚು ಮಹತ್ವಕೊಟ್ಟ ಈ ಸಂಸ್ಕೃತಿ ದುಡಿಮೆಯನ್ನು ಕನಿಷ್ಟೀಕರಿಸಿತು.

ಇವರ ವಸತಿ ವ್ಯವಸ್ಥೆಯನ್ನು ಗಮನಿಸಿದರೆ ಖಾಸಗಿ ಕೋಣೆಗಳಿಗಿಂತ ಕಾಯಿಕೋಣೆ, ಅಕ್ಕಿಕೋಣೆ, ತೌಡುಕೋಣೆ ಎಂದು. ಇವು ಸರಿಯಾದ ಗಾಳಿ, ಬೆಳಕು ಇಲ್ಲದೆ ವಾಸಯೋಗ್ಯ ಸ್ಥಿತಿಯಲ್ಲಿರುವುದಿಲ್ಲ. ಬ್ರಾಹ್ಮಣರ ಹೆಚ್ಚಿನ ಮನೆಗಳು ವರ್ಷಾವಧಿ ನಡೆಯುವ ಶ್ರಾದ್ಧ, ಶಾಂತಿ, ಮದುವೆ, ಮುಂಜಿ ಊಟಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾಗಿವೆ.

ಬ್ರಾಹ್ಮಣರ ವಸತಿ ನಕ್ಷೆ



ಬ್ರಾಹ್ಮಣೇತರ ವಸತಿ ನಕ್ಷೆ



ಇವರ ಪ್ರತಿಯೊಂದು ಮನೆಯ ಸುತ್ತಲು ಗಡಿಗಳನ್ನು ನಿರ್ದೇಶಿಸುವಂತೆ ಮಣ್ಣಿನಿಂದ ಅಥವಾ ಕಲ್ಲಿನ ಗೋಡೆಗಳನ್ನು ನಿರ್ಮಿಸುತ್ತಿದ್ದರು. ಇದು ಉಪಸಂಸ್ಕೃತಿಯಲ್ಲಿನ ಗುಡಿಸಲಿನ ಸುತ್ತಲು ಹಾಕುವ ಬೇಲಿಯನ್ನು ನೆನಪಿಗೆ

ತರುತ್ತದೆ. ಸಂಸ್ಕೃತಿ ಯಾವುದೇ ಇರಲಿ ಅವು ತಮ್ಮ ಅನುಕೂಲಕ್ಕೆ ತಕ್ಕಂತೆ ತಮಗೆ ತಮ್ಮ ವಸ್ತುಗಳ ರಕ್ಷಣೆಯ ಉದ್ದೇಶವನ್ನಿಟ್ಟುಕೊಂಡು ಮನೆಗಳನ್ನು ನಿರ್ಮಿಸುವುದು. ಪ್ರಧಾನ ಸಂಸ್ಕೃತಿಯಲ್ಲಿ ಹೆಬ್ಬಾಗಿಲು ಮನೆತನದ ಪ್ರತಿಷ್ಠೆಯನ್ನು ಎತ್ತಿ ಹಿಡಿಯುವಂತಿದ್ದರೆ, ಉಪಸಂಸ್ಕೃತಿಯಲ್ಲಿ ರಕ್ಷಣೆಯೇ ಪ್ರಮುಖ ಉದ್ದೇಶವಾಗಿ ಕಂಡುಬರುವುದರಿಂದ ಚಿಕ್ಕದಾದ ಬಾಗಿಲು ಇಡುವುದು ಕಾಣಿಸುತ್ತದೆ.

ಆಚರಣೆ ಮತ್ತು ಸಂಪ್ರದಾಯ : ಪ್ರಧಾನ ಸಂಸ್ಕೃತಿ ಎನಿಸಿಕೊಳ್ಳುವ ಬ್ರಾಹ್ಮಣ ಸಂಸ್ಕೃತಿಯಲ್ಲಿ ಸಂಪ್ರದಾಯ, ನೀತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಆಚರಿಸುತ್ತಾರೆ. ಈ ರೀತಿಯ ಆಚರಣೆಯಲ್ಲಿಯೂ ಪ್ರಾದೇಶಿಕವಾಗಿ ಭಿನ್ನತೆ ಕಾಣುತ್ತೇವೆ. ಆದರೆ ಆ ಎಲ್ಲ ಭಿನ್ನತೆಯಲ್ಲಿ ಹೊಸ್ತಲಿನ ಪಾತ್ರ ಮತ್ತು ಮಹತ್ವ ಕಾಣಲಾರದೆ ಇರದು.

ಗೃಹಿಣಿಯ ಗೃಹಕೃತ್ಯ ಹೊಸ್ತಿಲ ಪೂಜೆಯಿಂದಲೆ. ಇವರ ಪ್ರಕಾರ ಸೂರ್ಯೋದಯಕ್ಕೆ ಮುಂಚೆ ಎದ್ದು ಹೊಸ್ತಿಲ ತೊಳೆದು, ಅಂಗಳಕ್ಕೆ ನೀರು ಹಾಕಿ ರಂಗೋಲಿ ಕುಂಕುಮಗಳಿಂದ ಪೂಜಿಸದೆ ಇದ್ದರೆ ಮನೆಗೆ ಶ್ರೇಯಸ್ಸಲ್ಲ. ಅದು ಮಸಣಕ್ಕೆ ಸಮ. ಅಂದರೆ ಹೊಸ್ತಿಲು ಬರಿದಾಗಿರಬಾರದು. ಎರಡೆಳೆಯಾದರೂ ಹಾಕಬೇಕು. ಹೇಗೆ ಮುತ್ತೈದೆಯೊಬ್ಬಳ ಬರಿದಾದ ಹಣೆ ಅಶುಭವೋ ಹಾಗೆ ಬರಿದಾದ ಹೊಸ್ತಿಲು ಎಂದೇ ನಂಬುತ್ತಾರೆ. ಬ್ರಾಹ್ಮೀ ಮುಹೂರ್ತಕ್ಕೆ ಹೆಚ್ಚು ಪ್ರಧಾನ್ಯತೆ ಕೊಡುವ ಇವರು ಈ ಸಮಯದಲ್ಲಿಯೆ ಹೊಸ್ತಿಲು ಪೂಜೆಗೊಳ್ಳಬೇಕೆನ್ನುತ್ತಾರೆ. ಅದು ದೇವತೆಗಳ ಸಂಚಾರದ ಸಮಯ. ದೇವತೆಗಳನ್ನು ಪ್ರಸನ್ನಗೊಳಿಸಲು ಸುಸಮಯ. ದುಡಿಮೆಯಲ್ಲಿಯೆ ತೃಪ್ತಿಯನ್ನು ಪಡೆಯುವ ಸಂಸ್ಕೃತಿ ಒಂದು ಕಡೆ ಕಂಡರೆ, ದುಡಿಮೆ ಇಲ್ಲದೆ ಪೂಜೆ ಪುನಸ್ಕಾರದಿಂದ ದೇವರನ್ನು ಒಲಿಸಿಕೊಳ್ಳಲು ಸ್ವಾರ್ಥ ಮನೋಭಾವನೆ ಮತ್ತೊಂದು ಸಂಸ್ಕೃತಿಯಲ್ಲಿ ಕಂಡುಬರುತ್ತದೆ. ಹೊಸ್ತಿಲ ಪೂಜೆಯಿಂದ ದೇವರನ್ನು ಬರಮಾಡಿಕೊಳ್ಳುವ ಹುನ್ನಾರ ಮಾಡಿದಂತೆ. ಯಾವುದೇ ಕಾರ್ಯದ ಹಿಂದೆ ಒಂದು ಉದ್ದೇಶವಿದ್ದೆ ಇರುತ್ತದೆ ಎನ್ನುವುದು ಖಂಡಿತ.

ವೈಜ್ಞಾನಿಕವಾಗಿ ಆಲೋಚಿಸಿದರೆ ಸೂರ್ಯನ ಆಗಮನ ಬಿಸಿಲು ತರುತ್ತದೆ. ಈ ಬಿಸಿಲು ಅಂಗಳಕ್ಕೆ ಹಾಕಿದ ನೀರು ಒಣಗಿಸುತ್ತದೆ. ಒಣಗಿದ ಹೊಸ್ತಿಲ ಮೇಲಾಗಲಿ, ಅಂಗಳದಲ್ಲಾಗಲೀ ರಂಗೋಲಿ ಹಾಕಿದರೆ ಬೇಗನೆ ಅಳಿಸಿ ಹೋಗುತ್ತದೆ. ಒದ್ದೆ ಹೊಸ್ತಿಲ ಮೇಲೆ ಅಂಗಳದಲ್ಲಿ ಹಾಕಿದ ರಂಗೋಲಿ ಹೆಚ್ಚು ಹೊತ್ತು ಉಳಿಯುತ್ತದೆ. ಹೊಸ್ತಿಲಿನ ಪೂಜೆಯೊಂದಿಗೆ ಬಾಗಿಲಿನ ಮೇಲ್ಭಾಗದ ಪಟ್ಟಿ ಎಂದರೆ ಉತ್ತರಾಣಿಯ ಪೂಜೆಯು ಶ್ರೇಷ್ಠತೆಯನ್ನು ಪಡೆದುಕೊಂಡಿವೆ. ಹೊಸ್ತಿಲು ಮನೆಯ ರಕ್ಷಣೆಯನ್ನು ಮಾಡಿದರೆ ಉತ್ತರಾಣಿ ಮನೆಯ ಉನ್ನತಿಗೆ, ಅಭಿವೃದ್ಧಿಗೆ ಸೂಚಕವಾಗಿದೆ.

ಹೀಗೆ ಪ್ರಧಾನ ಸಂಸ್ಕೃತಿಯಲ್ಲಿ ಹೊಸ್ತಿಲ ಪೂಜೆ ಪ್ರತಿಯೊಂದು ಹಂತದಲ್ಲಿ ಬೇರೆ ಬೇರೆ ಕಾರಣಗಳಿಂದ ಪೂಜಿಸಲ್ಪಡುತ್ತದೆ. ಇನ್ನು ಮಾನವ ಬದುಕಿನಲ್ಲಿ ನಡೆಯುವ ಪ್ರತಿಯೊಂದು ಸಂದರ್ಭದಲ್ಲಿಯೂ ಹೊಸ್ತಿಲು ಪ್ರಮುಖವಾಗಿ ಕಂಡುಬರುತ್ತದೆ.

ಇವರು ಕೂಡ ನೂತನ ಗೃಹ ನಿರ್ಮಾಣ ಮಾಡುವಾಗ, ಬಾಗಿಲು ಚೌಕಟ್ಟು ಕೂಡಿಸುವಾಗ ಹೊಸ್ತಿಲ ಕೆಳಗೆ ಪಂಚಲೋಹ ಒಂದು ತಾಮ್ರದ ತಂಬಿಗೆಯಲ್ಲಿ ಹಾಕಿ ಇಟ್ಟು ಮನೆಗೆ ಸಮೃದ್ಧಿಯನ್ನು ಕೋರುತ್ತಾರೆ. ದೃಷ್ಟಿ ತಾಗದಿರಲೆಂದು ನಿಂಬೆಹಣ್ಣು, ಮೆಣಸಿನಕಾಯಿ, ಕೇರು ಒಂದು ತಂತಿಗೆ ಪೋಣಿಸಿ ಉತ್ತರಾಣಿಗೆ ಕಟ್ಟುತ್ತಾರೆ. ಇದು ಮನುಷ್ಯನ ದೃಷ್ಟಿಯನ್ನು ಬೇರೆ ಕಡೆಗೆ ಕೊಂಡೊಯ್ಯುವುದೇ ಆಗಿದೆ. ಇವರಲ್ಲಿಯೂ ಬಲಿಯ ಸಂಪ್ರದಾಯವಿರುವುದು ಗೃಹಪ್ರವೇಶದ ಸಂದರ್ಭದಲ್ಲಿ ಕಂಡುಬರುತ್ತದೆ. ಪ್ರಾಣಿ ಬಲಿಯ ಬದಲಾಗಿ ಕುಂಬಳಕಾಯಿಯನ್ನೆ ಬಲಿಯ ರೂಪದಲ್ಲಿ ಬಾಗಿಲಿಗೆ ಒಡೆದು ಕುಂಕುಮ ಹಾಕಿ ರಕ್ತದ ಸಂಕೇತವೆಂಬಂತೆ ಆಚರಿಸುತ್ತಾರೆ. ಆಚರಣೆ ಅನಿವಾರ್ಯವಾಗಿ ಅನುಕೂಲಕ್ಕೆ ತಕ್ಕಂತೆ ಬದಲಾವಣೆಯೂ ಆಗುತ್ತವೆ ಎನ್ನುವುದು ಬಲಿಯ ಆಚರಣೆಯಿಂದ ತಿಳಿಯುತ್ತದೆ.

ಗೃಹಶಾಂತಿಯ ದಿನದಂದು ಮನೆಯ ಒಡತಿ ಪೂರ್ಣಕುಂಭ ಹಿಡಿದುಕೊಂಡು ಹೊಸ್ತಿಲಿನ ಹೊರಗೆ ನಿಂತಿರುತ್ತಾಳೆ. ಹೊಸ್ತಿಲಿನ ಒಳಗೆ ನಾದಿನಿ ನಿಂತಿರುತ್ತಾಳೆ. ಅಂದರೆ ಅತ್ತಿಗೆ ನಾದಿನಿಯರ ಮುಖಾಮುಖಿ.



ಪೂರ್ಣಕುಂಭ ಹೊತ್ತು ಹೊಸ್ತಿಲು ದಾಟುತ್ತಿರುವ ಮಹಿಳೆ

ಅತ್ತಿಗೆ ನಾದಿನಿಗೆ ತನ್ನ ತಲೆಯ ಮೇಲಿರುವ ಪೂರ್ಣಕುಂಭ ಇಳಿಸುವಂತೆ ಹೇಳುತ್ತಾಳೆ. ನಾದಿನಿಯು ನನಗೆ ಹೊನ್ನು ಕೊಟ್ಟರೆ ಇಳಿಸುತ್ತೇನೆ ಎನ್ನುತ್ತಾಳೆ. ಆಗ ಅತ್ತಿಗೆ ಹೊನ್ನಿನ ಕಟ್ಟು ಕೊಡುತ್ತೇನೆ ಎಂದು ವಚನ ಕೊಡುತ್ತಾಳೆ. ಆಗ ನಾದಿನಿ ಕುಂಭ ಇಳಿಸುತ್ತಾಳೆ. ನಂತರ ಮುಂದಿನ ಆಚರಣೆಯೊಂದಿಗೆ

ಗೃಹಶಾಂತಿ ಪೂರ್ಣಗೊಳ್ಳುತ್ತದೆ. ಆಚರಣೆಯ ಮೂಲಕ ಮನದ ಬಯಕೆಯನ್ನು ಈಡೇರಿಸಿಕೊಳ್ಳುವುದೇ ಆಗಿದೆ. ಸಂಬಂಧಗಳ ಮಧ್ಯ ಸಲಿಗೆ ಪ್ರೀತಿ ಬೆಳೆಯಲು ಇಂಥ ಆಚರಣೆಗಳು ಅವಶ್ಯಕವೆನಿಸುತ್ತವೆ. ಹೊಸ್ತಿಲು ಇಲ್ಲಿ ಒಂದು ಮಾಧ್ಯಮವಾಗಿದೆ. ಒಳಗೆ ಬರುವುದಕ್ಕಿಂತ ಮುಂಚೆಯೇ ಕಾರ್ಯಕೈಗೂಡಿಸಿ ಕೊಳ್ಳಬೇಕು. ಅದಕ್ಕೆ ಹೊಸ್ತಿಲು ಒಂದು 'ತಡೆ'ಯಾಗಿದೆ. ಅಪ್ಪಣೆ, ಅನುಮತಿ, ವಚನ ಪಡೆಯುವಿಕೆ ಇದರ ಆಚೆ ಮತ್ತು ಈಚೆ ಕೈಗೂಡುವಂಥವು.

ಮದುವೆ ಮುಂಜಿವೆ ಮೊದಲಾದ ಶುಭ ಸಂದರ್ಭದಲ್ಲಿ ಮುಯ್ಯದ ಗೌರಿ ಎಂದು ಆಚರಿಸುತ್ತಾರೆ. ಈ ಆಚರಣೆ ಸಾಮಾನ್ಯವಾಗಿ ಎಲ್ಲ ಮನೆತನಗಳಲ್ಲಿ ಇರದೆ, ಕೇವಲ ಕೆಲವೊಂದು ಮನೆಗಳಲ್ಲಿ ಹಿಂದಿನಿಂದ ಮಾಡಿಕೊಂಡು ಬಂದಿರುವಂತದ್ದಾಗಿದ್ದು, ಅದನ್ನು ಮುಂದಿನ ಪೀಳಿಗೆಯು ಮುಂದುವರೆಸಿ ಕೊಂಡು ಹೋಗುತ್ತದೆ. ಮುಯ್ಯದ ಗೌರಿ ಇಂಥವರೇ ತರಬೇಕೆಂದೆನು ನಿಯಮವಿಲ್ಲ. ನೆಂಟರು, ಇಷ್ಟರು ಯಾರಾದರೂ ಆಗಬಹುದು. ಇವರು ಮುಯ್ಯದ ಗೌರಿ ತೆಗೆದುಕೊಂಡು ಬರುವುದು ಮನೆಯವರಿಗೆ ಅಂದರೆ ಇವರು ಯಾರ ಮನೆಗೆ ತೆಗೆದುಕೊಂಡು ಹೋಗುತ್ತಾರೆಯೋ ಅವರಿಗೆ ತಿಳಿದಿರುವುದಿಲ್ಲ. ಇವರು ಗೌರಿಯನ್ನು ತಂದು ಅವರ ಹೊಸ್ತಿಲ ಬಳಿ ಇಟ್ಟು ಹೊರಗಿನಿಂದ ಬಾಗಿಲು ಹಾಕುತ್ತಾರೆ. ಮುಯ್ಯದ ಗೌರಿ ತಂದಿದ್ದೇವೆ ಎಂದು ಹೇಳಿದಾಗಲೇ ಒಳಗಿದ್ದವರಿಗೆ ಗೊತ್ತಾಗುವುದು. ಆಗ ಒಳಗಿದ್ದವರು ಹೊರಗಿದ್ದವರಿಗೆಲ್ಲ ಹೋಳಿಗೆ ಊಟದ ವ್ಯವಸ್ಥೆ ಮಾಡಬೇಕು. ಯಾವುದೇ ರೀತಿಯ ಕೊರತೆಯಾದರೆ ಮನೆಯವರಿಗೆ ಅಪಮಾನ ಖಂಡಿತ. ಅಡಿಗೆಯೆಲ್ಲ ಆದ ಮೇಲೆ ಬಾಗಿಲು ತೆರೆಯಿರಿ ಎಂದು ಹೇಳುತ್ತಾರೆ. ತ್ರಿಪದಿಯೊಂದರಲ್ಲಿ ಈ ಕುರಿತು ಉಲ್ಲೇಖವನ್ನು ಕಾಣಬಹುದು.

ಬಾಗಿಲ ತೆಗೆಯೆ ನೀಲವೇಣಿ
ಸರಸದಿಂದಲೆ ಬಂದು
ಕೃಷ್ಣನ ಪ್ರಿಯರಾಣಿ ನೀಲವೇಣಿ

ಎಂದು ಹಾಡು ಹಾಡಿದ ನಂತರ ಬಾಗಿಲನ್ನು ತೆರೆಯುತ್ತಾರೆ. ಆಗ ಮುಯ್ಯದ ಗೌರಿಯನ್ನು ಒಳಗೆ ತರುವಂತೆ ಮನೆಯವರು ಹೇಳಿದಾಗ ಅವರು ಹಾಸ್ಯ ಮಾಡುತ್ತಾ ನಾವು ಗೌರಿಯನ್ನು ಒಳಗೆ ತರುವುದಿಲ್ಲ ಸ್ವಲ್ಪ ಹೊತ್ತು ಲಕ್ಷ್ಮಿಯ ಜೊತೆ ವಾಗ್ವಾದ ಮಾಡಲಿ ಎಂದು ಹೊಸ್ತಿಲ ಬಳಿಯೆ ಗೌರಿಯನ್ನು ಇಳಿಸಿ ಒಳಗೆ ಬರುತ್ತಾರೆ. ನಂತರ ಎಲ್ಲರು ಊಟಮಾಡಿ ಉಡುಗೊರೆ ಕೊಡುತ್ತಾರೆ.

ಉತ್ತರ ಕರ್ನಾಟಕದಲ್ಲಿ ಮುಯ್ಯ ಕೊಡುವುದು ಒಂದು ಪದ್ಧತಿ. ಸಾಮಾನ್ಯವಾಗಿ ಮದುವೆಯ ಸಮಯದಲ್ಲಿ ಗಂಡಿನ ಮನೆಯವರು ತಮ್ಮ ಪ್ರತಿಷ್ಠೆಗಳ ಸಂಕೇತವಾಗಿ ಬಗೆ ಬಗೆಯ ವಸ್ತು, ವಸ್ತ್ರಾದಿಗಳನ್ನು ತೆಗೆದುಕೊಂಡು ಹೋಗಿ ಹೆಣ್ಣಿನವರಿಗೆ ಕೊಡುವರು. ಹೆಣ್ಣಿನವರು ಅದನ್ನು ಪಡೆದು ಅದಕ್ಕೂ ಮಿಗಿಲಾದ ವಸ್ತು, ವಸ್ತ್ರಾದಿಗಳಿಂದ ಗಂಡಿನವರು ಮುಯ್ಯ ತೀರಿಸಬೇಕು. ಈ ಅರ್ಥ ಒಂದು

ನೆಲೆಯಲ್ಲಾದರೆ ಇನ್ನೊಂದು ಅರ್ಥದಲ್ಲಿ ಗೌರಿಯನ್ನು ತಂದು ಹೊಸ್ತಿಲಲ್ಲಿ ಕೂಡಿಸುವುದೇಕೆ, ಲಕ್ಷ್ಮಿಯ ಜೊತೆಗೆ ವಾದ ಮಾಡಲಿ ಎನ್ನುವುದು ಇದರ ಹಿಂದೆ ಇರುವ ಪ್ರಮುಖ ಸಂಗತಿ. ಏಕೆಂದರೆ ಯಾವುದೇ ಆಚರಣೆ ತರ್ಕ ರಹಿತವಾಗಿರುವುದಿಲ್ಲ.

ಜನಪದರ ಹಿನ್ನೆಲೆಯಲ್ಲಿ ವಿಶ್ಲೇಷಣೆಯನ್ನು ಮಾಡಿದಾಗ ಗೌರಿ ಮೂಲತಃ ಮಣ್ಣಿನಿಂದ ಹುಟ್ಟಿದವಳು. ಅಂದರೆ ಶ್ರಮ ಪ್ರಧಾನ ಸಂಸ್ಕೃತಿಯ ಪ್ರತೀಕ. ಹೊಸ್ತಿಲು ಎಂದರೆ ಲಕ್ಷ್ಮಿ. ಲಕ್ಷ್ಮಿ ಎಂದರೆ ಧನ, ಸಂಪತ್ತು. ನಮ್ಮ ಗೌರಿ ನಿಮ್ಮ ಹೊಸ್ತಿಲು ಕಾಯಲಿ ಎಂದು ಹೇಳುವುದು ಶ್ರೇಷ್ಠ-ಕನಿಷ್ಠದ ಒಂದು ಉದ್ದೇಶವೇ ಇರಬಹುದು.

ಯಾವುದೇ ಆಚರಣೆ ಅರ್ಥವಿಲ್ಲದೆ ಹುಟ್ಟಿರುವುದಕ್ಕೆ ಸಾಧ್ಯವಿಲ್ಲ. ಹೊಸ್ತಿಲಿನ ಒಳಗೆ ಲಕ್ಷ್ಮಿ ಹೊರಗೆ ಗೌರಿ. ಎಂದರೆ ಅತ್ತಿಗೆ ನಾದಿನಿಯರು ಎದುರು ಬದುರು ಇರುವುದು. ತನ್ನ ಇಚ್ಛೆಯು ನೇರವೇರಿದರೆ ಮಾತ್ರ ಒಳಗೆ ಬಿಡುವುದಾಗಿ ವಚನ ಪಡೆಯುವುದು. ಅಂದರೆ ಇಲ್ಲಿ ಹೊಸ್ತಿಲು ಸಂವಾದದ ಕೇಂದ್ರವಾಗಿ ಬಳಕೆಗೊಂಡಿದೆ. ಸಂಸ್ಕೃತಿಯಲ್ಲಿ ಒಂದೇ ಕಾರಣಕ್ಕೆ ಹೊಸ್ತಿಲು ಬಳಕೆಗೊಂಡಿಲ್ಲ. ವಿವಿಧ ಕಾರ್ಯಗಳಿಗೆ, ಕಾರ್ಯದ ಸಿದ್ಧಿಗೆ ಹೊಸ್ತಿಲು ಮಾಧ್ಯಮವಾಗಿದೆ.

ಮದುವೆಯ ಕಾರ್ಯದಲ್ಲಿ ಮನೆ ತುಂಬಿಸಿಕೊಳ್ಳುವ ಮತ್ತು ಆ ಮೂಲಕ ಹಕ್ಕು ಸ್ಥಾಪಿಸುವ ಕಾರಣಕ್ಕೂ ಹೊಸ್ತಿಲು ಪ್ರಮುಖವಾದ ಸಾಧನವಾಗಿದೆ. ಹೊಸ್ತಿಲ ಮೇಲಿಟ್ಟ ಅಕ್ಕಿ ತುಂಬಿದ ಸೇರನ್ನು ಬಲಗಾಲಿನಿಂದ ಒದ್ದು ಒಳಗೆ ಪ್ರವೇಶಿಸುವುದು ಎಲ್ಲ ಸಂಸ್ಕೃತಿಗಳಲ್ಲಿಯೆಂತೆ ಇವರಲ್ಲಿಯೂ ಸಮೃದ್ಧಿಯ ಹಾರೈಕೆಯೆ ಆಗಿದೆ. ಸಾಮಾನ್ಯವಾಗಿ ನವವಧು ಹೊಸ್ತಿಲ ದಾಟಿ ಒಳ ಪ್ರವೇಶಿಸುವಾಗ ಹೊಸ್ತಿಲಿಗೆ ಮೊಳೆ ಹೊಡುವುದು ಹಕ್ಕು ಸ್ಥಾಪನೆಯ ಸೂಚಕವಾಗಿದೆ. ಆದರೆ ಈ ಆಚರಣೆ ಬ್ರಾಹ್ಮಣ ಸಂಸ್ಕೃತಿಯ ಕೆಲವೊಂದು ಪ್ರದೇಶದಲ್ಲಿ ಹೊಸ್ತಿಲಿಗೆ ಅಪಮಾನವೆಸಗಿದಂತೆ ಎನ್ನುವ ಭಾವನೆ ಇದೆ. ಹೊಸ್ತಿಲು ಎಂದರೆ ಲಕ್ಷ್ಮಿ. ಲಕ್ಷ್ಮಿಗೆ ಮೊಳೆ ಹೊಡೆಯುವುದು ಅಥವಾ ಕುದುರೆ ನಾಲು ಹೊಡೆಯುವುದು ಶೂದ್ರ ಸಂಪ್ರದಾಯ ಎಂದು ಹೇಳಲಾಗುತ್ತದೆ. ಇಲ್ಲಿ ಒಂದು ವಿಷಯ ಗನಿಸಬಹುದು. ಮೊಳೆ ಕಬ್ಬಿಣ, ಕಬ್ಬಿಣವು ಶ್ರಮರಹಿತ ಸಂಸ್ಕೃತಿಯೊಂದರಲ್ಲಿ ಕನಿಷ್ಠ ಸ್ಥಾನ ಪಡೆದಿದೆ. ಈ ಮೊದಲೆ ಹೇಳಿದಂತೆ ದುಡಿಮೆಯನ್ನು ಕೀಳೀಕರಿಸಿದ್ದರ ಪ್ರತಿಬಿಂಬ. ಶ್ರಮ ಪ್ರಧಾನ ಮತ್ತು ಶ್ರಮ ರಹಿತ ಸಂಸ್ಕೃತಿಗಳ ವೈರುಧ್ಯ ನಿಲುವುಗಳನ್ನು ಗೌರಿ-ಲಕ್ಷ್ಮಿಯರ ಪರಿಕಲ್ಪನೆಯಲ್ಲಿ ಕಾಣಬಹುದು. ದುಡಿಮೆಯ ಸೋಂಕೆ ಇಲ್ಲದ ಪ್ರಧಾನ ಸಂಸ್ಕೃತಿಯಲ್ಲಿ ಮೊಳೆ ಅಂದರೆ ಕಬ್ಬಿಣ ಕೀಳಾಗಿ ಕಂಡರೆ, ದುಡಿಯುವ ವರ್ಗಕ್ಕೆ ಅದೇ ಶ್ರೇಷ್ಠ. "ಕಂಬಾರನಿಗೆ ಕುಲುಮೆ ಶ್ರೇಷ್ಠವಲ್ಲವೆ".

ಹೊಸ್ತಿಲು ಮತ್ತು ಸೇರು ಲಕ್ಷ್ಮಿಯ ಸಂಕೇತವಾಗಿ ನಮ್ಮ ಸಂಸ್ಕೃತಿಯಲ್ಲಿ ಕಾಣಿಸಿಕೊಳ್ಳುತ್ತವೆ. ಇಂತಹ ದೈವಸ್ವರೂಪಿ ವಸ್ತುಗಳನ್ನು ಕಾಲಿನಿಂದ ಒದ್ದು ಅಪಮಾನ ಮಾಡುವುದು ಸೂಕ್ತವೇ ಎಂಬ

ಪ್ರಶ್ನೆಯೂ ಏಳಬಹುದು. ಆದರೆ ದೈನಂದಿನ ಬದುಕಿನಲ್ಲಿ ಇದು ಅಪಮಾನವೇ. ಆಕಸ್ಮಾತ ಕಾಲು ತಾಕಿದರೆ ಬಗ್ಗಿ ನಮಸ್ಕರಿಸಿ ಮುಂದೆ ಹೋಗಬೇಕು. ಇದು ಸಭ್ಯತೆ ಎಂದು ಸಂಸ್ಕೃತಿಯ ಅನಿಸಿಕೆಯಾಗಿದೆ. ಆದರೆ ನವ ವಧು ವರರು ಸಾಕ್ಷಾತ್ ಲಕ್ಷ್ಮಿ ನಾರಾಯಣರ ಪ್ರತಿರೂಪವೇ ಆಗಿರುತ್ತಾರೆ. ಮತ್ತು ಮನುಷ್ಯನ ಪ್ರತಿಯೊಂದು ಅಂಗಾಂಗಳಲ್ಲಿ ದೇವರು ನೆಲೆಸಿರುತ್ತಾರೆ ಎಂಬ ನಂಬಿಕೆಯಿದೆ. ಆದ್ದರಿಂದ ಕಾಲಿನ ಹೆಬ್ಬೆರಳಿನಲ್ಲಿ ದೇವರ ವಾಸವಿರುತ್ತದೆ. ಉಂಗಷ್ಟದಲ್ಲಿ ದೈವಿ ನೆಲೆಯಿರುತ್ತದೆಂಬ ನಂಬಿಕೆ ಧರ್ಮದಲ್ಲಿದೆ. ಹೆಬ್ಬಟ್ಟಿನ ಮುಖಾಂತರವೇ ಸೇರನ್ನು ಒದೆಯುವುದು ಹೆಬ್ಬೆರಳು ಇಡೀ ದೇಹದ ಸಮತೋಲನವನ್ನು ನಿಯಂತ್ರಿಸು ವಂತದ್ದು. ಹೆಬ್ಬೆರಳು ನೋವಾದರೆ ಇಡೀ ದೇಹವೇ ಕಷ್ಟ ಅನುಭವಿಸಬೇಕಾಗುತ್ತದೆ. ಕೈ ಮತ್ತು ಕಾಲಿನ ಐದು ಬೆರಳುಗಳಲ್ಲಿ ಹೆಬ್ಬೆರಳಿಗೆ ಪ್ರಧಾನ ಸ್ಥಾನ. ಅದಕ್ಕೆ ಅಲ್ಲವೆ 'ದ್ರೋಣಾಚಾರ್ಯರು ಏಕಲವ್ಯನಿಗೆ ಗುರುದಕ್ಷಿಣೆಯಾಗಿ ಹೆಬ್ಬೆರಳನ್ನು ಕೇಳಿದ್ದು' ಇದಕ್ಕೆ ಪೂರಕವಾದ ಒಂದು ತ್ರಿಪದಿ ನೋಡಿ.

> ಪಾದಮಾನ ಜಯಂತನೊಳಗೆ
> ಸುಮೇಧ ನಾಮಕನಿಪ್ಪ
> ಪಾದದುಂಗುಷ್ಟದಲ್ಲಿ ಭಾಗ ಭದ್ರಪ

ಆದ್ದರಿಂದ ಹೊಸ್ತಿಲ ಮೇಲಿಟ್ಟ ಸೇರಿಗೆ ಒದೆಯುವುದು ಇಲ್ಲಿ ಅಪವಿತ್ರವೆಂದೆನಿಸದೆ ಆಚರಣಾತ್ಮಕ ನೆಲೆಯಲ್ಲಿ ಶ್ರೇಷ್ಠ ಎಂಬ ಮಾನ್ಯತೆ ಪಡೆದಿದೆ.

ಪ್ರತಿಯೊಂದು ಮಗುವಿನ ಬಾಲ್ಯದ ಸವಿನೆನಪಾಗಿ ಹೊಸ್ತಿಲು ಕಾಣಿಸಿಕೊಳ್ಳುವುದು. ಮಗು ಪ್ರಥಮ ಬಾರಿಗೆ ಹೊಸಿಲು ದಾಟಿದಾಗ ವೈಯಕ್ತಿಕ ಬದುಕಿನಿಂದ ಸಮಾಜ ಜೀವನಕ್ಕೆ ಪಾದಾರ್ಪಣೆ ಮಾಡಿದುದರ ಸಂಕೇತವೇ ಈ ಹೊಸ್ತಿಲು ದಾಟುವಿಕೆ. ಇದೊಂದು ಸಂತೋಷದ ಸುದಿನವಾಗಿ ನೆನಪಿನಂಗಳದಲ್ಲಿ ಉಳಿಯುತ್ತದೆ. ಇಂತಹ ಸಂತೋಷದ ವಾತಾವರಣ ಮತ್ತಷ್ಟು ಖುಷಿ ಕೊಡುವಂತದ್ದು ಸಿಹಿ ತಿನಿಸು ತಾಯಿ ತನ್ನ ಮಗು ಹೊಸ್ತಿಲು ದಾಟಿ ಹೊರ ಬಂದನು ಎನ್ನುವ ಸಂತೋಷ ಎಲ್ಲರೊಂದಿಗೆ ಹಂಚಿಕೊಳ್ಳಲು ಸಿಹಿ ಪದಾರ್ಥಗಳಾದ ಕಡುಬು ಮಾಡಿ ಹಂಚುವುದು ಅಥವಾ ಕೊಬ್ಬರಿ ಒಡೆಯುವುದು ಮುಂತಾಗಿ ಮಾಡುತ್ತಾಳೆ.

ವೈಜ್ಞಾನಿಕವಾಗಿ ಮತ್ತು ಸಾಮಾಜಿಕವಾಗಿ ಪರಿಶೀಲಿಸಿದರೆ ಹೊಸ್ತಿಲು ದಾಟುವಿಕೆ ಮಗುವಿನ ಕಾಲಿನ ಸ್ನಾಯುಗಳು ಬಲವಾಗಿವೆ ಮತ್ತು ಆತ ಹಾಗೆ ಮನೆಯಲ್ಲಿ ಕೂರಲಿಲ್ಲ ಹೊರಗಿನ ಪ್ರಪಂಚಕ್ಕೆ ಬಂದನು ಎನ್ನುವುದಾಗಿದೆ. ಹೊಸ್ತಿಲು ದಾಟುವಿಕೆ ಇಲ್ಲಿ ಸಂತೋಷ ಸಂಭ್ರಮ ತಂದರೆ ಯೌವ್ವನದಲ್ಲಿ ಮರ್ಯಾದೆಗೆ ಧಕ್ಕೆ ತರುತ್ತದೆ. ಇದರಿಂದಲೇ ತಿಳಿಯುತ್ತದೆ ಹೊಸ್ತಿಲಿನ ವಿವಿಧ ಸಂದರ್ಭದಲ್ಲಿನ ವೈವಿಧ್ಯಮಯ ಕಾರ್ಯವೈಖರಿ.

ಎಲ್ಲ ಸಂಸ್ಕೃತಿಗಳಲ್ಲಿಯಂತೆ ಬ್ರಾಹ್ಮಣ ಸಂಸ್ಕೃತಿಯಲ್ಲಿಯೂ ಕೂಡ ಸಾವು ಸಂಭವಿಸಿದಾಗ ಮನೆಯ ಮುಂಬಾಗಿಲ ಹೊಸ್ತಿಲಿನ ಬಳಿ ಬೆಂಕಿ ಹಾಕುತ್ತಾರೆ. ಮನೆಯ ಮುಂದಿನ ಬೆಂಕಿ ಸಾವು ಸಂಭವಿಸಿದುದರ ಸೂಚಕವೆಂಬಂತೆ ಜನರಿಗೆ ಸಂವಹನ ಕಾರ್ಯ ಮಾಡುತ್ತದೆ. ನಂತರ ಮೃತದೇಹವನ್ನು ಮುಂಬಾಗಿಲಿನ ಹೊಸ್ತಿಲ ಬಳಿ ಕೂಡಿಸಿ, ಮೃತನ ಮಗ ಬಾವಿಗೆ ಹೋಗಿ ಸ್ನಾನ ಮಾಡಿ ಒದ್ದೆ ಬಟ್ಟೆಯಿಂದ ಮಡಿ ನೀರು ತಂದು ಶವಕ್ಕೆ ಸ್ನಾನ ಮಾಡಿಸಿ ಹೊಸ ಬಟ್ಟೆಗಳನ್ನು ಹಾಕುತ್ತಾರೆ. ಗಂಧ ಕುಕುಮ, ಅಕ್ಕಿಕಾಳುಗಳಿಂದ ಪೂಜಿಸಿ ಗಂಡಸಾಗಿದ್ದರೆ ಜನಿವಾರ ಹಾಕುತ್ತಾರೆ. ನಂತರ ತಮ್ಮ ಸಂಸ್ಕೃತಿಯಂತೆ ಶವವವನ್ನು ಸುಡುತ್ತಾರೆ. ಇವರ ಪ್ರಕಾರ ಸತ್ತ ವ್ಯಕ್ತಿಯ ಜೀವವು ಹತ್ತು ದಿನಗಳವರೆಗೆ ಮನೆಯಲ್ಲಿಯೆ ಇರುತ್ತದೆ. ಆದ್ದರಿಂದ ಸತ್ತ ವ್ಯಕ್ತಿ ಗಂಡಸಾಗಿದ್ದರೆ, ಆತನ ಹೆಂಡತಿಗೆ ಆ ಹತ್ತು ದಿನಗಳವರೆಗೆ ಸುಮಂಗಲಿಯಾಗಿರುವ ಅವಕಾಶ. ಹನ್ನೊಂದನೆಯ ದಿನ ಆಕೆಯನ್ನು ವಿಧವೆಯನ್ನಾಗಿ ಮಾಡುವ ಹೃದಯ ವಿದ್ರಾವಕ ಘಟನೆ ನಡೆಯುತ್ತದೆ.

ಪುಣ್ಯತಿಥಿ ಮಾಡುವ ದಿವಸ ಆತ್ಮಗಳು ಮನೆಗೆ ಬರುತ್ತವೆ ಎಂದು ನಂಬುವ ಇವರು ಅಂದು ಹೊಸ್ತಿಲ ಮೇಲಾಗಲೀ, ಅಂಗಳದಲ್ಲಿಯಾಗಲೀ ರಂಗೋಲಿ ಹಾಕುವಂತಿಲ್ಲ. ಮನೆಯ ಹೆಣ್ಣು ಮಕ್ಕಳು ಅಲಂಕಾರ ಮಾಡಿಕೊಳ್ಳುವಂತಿಲ್ಲ. ಅಲಂಕಾರ ಸಂತೋಷ ಸಂಭ್ರಮದ ಸೂಚಕವಾಗಿದೆ. ರಂಗೋಲಿಯ ನಿಷೇಧಕ್ಕೆ ಪ್ರಮುಖ ಕಾರಣವಿದೆ. ರಂಗೋಲಿ ದುಷ್ಟಶಕ್ತಿಗಳ ಪ್ರವೇಶ ತಡೆಯುತ್ತದೆ. ಕಾರಣ ಆತ್ಮಗಳು ಒಳ ಪ್ರವೇಶಿಸುವಂತಿಲ್ಲ. ಅದಕ್ಕೆ ರಂಗೋಲಿಯ ಶ್ರೇಷ್ಠತೆಯನ್ನು ಪಡೆದಿದೆ. ಒಟ್ಟಿನಲ್ಲಿ ಯಾವುದೇ ಶುಭಕಾರ್ಯಗಳು ಅಂದು ನಿಷಿದ್ಧ. ಇನ್ನೊಂದು ಗಮನಿಸುವ ಸಂಗತಿಯೆಂದರೆ ಅಂದು ಮಧ್ಯಾಹ್ನದ ಮೇಲೆ ರಂಗೋಲಿ ಹಾಕಬಹುದು. ಬಹುಶಃ ಅದಕ್ಕೆ ಹಿರಿಯರು ರಂಗೋಲಿ ಹಾಕಲು ಬೆಳಿಗ್ಗೆ ಮತ್ತು ಸಾಯಂಕಾಲವೇ ಸೂಕ್ತವಾದ ಸಮಯ ಎಂದಿದ್ದಾರೆ.

ಹೊಸ್ತಿಲು ಪೂಜೆ ಮತ್ತು ರಂಗೋಲಿ ದೇವತೆಗಳನ್ನು ಸಂಪ್ರೀತಿಗೊಳಿಸಿ ಬರಮಾಡಿಕೊಂಡರೆ ದುಷ್ಟಶಕ್ತಿಗಳನ್ನು ತಡೆಯುವ ಶಕ್ತಿಯನ್ನು ಹೊಂದಿದೆ. ಈ ಶಕ್ತಿಯನ್ನು ಹೊಂದಿದ ಹೊಸ್ತಿಲು ವ್ಯಕ್ತಿಯೊಬ್ಬನ ಜೀವಿತಾವಧಿ ಮತ್ತು ನಂತರದಲ್ಲಿಯೂ ವಿವಿಧ ನೆಲೆಗಳಲ್ಲಿ ವಿವಿಧ ಕಾರಣಗಳಿಗಾಗಿ ಬಳಕೆಯಾಗುತ್ತದೆ. ಇದು ಇಡೀ ಮನೆಯನ್ನು ಮನುಷ್ಯನ ಬದುಕನ್ನು ಸುತ್ತುವರಿದಿದೆ ಎಂದರೆ ತಪ್ಪಾಗಲಾರದು.

ಕೌಟುಂಬಿಕ ರಚನೆ ಮತ್ತು ಸ್ತ್ರೀ ಪುರುಷರ ಸಂಬಂಧ : ಪ್ರದಾನ ಸಂಸ್ಕೃತಿಯಲ್ಲಿ ಹಿಂದೆ ಅವಿಭಕ್ತ ಕುಟುಂಬಗಳೇ ಅಧಿಕವಾಗಿದ್ದು ಪಿತೃಪ್ರಧಾನ ವ್ಯವಸ್ಥೆಯನ್ನೇ ಹೊಂದಿದೆ. ಅಲ್ಲಿನ ತುಂಬಿದ ಸಂಸಾರದಲ್ಲಿ ಸ್ತ್ರೀ ಜೀವಂತ ಬೊಂಬೆಯೆ ಸರಿ. ಸ್ವಂತ ಅನಿಸಿಕೆ, ಅಭಿಪ್ರಾಯ, ನಿರ್ಣಯಗಳಿಗೆ ಗೌಣಸ್ಥಾನ. ಸೂತ್ರದ ಬೊಂಬೆಯಾಗಿ ಪುರುಷ ಅದರ ನಿಯತ್ರಕನಾಗಿರುತ್ತಾನೆ. ಮನೆಯ ಹಿರಿಯ ಮಹಿಳೆಯಿಂದಲೂ ಕಿರುಕುಳ

ಅನುಭವಿಸಬೇಕು. ಅತ್ತೆ ಸೊಸೆಯರು ತಮ್ಮ ತಮ್ಮ ಅಸ್ತಿತ್ವಕ್ಕಾಗಿ, ಭದ್ರತೆಗಾಗಿ ಪರಸ್ಪರ ಹೋರಾಟ ನಡೆದಿರುತ್ತದೆ. ಹಿರಿಯ ಮಹಿಳೆಯಾದ ಅತ್ತೆ ಸೊಸೆಯಿಂದ ನಿರೀಕ್ಷಿಸುವುದು ತನ್ನ ಅಂಕೆಯಲ್ಲಿರಬೇಕೆಂದು, ಆಕೆಯ ಯೌವ್ವನ, ಲೈಂಗಿಕ ಆಕರ್ಷಣೆಯಿಂದ ಮಗ ತನ್ನ ಕೈಬಿಟ್ಟು ಹೋಗಬಹುದು ಎನ್ನುವ ಕ್ಷುಲ್ಲಕ ಮನೋಭಾವನೆಯಿಂದ ಆದಷ್ಟು ಪರಸ್ಪರರಲ್ಲಿ ವೈಮನಸ್ಸು ಬಿತ್ತಲು ಪ್ರಾರಂಭಿಸುತ್ತಾಳೆ. ಇಲ್ಲಿ ಇಬ್ಬರು ಹೆಣ್ಣುಮಕ್ಕಳ ಮಧ್ಯ ಕಿತ್ತಾಟ ಎನಿಸಿದರೂ ಮೂಲದಲ್ಲಿ ಅದು ವ್ಯವಸ್ಥೆಯೊಂದಿಗಿನ ಸಂಘರ್ಷವೇ ಆಗಿದೆ. ಅಡಿಗೆ ಮನೆಯಿಂದ ಹೊರಗೆ ಬರಬಾರದು. ಎಲ್ಲರೆದಿರಿಗೆ ಗಂಡನೊಂದಿಗೆ ಜೋರಾಗಿ ಮಾತನಾಡುವುದು, ನಗುವುದು ಅಸಭ್ಯವರ್ತನೆ ಮರ್ಯಾದಸ್ಥ ಮನೆತನದವರ ಲಕ್ಷಣವಲ್ಲ ಎನ್ನುತ್ತಾರೆ. ಊಟದ ವಿಷಯದಲ್ಲಿಯೂ ಎರಡನೆ ಪಾಳಿಯೇ. ಎಲ್ಲರ ಹೊಟ್ಟೆ ತುಂಬಿದ ಮೇಲೆ ತನ್ನ ಹೊಟ್ಟೆ ಬಗ್ಗೆ ವಿಚಾರ ಮಾಡಬೇಕು. ಬಹುಶಃ ಅದಕ್ಕೆ ಹೆಣ್ಣನ್ನು 'ಅನ್ನಪೂರ್ಣೆ' ಎಂದು ಕರೆದಿರಬೇಕು. ಅನಿವಾರ್ಯವಾಗಿ ಮಾತನಾಡಲೇ ಬೇಕಾದ ಪ್ರಸಂಗ ಬಂದರೆ ಬಾಗಿಲ ಹಿಂದೆ ನಿಂತುಕೊಂಡೆ ತಲೆ ತಗ್ಗಿಸಿಯೆ ಹೇಳಬೇಕು. ಕ್ಷಣಮಾತ್ರದ ಆಲಸಿತನವೂ ಮನೆಯವರಿಗೆ ನುಂಗಲಾರದ ತುತ್ತಾಗುತ್ತದೆ. ಅದಕ್ಕೆ ಹೆಣ್ಣು ನೋಡಲು ಹೋದಾಗ 'ಸಂಸಾರ ಮಾಡಲಿಕ್ಕೆ ಗಟ್ಟಿಯಾಗಿದ್ದಾಳೆಯೋ' ಎಂದು ವಿಚಾರಿಸುವುದು ಉಂಟು. ಬೌದ್ಧಿಕ ಬಲಕ್ಕಿಂತ ದೈಹಿಕ ಬಲ ಪ್ರಮುಖವಾಗಿ ದುಡಿಯುವ ಆಳಾಗಿ ಕಾಣಿಸಿಕೊಳ್ಳುತ್ತಾಳೆ. ಇದೆ ನನ್ನ ಬದುಕಿನ ರೀತಿ ಎಂದು ಸಂಪೂರ್ಣವಾಗಿ ಒಪ್ಪಿಕೊಂಡು ಇದನ್ನೆ ತನ್ನ ಮುಂದಿನ ಪೀಳಿಗೆಗೆ ವರ್ಗಾಯಿಸುವ ವಾಹಕಳಾಗುತ್ತಾಳೆ. ಪ್ರಧಾನ ಸಂಸ್ಕೃತಿಯಲ್ಲಿ ಹೊಸ್ತಿಲ ಒಳಗೆ ತಲೆ ತಗ್ಗಿಸಿ ನಿರ್ವಹಿಸಿದ ಕಾರ್ಯ ಮಾಡುತ್ತಾ ಇರುವ ಮಹಿಳೆಗೆ 'ಗರತಿ'ಯ ಸ್ಥಾನ ಪ್ರತಿಭಟನೆ, ಪ್ರತಿಕಾರಗಳಿಗೆ ಗಂಡುಬೀರಿ ಪಟ್ಟ. ಈ ಪಟ್ಟ ಧರಿಸುವ ಧೈರ್ಯವಾಗಲೀ, ಶಕ್ತಿಯಾಗಲೀ ಯಾವ ಮಹಿಳೆಯು ತೋರಿಸುವುದಿಲ್ಲ. ಆತ್ಮಕ್ಕೆ ವಿರುದ್ಧವಾಗಿ ಸಮಾಜಕ್ಕೆ ಯೋಗ್ಯಳಾಗಿ ಬದುಕುವ ಹುಚ್ಚು ಹಂಬಲಗಳ ಮಧ್ಯ ತನ್ನನ್ನೇ ತಾನೇ ಮರೆಯುವ ಸ್ಥಿತಿಯನ್ನು ಇಂಥಲ್ಲಿ ಕಾಣುತ್ತೇವೆ.

ಮುತ್ತೈದೆಯಾದ ಹೆಣ್ಣಿನ ಸ್ಥಿತಿ ಇದಾದರೆ, ಇನ್ನೂ ಗಂಡನನ್ನು ಕಳೆದುಕೊಂಡ ವಿಧವೆಯ ಪಾಡು ಹೇಳ ತೀರದು. ಧರ್ಮ, ಸಂಸ್ಕೃತಿಯ ಪ್ರಕಾರ ಒಂದು ವರ್ಷದವರೆಗೆ ಹೊಸ್ತಿಲು ದಾಟಿ ಹೊರಗೆ ಬರುವಂತಿಲ್ಲ. ಹಾಗೇನಾದರೂ ಹೋದರೆ "ಗಂಡ ಸತ್ತು ಒಂದು ವರ್ಷ ಆಗಿಲ್ಲ, ಆಗ್ಲೆ ಹೊಸ್ತಿಲ ದಾಟಿ ಹೊರಗೆ ಬಂದಾಳ, ಎಂತಲೋ ಗಂಡ ಸತ್ತ ದುಃಖವೇ ಇಲ್ಲ ಇವಳಿಗೆ" ಎಂತಲೋ ಸಮಾಜದವರ ಮನಚುಚ್ಚುವ ಮಾತುಗಳು. ಗಂಡನ ಮನೆಯ ಕೆಲಸದ ಆಳಾಗಿ ಹಾಕಿದ್ದು ತಿಂದು ಒಂದು ಮೂಲೆಯಲ್ಲಿ ವ್ರತೋಪಾಸನೆ ಮಾಡುತ್ತಾ ಇರಬೇಕು. ಮಂಗಳ ಕಾರ್ಯಗಳಿಗೆ ಹೋಗುವಂತಿಲ್ಲ. ಅವಳ ಮುಖ ಕಂಡರೂ ಅಪಶಕುನವೆಂದು ಮುಖ ಸಿಂಡರಿಸುವ ಸಮಾಜಕ್ಕಿಂತ ಕತ್ತಲು ಕೋಣೆ ದೇವತಾರಾಧನೆಯೇ ಬಹುಪಾಲು ಮೇಲು ಎನಿಸುತ್ತದೆ. ಅವಳೂ ಕುಟುಂಬದ ಒಬ್ಬ ಸದಸ್ಯೆ ಸಮಾಜದ ಒಬ್ಬ ಪ್ರಜೆ ಎಂದು

ಸ್ವೀಕರಿಸುವ ಬದಲು ಅವಳ ಕಾಲ್ಗುಣ ಕೆಟ್ಟದ್ದು, ಅವಳೆ ತನ್ನ ಗಂಡನನ್ನು ನುಂಗಿದಳು ಎನಿಷ್ಟೆ, ಹೀಗೆ ಎಂದೆಲ್ಲಾ ನಕಾರಾತ್ಮಕ ಭಾವನೆ ತೋರಿಸುತ್ತಾರೆ.

ಪ್ರಧಾನ ಸಂಸ್ಕೃತಿಯೊಂದು ವಿಧವೆಗೆ ಹಾಕಿದ ನಿರ್ಬಂಧಗಳು ನೂರಾರು. ಆಕೆಯ ಸುತ್ತ ಉಸಿರುಗಟ್ಟಿಸುವ ಬೇಲಿಯ ಬಿಗಿತ. ಆದರೆ ಪುರುಷನೊಬ್ಬ ಈ ಕಷ್ಟದಿಂದ ಮುಕ್ತನಾಗಿದ್ದಾನೆ. ಅವನಿಗೆ ನಿರ್ಬಂಧವಿಲ್ಲ, ಅಪಶಕುನದ ತಿರಸ್ಕಾರವಿಲ್ಲ. ಬದಲಾಗಿ ಒಂದು ಹೆಣ್ಣು ಮುತ್ತೈದೆಯ ಸಾವಿಗೆ ಫಲವೆಂದು ವಿದುರನೆನ್ನುವ ಬದಲು ಮತ್ತೊಂದು ಹೆಣ್ಣಿಗೆ ತಾಳಿಕಟ್ಟಿ ಮತ್ತೆ ಗಂಡನ ಶ್ರೇಷ್ಠಸ್ಥಾನ ಪಡೆಯುತ್ತಾನೆ. ಇದು ಈ ಸಂಸ್ಕೃತಿಯ ದ್ವಿಮುಖ ಧೋರಣೆ. ಉಪಸಂಸ್ಕೃತಿಯಲ್ಲಿ ಪುರುಷ ಪಡೆಯುವ ಪ್ರತಿಯೊಂದು ಸವಲತ್ತುಗಳು ಸ್ತ್ರೀ ಕೂಡ ಪಡೆದಿದ್ದಾಳೆ. ವಿವಾಹ, ವಿಚ್ಛೇದನೆ, ವಿಧವಾ ವಿವಾಹ, ಯಾವುದೇ ಇರಲಿ, ಉಪಸಂಸ್ಕೃತಿಯಲ್ಲಿ ಸ್ತ್ರೀ ತನ್ನ ಬದುಕು ತಾನೇ ಬಾಳಲು ಪ್ರಯತ್ನಿಸಿದರೆ ಇಲ್ಲಿ ಇನ್ನಾರಿಗಾಗಿಯೋ ಬದುಕು ಸವೆಸಲು ಸ್ತ್ರೀಯನ್ನು ಪ್ರಚೋದಿಸಲಾಗುತ್ತದೆ. ಪ್ರಧಾನ ಸಂಸ್ಕೃತಿಯ ಲಕ್ಷಣವೇ ಹೊಸತನ್ನು ಬರಮಾಡಿಕೊಳ್ಳುವ ಬುದ್ಧಿಯನ್ನು ಹೆಚ್ಚಿಸಿಕೊಳ್ಳುವ ಆ ಮೂಲಕ ಹೆಚ್ಚು ನಿಯಮಗಳನ್ನು ಸೃಷ್ಟಿಮಾಡುವ ಸತತ ಪ್ರಯತ್ನದಲ್ಲಿರುತ್ತದೆ. ಇದಕ್ಕೆ ನಿದರ್ಶನವೆಂಬಂತೆ ಸೀತೆ, ಚಂದ್ರಮತಿಯರ ಜೀವನ.

ಪ್ರಧಾನ ಸಂಸ್ಕೃತಿ ಮತ್ತು ಉಪಸಂಸ್ಕೃತಿಗಳ ಅಧ್ಯಯನ ಕೈಗೊಂಡಾಗ ಪ್ರತಿ ಸಂಸ್ಕೃತಿಯೂ ಹೆಣ್ಣಿನ ದೌರ್ಜನ್ಯ, ದಬ್ಬಾಳಿಕೆಗಳೇ ಎದ್ದು ಕಾಣುತ್ತವೆ. ಉಪಸಂಸ್ಕೃತಿಯಲ್ಲಿ ಪ್ರಧಾನ ಸಂಸ್ಕೃತಿಗಿಂತಲೂ ಸ್ತ್ರೀ ಮುಕ್ತವಾತಾವರಣ ಪಡೆದಿದ್ದಾಳೆ. ಸ್ತ್ರೀ-ಪುರುಷರ ಸಮಾನ ಸ್ಥಾನ ಹೊಂದಿದ್ದಾಳೆ ಎಂದರೂ ಕೆಲವೊಂದು ವಿಷಯಕ್ಕೆ ಬಂದಾಗ ಪುರುಷನ ಪ್ರಾಧಾನ್ಯತೆ ಸ್ತ್ರೀಯ ಪರಾಧೀನತೆಯ ತಾರತಮ್ಯ ಇದ್ದೆ ಇದೆ. ವಿವಾಹದ ಸಂದರ್ಭದಲ್ಲಿ ಸ್ತ್ರೀ ಕೇವಲ ಒಂದು ಬಾರಿ ಮಾತ್ರ ಶಾಸ್ತ್ರೋಕ್ತವಾಗಿ, ಬಾಸಿಂಗ ಧರಿಸಿ ಮದುವೆಯಾಗಲೂ ಅರ್ಹತೆ ಪಡೆದಿದ್ದರೆ, ಪುರುಷ ಮಾತ್ರ ಐದು ಬಾರಿ ಈ ರೀತಿಯ ಅರ್ಹತೆ ಹೊಂದಿದ್ದಾನೆ. ವಿಧವಾ ವಿವಾಹ ಮತ್ತು ವಿಚ್ಛೇದಿತ ಮಹಿಳೆಯ ಮರುವಿವಾಹಕ್ಕೆ ಸಂಪೂರ್ಣ ಒಪ್ಪಿಗೆ ನೀಡಿದ ಉಪಸಂಸ್ಕೃತಿಯ ಮಾತಿದು. ಅನೈತಿಕ ಸಂಬಂಧಗಳು ಬೆಳಕಿಗೆ ಬಂದಾಗ ದೋಷ ಹೊರಿಸುವುದು ಸ್ತ್ರೀಯ ಮೇಲೆ ವಿನಃ ಪುರುಷನಿಗಲ್ಲ. ಕೌಟುಂಬಿಕ ವ್ಯವಸ್ಥೆಯಲ್ಲಿಯೂ ಕೂಡ ಪುರುಷನ ಮಾತು ಮತ್ತು ತೀರ್ಮಾನವೇ ಕೊನೆಯದು. ಇದಕ್ಕೆ ನಿದರ್ಶನವೆಂದರೆ ಮೂಲ ಮಾತೃಪ್ರಧಾನ ಸಂಸ್ಕೃತಿಗಳು ಆರ್ಯರ ಪ್ರಭಾವದಿಂದ ಪುರುಷ ಕೇಂದ್ರಿತ ಸಂಸ್ಕೃತಿಗಳಾಗಿ ರೂಪಾಂತರ ಹೊಂದಿರುವುದು.

ಪ್ರಧಾನ ಸಂಸ್ಕೃತಿಯಲ್ಲಿನ ಮಹಿಳೆಗೆ ಹೊಸ್ತಿಲೇ ಅಂತಿಮ ಗಡಿ. ಸ್ತ್ರೀ ಯಾವತ್ತು ಪುರುಷ ಸಮಾನ ಸ್ಥಾನ ಪಡೆಯಲೇ ಇಲ್ಲ. ಇಂದಿಗೂ ಕೂಡ ಎಷ್ಟೋ ಕುಟುಂಬಗಳಲ್ಲಿ ಸ್ತ್ರೀ ಕೇವಲ ಅಡಿಗೆ ಮನೆಗೆ ಮಾತ್ರ ಮೀಸಲಾಗಿದ್ದಾಳೆ. ಕುಟುಂಬ, ಸಮಾಜ, ಪ್ರಧಾನ ಸಂಸ್ಕೃತಿ, ಉಪಸಂಸ್ಕೃತಿ ಹೀಗೆ ಪ್ರತಿ ಕ್ಷೇತ್ರದಲ್ಲಿ ಮಹಿಳೆ ಇದ್ದಾಳೆ. ಅವಳ ದುಡಿಮೆ ಇದೆ. ಆದರೆ ಆ ದುಡಿಮೆಗೆ ಸರಿಯಾದ ಮಾನ

ದೊರೆಯಲಿಲ್ಲ. ಅಂದಿನ ಸ್ತ್ರೀ ಬದುಕು ಇಂದಿನ ಸ್ತ್ರೀ ಬದುಕಿಗೂ ಅಜಗಜಾಂತರ ವ್ಯತ್ಯಾಸವಿದ್ದರೂ ಪುರುಷ ಸಮಾಜಕ್ಕೆ ಮಾತ್ರ ಹೆಣ್ಣಿನ ಬಗ್ಗೆ ಇರುವ ಧೋರಣೆ ಬದಲಾವಣೆಯಾಗಲಿಲ್ಲ. ಬಲಿಷ್ಠ ಪುರುಷ ಕೇಂದ್ರಿತ ಸಮಾಜ ಆಕೆಯನ್ನು ಹೊಸ್ತಿಲಿನ ಹೊರಗೆ ನೋಡಲು ಬಯಸುವುದಿಲ್ಲ. ಇಂದಿನ ಆಧುನಿಕ ಸಮಾಜ ಹಿಂದಿನ ಪೊಳ್ಳು ಪ್ರತಿಷ್ಠೆಯ ಮುಖವಾಡ ಕಳಚಿ ಸ್ತ್ರೀಯ ಶಿಕ್ಷಣ ಪುರಸ್ಕರಿಸುತ್ತಿದೆ. ಶಿಕ್ಷಣ ತುಕ್ಕು ಹಿಡಿದ ಮಾನವ ಬದುಕಿಗೆ ಹೊಸ ಹೊಳಪನ್ನು ಕೊಡುವಂತದ್ದು ಎಂದು ಸ್ತ್ರೀಯನ್ನು ಹೊಸ್ತಿಲು ದಾಟಿ ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಟ್ಟಿತು. ಶಿಕ್ಷಣದಿಂದ ಸರಿ ತಪ್ಪುಗಳ ತಿಳುವಳಿಕೆ, ವೈಚಾರಿಕ ಮನೋಭಾವನೆ ಬೆಳೆಯುವುದಲ್ಲದೆ ಸ್ವಾವಲಂಬನೆಯ ಬದುಕನ್ನು ಕಲಿಸುತ್ತದೆ. ಸ್ತ್ರೀ ಕಲಿಯುವುದಕ್ಕಿಂತ ತಿಳಿದುಕೊಳ್ಳುವುದೇ ಹೆಚ್ಚು. ಶಿಕ್ಷಣ ಪಡೆದು ಸ್ತ್ರೀ ಪ್ರತಿ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸಿದಳು. ಇದರ ಸಂಪೂರ್ಣ ಲಾಭ ಪಡೆದವನು ಪುರುಷ. ಆಕೆಯ ಬುದ್ಧಿ, ಸಂಪಾದನೆಯನ್ನು ತನ್ನ ಸ್ವಾರ್ಥಕ್ಕೆ ಬಳಸ ತೊಡಗಿದನು. ಆರ್ಥಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿದರೂ ಕುಟುಂಬದ ಜವಾಬ್ದಾರಿಗಳು ಆಕೆಯನ್ನು ಬಿಡಲಿಲ್ಲ. ಅವಳು ಎಷ್ಟೇ ಉನ್ನತ ಹುದ್ದೆಯಲ್ಲಿದ್ದರೂ ಮೊದಲ ಆದ್ಯತೆ ಪತಿ; ಮಕ್ಕಳು, ಕುಟುಂಬದ ಇತರ ಸದಸ್ಯರಿಗೆ ಕೊಟ್ಟು ನಂತರದ ಸ್ಥಾನ ಉದ್ಯೋಗಕ್ಕೆ. ಹೊಸ್ತಿಲ ಒಳಗೆ ಆಕೆಗಿರುವ ಜವಾಬ್ದಾರಿಗಳನ್ನು ಹಂಚಿಕೊಳ್ಳುವುದಿರಲಿ ಅದರ ಬಗ್ಗೆ ಯೋಚನೆ ಮಾಡುವುದು ಪುರುಷನಿಗೆ ಅಪಮಾನವೆನಿಸಿದೆ. ಮನೆಗೆಲಸ ಸ್ತ್ರೀ ಸಹಜ ಕ್ರಿಯೆ ಎಂದೇ ಪರಿಗಣಿತವಾಗಿದೆ. ಮನೆಯ ಒಳಗೆ ಹೆಂಡತಿಗೆ ಸಹಕರಿಸುವ ಗಂಡನ ಬಗ್ಗೆ ಸಮಾಜ ಅಮ್ಮಾವ್ರಗಂಡ ಎಂದು ಹೀಯಾಳಿಸುತ್ತದೆ. ಆದ್ದರಿಂದ ತನ್ನ ಕೆಲಸ ಹೊಸ್ತಿಲ ಹೊರಗಿನದು. ಮನೆಯಲ್ಲಿ ಆತ ಯಜಮಾನ ಎಂದೇ ಬೀಗುತ್ತಾನೆ. ಹೊರಗೆ ಜವಾನನಿದ್ದರೂ ಸಂಸ್ಕೃತಿ, ವ್ಯವಸ್ಥೆ ಎಲ್ಲವೂ ಬದಲಾವಣೆಗೆ ನಿಲುಕುವಂತೆ ಜಡಗೊಳಿಸಿದವರು ನಾವು. ನಮ್ಮಲ್ಲಿ ಕ್ರಿಯಾಶೀಲತೆ ಜಾಗೃತಗೊಂಡರೆ ಸಂಸ್ಕೃತಿ, ವ್ಯವಸ್ಥೆ ತನ್ನಿಂದ ತಾನೆ ಪರಿವರ್ತನೆಯಾಗುತ್ತದೆ.

ಅಡಿಟಿಪ್ಪಣಿಗಳು

೧. ಅಂಬಳಿಕೆ ಹಿರಿಯಣ್ಣ, ಕಚ್ಚೆಗೌಳಿಗರ ಸಂಸ್ಕೃತಿ, ೧೯೯೩;೧೬

೨. ನಾರಾಯಣ ಸ್ವಾಮಿ ವೈ.ಕೆ., ನೀರದೀವಿಗೆ, ೨೦೦೦;೨೦

೩. ನಾರಾಯಣ ಟಿ., ಯಾನಾದಿಗರ ಸಂಸ್ಕೃತಿ, ೧೯೯೩;೨೮-೨೯

೪. ಗೀತಾನಾಗಭೂಷಣ, ದುರಗಮುರಗಿಯರ ಸಂಸ್ಕೃತಿ, ೧೯೯೩;೯೫

೫. ಅಂಬಳಿಕೆ ಹಿರಿಯಣ್ಣ, ಪೂರ್ವೋಕ್ತ ೧೯೯೩;೮೩

೬. ಚಕ್ಕೆರೆ ಶಿವಶಂಕರ್, ಗೊರವರ ಸಂಸ್ಕೃತಿ, ೧೯೯೩;೭೫

೭. ಅಂಬಳಿಕೆ ಹಿರಿಯಣ್ಣ, ಪೂರ್ವೋಕ್ತ, ಪು.೯೧

೮. ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರ ಸಂಸ್ಕೃತಿ, ೧೯೯೩;೯೯

೯. ದೇವನೂರು ಪಾಂಡುರಂಗ, ಭೈರರ ಸಂಸ್ಕೃತಿ, ೧೯೯೩;೧೨೮

೧೦. ಅದೇ, ಪು.೧೨೮

೧೧. ಅದೇ, ಪು.೨೩

೧೨. ಖಂಡೋಬಾ ಪಿ.ಕೆ., ಕರ್ನಾಟಕದ ಲಂಬಾಣಿಗರು ಒಂದು ಸಾಂಸ್ಕೃತಿಕ ಅಧ್ಯಯನ, ೧೯೯೧;೧೫೫, ೧೭೪

೧೩. ಅದೇ,

೧೪. ರಾಮಕೃಷ್ಣ ಗುಂದಿ, ಅಗೇರರ ಸಂಸ್ಕೃತಿ, ೧೯೯೩;೩೦

೧೫. ಅದೇ,

೧೬. ಅದೇ,

೧೭. ಅದೇ,

೧೮. ಅದೇ,

೧೯. ಜಾನಪದ ಗಂಗೋತ್ರಿ, ವಿಶೇಷ ಸಂಚಿಕೆ, ಶವಸಂಸ್ಕಾರ ಪದ್ಧತಿಗಳು, ಡಾ.ಎಚ್.ಜೆ.ಲಕ್ಕಪ್ಪಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೭;೭

೨೦. ಮಯ್ಯ ಪಾ.ನ., ಕೋಟವರು ಕೋಟ ಪ್ರದೇಶದ ಸಾಂಸ್ಕೃತಿ ಅಧ್ಯಯನ, ೧೯೯೫;೧೮೩

೨೧. ಅದೇ, ಪು.೧೮೨

೨೨. ಮಾಹಿತಿ ನೀಡಿದವರು ಶ್ರೀಮತಿ ರಮಾಬಾಯಿ, ವಯಸ್ಸು ೫೬, ರಾಯಚೂರು

೨೩. ಅದೇ,

ಅಧ್ಯಾಯ ೪

ವ್ಯಕ್ತಿ ಪ್ರಾಧಾನ್ಯ ಮತ್ತು ಕನಿಷ್ಠ ನೆಲೆಗಳು

೪

ವ್ಯಕ್ತಿ ಪ್ರಾಧಾನ್ಯ ಮತ್ತು ಕನಿಷ್ಠ ನೆಲೆಗಳು

೪.೧. ಪುರುಷ ಪ್ರಧಾನ ಪ್ರಮೇಯಗಳು

ಪುರುಷ ಪ್ರಾಧಾನ್ಯತೆ ವಿಶ್ವವ್ಯಾಪಿಯಾದ ಒಂದು ಲಕ್ಷಣ. ಪ್ರಪಂಚದ ಬಹುತೇಕ ಸಮಾಜಗಳು ಪುರುಷ ಕೇಂದ್ರಿತವಾಗಿರುವುದನ್ನೇ ಕಾಣಬಹುದು. ಪುರುಷನ ಪರಮಾಧಿಕಾರವನ್ನು, ಸ್ತ್ರೀಯ ಪರಾಧೀನತೆಯನ್ನು ಎತ್ತಿ ಹಿಡಿಯುವಂಥ ಸಾಮಾಜಿಕ ವ್ಯವಸ್ಥೆಯೇ ಪುರುಷ ಪ್ರಧಾನ ವ್ಯವಸ್ಥೆ. ಈ ಪುರುಷ ಪ್ರಾಧಾನ್ಯತೆಯು ಪ್ರತಿಯೊಂದು ಸಂದರ್ಭದಲ್ಲಿ ತನ್ನ ಮಹಿಮೆಯನ್ನು ತೋರದೆ ಬಿಡುವುದಿಲ್ಲ. ಸಂಸ್ಕೃತಿ, ಸಂಪ್ರದಾಯ, ಆಚರಣೆ, ಮೌಲ್ಯಗಳು ಹೀಗೆ ಎಲ್ಲದರಲ್ಲಿಯೂ ತನ್ನ ಛಾಪು ಒತ್ತಿದೆ. ಇಲ್ಲಿ ಬರುವ ಎಲ್ಲಾ ಆಚರಣೆ, ಸಂಪ್ರದಾಯ, ಮೌಲ್ಯಗಳು ಪುರುಷನ ಪರವಾಗಿಯೇ ನಿಯಮಗಳನ್ನು ಸೃಷ್ಟಿಸುತ್ತವೆಯೇ ವಿನಃ ವಿರೋಧವಾಗಿ ಅಲ್ಲ. ಈ ಪುರುಷ ಪ್ರಾಧಾನ್ಯತೆ ಎನ್ನುವ ಬೀಜ ಹುಟ್ಟುವುದು ಕುಟುಂಬದಲ್ಲಿಯೇ. ಈ ಪ್ರಾಧಾನ್ಯತೆಯನ್ನು ಅನೇಕ ಮೂಲಗಳಿಂದ ತಿಳಿದುಕೊಳ್ಳಬಹುದು. ಮನೆಯ ಯಜಮಾನನ ಸ್ಥಾನ, ವಂಶವಾಹಿನಿಯನ್ನು ಬೆಳೆಸುವುದು, ಆಸ್ತಿಯ ಒಡೆತನ, ಮದುವೆಯ ನಂತರ ಹೆಣ್ಣು ತನ್ನ ಹುಟ್ಟಿದ ಮನೆಯನ್ನು ಬಿಟ್ಟು ಗಂಡನ ಮನೆಗೆ ಬರುವುದು, ಇವೆಲ್ಲ ಪುರುಷ ಪ್ರಧಾನ

ವ್ಯವಸ್ಥೆಯ ಹೆಗ್ಗುರುತುಗಳಾಗಿವೆ. ಇಂತಹ ವ್ಯವಸ್ಥೆಗಳಿಂದ ಕೂಡಿದ ಕುಟುಂಬದ ಒಳಗೆ ಸ್ತ್ರೀಯರ ಸ್ಥಾನ ಗೌಣ. ಹೊಸ್ತಿಲಿನಿಂದಿಚೆಗೂ ಒಂದು ಪ್ರಪಂಚವಿದೆ ಎನ್ನುವ ಕಲ್ಪನೆಯೂ ಬರದ ಹಾಗೆ ಅವರನ್ನು ಮಾನಸಿಕವಾಗಿ ಬೆಳಸಲಾಗುತ್ತದೆ. ಸ್ತ್ರೀ ಅತ್ಯಂತ ಕೀಳುಮಟ್ಟದ ಸ್ಥಾನವನ್ನು ಹೊಂದಿದ್ದು, ಸೇವಾ ಕಾರ್ಯಗಳ ಜವಾಬ್ದಾರಿಗಳನ್ನು ಹೊರುವುದಕ್ಕೆ ಆಕೆಯನ್ನು ಬಳಸಲಾಗುತ್ತದೆಯೇ ಹೊರತು ಅಧಿಕಾರವನ್ನು ಕೊಡುವುದಕ್ಕಾಗಿ ಅಲ್ಲ.

ಅಧಿಕಾರ ಚಲಾಯಿಸುವುದು ಪುರುಷನ ಜನ್ಮಸಿದ್ಧ ಹಕ್ಕು. ಅದು ಆತನಿಗೆ ಜೈವಿಕವಾಗಿ ಮತ್ತು ಸಾಮಾಜಿಕವಾಗಿ ದತ್ತು ರೂಪದಲ್ಲಿ ಬಂದಿರುವಂತಹದ್ದು. ಗಂಡುಶಿಶುವು ಹುಟ್ಟುವುದಕ್ಕೆ ಮುಂಚೆಯೇ ಬಲು ಬೇಡಿಕೆಗೆ ಪಾತ್ರವಾಗಿರುತ್ತಾದೆ. ಜನಿಸಿದ ನಂತರವೋ ಮನೆಯವರಿಗೆ, ಬಂಧು-ಬಳಗಕ್ಕೆ ಸಂತೋಷ-ಸಂಭ್ರಮ ಹೇಳತೀರದು. ಅನೇಕ ದಂಪತಿಗಳು ಪುತ್ರ ಸಂತಾನವನ್ನು ಕುರಣೆಸುವಂತೆ ಪೂಜೆ-ವ್ರತ ಹರಕೆಯನ್ನು ಮಾಡುತ್ತಾರೆ. ಅಥರ್ವಣ ವೇದದಲ್ಲಿ ಹೆಣ್ಣು ಮಗು ಬೇಡವೆಂದು ಪ್ರಾರ್ಥಿಸುವ ಸ್ತೋತ್ರಗಳು ಕಂಡುಬರುತ್ತವೆ. ಅಷ್ಟೇ ಅಲ್ಲದೆ ಹರಿಶ್ಚಂದ್ರನು ಪುತ್ರಪ್ರಾಪ್ತಿಗಾಗಿ ತುಂಬಾ ಹಂಬಲಿಸಿದನೆಂಬುದು ಪ್ರಸಿದ್ಧವಾದ ವಿಚಾರವೇ ಆಗಿದೆ.[7] ಹೀಗೆ ಪುರುಷನದ ಪ್ರಾಧಾನ್ಯತೆಯನ್ನು ಜನನದಿಂದಲೇ ಬಳುವಳಿಯಾಗಿ ತಂದಿರುತ್ತಾನೆ. ಕುಟುಂಬದಲ್ಲಿ ಆತನಿಗೆ ಪ್ರೀತಿ-ಗೌರವ, ಪ್ರತಿಯೊಂದಕ್ಕೂ ಮೊದಲ ಆದ್ಯತೆ, ಹೀಗೆ ಆತ ಬೆಳೆಯುವಲ್ಲಿ ಸ್ವಾತಂತ್ರವಿದ್ದು, ತೃಪ್ತಿಯೂ ಹೊಂದಿ ಒಂದು ರೀತಿಯ 'ಅಹಂ' ಅನ್ನು ಬೆಳೆಸಿಕೊಳ್ಳುತ್ತಾನೆ. ಇದರಿಂದ ಆತನಿಗೆ ಭಯ ವಿಧೇಯತೆಗಳು ಅಷ್ಟಾಗಿ ಮಾನ್ಯತೆ ಪಡೆದುಕೊಳ್ಳುವುದಿಲ್ಲ. ತಾನೇ ಮೇಲು, ತನ್ನಿಂದಲೇ ಎಲ್ಲಾ ಎನ್ನುವ ಸಾಮಾನ್ಯ ನಿರ್ಧಾರಕ್ಕೆ ಬರುತ್ತಾನೆ. ತನಗಿಂತ ಹಿರಿಯ ಹೆಣ್ಣುಮಕ್ಕಳಿಗೆ ಆಜ್ಞೆ ಮಾಡಲು ಪ್ರಾರಂಭಿಸಿ ಮುಂದೆ ಈ ಆಜ್ಞೆ ದೌರ್ಜನ್ಯ ದಬ್ಬಾಳಿಕೆಗಳವರೆಗೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತವೆ. ಪುರುಷನ ಈ ಸ್ವಚ್ಛಂದ, ಸ್ವತಂತ್ರ ನಿರ್ಣಯ ತೆಗೆದುಕೊಳ್ಳುವ ಅವಕಾಶಗಳಿಂದ ಕೂಡಿದ ಆತನ ಬದುಕು ಬೇಲಿ ರಹಿತವಾಗಿರುತ್ತದೆ. ಓಗಿದ್ದಾಗ ಆತನಿಗೆ 'ಹೊಸ್ತಿಲು' ಒಂದು ಚೌಕಟ್ಟು, ಅದು ಒಂದು ಸೀಮಿತ ಗಡಿ ಎನ್ನುವ ಪ್ರಮೇಯವೆ ಬರುವುದಿಲ್ಲ. ಹೊಸ್ತಿಲು ಮರ್ಯಾದೆಯಾಗಲಿ, ಕಡಿವಾಣವಾಗಲಿ ಆಗುವುದಿಲ್ಲ. ಆತ ಅದನ್ನು ಬೇಕೆಂದಾಗ ದಾಟಬಹುದು, ಒಳಗೂ ಬರಬಹುದು. ಪ್ರಚಲಿತ ಗಾದೆ ಹೇಳುವುದು ಹೇಗೆ ನೋಡಿ ''ಗಂಡು ಮಾಡಿದ ತಪ್ಪು ಹೊಸ್ತಿಲ ಹೊರಗೆ, ಹೆಣ್ಣು ಮಾಡಿದ ತಪ್ಪು ಹೊಸ್ತಿಲ ಒಳಗೆ'' ಎಂದು ಈ ಮಾತಿನ ದಾಟಿಯಂತೆ ಪುರುಷ ಏನೇ ತಪ್ಪು ಮಾಡಿದರೂ ಅದು ಹೊಸ್ತಿಲ ಒಳಗೆ ಪ್ರವೇಶಿಸುವುದೇ ಇಲ್ಲ. ತಪ್ಪು ತಪ್ಪೆಂದು ಪರಿಗಣಿತವಾಗುವುದೇ ಇಲ್ಲ. ''ಅವನೇನೋ ಗಂಡು ನೂರು ತಪ್ಪು ಮಾಡತಾನ, ನೀನು ಹೆಣ್ಣು ನಿನಗ ತಿಳಿಯಂಗಿಲ್ಲ'' ಎಂದು, ಮಾಡದ ತಪ್ಪಿಗೆ ಬುದ್ಧಿವಾದ ಹೇಳಿಸಿಕೊಂಡು, ಛೀಮಾರಿ ಹಾಕಿಸಿಕೊಳ್ಳುವವಳು ಮಹಿಳೆ. ಮುಳ್ಳಿನ ಮೇಲೆ ಬಟ್ಟೆ ಬಿದ್ದರೂ, ಬಟ್ಟೆ

ಮೇಲೆ ಮುಳ್ಳು ಬಿದ್ದರೂ ಹರಿಯುವುದು ಬಟ್ಟೇನೇ ಪುರುಷ ಪ್ರಧಾನ ಈ ವ್ಯವಸ್ಥೆಯಲ್ಲಿ ಪುರುಷ ತನ್ನ ಸ್ವಾರ್ಥ ಸಾಧನೆಗೋಸ್ಕರ ಏನೆಲ್ಲ ಪದ್ಧತಿಗಳನ್ನು ಸೃಷ್ಟಿಮಾಡಿಕೊಂಡು ಮೆರೆಯುತ್ತಿದ್ದಾನೆ. ಪುರುಷನೊಬ್ಬನು ತನ್ನ ವಿವಾಹದ ವಿಷಯದಲ್ಲಿ ಸಂಪೂರ್ಣ ಸ್ವತಂತ್ರನಾಗಿದ್ದಾನೆ. ತಾನು ಇಚ್ಛಿಸಿದ ಕನ್ಯೆಯೊಡನೆ ವಿವಾಹ ಮಾಡಿಕೊಳ್ಳಬಹುದು. ಸಾಕೆನಿಸಿದರೆ ಬಿಡಬಹುದು. ಹೆಂಡತಿ ಸತ್ತ ನಂತರ ಮರುವಿವಾಹ ಮಾಡಿಕೊಳ್ಳ ಬಹುದು. ಮಹಿಳೆ ಮಾತ್ರ ಪತಿವ್ರತೆಯಾಗಿರಬೇಕು. ಗಂಡನಿಗೆ ವಿಧೇಯಳಾಗಿರಬೇಕು. ಗಂಡ ಸತ್ತನಂತರವೂ ಆಕೆ ವಿಧವೆಯಾಗಿಯೇ ಉಸಿರಾಡಿ ಸಾಯಬೇಕು. ಇಲ್ಲವೊ ಆತನೊಂದಿಗೆ ಚಿತೆಯೇರಬೇಕು.

ಆದಿಯಲ್ಲಿ ಸ್ತ್ರೀ-ಪುರುಷರಿಬ್ಬರು ಸಮಾನವಾದ ಸ್ಥಾನವನ್ನು ಪಡೆದಿದ್ದರು. ಒಬ್ಬರಿಗೊಬ್ಬರು ಸಹಕಾರದಿಂದಲೇ ಬದುಕು ಸಾಧ್ಯ ಎಂದು ಅರಿತಿದ್ದರು. ಸ್ತ್ರೀಯಲ್ಲಿರುವ ಸಂತಾನೋತ್ಪತ್ತಿ ಅವರಲ್ಲಿ ದೈವಿ ಭಾವನೆಯನ್ನು ಮೂಡಿಸಿತ್ತು. ಕಾಲಕ್ರಮೇಣ ಆ ಸಂತಾನೋತ್ಪತ್ತಿಯಲ್ಲಿ ತನ್ನ ಸಮಭಾಗಿತ್ವವಿರುವುದು ಅರಿತು ಹುಟ್ಟುವ ಸಂತಾನದ ಮೇಲೆ ಹಕ್ಕು ಸ್ಥಾಪಿಸಲು ಪ್ರಾರಂಭಿಸಿದ. ಇದಕ್ಕೆ ಪ್ರೇರಣೆಯೆಂಬಂತೆ ಅಥರ್ವಣವೇದದಲ್ಲಿ ಗಂಡು-ಹೆಣ್ಣುಗಳಲ್ಲಿ, ಹೆಣ್ಣಿನ ಪ್ರಾಶಸ್ತ್ಯ ಕುಗ್ಗಿ, ಗಂಡಿಗೆ ಹೆಚ್ಚು ಮಹತ್ವ ಬಂದುದನ್ನು ಕಾಣುತ್ತೇವೆ. ಸ್ವರ್ಗ-ನರಕಗಳ ಕಾರಣವು ಕಾಣಿಸಿಕೊಂಡು, ಮರಣಹೊಂದಿದ ಪುರುಷನನ್ನು ಸ್ವರ್ಗಕ್ಕೆ ಸೇರಿಸುವುದಾಗಲಿ, ಅವನ ಜನ್ಮಾಂತರಗಳು ಸುಖಕರವಾಗಿರುವುದಕ್ಕಾಗಿಯಾಗಲೀ, ಅವನ ಹೆಸರಿನಲ್ಲಿ ಕೆಲವು ವಿಶೇಷ ಕರ್ಮಗಳನ್ನು ಮಾಡಬೇಕಾಗಿತ್ತು. ಈ ಎಲ್ಲಕ್ಕೂ ಪುರುಷನ ಪುತ್ರನೇ ತಕ್ಕವನು ಎಂಬ ಭಾವನೆ ಬಲವಾಗಿ ಬೇರೂರಿತು. ಹೀಗಾಗಿ ಪುರುಷನಿಗೆ ಗಂಡು ಸಂತಾನ ಅನಿವಾರ್ಯವಾಯಿತು.[೨] ಸ್ತ್ರೀಯೋರ್ವಳಿಗೆ ಮೋಕ್ಷ ಪ್ರಾಪ್ತಿಯಾಗಬೇಕಾದರೆ ಆಕೆ ಗಂಡು ಸಂತಾನಕ್ಕೆ ಜನ್ಮ ನೀಡಿರಬೇಕು. ಅಷ್ಟೆ ಅಲ್ಲದೆ ಸ್ವತಃ ತಾನು (ಹೆಣ್ಣು) ಪುರುಷನಾಗಿ ಜನ್ಮ ಪಡೆಯುವವರೆಗೂ ಮೋಕ್ಷ ಸಿಗುವುದಿಲ್ಲವೆಂದು ಜೈನಧರ್ಮದ ಅಂಬೋಣವಾಗಿದೆ. ಪುತ್ರಪ್ರಾಪ್ತಿಗಾಗಿಯೇ ಸ್ತ್ರೀಯೆಂದು ಅಥರ್ವಣವೇದವು ಪುರಸ್ಕರಿಸುತ್ತದೆ.[೩] ಮೊದಲನೆಯ ಹೆಂಡತಿಗೆ ಪುತ್ರ ಸಂತಾನವಿಲ್ಲದಿದ್ದರೆ, ಪುತ್ರನನ್ನು ಪಡೆಯಲೇಬೇಕೆಂಬ ಬಲವಾದ ಆಶಯವಿರುವುದರಿಂದ ಬಹುಪತ್ನಿತ್ವವು ಜಾರಿಯಲ್ಲಿ ಬಂತು. ಸ್ಮೃತಿಯಲ್ಲಿ ಮನು ಹೇಳಿದ ಮಾತು ಹೆಣ್ಣಿನ ಸ್ಥಾನವನ್ನು ಗೌಣವಾಗಿಸುವ ಧಾಟಿಯಲ್ಲಿಯೇ ಇದೆ. ಹೀಗೆ ವೇದಗಳು, ಪುರಾಣಗಳು, ಸ್ಮೃತಿಗಳು ಪುರುಷನನ್ನು ಉಚ್ಚ ಸ್ಥಾನಕ್ಕೇರಿಸಿ ಸ್ತ್ರೀ ಅಗೌರವವನ್ನು ಹಿಂಸಾತ್ಮಕ ವೇದನೆಯನ್ನು ಉಂಟುಮಾಡುವಂತೆ ಇವೆ.

ಕಾರ್ಯೇಶು ದಾಸಿ, ಭೋಜೆಶು ಮಾತಾ, ಸಲಹೆಶು ಮಂತ್ರಿ... ಎಂದು ಹೆಣ್ಣು ಹೇಗಿರಬೇಕೆಂದು ಹೇಳಿದರೆ ವಿನಾಃ ಗಂಡು ಹೇಗಿದ್ದರೆ ಹೆಣ್ಣಿಗೆ ಒಳ್ಳೆಯದು, ಹೆಣ್ಣು ಸುಖವಾಗಿರಬಹುದು ಎಂದು ಹೇಳಲು ಬಹುಶಃ ಮರೆತಿರಬೇಕು. ಪುರಾಣ ಪುಣ್ಯಕಥೆಗಳನ್ನು ಬರೆದಿರುವವರು ಪುರುಷರೇ ಆಗಿರವುದರಿಂದ

ಅವರಿಗೆ ಈ ಪ್ರಶ್ನೆ ಎದ್ದೆ ಇಲ್ಲವೇನೋ ಅಥವಾ ಅವರು ಕೇವಲ ತಮ್ಮ ಅನುಕೂಲಕ್ಕಾಗಿ ಮಾತ್ರ ಯೋಚನೆ ಮಾಡಿದಂತಿದೆ. ತಾನು ಹೇಳಿದ ಪ್ರತಿಯೊಂದು ಮಾತು ಪತ್ನಿಯಾದವಳು ಪಾಲಿಸಬೇಕು. ಆತ ಉಂಡ ನಂತರ ಉಣ್ಣಬೇಕು. ಆತ ಮಲಗಿದ ನಂತರ ಮಲಗಬೇಕು. ಆತ ಏಳುವುದಕ್ಕಿಂತ ಮುಂಚೆ ಏಳಬೇಕು. ಗಂಡನ ಪ್ರತಿಯೊಂದು ಗುಣಗಳು (ಒಳ್ಳೆಯದಿರಲಿ, ಕೆಟ್ಟದ್ದಿರಲಿ) ಸಹಿಸಿಕೊಂಡು ಪತ್ನಿ ಧರ್ಮವನ್ನು ಪಾಲಿಸಬೇಕು. ಹರಿಹರ ಕವಿಯ ಸ್ತ್ರೀ ಪಾತ್ರ ದರ್ಶನದಲ್ಲಿ ಡಾ.ಬಿ.ಸಿ.ಜವಳಿಯವರು ಹೇಳಿರುವಂತೆ ಗಂಡನ ವಿಲಾಸೀ ಜೀವನದಲ್ಲಿ ಹೆಂಡತಿಯ ಪಾಲು ಏನೂ ಇರುತ್ತಿರಲಿಲ್ಲ. ಪತ್ನಿಯ ಸ್ಥಾನವು ಅಷ್ಟೊಂದು ಹಿರಿದಾಗಿ ವಾತ್ಸಾಯನನಿಗೆ ಕಂಡುಬಂದಿಲ್ಲ. ಮೃಚ್ಛಕಟಿಕೆ ನಾಟಕದಲ್ಲಿ ಅಂದಿನ ಸಮಾಜದಲ್ಲಿ ವೇಶ್ಯೆಯರಿಗೆ ಯಾವ ಮಾರ್ಯದೆ ಇತ್ತೆಂಬುದನ್ನು ನಾವು ಕಾಣುತ್ತೇವೆ. ವಸಂತಸೇನೆಯು ಚಾರುದತ್ತನೆಂಬ ಬ್ರಾಹ್ಮಣನ ಮನೆಗೆ ಬಂದರೂ ಆತನ ಉದಾರ ಪತ್ನಿಯು ತಕರಾರು ಮಾಡುವುದಿಲ್ಲ. ಅವನ ಹೆಂಡತಿ ಧೂತಾದೇವಿಗೆ ಗಂಡನ ಮಾನ, ಶೀಲ, ಹೆಸರು ರಕ್ಷಿಸಿಕೊಂಡು ಬರುವುದೇ ಜೀವನದ ಮುಖ್ಯ ಗುರಿ. ಆ ಕಾಲದಲ್ಲಿ ಸ್ತ್ರೀ ಧನ ಗಂಡನ ಆಸ್ತಿಗಿಂತ ಪ್ರತ್ಯೇಕವಾಗಿರಬಹುದಾಗಿತ್ತೆಂದು ಅವಳು ತನ್ನ "ಚತುಃ ಸಮುದ್ರಸಾರ ಭೂತ ರತ್ನಾವಲೀ" ಆಭರಣವನ್ನು ವಸಂತಸೇನೆಗೆ ಕಳಿಸಿರುವುದರಿಂದ ತಿಳಿದುಬರುತ್ತದೆ.[೪] ಗಂಡ ವೇಶ್ಯೆಯರನ್ನು ಮನೆಗೆ ಕರೆದುಕೊಂಡು ಬಂದರೂ ಪ್ರತಿಭಟನೆ ಮಾಡದೆ ಉಪಚರಿಸುವ ಪತ್ನಿಯರು ನಮ್ಮ ದೇಶದಲ್ಲಿ ಇದ್ದಾರೆ ಎನ್ನುವುದಕ್ಕೆ ಇದೊಂದು ನಿದರ್ಶನ. ಇನ್ನೂ ಅನೇಕ ತರಹದಲ್ಲಿ ಹೆಣ್ಣಿನ ಮೇಲೆ ಹತೋಟಿ ಸಾಧಿಸಲು ಈ ಪುರುಷ ಪ್ರಧಾನ ವ್ಯವಸ್ಥೆ ಕಾರ್ಯನಿರ್ವಹಿಸುತ್ತಲೇ ಇದೆ. ಬಹುಪತ್ನಿತ್ವ, ಮರುವಿವಾಹ, ಸ್ತ್ರೀಭ್ರೂಣ ಹತ್ಯೆ ವಿಧವೆಯರ ಮೇಲೆ ಅತ್ಯಾಚಾರ, ವೇಶ್ಯೆಯರ ಸಂಗ (ಪತ್ನಿ ಇದ್ದು), ದೇವದಾಸಿ ಪದ್ಧತಿ, ಬೆತ್ತಲೆ ಸೇವೆಗಳಂಥ ಅನೇಕ ರೀತಿಯ ಹೀನಾಯ ಪ್ರವೃತ್ತಿಗಳು ಮೈಗೂಡಿಸಿಕೊಂಡು ಬಿಟ್ಟಿವೆ. ಆಶ್ಚರ್ಯವೆಂದರೆ ಕೇವಲ ಇವುಗಳನ್ನು ಅನುಭವಿಸುವ ಹೆಣ್ಣಿಗೆ ಮಾತ್ರ ಇದು ಕಿರುಕುಳ ಎನಿಸುತ್ತದೆ. ಇದರ ವಿರುದ್ಧ ಹೋರಾಡಬೇಕು ಎಂದು ಹಿರಿಯ ಮಹಿಳೆಯರಿಗೆ ಅನ್ನಿಸುವುದೇ ಇಲ್ಲವೇನೋ ಅವರು ಕೂಡ ಈ ಎಲ್ಲ ಕಷ್ಟ ಕೋಟಲೆಗಳನ್ನು ಅನುಭವಿಸಿಯೇ ಬಂದಿರುತ್ತಾರೆ. ಆದರೆ ಈಗ ಅದು ತಮ್ಮ ಮುಂದಿನ ಪೀಳಿಗೆಯ ಮೇಲೆ ದ್ವೇಷ ಸಾಧಿಸಿದಂತಿರುತ್ತದೆ. ಅವರು ಕೂಡ ಪುರುಷ ಶಾಹಿತ್ವ ವ್ಯವಸ್ಥೆಯೊಳಗಿನಿಂದಲೇ ನಿರೀಕ್ಷಿಸುತ್ತಿರುತ್ತಾರೆ. ಇಲ್ಲಿ ಸ್ತ್ರೀಯರೇ ಈ ದೌರ್ಜನ್ಯಕ್ಕೆ ಸ್ಫೂರ್ತಿಯೂ ಆಗಿರುತ್ತಾರೆ.

ಪುರುಷ ಜನನ ಪೂರ್ವದಿಂದಲೇ ಬೇಡಿಕೆಗೆ ಪಾತ್ರನಾಗಿ ಹುಟ್ಟಿದ ಮೇಲಂತು ಮನೆಯಲ್ಲಿ ಸರ್ವಾಧಿಕಾರಿಯಂತೆ ಮೆರೆಯುತ್ತಾನೆ. ಆತನಿಗೆ ಯಾವುದೇ ನಿರ್ಬಂಧವಾಗಲಿ, ಚೌಕಟ್ಟಾಗಲಿ ಇರುವುದೇ ಇಲ್ಲ. ಅವನು ತನಗೆ ಇಷ್ಟ ಬಂದ ರೀತಿಯಲ್ಲಿ ಬದುಕಬಹುದು. ತಾನು ಏನಿದ್ದರೂ ಭೋಗಿಸುವುದಕ್ಕೆ ಜನ್ಮ ತಾಳಿದವನು, ಸ್ತ್ರೀ ಆ ಭೋಗದ ವಸ್ತು ಎಂದೇ ತಿಳಿಯುವ ಪುರುಷ ವಿವಿಧ ಮೂಲಗಳಿಂದ

ಆಕೆಯ ಮೇಲೆ ದಬ್ಬಾಳಿಕೆ, ದೌರ್ಜನ್ಯ, ತಾ ಮೇಲೆ ಎನ್ನುವ ಮೃಗೀಯ ಪ್ರವೃತ್ತಿಯನ್ನು ಕಾಣುತ್ತೇವೆ. ಪುರುಷ ತನ್ನ ಅನುಕೂಲಕ್ಕಾಗಿ ಮಹಿಳೆಯನ್ನು ಬಳಸುವ ಪರಂಪರೆಯು ಪೌರಾಣಿಕ ಯುಗಗಳಿಂದಲೂ ನಡೆದುಕೊಂಡು ಬಂದಿದೆ. ಸತ್ಯಹರಿಶ್ಚಂದ್ರ ಮಹಾರಾಜನನ್ನು ನೆನೆಸಿಕೊಂಡರೆ ಆತನಿಗೆ ಸತ್ಯವಾಕ್ಯ ಪರಿಪಾಲನೆ ಮುಖ್ಯ ಗುರಿಯಾಗಿ ಹೆಂಡತಿಯನ್ನು ವಿಕ್ರಯಿಸುವ ದೃಶ್ಯ ಕಾಣಸಿಗುತ್ತದೆ. ಇಲ್ಲಿ ಸಾಲ ತೀರಿಸುವುದಕ್ಕೆ ತನ್ನಿಂದ ಗಂಡನಿಗೆ ಸಹಾಯವಾಯಿತು ಇದು ನನ್ನ ಸೌಭಾಗ್ಯವೆಂದೇ ತಿಳಿದಳೆ ಹೊರತು ತಾನು 'ವಿಕ್ರಯ'ದ 'ವಸ್ತು'ವಾದೇನಲ್ಲ ಎಂದು ವ್ಯಥೆ ಪಡಲಿಲ್ಲ. ಇಲ್ಲಿ 'ಅನ್ಯಾಯ ಹೆಣ್ಣಿಗೆ, ಅನುಕಂಪ ಗಂಡಿಗೆ' ಇದೇ ಪುರುಷ ಪ್ರಧಾನ ವ್ಯವಸ್ಥೆಯ ವೈಖರಿ.

ಪುರುಷ ಒಬ್ಬರಿಗಿಂತ ಹೆಚ್ಚು ಪತ್ನಿಯನ್ನು ಹೊಂದಬಹುದು. ಆ ಎಲ್ಲ ಪತ್ನಿಯರು ಒಂದೇ ಮನೆಯಲ್ಲಿ ಒಟ್ಟಿಗೆ ವಾಸಿಸುವುದು ರೂಢಿಯಲ್ಲಿತ್ತು. ಹಿಂದೆ ರಾಜಮಹಾರಾಜರುಗಳು ತಮ್ಮ ಸಾಮಂತ ಅರಸರೊಂದಿಗೆ ಸ್ನೇಹ ಬೆಳೆಸಿ ರಾಜ್ಯದ ವಿಸ್ತರಣೆ ಮತ್ತು ಸಂರಕ್ಷಣೆಗೋಸ್ಕರ ಎಲ್ಲ ಸಾಮಂತ ರಾಜರ ಮಕ್ಕಳನ್ನು ಮದುವೆಯಾಗುತ್ತಿದ್ದರು. ಒಬ್ಬೊಬ್ಬ ರಾಣಿಯರಂತೂ ರಾಜ ತಮ್ಮ ಬಳಿಗೆ ಬರುವ ಪಾಳಿಗಾಗಿ ಕಾಯುವುದು ಇತ್ತಂತೆ. ಇಂಥ ರಾಣಿಯರು ಗಂಡನ (ರಾಜನ) ಮುಖದರ್ಶನವಿಲ್ಲದೆ ಎಷ್ಟೋ ದಿನಗಟ್ಟಲೇ ಬದುಕುತ್ತಿದ್ದರು. ಅದರೂ ಪತಿಗೆ ವಿಧೇಯಳಾಗಿ, ತನ್ನ ಆಸೆ ಆಕಾಂಕ್ಷೆಗಳನ್ನು ಬದಿಗೊತ್ತಿ ಪಾತಿವ್ರತ್ಯವನ್ನು ಕಾಪಾಡಿಕೊಂಡು ಆತನ ಕೃಪಾಕಟಾಕ್ಷಕ್ಕಾಗಿ ಕಾಯುವುದೊಂದೆ ಕೆಲಸ. ಈ ರೀತಿಯ ನಿರ್ಬಂಧ ಕೇವಲ ಮೇಲ್ವರ್ಗದ ಸಮಾಜದಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ. ಕೆಳವರ್ಗದಲ್ಲಿಯೂ ಬಹುಪತ್ನಿತ್ವವಿತ್ತು. ಆದರೆ ಕೆಳವರ್ಗದ ಮಹಿಳೆ ದುಡಿಯುವುದರಿಂದ ಮಾತನಾಡುವ, ಪ್ರತಿಭಟಿಸುವ ಮನೋಭಾವವಿದೆ. ಇವಳು ಕೂಡ ತನಗೆ ಬೇಕೆಂದ ರೀತಿಯಲ್ಲಿ ಬದುಕಲು ಕೊಂಚ ಮಟ್ಟಿನ ಸ್ವತಂತ್ರವನ್ನುಂತು ಪಡೆದಿದ್ದಾಳೆ ಎಂದರೆ ತಪ್ಪಾಗಲಾರದು(ಅದು ಲೈಂಗಿಕತೆಗೆ ಸಂಬಂಧಪಟ್ಟದ್ದಾಗಿರಬಹುದು). ಆದರೆ ಮೇಲ್ವರ್ಗದ ಸ್ತ್ರೀಯರು ಸಮಾಜದಲ್ಲಿ ಮಾರ್ಯಾದೆಯನ್ನು ಕಾಪಾಡಿಕೊಂಡು ಹೋಗಬೇಕೆನ್ನುವ, ಅತೃಪ್ತಭಾವದಿಂಗ ಎದುರು ಮಾತನಾಡದೆ ಪುರುಷ ನೀಡುವ ಎಲ್ಲಾ ರೀತಿಯ ದೈಹಿಕ ಮತ್ತು ಮಾನಸಿಕ ಹಿಂಸೆಗಳನ್ನು ಸಹಿಸಿಕೊಂಡು ಬರುತ್ತಿದ್ದಾಳೆ. ಹೀಗಾಗಿ ಪುರುಷ ದೌರ್ಜನ್ಯದ ಮೇರು ಪರ್ವತ ಹತ್ತಿನಿಂತಿದ್ದಾನೆ. ಈ ಹೇಳಿಕೆಯನ್ನು ಪ್ರೇರೆಪಿಸುವಂತೆ ಈ ಜನಪದ ನುಡಿ ನೋಡಿ.

> "ಗಂಡಗಂಜಿ ಬದುಕು ಮಾಡಮ್ಮ
> ಮುತ್ತೈದೆತಾನ ಕಳಕೋಬ್ಯಾಡ
> ತಿಳಕೋ ತಂಗೆಮ್ಮ"

ಕೇವಲ ಮುತ್ತೈದೆ ಎಂಬ ಶಬ್ದ ತನ್ನಿಂದ ದೂರ ಸರಿಯದಂತೆ ಅದನ್ನು ಕಾಪಾಡಿಕೊಳ್ಳುವ ಸಲುವಾಗಿ ಆತನಿಗೆ ಅಂಜಿ ಬಾಳ್ವೆ ಮಾಡಬೇಕು ಎಂದು ಬುದ್ಧಿವಾದ ಹೇಳುತ್ತಿವೆ. ಇಷ್ಟೆಲ್ಲಾ ಆರೋಪಗಳನ್ನು

ಹೊರಿಸುವ ಸ್ತ್ರೀ ಸಮಾಜ ಈ ಎಲ್ಲಾ ಕಟ್ಟಳೆಗಳು ವಾಸ್ತವತೆಗೆ ಎಷ್ಟು ಹತ್ತಿರವಾಗಿವೇ ಅದರಲ್ಲೂ ಒಂದು ಕೌಟುಂಬಿಕ ವ್ಯವಸ್ಥೆಯಲ್ಲಿ ಇವು ಇಷ್ಟು ಕಠೋರವಾಗಿವೆಯೇ ಎಂದು ವಿವೇಚಿಸಿ ನೋಡುವ ಸಂಗತಿ. ಭಾರತೀಯ ಸ್ತ್ರೀ ಮತ್ತು ಪುರುಷರ (ಗಂಡ-ಹೆಂಡತಿ) ಮಧ್ಯ ಎಂದು ಅಳಿಸಲಾಗದ ಒಂದು ಭಾವನಾತ್ಮಕ ಸಂಬಂಧವಿದೆ. ಅದು ಆ ಇಬ್ಬರ ಸಂಬಂಧವನ್ನು ಗಟ್ಟಿಗೊಳಿಸುತ್ತದೆ. ಇಲ್ಲಿ ಗಂಡನಿಗೆ ಅಂಜು ಎನ್ನುವುದು ಮಾರ್ಯಾದೆ ಕೊಡುವುದು (ಇದು ಪರಸ್ಪರ ಕೊಡುಕೊಳ್ಳುವ ಅಂಶ). ಪರಸ್ಪರ ಪ್ರೀತಿ, ಗೆಳೆತನ, ಒಬ್ಬರಿಗೊಬ್ಬರು ಎಲ್ಲರ ಮುಂದೆ ಸಂಭಾಷಣೆ ಮಾಡುವುದಾಗಲೀ, ಹೆಸರಿನಿಂದ ಕೂಗುವುದಾಗಲೀ ಮಾಡುತ್ತಿದ್ದಿಲ್ಲ. ಇವು ಅಂದಿನ ಜನರ ಸೌಜನ್ಯದ ಸಂಕೇತವಾಗಿತ್ತು. ಎಷ್ಟೆ ವಯಸ್ಸಾದರೂ ಒಬ್ಬರ ಹೆಸರು ಇನ್ನೊಬ್ಬರು ಹೇಳಬೇಕೆಂದರೆ ಅಲ್ಲಿ ಕಾಣಿಸಿಕೊಳ್ಳುವ ಕೆಂಪೇರುವ ಆ ನಾಚಿಕೆಯ ಮೊಗವು ಇಂದಿನ ಈ ಪಾಶ್ಚಾತ್ಯೀಕರಣದ ಪ್ರಭಾವದಿಂದ ಸ್ವಂತಿಕೆಯನ್ನು ಕಳೆದುಕೊಂಡು ಆಧುನೀಕರಣದ ನೆಪದಲ್ಲಿ ತನ್ನ ಜಾನಪದೀಯ ಸೊಗಡನ್ನು ಕಳೆದುಕೊಂಡು ಶುಷ್ಕ ಪ್ರಪಂಚದಲ್ಲಿ ವಿಹರಿಸಿದಂತಾಗುತ್ತಿದೆ.

ಪುರುಷ ವಿವಾಹದ ವಿಷಯದಲ್ಲಿ ಸಂಪೂರ್ಣ ಮುಕ್ತ ಎನ್ನುವುದಕ್ಕೆ ಬಹುಪತ್ನಿತ್ವವೇ ಉದಾಹರಣೆ. ಹಾಗೆಯೇ ಮೊದಲ ಹೆಂಡತಿಯ ಮರಣದ ನಂತರ ಮರುವಿವಾಹವು ಆಗಬಹುದು. ಗಂಡನ ಮರಣದ ನಂತರ ಹೆಂಡತಿ 'ಸತಿ'ಯಾಗುವುದು ಇದ್ದ ಹಾಗೆ 'ಪತಿ' ಪದ್ಧತಿ ಇಲ್ಲ. ಬದಲಾಗಿ ಸತಿಯ ಚಿತೆಯ ಮುಂದೆ ಮತ್ತೊಂದು ಹೆಣ್ಣಿಗೆ ತಾಳಿ ಕಟ್ಟಲು ಹಸೆಮಣೆ ಏರಿ ಮದುಮಗನಾಗುತ್ತಾನೆ. ವಿಧವೆಗೆ ಮಾಡಿದ ಹಾಗೆ ಹೃದಯವಿದ್ರಾವಕವಾದ ತಲೆಬೋಳಿಸುವುದಾಗಲೀ, ಬಿಳಿ ಬಟ್ಟೆ ಧರಿಸುವುದಾಗಲೀ, ಸಪ್ಪೆ ಆಹಾರ ಸೇವನೆಯಾಗಲೀ, ವ್ರತಾಚರಣೆಯಲ್ಲಿ ಕಾಲಕಳೆಯುವುದಾಗಲೀ ಆತನಿಗೆ ಸಂಬಂಧಪಡುವುದೇ ಇಲ್ಲ. ತನ್ನ ಮಕ್ಕಳಿಗೆ ತಾಯಿಬೇಕೆಂದೋ, ಮನೆವಾಳ್ತೆಗೆ ಹೆಣ್ಣು ಬೇಕೆಂದೋ ನೆಪಗಳ ಸರಮಾಲೆಯೇ ಇದೆ. ಸ್ತ್ರೀ ಒಮ್ಮೆ ವಿಧವೆಯಾದಳೆಂದರೆ ಆಕೆಯ ಜೀವನಕ್ಕೆ ಪೂರ್ಣವಿರಾಮವಿಟ್ಟಂತೆ. ಅದರಲ್ಲೂ ಯೌವನದಲ್ಲಿ ವಿಧವೆಯಾದರೆ ಆಸರೆ ಇಲ್ಲದ ಬೇಲಿಯಂತೆ ಅದನ್ನು ಯಾರುಬೇಕಾದರೂ ತಮ್ಮ ಮನೆಯ ಮೇಲೆ ಹಬ್ಬಿಸಿಕೊಳ್ಳಲು ಪ್ರಯತ್ನ ಮಾಡುತ್ತಿರುತ್ತಾರೆ. ಗಂಡನ ಮನೆಯ ಸೊಸೆಯಲ್ಲದೆ, ತಾಯಿಯ ಮನೆಯ ಮಗಳಲ್ಲದೆ 'ತ್ರಿಶಂಕು ಸ್ಥಿತಿ' ಅವಳದು. ಸ್ತ್ರೀ ಮರುವಿವಾಹ ಸಾಧ್ಯವೇ ಇಲ್ಲ ಎಂದು ಹೇಳುವುದು ಸಂಪೂರ್ಣ ಸರಿಯೆನಿಸದು. ಇಂದಿನ ಆಧುನಿಕ ಯುಗದಲ್ಲಿ ವಿಧವಾ ವಿವಾಹಗಳು ನಡೆಯುತ್ತಿವೆ. ಅಂದಿನ ಆ ಕಟ್ಟುನಿಟ್ಟು ಇಂದು ಅಷ್ಟಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ಹೇಳಬಹುದು. ಈ 'ಸತಿ ಸಹಗಮನ ಪದ್ಧತಿ' ಬಂದುದು ರಾಜಮನೆತನಗಳಿಂದ ಅಂದರೆ ಸಮಾಜದಲ್ಲಿ ಉನ್ನತ ಮಟ್ಟದ ಸ್ಥಾನವನ್ನು ಅಲಂಕರಿಸುವವರಿಂದ.

ಅಥರ್ವಣವೇದದ ಕಾಲದಲ್ಲಿ ಸತಿ ಸಹಗಮನ ಪದ್ಧತಿ ರೂಢಿಯಲ್ಲಿತ್ತೆಂದು ತೋರಲಾಗಿದೆ. ಅದೊಂದು ಅಮಾನವೀಯ ಪದ್ಧತಿಯೇ ಸರಿ, ಶವಗಳ ಅಗ್ನಿ ಸಂಸ್ಕಾರ ಪದ್ಧತಿಯು ರೂಪುಗೊಳ್ಳುವುದ ರೊಂದಿಗೆ ಸಹಗಮನ ಪದ್ಧತಿಯೂ ಜಾರಿಯಲ್ಲಿ ಬಂದಿತೆಂದು ಭಾವಿಸಲಾಗಿದೆ. ವ್ಯಕ್ತಿಯೊಬ್ಬನು ಮೃತನಾದರೆ ಅವನ ಆತ್ಮವು ಜೀವಂತವಾಗಿರುತ್ತದೆ ಎಂಬುದು ಆದಿ ಮಾನವ ಯುಗದ ಕಾಲಕ್ಕೂ ಮಾನ್ಯವಾಗಿದ್ದವು. ವ್ಯಕ್ತಿಯ ಆತ್ಮವು ತಾನು ಜೀವಂತವಿದ್ದಾಗ ಉಪಭೋಗಿಸುತ್ತಿದ್ದ ಎಲ್ಲಾ ವಸ್ತುಗಳು ತರುವಾಯದಲ್ಲಿಯೂ ಬೇಕು ಎಂಬ ಮಾನ್ಯತೆ ಬೆಳೆಯಿತು. ಆ ಆತ್ಮಕ್ಕೊಂದು ಹೆಣ್ಣು ಬೇಕು ಎಂಬ ಕಾರಣಕ್ಕಾಗಿಯೇ ಮಡದಿಯು ಪತಿಯೊಡನೆ ಅಗ್ನಿ ಪ್ರವೇಶ ಮಾಡಬೇಕಾಯಿತು.[೫] ಜೀವವೇ ಇಲ್ಲದ ಆತ್ಮದ ಬಗ್ಗೆ ಯೋಚನೆ ಮಾಡುವ ಸಮಾಜ ಜೀವಂತವಿರುವ ಸ್ತ್ರೀಯ ಬಗ್ಗೆ ಯಾಕೆ ಯೋಚಿಸುವುದಿಲ್ಲ? ಗಂಡು ಆತ್ಮಕ್ಕೆ ಜೋಡಿ ಬೇಕೆಂದು ಜೀವಂತ ಹೆಣ್ಣನ್ನು ಬೆಂಕಿಯಲ್ಲಿ ಹಾಕುವುದು ಅದೇ ಸಮಾಜ ಹೆಣ್ಣು ಸತ್ತಾಗ ಆತ್ಮಕ್ಕೂ ಗಂಡು ಜೋಡಿ ಬೇಕೆಂದು ಆತನನ್ನು 'ಪತಿ ಸಹಗಮನ' ಮಾಡಿಬಹುದಾಗಿತ್ತಲ್ಲವೇ?

ಮಧ್ಯಯುಗದಲ್ಲಿ ಸತಿಪದ್ಧತಿಗೆ ಪರ ಮತ್ತು ವಿರೋಧವಾದ ಎರಡು ಅಭಿಪ್ರಾಯಗಳಿದ್ದವು (ಸತಿ ಪದ್ಧತಿ ಕೆಳವರ್ಗದ ಜನರಲ್ಲಿ ಅಷ್ಟಾಗಿ ಕಾಣದಿದ್ದರೂ, ಇದರ ಪ್ರಭಾವ ಬೀರದೆ ಬಿಡಲಿಲ್ಲ). ಹರ್ಷವರ್ಧನನ ಆಸ್ಥಾನ ಕವಿಯಾದ ಬಾಣಭಟ್ಟನ ಕಾದಂಬರಿ ಎಂಬ ಗದ್ಯ ಗ್ರಂಥದಲ್ಲಿ ಸತಿಪದ್ಧತಿ ಕುರಿತು ಮಂಡಿಸಲಾಗಿರುವ ಅಭಿಪ್ರಾಯಗಳು ಅತ್ಯಂತ ಕ್ರಾಂತಿಕಾರಿಗಳಾಗಿವೆ. ಅನುಮರಣ (ಸತಿಪದ್ಧತಿ) ಎನ್ನುವ ರೂಢಿ ಪೂರ್ಣವಾಗಿ ಅಪ್ರಯೋಜಕವಾದುದು. ಅವಿದ್ಯಾವಂತರು ಇದನ್ನು ಅನುಸರಿಸುತ್ತಾರೆ. ಇದು ಮರುಳತನದ ವಿಪರೀತ ವರ್ತನೆ. ಇದು ಅಜ್ಞಾನದ ನಡವಳಿಕೆ. ಇದು ಅವಿವೇಕವಾದದ್ದು ಇದು ಅವಿಚಾರವಾದುದು, ಪೋಷಕ, ಸಹೋದರ, ಸ್ನೇಹಿತ ಅಥವಾ ಗಂಡ ಸತ್ತಾಗ ಪ್ರಾಣ ತೆಗೆದುಕೊಳ್ಳುವ ಈ ರೀತಿಯ ಮೂರ್ಖತನದಿಂದ ಮುಗ್ಗರಿಸುವ ರೀತಿಯಾಗಿದೆ. ಈ ವಿಷಯವನ್ನು ಸೂಕ್ತವಾಗಿ ಗಮನಿಸಿದಾಗ ಈ ಬಗೆಯ ಪ್ರಾಣಹತ್ಯೆಯು ದುಃಖದ ನೋವನ್ನು ತಡೆಯಲಾಗದಾಗ ತನ್ನ ಜೀವನವನ್ನೇ ಕೊನೆಗಾಣಿಸಿಕೊಳ್ಳುವ ಸ್ವಾರ್ಥದ ಉದ್ದೇಶವನ್ನು ಹೊಂದಿದೆ ಎಂದು ಹೇಳಬಹುದು. ಏನೇ ಆದರೂ ಸಹ ಇದು ಸತ್ತವನಿಗಂತೂ ಒಳಿತನ್ನು ಮಾಡುವುದಿಲ್ಲ. ಖಚಿತವಾಗಿಯೂ ಈ ಕ್ರಿಯೆ ಸತ್ತವನನ್ನು ಪುನರುಜ್ಜೀವನಗೊಳಿಸುವುದಿಲ್ಲ. ಯಾವುದೇ ಧಾರ್ಮಿಕ ಮೌಲ್ಯವನ್ನು ವರ್ಧಿಸುವುದಿಲ್ಲ. ಅಥವಾ ಇದು ಪ್ರಪಂಚದ ಪರಮ ಸುಖವನ್ನು ಹೊಂದುವ ಮಾರ್ಗವೂ ಅಲ್ಲ. ಅಲ್ಲದೆ ನರಕಕ್ಕೆ ಬೀಳುವುದನ್ನು ತಡೆಯುವುದು ಅಲ್ಲ. ಸತ್ತವರನ್ನು ಭೇಟಿಯಾಗುವ ಮಾರ್ಗವೂ ಅಲ್ಲ. ಅಲ್ಲದೆ ಇದು ಒಬ್ಬರಿಗೊಬ್ಬರು ಮರುಸಂಧಿಸುವುದಕ್ಕೆ ಮಾರ್ಗದರ್ಶಕವಾದ ಹಾದಿಯು ಅಲ್ಲ.[೬] ಈ ಅಮಾನುಷ ಪದ್ಧತಿಯನ್ನು ತೊಡೆದು ಹಾಕಲು ಪ್ರಯತ್ನಿಸಿದವರಲ್ಲಿ ಇತಿಹಾಸದಲ್ಲಿ ಐಲುದೊರೆ ಎಂದು ಕೀರ್ತಿತನಾದ ಮಹಮದ್

ಬಿನ್ ತುಘಲಕ್‌ನೇ ಪ್ರಥಮ ವ್ಯಕ್ತಿ ಎಂಬುದು ಅತ್ಯಂತ ಆಶ್ಚರ್ಯವನ್ನುಂಟು ಮಾಡುತ್ತದೆ. ಯಾರಾದರೂ ವಿಧವೆಯರು ಸಹಗಮನ ಮಾಡಬಯಸಿದರೆ ಅದಕ್ಕಾಗಿ ಪೂರ್ವಾನುಮತಿ ಪಡೆದುಕೊಳ್ಳಬೇಕು ಎಂದು ಆಜ್ಞೆ ಮಾಡಿದನು.[೭] ಅಂದರೆ ಇಲ್ಲಿ ಒತ್ತಾಯಪೂರ್ವಕವಾಗಿ ಯಾವ ಹೆಣ್ಣನ್ನು ಸತಿ ಸಹಗಮನಕ್ಕೆ ಆಹುತಿಯಾಗಿ ನೀಡುವುದಲ್ಲ. ಒಂದು ವೇಳೆ ಆ ಹೆಣ್ಣೆ ಮನಸ್ಸಾಪೂರ್ವಕವಾಗಿ ಸತಿಸಹಗಮನಕ್ಕೆ ಒಪ್ಪಿಗೆ ಕೊಟ್ಟರೂ ಅದರ ಬಗ್ಗೆ ಪೂರ್ವಾನುಮತಿ(ರಾಜನಿಂದ) ಪಡೆಯಬೇಕಾಗಿತ್ತು. ಈ ಪದ್ಧತಿಯು ಸಂಪೂರ್ಣ ನಿರ್ಮೂಲವಾಗಲು ನಾವು ಬಂಗಾಳದ ರಾಜಾರಾಂ ಮೋಹನರಾಯ ಅವರ ಕಾಲದವರೆಗೂ ಕಾಯ ಬೇಕಾಯಿತು.

ಪುರುಷನಿಗೆ ಹೆಂಡತಿಯರು ಬೇಕು. ಆದರೆ ಹೆಣ್ಣುಮಗು ಬೇಡ. ನಾರದನು ಹರಿಶ್ಚಂದ್ರನೊಡನೆ ಸಂವಾದ ನಡೆಸಿ ಹೇಳಿದ ಮಾತು "ಸತಿಯೂ ಒಡನಾಡಿ, ಮಗಳೊಂದು ಕಾಲ್ತೊಡಕು; ಮತ್ತಾಮಗನೊ ದಿವ್ಯ ಸ್ವರ್ಗದ ಬೆಳಕು" ಎಂದು ನುಡಿದಿದ್ದಾನೆ. ಈ ಮಾತು ಅಂದಿನ ಸ್ತ್ರೀಯರ ಸ್ಥಾನಮಾನಕ್ಕೆ ಹಿಡಿದ ಕನ್ನಡಿಯಾಗಿದೆ.[೮] ಮಗಳನ್ನು ಕಾಲ್ತೊಡಕು ಎಂದು ಅರಿಯುವ ಪುರುಷ ಪ್ರಧಾನ ವ್ಯವಸ್ಥೆ ಸ್ತ್ರೀ ಭ್ರೂಣ ಹತ್ಯೆ ನಿರ್ದಾಕ್ಷಣ್ಯವಾಗಿ ಮಾಡುತ್ತಾನೆ. ಸ್ತ್ರೀ ಭ್ರೂಣ ಎಂದು ಪತ್ತೆ ಹಚ್ಚುವುದು ಆಧುನಿಕ ಯುಗದಲ್ಲಿ (ವೈದ್ಯಕೀಯ ಶಾಸ್ತ್ರ ಮುಂದುವರೆದ ಕಾಲದಲ್ಲಿ). ಆದರೆ ಹಿಂದೆ ಸ್ತ್ರೀ ಶಿಶು ಜನಿಸಿದ ತಕ್ಷಣ ಅದನ್ನು ಕೊಂದು ಹಾಕಲು ಹೇಸುತ್ತಿದ್ದಿಲ್ಲ. ಒಟ್ಟಿಗೆ ಇಬ್ಬರು ಸ್ತ್ರೀಯರ ಮೇಲೆ ದೌರ್ಜನ್ಯ ಅತ್ಯಾಚಾರ ನಡೆಯುತ್ತವೆ. ಒಂದು ಇನ್ನೂ ಪ್ರಪಂಚ ನೋಡದ ಸ್ತ್ರೀಶಿಶು. ಮತ್ತೊಂದು ಅಗ್ನಿ ಸಾಕ್ಷಿಯಾಗಿ ಕೈ ಹಿಡಿದ ಅರ್ಧಾಂಗಿ. ಕೇವಲ ಹೇಳಿಕೆಗೆ ಮಾತ್ರ ಅರ್ಧಾಂಗಿ, ಆಚರಣೆಯಲ್ಲಿ ಮಾತ್ರ ಅಧಿಕಾರವಾಗಲೀ, ಮಹತ್ವವಾಗಲೀ ಇಲ್ಲ. ಪುರುಷ ತನ್ನ ದೇಹದಲ್ಲಿ ಹೆಂಡತಿಗೆ ಕೊಟ್ಟ ಭಾಗ 'ಎಡಭಾಗ'. ಅಂದರೆ ದೇಹದಲ್ಲಿ ದುರ್ಬಲವಾದ, ಕನಿಷ್ಟವಾದ ಭಾಗ. ಎಲ್ಲೊ ಒಂದು ಕಡೆ ಅಪವಾದವೆಂಬಂತೆ ಬಲಭಾಗ ಮಾಡುವ ಕೆಲಸ ಎಡಭಾಗ ನಿರ್ವಹಿಸುತ್ತದೆ. ಇದರ ಅರ್ಥ ಎಲ್ಲೊ ಒಂದು ಕಡೆ ಮಾತ್ರ ಸ್ತ್ರೀ ಅನ್ಯಾಯಕ್ಕೆ ಪ್ರತಿಭಟಿಸುವ ಧೈರ್ಯವನ್ನು ಹೊಂದಿರುತ್ತಾಳೆ. ಸಹನೆಗೂ ಒಂದು ಮಿತಿ ಇದೆ. ಅದು ಮೀರಿದರೆ ಸ್ತ್ರೀ ಕೂಡ ಪ್ರತಿಭಟನೆ ಮಾಡುತ್ತಾಳೆ. ಆ ಪ್ರತಿಭಟನೆ ರಂಪ, ರಾದ್ಧಾಂತ ಮಾಡುವ ರೂಪದಲ್ಲೇ ಇರಬೇಕೆಂದಿಲ್ಲ. ಮೌನವಾಗಿದ್ದುಕೊಂಡೇ ಪ್ರತಿಭಟನೆಗೆ ಶ್ರೀಕಾರ ಹಾಕಬಹುದು. ಉಪವಾಸ ಸತ್ಯಾಗ್ರಹ ಮಾಡಿ ಇಲ್ಲವೇ ಮುನಿಸಿಕೊಂಡು (ಕೋಪಿಸಿಕೊಂಡು) ಅನ್ಯಾಯದ ವಿರುದ್ಧ ದಂಗೆ ಏಳಬಹುದು. ಹಾಗೆಯೇ ಈ ಮೌನ ಆಕೆಯ ಶಕ್ತಿವರ್ಧಕವೂ ಆಗಿದೆ. ರಾಮಾಯಣದಲ್ಲಿನ ಸೀತೆಯ ಪಾತ್ರವೇ ತೆಗೆದುಕೊಂಡರೆ ಎಲ್ಲವನ್ನು ಮೌನವಾಗಿ ಸಹಿಸಿ ಕೊನೆಗೆ 'ಭೂಗರ್ಭ'ದಲ್ಲಿ ಲೀನವಾದಂತೆ ಇಂತಹ ಪ್ರತಿಭಟನೆ ಸ್ತ್ರೀ ಕೂಡ ಸಹಿಸುವುದಿಲ್ಲ. ವಿಪರ್ಯಾಸ ನೋಡಿ ಸ್ತ್ರೀ ಕೂಡ ಪುರುಷ ಶಾಹಿತ್ವ ವ್ಯವಸ್ಥೆಯನ್ನೇ ಸಂಪೂರ್ಣವಾಗಿ ಒಪ್ಪಿಕೊಂಡು ಹೆಣ್ಣೆಂದರೆ ಹೀಗೆ ಇರಬೇಕು ಎನ್ನುವ ಕಲ್ಪನೆಯೊಂದಿಗೆನೆ

ಬದುಕುತ್ತಿರುತ್ತಾಳೆ. ಅನ್ಯಾಯವನ್ನು ಸಹಿಸಿಕೊಂಡು ಅನ್ಯಾಯದ ವಿರುದ್ಧ ಹೋರಾಡಬೇಕು ಎನ್ನುವ ಭಾವನೆಯು ಮೂಡುವುದಿಲ್ಲ. ಇಂತಹ ಅಮಾಯಕ ಸ್ತ್ರೀಯರ ಮೇಲೆ ಗಂಡು ಜಾತಿ ದಬ್ಬಾಳಿಕೆ ನಡೆಸುತ್ತಿದೆ. ಸ್ತ್ರೀ ಯಾವ ಮಗುವನ್ನು ಹೆರಬೇಕು, ಯಾವ ಮಗುವನ್ನು ಹೆರಬಾರದು, ಎಷ್ಟು ಮಕ್ಕಳನ್ನು ಹೆರಬೇಕು, ಎಷ್ಟು ಮಕ್ಕಳನ್ನು ಹೆರಬಾರದು, ಎಂಬುದನ್ನು ನಿರ್ಧರಿಸುವವನು ಪುರುಷನೆ ಆಗಿರುವುದರಿಂದ ಇವಳೊಂದು ಜೀವಂತ ಯಂತ್ರವಿದ್ದಂತೆ. ಸ್ತ್ರೀ ಕೂಡ ತಾನು ಗರ್ಭಿಣಿಯಾದರೆ ಗಂಡು ಮಗುವನ್ನೇ ಬಯಸುವವಳೇ ವಿನಃ ಹೆಣ್ಣು ಮಗುವನ್ನಲ್ಲ. ಹೀಗೆ ಪುರುಷ ತನ್ನದೆ ಆದ ಒಂದು ಬೇಲಿಯನ್ನು ನಿರ್ಮಿಸಿ ಅದರ ಒಳಗೆ ಸ್ತ್ರೀಯನ್ನು ಬಂಧಿಸಿಡುವ ಪ್ರಯತ್ನ ಮಾಡುತ್ತಿದ್ದಾನೆ.

ಇಷ್ಟೆಲ್ಲಾ ಸಾಲವೆಂಬಂತೆ ವೇಶ್ಯೆಯರ ಸಂಗ, ದೇವದಾಸಿಯರ ಪದ್ಧತಿಗಳಂತ ಅಮಾನವೀಯ ಕೃತ್ಯಗಳು ಜಾರಿಯಲ್ಲಿದ್ದವು. ವೇಶ್ಯೆಯನ್ನು ಹೊಂದುವುದು ಪ್ರತಿಷ್ಠೆಯ ಸಂಗತಿಯಾಗಿದ್ದ ಕಾಲವೊಂದಿತ್ತು. ತನ್ನ ದೇಹದ ದಾಹಕ್ಕೆ ಆಕೆಯನ್ನು ಬಳಸಿಕೊಂಡು ಸಮಾಜದಲ್ಲಿ 'ಸೂಳೆ' ಎನ್ನುವ ಪಟ್ಟ ಕಟ್ಟಿ ಹೊರಗೆ ಮಾತ್ರ ತನಗೂ-ಆಕೆಗೂ ಸಂಬಂಧವೇ ಇಲ್ಲದ ಹಾಗೆ ವರ್ತಿಸುವ ಪುರುಷ, ತನ್ನಿಂದ ಆಕೆಗೆ ಹುಟ್ಟುವ ಮಕ್ಕಳಿಗೆ ತನ್ನ ಹೆಸರು ಕೊಡುವುದಂತೂ ದೂರದ ಮಾತೆ ಆದರೆ ಆಕೆ ಮಾತ್ರ ಹೆಂಡತಿಯ ಹಾಗೆ ತನಗೊಬ್ಬನಿಗೆ ಮೀಸಲಾಗಿರಬೇಕೆಂದು ಬಯಸುತ್ತಾನೆ. ಇದರ ಇನ್ನೊಂದು ಮುಖವೇ 'ದೇವದಾಸಿ ಪದ್ಧತಿ'. ಇದು ದೇವರ ಹೆಸರಿನಲ್ಲಿ ಹೆಣ್ಣಿನ ಮೇಲೆ ನಡೆಯುವ ಶೋಷಣೆಯಾಗಿದೆ(ಪುರಾತನ ಕಾಲದಲ್ಲಿ ದೇವಸ್ಥಾನಕ್ಕೆ ಭಕ್ತರು ದೇವರ ದರ್ಶನಕ್ಕಿಂತ ದೇವದಾಸಿಯರ ದರ್ಶನಕ್ಕೆ ಹೆಚ್ಚು ಬರುತ್ತಿದ್ದರು). ಈ ಪದ್ಧತಿ ವಂಶಪಾರಂಪರ್ಯವಾಗಿ ನಡೆದುಕೊಂಡು ಬರುವುದಾಗಿದೆ. ಮುಂದಿನ ಪೀಳಿಗೆಗೆ ಇಷ್ಟವಿರಲಿ ಇಲ್ಲದಿರಲಿ ಸ್ವಾರ್ಥಿ ಪುರುಷ ಪ್ರಧಾನ ಸಮಾಜ ಆಕೆಯನ್ನು ಹಾಗೇ ಬಾಳುವಂತೆ ಒತ್ತಾಯಿಸುತ್ತದೆ.

ಈ ಎಲ್ಲ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇವು ವಾಸ್ತವಕ್ಕೆ ಎಷ್ಟು ಹತ್ತಿರವಾಗಿವೆ ಎಂಬುದಂತು ಯೋಚಿಸುವ ವಿಷಯ. ಕಾರಣ ಅಕ್ಷರಸ್ಥ ಸಮಾಜ ಕಟ್ಟಿಕೊಟ್ಟ ಸಮಾಜಸ್ಥಿತಿ ಇದು. ಆದರೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಇಂದಿಗೂ ಕೂಡ ಹೆಣ್ಣನ್ನು ದೇವಿ, ಮಾತೆ ಎಂದು ಪೂಜಿಸುವ ಆರಾಧಿಸುವ ಪರಿಪಾಠವಿದೆ. ಇದರಿಂದ ಯಾವ ಪುರುಷ ಕೂಡ ಹೊರತಾಗಿಲ್ಲ. ಸ್ತ್ರೀ-ಪುರುಷರಿಬ್ಬರ ನಡುವೆ ಏನೇ ಹೋರಾಟವಿರಲೀ ಅದು ಬಾಹ್ಯದಲ್ಲಿಯೇ ಇದೆ ವಿನಃ ಪ್ರಕೃತಿಯ ನಿಯಮದಲ್ಲಿ ಇಬ್ಬರಿಗೂ ಸಮಾನ ಕಾರ್ಯ ಹಂಚಿದೆ. ಒಬ್ಬರಿಗೊಬ್ಬರು ಸಹಕಾರದಿಂದ ಜಗತ್ತಿನ ಮುನ್ನಡೆ ಸಾಧ್ಯ. ಇದಕ್ಕೆ ಪ್ರೇರಕವೆಂಬಂತೆ ರಾಧಾ-ಕೃಷ್ಣ, ಪಾರ್ವತಿ-ಪರಮೇಶ್ವರ ಹೀಗೆ ಹೆಣ್ಣಿನಿಂದ ಪುರುಷನಿಗೆ ಪೂರ್ಣತೆ, ಸುಖ, ಶಾಂತಿ ಎಂಬುದು ಒಪ್ಪುವ ಮಾತು.

ಈ ಮೇಲಿನ ಎಲ್ಲ ಸಂಗತಿಗಳು ವಿಸ್ತೃತವಾದರೂ ಒಟ್ಟು ಭಾರತೀಯ ಪರಂಪರೆಯಲ್ಲಿ ಪುರುಷ ಪ್ರಧಾನ ಪ್ರಮೇಯಗಳು ಸ್ತ್ರೀ ಬದುಕಿನಲ್ಲಿ ಮಾಡಿದ ಆಘಾತ ಮತ್ತು ಅನ್ಯೋನ್ಯತೆಗಳನ್ನು ಗ್ರಹಿಸುವುದಾಗಿದೆ.

ಆ ಮೂಲಕ ಸ್ತ್ರೀವಾಚಿಯಾಗಿ, ರಕ್ಷಣಾ ಪರಿಕರವಾಗಿ, ಸಾಮಾಜಿಕ ಸಂಬಂಧಗಳ ನಿರ್ಣಯಾತ್ಮಕ ಸಂವೇದನೆಯಾಗಿ ಕ್ರಿಯಾಶೀಲವಾಗಿರುವ ಹೊಸ್ತಿಲಿನ ಸಂಬಂಧಗಳನ್ನು ಗುರುತಿಸಿಕೊಳ್ಳುವುದೇ ಆಗಿದೆ. ಮುಂದಿನ ನನ್ನ ಅಧ್ಯಯನಕ್ಕೆ ಈ ವ್ಯಾಪಕವಾದ ತಿಳುವಳಿಕೆ ನೆಲೆಗಟ್ಟಾಗಿದೆ ಎಂಬುದು ಗಮನಾರ್ಹ ವಿಚಾರ.

೪.೨. ಸ್ತ್ರೀ ಪ್ರಧಾನ ಪ್ರಮೇಯಗಳು

ಕುಟುಂಬದಲ್ಲಿ ಪ್ರಾರಂಭವಾಗುವ ಸಾಮಾಜೀಕರಣ ವ್ಯವಸ್ಥೆ ಜೀವನದ ಗತಿಶೀಲತೆಯಲ್ಲಿ ವ್ಯಕ್ತಿಯ ನಿಲುವುಗಳಿಗೆ ಭದ್ರಬುನಾದಿಯನ್ನು ಹಾಕಿಕೊಡುತ್ತದೆ. ಬಹುತೇಕ ಕುಟುಂಬಗಳಲ್ಲಿ ಇವತ್ತಿಗೂ ಹೆಣ್ಣು ಮತ್ತು ಗಂಡುಮಕ್ಕಳಿಗೆ ಭಿನ್ನ ರೀತಿಯಲ್ಲಿ ಜೀವನವನ್ನು ನಡೆಸುವಲ್ಲಿ, ಸಮಸ್ಯೆಗಳನ್ನು ಎದುರಿಸುವಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ. ಹೆಣ್ಣು ಗಂಡು ಎಂಬ ಭೇದ ಭಾವ ಸೃಷ್ಟಿಯಾಗುವುದು ಕುಟುಂಬದಲ್ಲಿಯೇ. ಸ್ತ್ರೀ ಬದುಕು ಮತ್ತು ಗುರಿಗಳು, ಪುರುಷನ ಬದುಕು ಮತ್ತು ಆತನ ಗುರಿಗಳು ಬೇರೆ ಎಂಬ ಮನೋಭಾವನೆಯನ್ನು ಬಿತ್ತುವುದು ಸಹ ಕುಟುಂಬದಲ್ಲಿಯೇ. ಈ ನಿಟ್ಟಿನಲ್ಲಿ ಮನೆಯ ಜವಾಬ್ದಾರಿಗಳ ಹಂಚಿಕೆಯು ಪ್ರಮುಖ ಪಾತ್ರವಹಿಸುತ್ತದೆ.

ಸ್ತ್ರೀ ಮನೆಯ ಒಳಗಿನ ಎಲ್ಲಾ ಕೆಲಸ ಕಾರ್ಯಗಳನ್ನು ಪೂರೈಸಿದರೂ, ಅದು ಯಾವುದೇ ರೀತಿಯ ಆರ್ಥಿಕ ಆದಾಯದಿಂದ ಕೂಡಿರುವುದಿಲ್ಲವಾದ್ದರಿಂದ ಅದು 'ಕೆಲಸ'(ನೌಕರಿ) ಎಂದೆನಿಸದೆ ಮನೆ ಕೆಲಸವೆಂಬ ತಾತ್ಸಾರತೆಯನ್ನುಂಟು ಮಾಡುತ್ತದೆ. ಪುರುಷ ಮಾಡುವ 'ಕೆಲಸ'(ಮನೆಯ ಹೊರಗಿನ) ಆದಾಯದಿಂದ ಕೂಡಿರುವುದರಿಂದ ಅದು 'ಕೆಲಸ'(ನೌಕರಿ) ಎಂದು ಮಾನ್ಯತೆ ಪಡೆಯುತ್ತದೆ. ವಿಪರ್ಯಾಸ ವೆಂದರೆ ಸ್ತ್ರೀ ಮನೆಯ ಎಲ್ಲಾ ಜವಾಬ್ದಾರಿಗಳನ್ನು ಹೊತ್ತುಕೊಂಡರೂ ಮನೆಯ ಯಜಮಾನಿ ಎನಿಸಿಕೊಳ್ಳುವುದಿಲ್ಲ. ಬದಲಾಗಿ ಪುರುಷನೇ ಯಾಜಮಾನಿಕೆಯ ಪಟ್ಟ ಧರಿಸುತ್ತಾನೆ.

ಹಿಂದೆ ಆರ್ಯೀಕರಣದ ಪೂರ್ವದಲ್ಲಿ ಮಾತೃಮೂಲೀಯ ಸಂಸ್ಕೃತಿಯಲ್ಲಿ ಹೆಣ್ಣು ಮಾಡುವ ಪ್ರತಿಯೊಂದು (ಮನೆಯ) ಒಳಗಿನ ಕೆಲಸ ಕಾರ್ಯಗಳು ಗಂಡಿನ ಕೆಲಸಕಾರ್ಯಕ್ಕೆ ಸಮನಾಗಿತ್ತು. ಅಂದು ಆಕೆ ಉನ್ನತ ಮಟ್ಟದ ಸ್ಥಾನವನ್ನು ಹೊಂದಿದ್ದಳು. ಆಕೆಯ ಸಂತಾನೋತ್ಪತ್ತಿ, ಸಂಗೋಪನೆ, ಆಹಾರ ಪೂರೈಕೆ ಇವೆಲ್ಲವೂ ಗೌರವಯುತವಾಗಿದ್ದವು. ಆರ್ಯೀಕರಣದ ಪ್ರಭಾವದಿಂದ ಮಾತೃಮೂಲೀಯ ಸಂಸ್ಕೃತಿಯ ಬದಲಾಗಿ ಪಿತೃಮೂಲೀಯ ಸಂಸ್ಕೃತಿ ತಲೆ ಎತ್ತಿ ಹೆಣ್ಣಿನ ಸ್ಥಾನ ಗೌಣವಾಗಿಸಿತು. ಬಹುಶಃ ಕೃಷಿಯನ್ನು ಪ್ರಾರಂಭಿಸಿದ್ದು ಹೆಣ್ಣೆ. ಅದು ಬೃಹತ್ ಪ್ರಮಾಣ ಪಡೆದು ಆದಾಯ ಅಧಿಕವಾದಾಗ ಅದಕ್ಕೆ ಪುರುಷ ಹಕ್ಕುದಾರನಾಗಿ ಕಾಣಿಸಿಕೊಂಡನು. ಹೀಗೆ ಒಂದೊಂದೇ ಸ್ಥಾನದಿಂದ ಸ್ತ್ರೀಯನ್ನು ವಂಚಿತ ಗೊಳಿಸುತ್ತಾ ಮುಂದೆ ಕೇವಲ ಹೊಸ್ತಿಲು ಒಳಗಿನ ಪ್ರಪಂಚಕ್ಕೆ ಮೀಸಲಾಗಿಸಿದನು. ಇಲ್ಲಿ ಹೊಸ್ತಿಲು

ಒಂದು ಭೌತಿಕ ವಸ್ತುವಾಗದೆ ಇಡೀ ಹೆಣ್ಣಿನ ಬದುಕಿನ ನಿಯಂತ್ರಣದ ರೇಖೆಯಾಯಿತು. ಈ ಅಧ್ಯಾಯದಲ್ಲಿ ಹೊಸ್ತಿಲು ಹೆಣ್ಣಿನ ಬದುಕಿಗೆ ಹೇಗೆ ನಿಯಂತ್ರಣವಾಯಿತು ಮತ್ತು ಹೊಸ್ತಿಲ ಒಳಗೆ ಮತ್ತು ಹೊಸ್ತಿಲ ಹೊರಗೆ ನಡೆಯುವ ಅನೇಕ ರೀತಿಯ ಶೋಷಣೆಗಳನ್ನು ಎತ್ತಿ ತೋರಿಸಲು ಪ್ರಯತ್ನ ಮಾಡಲಾಗಿದೆ.

ಸಾಮಾನ್ಯವಾಗಿ ಸಮಾಜ ಜೀವಿಯಾದ ಮಾನವ ಸಮಾಜದ ಕೆಲವೊಂದು ಕಾಯ್ದೆ ನಿಯಮಗಳಿಗೆ ಬದ್ಧನಾಗಿರಬೇಕಾಗುತ್ತದೆ. ಈ ಕಾಯ್ದೆ ನಿಯಮಗಳಲ್ಲಿಯೂ ಲಿಂಗಾಧಾರಿತವಾಗಿ ಹೇರಿಕೆ ಹಂಚಿಕೆಯನ್ನು ಕಾಣುತ್ತೇವೆ. ಇವು ಸ್ತ್ರೀಯ ಬದುಕನ್ನು ಕುಬ್ಜಗೊಳಿಸುತ್ತವೆ. ಇದರ ಮಿತಿಯಲ್ಲಿಯೇ ಅವಳು ಬದುಕಬೇಕು. ಪ್ರಕೃತಿಯು ಕೂಡ ಸ್ತ್ರೀ ಪುರುಷ ಸೃಷ್ಟಿಯಲ್ಲಿ ತಾರತಮ್ಯವೆಸಗಿದೆ. ಸೃಷ್ಟಿ ಪುರುಷನಿಗೆ ಬಲಿಷ್ಟವಾದ ದೇಹ ಕೊಟ್ಟಿತು. ಆದರೆ ಸ್ತ್ರೀಗೆ ರಾಷ್ಟ್ರ ನಿರ್ಮಾಣಕ್ಕೆ ಬೇಕಾಗುವಂತಹ ಪ್ರಜೆಗಳನ್ನು ಸೃಷ್ಟಿಸುವ 'ಗರ್ಭ' ಕೊಟ್ಟಿತು. ಆ 'ಗರ್ಭವೆ' ಆಕೆಯನ್ನು ಅಶಕ್ತಳನ್ನಾಗಿ ಅಸ್ವತಂತ್ರಳನ್ನಾಗಿಸಿತು. ಗರ್ಭಧಾರಣೆ, ಹೆರಿಗೆ, ಮಕ್ಕಳ ಪಾಲನೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ಮಹಿಳೆ ಪುರುಷ ನಂತೆ ಮನೆಯನ್ನು ಬಿಟ್ಟು ದೂರ ದೂರದವರೆಗೆ ತಿರುಗುವುದು ಅಸಾಧ್ಯವಾಯಿತು. ಹೀಗಾಗಿ ಮಹಿಳೆ ಯರು ಮಕ್ಕಳು ಗುಂಪಾಗಿ ಒಟ್ಟೊಟ್ಟಿಗೆ ಬಾಳುವುದನ್ನು ರೂಢಿಸಿಕೊಂಡರು. ಪುರುಷ ಮಾತ್ರ ಈ ಜಂಜಾಟದಿಂದ ಮುಕ್ತನಾಗಿದ್ದ. ಬೇಟೆಯನ್ನು ಹುಡುಕಿಕೊಂಡು ದೂರದವರೆಗೆ ಹೋಗುತ್ತಿದ್ದ. ಆತ ಬರುವವರೆಗೆ ಸ್ತ್ರೀಯರು ತಮ್ಮ ಆಹಾರವನ್ನು ತಾವೇ ನೋಡಿಕೊಳ್ಳುತ್ತಿದ್ದರು. ಸುತ್ತಮುತ್ತಲಿರುವ ಗೆಡ್ಡೆಗೆಣಸು ಮತ್ತು ಅಲ್ಲಿಯೇ ದೊರೆತ ಪ್ರಾಣಿಗಳನ್ನು ಬೇಟೆಯಾಡಿ ಜೀವನ ನಡೆಸುತ್ತಿದ್ದರು. ಅಲೆಮಾರಿ ಜೀವನ ನಡೆಸುತ್ತಿದ್ದ ಮಾನವ ಒಂದೆಡೆ ನೆಲೆ ನಿಂತು, ಗುಂಪಾಗಿ ಬೇಟೆಯಾಡಿದರೆ ಅಥವಾ ಕೆಲಸ ಮಾಡಿದರೆ ಹೆಚ್ಚಿನ ಫಲ ದೊರೆಯುವುದು ಎಂಬುದನ್ನು ಕಂಡುಕೊಂಡು ಪಶುಪಾಲನೆ, ಕೃಷಿಯನ್ನು ಅವಲಂಬಿಸಿ ಆಸ್ತಿಯ ಪ್ರಜ್ಞೆ ಬೆಳೆಯ ತೊಡಗಿತು. ಹೀಗೆ ಮುಂದುವರೆದು ಆಸ್ತಿ ಮತ್ತು ಸ್ತ್ರೀ ಎರಡು ಖಾಸಗೀ ವಿಷಯಗಳಾಗಿ ತನ್ನದೆ ತನಗೆ ಸಂಬಂಧ ಪಟ್ಟವು ಎಂಬ ಭಾವನೆ ಬಲಿತು ಶೀಲ ಪಾವಿತ್ರ್ಯತೆ ಎಂಬ ಅಸ್ತ್ರಗಳು ಕಾಣಿಸಿಕೊಂಡವು (ಅಲ್ಲಿಯವರೆಗೆ ಸ್ತ್ರೀ ಪುರುಷರ ಲೈಂಗಿಕ ಸ್ವಚ್ಛಂದತೆ ಇದ್ದು, ಮಕ್ಕಳ ಮೇಲಿನ ಹಕ್ಕು ಸಂಪೂರ್ಣ ಸ್ತ್ರೀಗೆ ಮೀಸಲಾತ್ತು). ಇಲ್ಲಿ ಹೆಣ್ಣನ್ನು ನೋಡುವ ರೀತಿಯಲ್ಲಿಯೇ ಬದಲಾವಣೆಗಳು ಕಾಣಿಸಿಕೊಂಡವು. ಹಿರಿಯರ ಹೇಳಿಕೆಯ ಪ್ರಕಾರ "ನೀರಿನಲ್ಲಿದ್ದ ಮೀನು ಸಾಯುವುದಿಲ್ಲ. ಅಂಕೆಯಲ್ಲಿದ್ದ ಹೆಣ್ಣು ಕೆಡುವುದಿಲ್ಲ". ಇಲ್ಲಿ ಮೀನು ಮತ್ತು ಹೆಣ್ಣಿನ ಜೀವನವನ್ನು ಸಮೀಕರಿಸಿದ್ದಾರೆ. ಮೀನು ಜೀವಿಸಲು ನೀರು ಅಗತ್ಯ ನೀರೇ ಅದಕ್ಕೆ ಜೀವನಾಂಶ. ಅದೇ ರೀತಿ ಹೆಣ್ಣಿಗೆ ಬದುಕಲು ಶೀಲ ಮುಖ್ಯ. ಇದನ್ನು ಉಳಿಸಿಕೊಂಡ ಮಹಿಳೆ ಸಮಾಜದಲ್ಲಿ ಗೌರವಿಸಲ್ಪಡುತ್ತಾಳೆ. ಎಂತಹ ಕಠಿಣ ಪರೀಕ್ಷೆಯನ್ನು ಜಯಿಸುತ್ತಾಳೆ. ಇದಿಲ್ಲದ ಮಹಿಳೆ ಸಮಾಜದಲ್ಲಿ ನಗೆಗೀಡಾಗುತ್ತಾಳೆ. ಈ ಮಾತಿನಲ್ಲಿನ

ಕೆಡುವುದಿಲ್ಲ ಎನ್ನುವುದರ ಅರ್ಥವೂ ಕೂಡ ಪಾತಿವ್ರತ್ಯ ಕಾಪಾಡಿಕೊಂಡು ಹೋಗುವುದೇ ಆಗಿದೆ. ಹೆಣ್ಣಿನ ಶೀಲದ ಮೇಲೆ ಇರುವ ಕಾಳಜಿಯೇ ಇಂತಹ ನಿರ್ಬಂಧಗಳಿಗೆ ಕಾರಣವಾಗಿರಬಹುದು.

ಹಿಂದಿನ ಕಾಲದಲ್ಲಿ ಪರಕೀಯರು ನಮ್ಮ ಮೇಲೆ ದಾಳಿ ಮಾಡಿ ದೇಶದ ಸಂಪತ್ತಿನೊಂದಿಗೆ ಸುಂದರವಾದ ಸ್ತ್ರೀಯರನ್ನು ಅಪಹರಿಸಿಕೊಂಡು ಹೋಗುತ್ತಿದ್ದರು. ಈ ಅನಾಹುತಗಳನ್ನು ತಪ್ಪಿಸುವುದ ಕ್ಕೋಸ್ಕರ ಸ್ತ್ರೀಯರನ್ನು ಪರಕೀಯರ ದೃಷ್ಟಿಗೆ ಬೀಳದಂತೆ ಇರಿಸಬೇಕಾಯಿತು. ಇಲ್ಲಿ ಸ್ತ್ರೀ ಮತ್ತು ಸಂಪತ್ತು ಎರಡು ದೋಚಿಕೊಂಡು ಹೋಗುವ ವಸ್ತುಗಳಾದವು. ಅವೆರಡನ್ನು ಕಾಪಾಡುವ, ರಕ್ಷಣೆ ಒದಗಿಸುವ ಜವಾಬ್ದಾರಿಯು ಪುರುಷನೆ ನಿರ್ವಹಿಸಬೇಕಾಯಿತು. ಆರ್ಥಿಕ ಮತ್ತು ಅಧಿಕಾರ ಬಲಗಳು ಪುರುಷರ ವಶದಲ್ಲಿಯೇ ಇರುವುದರಿಂದ ಹೆಣ್ಣನ್ನು ಆಸ್ತಿಯಂತೆ ಭಾವಿಸಲಾಯಿತು. ಸ್ತ್ರೀಯನ್ನು ರತ್ನಕ್ಕೆ ಹೋಲಿಸಿ ಅದನ್ನು ವ್ಯಾಪಾರದ ಸರಕನ್ನಾಗಿ ಭಾವಿಸಲಾಯಿತು. ಈ ಮನೋಭಾವನೆಯಿಂದಾಗಿ ಹೆಣ್ಣನ್ನು ಬೇಕೆಂದ ಹಾಗೆ ಬಳಸಬಹುದು. ಬೇಕಾದವರಿಗೆ ಕೊಡಬಹುದು. ಬೇಡವೆನಿಸಿದರೆ ಬಿಡಬಹುದು. ಹೆಣ್ಣನ್ನು ಈ ರೀತಿ ಬಳಸುವ ಬಗೆಗೆ ಪುರಾಣ ಮಹಾಕಾವ್ಯಗಳಲ್ಲಿ ಅನೇಕ ಉದಾಹರಣೆಗಳು ದೊರೆಯುತ್ತವೆ. ಜೂಜಿನಲ್ಲಿ ಹೆಣ್ಣನ್ನು ಪಣವಾಗಿಡುವುದು, ದುಡ್ಡಿಗಾಗಿ ಮಾರಾಟ ಮಾಡುವುದು ಹೀಗೆ ಹೆಣ್ಣನ್ನು ಸಮಾಜದ ಎದುರಿಗೆ ಅಂದರೆ ಹೊಸ್ತಿಲ ಹೊರಗೆ ನಡೆಯುವ ಶೋಷಣೆಗೆ ಯಾರು ವಿರೋಧ ವ್ಯಕ್ತಪಡಿಸುವ ಗೋಜಿಗೆ ಹೋಗಲಿಲ್ಲ. ಇವೆಲ್ಲ ಪ್ರತಿಷ್ಠಿತ ರಾಜ ಮನೆತನದ ಮಹಿಳೆಯರ ಪಾಡು. ರಾಜಕೀಯಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರೆದ ಮಹಿಳೆಯರ ಪಾಡು (ದ್ರೌಪದಿ ಉತ್ತಮ ರಾಜನೀತಿಜ್ಞೆಯೆಂದು ಹೊಗಳುತ್ತೇವೆ.) ಇಲ್ಲಿ ಪ್ರಮುಖವಾಗಿ ಕಂಡುಬಂದಿದ್ದು ಗಂಡಂದಿರ ಜಯ, ಸತ್ಯ ವಾಕ್ಯ ಪರಿಪಾಲನೆ ಹೊರತಾಗಿ ತನ್ನನ್ನು ವಸ್ತುವನ್ನಾಗಿ ಪರಿವರ್ತಿಸುವ ಈ ಧೋರಣೆಗೆ ಮೌನವಾಗಿ ವೇದನೆ ಅನುಭವಿಸಿದಳು. ಬಹುಶಃ ಅದಕ್ಕೆ ಅವರನ್ನು ಪತಿವ್ರತೆಯರ ಸ್ಥಾನಕ್ಕೆ ಅಲಂಕರಿಸಲಾಯಿತು. ನಮ್ಮ ಸಂಸ್ಕೃತಿಯು ಪಾತಿವ್ರತ್ಯ, ಶೀಲ, ಸಚ್ಚಾರಿತ್ರ್ಯ, ಗುರುಹಿರಿಯರಲ್ಲಿ ಭಕ್ತಿ, ಗೌರವ, ವಿಧೇಯತೆ ಯಾವುದಕ್ಕೂ ವಿರೋಧ ವ್ಯಕ್ತಪಡಿಸದೆ ಎಲ್ಲವನ್ನು ಸಹಿಸಿಕೊಳ್ಳುವ, ಪರರ ಸುಖ, ಸಂತೋಷಕ್ಕೆ ತನ್ನ ಸುಖವನ್ನು ತ್ಯಾಗ ಮಾಡುವ ಹೆಣ್ಣನ್ನು ಆದರ್ಶ ಸ್ತ್ರೀ ಎಂದು ಪುರುಸ್ಕರಿಸುತ್ತದೆ. ಹೆಣ್ಣಿನ ಬಗ್ಗೆ ಮನುವಿನ ಅಭಿಪ್ರಾಯವು ಕೂಡ ಇದೆ ಆಗಿದೆ. ತಂದೆ ಗಂಡ ಮಗ ಹೀಗೆ ಇವರ ಆಶ್ರಯ ಅಧೀನ ಹಾಗೂ ಮರ್ಜಿಯಲ್ಲಿಯೇ ಬದುಕಬೇಕು. ಬಾಯಿ ಇದ್ದು ಮೌನಿಯಾಗಿರಬೇಕು. ಹುಟ್ಟಿದ ಮನೆಯಲ್ಲಿಯೇ ಅವಳಿಗೆ ಅಧಿಕಾರವಿಲ್ಲ. ಇನ್ನೂ ಕೊಟ್ಟ ಮನೆಯಲ್ಲಿ ಅಧಿಕಾರದ ಪ್ರಶ್ನೆಯಂತು ದೂರದ ಮಾತೆ. ಇಂತಹ ಪುರುಷ ಪ್ರಧಾನ ಸಮಾಜದಲ್ಲಿ ಪುರುಷಶಾಹಿತ್ವ ವ್ಯವಸ್ಥೆಯಲ್ಲಿ ತನಗೊಡ್ಡಿದ ನಿರ್ಬಂಧಗಳು ನಿರ್ಬಂಧವೆನಿಸದೆ ಅವುಗಳ ಪರೀಧಿಯಲ್ಲಿಯೇ ಬದುಕಲು ಸಿದ್ಧಳಾಗುತ್ತಾಳೆ. ಒತ್ತಾಯ ಹೇರಿಕೆ ಎನ್ನುವ ಕಲ್ಪನೆ ಬರದ ಹಾಗೆ ಕುಟುಂಬ ಅವಳನ್ನು ಮಾನಸಿಕವಾಗಿ ದೈಹಿಕವಾಗಿ

ಹೊಂದಿಕೊಳ್ಳುವಂತೆ ಮಾಡಿರುತ್ತದೆ. ತಾನು ಹುಟ್ಟಿದ ಮನೆಯಲ್ಲಿಯೇ ತಂದೆ ತಾಯಿಯರಿಗೆ ವಿಧೇಯಳಾಗಿ ತನ್ನ ಆಸೆ ಆಕಾಂಕ್ಷೆಗಳನ್ನು ಬದಿಗೊತ್ತಿ ಗಂಡುಮಕ್ಕಳಿಗೆ (ಸೋದರರಿಗೆ) ಮೊದಲ ಆದ್ಯತೆ ಕೊಡಬೇಕು. ಸ್ವತಂತ್ರವಾಗಿ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮತ್ತು ತನ್ನ ಬದುಕಿಗೆ ಸಂಬಂಧಿಸಿದ ಯಾವುದೇ ಆಯ್ಕೆ ಸಾಧ್ಯವಿಲ್ಲ. ಅದು ವಿವಾಹಕ್ಕೆ ಸಂಬಂಧ ಪಟ್ಟಿರುವ ವಿಷಯವಾಗಿರಬಹುದು. ಲೈಂಗಿಕತೆಯ ಪ್ರಶ್ನೆಯಾಗಿರಬಹುದು. ಸಂತಾನೋತ್ಪತ್ತಿಯ ಪ್ರಶ್ನೆಯಾಗಿರಬಹುದು. ಹಾಗೆಯೇ ಹೆಣ್ಣಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಸಂಬಂಧಗಳು ಇರಬಹುದು. ವಿವಾಹದ ಬಂಧನದಿಂದ 'ತವರಿನ' ಸಂಪೂರ್ಣ ಹಕ್ಕನ್ನು ಕಳೆದುಕೊಂಡು ಗಂಡನ ಮನೆಯ ಹೊಸ ಸಂಬಂಧಗಳನ್ನು ತನ್ನದಾಗಿಸಿಕೊಳ್ಳುವತ್ತ ಪ್ರಯತ್ನ ಸಾಗಬೇಕು. ತಂದೆ ಮನೆಯಲ್ಲಿ ಗಿಳಿಮರಿಯಂತೆ ಬೆಳೆದವಳು ಹೊಸಮನೆಯನ್ನು ಸೇರಿ ಅತ್ತೆ-ಮಾವ, ನಾದಿನಿ-ನೆಗೆಣ್ಣೆ, ಭಾವ-ಮೈದುನ ಮುಂತಾದ ಸಂಬಂಧಗಳೊಂದಿಗೆ ಬೆರೆತು ಬಾಳು ಸಾಗಿಸಬೇಕಾಗುತ್ತದೆ. ಈ ಯಾವುದೇ ಸಂಬಂಧಗಳು ಬಯಸಿ ಪಡೆದವುಗಳಲ್ಲ. ಅವು ತಾವಾಗಿಯೇ ಹೇರಲ್ಪಟ್ಟವು. ಅಂತಹ ಸಂಬಂಧಗಳನ್ನು ಸ್ಥಾಪಿಸಿಕೊಳ್ಳಬೇಕಾದ ಅನಿವಾರ್ಯ ಆಕೆಗಿದೆ. ಹೀಗೆ ಅಪರಿಚಿತರ ಮಧ್ಯೆ ಪರಿಚಿತರಿಂದ ದೂರವಾಗಿ ಬದುಕು ಸಾಗಿಸಬೇಕಾದ ಒತ್ತಡವಿದೆ. ಇಲ್ಲಿ ಸ್ತ್ರೀ ತನ್ನ ಅಸ್ತಿತ್ವಕ್ಕಾಗಿ ಹೆಣಗಾಡುವುದನ್ನು ಕಾಣಬಹುದು. ಇವೆಲ್ಲ ಜೀವನದ ಪ್ರಮುಖ ಘಟ್ಟಗಳು. ಅತಿ ಚಿಕ್ಕ ಸಂದರ್ಭವು ಕೂಡ ಮಹಿಳೆಯ ಬದುಕಿನಲ್ಲಿ ಮಹತ್ವನ್ನು ಪಡೆದುಕೊಂಡು ಆಕೆಗೆ ಬೇಲಿಯನ್ನು ನಿರ್ಮಿಸುತ್ತದೆ. ಮನೆಯ ಒಳಗೆ ಆಕೆಗೆ ಸ್ವಾತಂತ್ರದ ಯಾವುದೇ ಕೊರತೆ ಇಲ್ಲವೆಂದು ಎದೆತಟ್ಟಿಕೊಂಡು ಹೇಳುವ ಧೈರ್ಯ ಹೆಣ್ಣಾದ ನನಗೆ ಇಲ್ಲವೆಂದೆನಿಸುತ್ತದೆ. ಮನೆಯ ಹೊಸ್ತಿಲು ದಾಟಿ ಹೊರ ಹೋಗಲು ಮನೆಯ ಜಯಮಾನನ ಅಪ್ಪಣೆಯನ್ನಂತು ಪಡೆಯಲೇ ಬೇಕು. ಅಪ್ಪಣೆ ದೊರೆತರೂ ಒಂಟಿಯಾಗಿ ಹೊಸ್ತಿಲು ದಾಟುವ ಹಾಗಿಲ್ಲ. ರಕ್ಷಣೆಗೆಂಬಂತೆ ಜೊತೆಯಲ್ಲಿ ಬರುವವರು ಇರುತ್ತಾರೆ. ಹೀಗೆ ಜೊತೆಯಲ್ಲಿ ಬರುವವರು ದೊಡ್ಡವರಾಗಿರ ಬಹುದು, ಚಿಕ್ಕವರಾಗಿರಬಹುದು. ಇದು ಸ್ತ್ರೀಯನ್ನು ಇನ್ನಷ್ಟು ಮಾನಸಿಕವಾಗಿ ಅಬಲೆಯನ್ನಾಗಿಸುತ್ತದೆ. ಹೌದು ನಾನು ಒಂಟಿಯಾಗಿ ಓಡಾಡುವುದು ಕ್ಷೇಮವಲ್ಲ. ಅದು ನನ್ನಿಂದ ಸಾಧ್ಯವಿಲ್ಲದ ಮಾತು ಎಂದು ಆಕೆ ಸಂಗಾತಿಯನ್ನು ಆಶ್ರಯಿಸಬೇಕಾಗುತ್ತದೆ. ಇದನ್ನು ಮೀರಿ ಓರ್ವ ಮಹಿಳೆ ಒಂಟಿಯಾಗಿ ಮನೆಯವರ ಅಪ್ಪಣೆಯನ್ನು ನಿರೀಕ್ಷಿಸದೆ ಮನೆಯ ಹೊಸ್ತಿಲು ದಾಟಿ ಹೊರಗೆ ಕಾಲಿಟ್ಟಳೋ ಅವಳಿಗೆ "ಗಂಡುಬೀರಿ" ಎಂಬ ಪಟ್ಟ ಕಟ್ಟಿ "ಹೊಸ್ತಿಲು ದಾಟಿದ ಹೆಣ್ಣು" ಎಂಬ ಘೋರ ಅಪವಾದಕ್ಕೆ ಗುರಿಯಾಗಿಸುತ್ತಾರೆ. ಧೈರ್ಯದ ಬದಲು ಪಾಪ ಪ್ರಜ್ಞೆ ಮೂಡುವಂತೆ ಸಮಾಜ ಆಡಿಕೊಳ್ಳುತ್ತದೆ. ಇದು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ವಸ್ತುವಾಗಿಯೇ ಪರಿಗಣಿಸಲ್ಪಟ್ಟ ಹೆಣ್ಣಿನ ಸ್ಥಿತಿ. ಆದ್ದರಿಂದ ಮನೆಯ ಹೊಸ್ತಿಲು ಹೆಣ್ಣಿಗೆ 'ಶ್ರೀರಕ್ಷೆ' ಇದ್ದ ಹಾಗೆ. ಗಂಡಿಗೂ ಸಮಾಧಾನ, ನಾನು ನನ್ನ ವಸ್ತುವನ್ನು ಜೋಪಾನವಾಗಿ ಕಾಯುತ್ತಿದ್ದೇನೆ ಎನ್ನುವ ಹುಚ್ಚು ನಂಬಿಕೆ. ಈ ಮಾತಿಗೆ ಅಪವಾದವೆಂಬಂತೆ "ಏಳು ಮಲ್ಲಿಗೆಯ ತೂಕದ

ರಾಜಕುಮಾರಿಯ ಕಥೆ" ಹೀಗೆ ಹೊಸ್ತಿಲು ಆಕೆಯ ಜೀವನಕ್ಕೆ ಎಳೆದ ಲಕ್ಷ್ಮಣ ರೇಖೆಯಾಗಿಯೇ ಕೆಲಸ ಮಾಡುತ್ತದೆ. ಅದನ್ನು ಮೀರಿ ಮುಂದೆ ಸಾಗಿದರೆ ರಾವಣನಂತಹ ಕ್ರೂರ ಸಮಾಜ ಆಕೆಯನ್ನು ಅಪಹರಿಸುತ್ತದೆ. ಸೀತೆಯೇನೋ ದೇವತೆ ಅಗ್ನಿ ಪರೀಕ್ಷೆಯನ್ನು 'ಪಾಸು' ಮಾಡಿದಳು. ಆದರೆ ಸಾಮಾನ್ಯ ಸ್ತ್ರೀಯ ಪಾಡು? ಇವೆಲ್ಲದರ ನಡುವೆ ಹೆಣ್ಣು ಹುಳುವಿನಂತೆ ಒದ್ದಾಡಿ, ಹೊಸ್ತಿಲಿಗೆ ಶರಣು ಹೇಳಿ, ತನ್ನನ್ನು ತಾನೇ ಪುರುಷನ ಬಂಧಿತತನಕ್ಕೆ ಒಪ್ಪಿಸಿಕೊಂಡಿದ್ದಾಳೆ ಎಂದರೆ ಈಗಿನ ಸ್ತ್ರೀವಾದಿಗಳಿಗೆ ಈ ಮಾತು ಅತಿಶಯೋಕ್ತಿ ಎನಿಸಲೂಬಹುದು. ಆದರೆ ಸತ್ಯಕ್ಕೆ ಒಂದೇ ಮುಖ. ಹೀಗೆ ಹೊಸ್ತಿಲು ಮಾನವ ಜೀವನದಲ್ಲಿ ತನ್ನ ಕಾರ್ಯ ಚಟುವಟಿಕೆ ನಿರ್ವಹಿಸುತ್ತಲೆ ಇದೆ.

ಸ್ತ್ರೀ ಪುರುಷರಿಬ್ಬರೂ ಸಮಾಜದ ಸದಸ್ಯರು. ಅವರಿಬ್ಬರಿಂದಲೇ ಕುಟುಂಬ. ಈ ಕುಟುಂಬ ಇಬ್ಬರ ಬದುಕನ್ನು ಆವರಿಸುತ್ತದೆ. ಇಲ್ಲಿ ಮನೆಯ ಮರ್ಯಾದೆ, ಗೌರವ ಮುಖ್ಯವಾಗಿರುತ್ತವೆ. ಮರ್ಯಾದೆ ಗೌರವ ಎಂದರೆ ನೇರವಾಗಿ ಸಂಪರ್ಕ ಬೆಸೆಯುವುದು ಮಹಿಳೆಗೆ. ಆದ್ದರಿಂದ ಹೊಸ್ತಿಲ ಒಳಗಿನ ಜವಾಬ್ದಾರಿಯನ್ನು ಪುರುಷ ಸ್ತ್ರೀಗೆ ಬಿಟ್ಟುಕೊಟ್ಟಿದ್ದಾನೆ. ಹಾಗೆ ಬಿಟ್ಟು ಕೊಡುವಾಗ ಮನೆಯ ಹೊಣೆಗಾರಿಕೆಯ ಜೊತೆಗೆ, ಮನೆತನದ ಮರ್ಯಾದೆಗೆ ಆಕೆಯನ್ನು ಬಾದ್ಯಳಾಗಿಸಿದ್ದಾನೆ. ಹೀಗೆ ಹೆಣ್ಣಿನ ವರ್ತನೆಗಳು ಹೊಸ್ತಿಲಿನೊಂದಿಗೆ ನೇರ ಸಂವಾದಕ್ಕಿಳಿಯುವುದರಿಂದ ಮರ್ಯಾದೆ ಎನ್ನುವುದು ಮಿತಿ ಮಾತ್ರವೇ ಅಲ್ಲ ಗೌರವ ಎನ್ನುವ ವಿಶೇಷ ಅರ್ಥವನ್ನು ಕೊಡುತ್ತಾ ಹೆಣ್ಣು ಮತ್ತು ಹೊಸ್ತಿಲಿಗೆ ಸಮನಾಗಿ ಚಾಚಿಕೊಳ್ಳುವುದನ್ನು ನೋಡಬಹುದಾಗಿದೆ. ಹೀಗೆ ಹೊಸ್ತಿಲು ತೊಟ್ಟ ರೂಪಕ್ಕಿಂತ ಅದರ ಸಾಂಕೇತಿಕತೆಯೇ ಹೆಚ್ಚಾಗಿರುವುದನ್ನು ನಮ್ಮ ದೇಶದ ಚರಿತ್ರೆ ಮತ್ತು ಪುರಾಣಗಳಲ್ಲಿ ನೋಡುತ್ತೇವೆ. ಇಲ್ಲಿ ಹೊಸ್ತಿಲು ತೊಟ್ಟ ರೂಪ ಒಂದೆ. ಆದರೆ ಸಾಂಕೇತಿಕತೆಯಲ್ಲಿ ವೈವಿಧ್ಯತೆಯನ್ನು ನಿರ್ಮಿಸಿದ್ದು ಕಾಣುತ್ತೇವೆ. ಉದಾಹರಣೆಗೆ ಮರ್ಯಾದೆ, ಗೌರವ, ಧೈರ್ಯ ಮುಖ್ಯವಾಗಿ ಸ್ತ್ರೀ ಜೀವನಕ್ಕೆ ಶ್ರೀರಕ್ಷೆಯ ನೆಪದಲ್ಲಿ ಬೇಲಿಯನ್ನು ಎಳೆದದ್ದು. ಆ ಬೇಲಿಯನ್ನು ಯಾವುದೇ ಕಾರಣಕ್ಕೂ ದಾಟುವುದು ಸಮ್ಮತವಲ್ಲ. ಬೆನ್ನ ಹಿಂದೆಯೇ ಒಂದು ಉಕ್ತಿ ಕೇಳಿಬರುತ್ತದೆ. "ಒಂದು ಸಾರಿ ಹೊಸ್ತಿಲು ದಾಟಿದಿಯೋ ಮತ್ತೆ ನಿನಗೆ ಮನೆಯ ಒಳಗೆ ಪ್ರವೇಶವಿಲ್ಲ." ಇಲ್ಲಿ ಹೀಗೆ ಹೇಳುವುದು ಆ ಕುಟುಂಬದವರೆ ಆಗಿರುವುದರಿಂದ ಅದು ಆ ಕುಟುಂಬದ ಸಂಕುಚಿತ ಮನೋಭಾವನೆಯನ್ನು ಎತ್ತಿ ತೋರಿಸುತ್ತದೆ. ಮಗು ಹುಟ್ಟುವ ಮೊದಲೇ ಗಂಡು ಶಿಶುವಿನ ಕುರಿತು ಒಲವುಗಳು ಬಹುತೇಕ ಕುಟುಂಬಗಳಲ್ಲಿ ಇಂದಿಗೂ ಕಾಣುತ್ತೇವೆ. ಲಿಂಗಾಧಾರಿತ ಸಾಮಾಜಿಕ ಪ್ರಕ್ರಿಯೆ ಹೆಣ್ಣು ಶಿಶು ಹುಟ್ಟಿ ಬೆಳೆದು ಜೀವಂತವಾಗಿರುವವರೆಗೂ ಪರಿಣಾಮಗಳನ್ನು ಅನುಭವಿಸಬೇಕಾಗುತ್ತದೆ.

ಕುಟುಂಬ ಎಂದ ಮೇಲೆ ಹಲವಾರು ಸಂಬಂಧಗಳ ಸರಪಳಿಯನ್ನು ಕಾಣುತ್ತೇವೆ. ಈ ಎಲ್ಲ ಸಂಬಂಧಗಳನ್ನು ಭದ್ರವಾಗಿ ಬೆಸೆಯುವ ಕಾರ್ಯ ಹೆಣ್ಣಿನದು. ಎಲ್ಲಿ ಏನೇ ಬಿರುಕು ಬಿಟ್ಟರು ಅದು

ಆಕೆಯ ಅಪರಾಧವೇ ಆಗುತ್ತದೆ. ಸೊಸೆಯಾಗಿ, ಹೆಂಡತಿಯಾಗಿ, ತಾಯಿಯಾಗಿ, ಅತ್ತೆಯಾಗಿ, ಅಕ್ಕ ತಂಗಿಯಾಗಿ ಹೀಗೆ ಅನೇಕ ರೀತಿಯ ಅವಸ್ಥೆಗಳನ್ನು ಸ್ಥಾನಮಾನಗಳನ್ನು ಪಡೆದುಕೊಂಡು ಒಂದೊಂದು ಹಂತದಲ್ಲಿ ಒಂದೊಂದು ರೀತಿಯ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗುತ್ತದೆ.

ಹೊಸ್ತಿಲ ಒಳಗೆ (ಕುಟುಂಬದ ಒಳಗೆ) ಸ್ತ್ರೀ ವಿರುದ್ಧ ನಡೆಯುವ ದೌರ್ಜನ್ಯಗಳು ಅನೇಕ. ಸ್ತ್ರೀ ಹುಟ್ಟುವ ಮೊದಲೇ ಪ್ರಾರಂಭವಾಗುವ ಹಿಂಸೆ ಆಕೆಯ ಜನನದ ನಂತರ ಜೀವನ ಕೊನೆಗೊಳ್ಳುವವರೆಗೂ ಮುಂದುರೆಯುತ್ತದೆ. ಇಂತಹ ಸಂದರ್ಭ(ಹಿಂಸೆ) ಎಂಬ ತತ್ವಕ್ಕೆ ಬದ್ಧವಾಗಿ ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಯಾವುದೇ ಬಗೆಯ ತರಬೇತಿಯನ್ನು ನೀಡುತ್ತಿಲ್ಲ. ಬದಲಾಗಿ ಅದನ್ನು ಸಹಿಸಿಕೊಳ್ಳುವ ಬಗೆಯನ್ನು ಹೇಳಿಕೊಡಲಾಗುತ್ತದೆ. "ತಾಳಿದವನು ಬಾಳಿಯಾನು" ಎಂಬ ಗಾದೆಯೊಂದಿಗೆ "ಕುತಿಗಿ ಮಟ ಬರುವರೆಗೂ ತಾಳಬೇಕು ಮಗಳ" ಎಂದು ಪ್ರತಿಯೊಬ್ಬ ತಾಯಿ ಗಂಡನ ಮನೆಗೆ ಹೋಗುವ ತನ್ನ ಮಗಳಿಗೆ ಹೇಳುವ ಬುದ್ಧಿವಾದದ ಮಾತುಗಳಲ್ಲಿ ಮೊದಲನೆಯ ಮಾತಾಗಿದೆ.

ಹೆಣ್ಣು ಬೇರೆ ಮನೆಗೆ ಹೋಗುವವಳು, ನಮ್ಮ ಮುಪ್ಪಿನ ಕಾಲದಲ್ಲಿ ನೋಡುವವರು ಬೇರೆ ಇದ್ದಾರೆ ಎಂದು ಆಕೆಯ ಬಗ್ಗೆ ಭೇದ ಮಾಡುತ್ತಾರೆಯೇ ಹೊರತು ಮಕ್ಕಳಲ್ಲಿ ಭೇದ ಭಾವ ಮಾಡುವುದಿಲ್ಲ ಎಂದು ಹರಿಹರ ಕವಿಯ ಸ್ತ್ರೀ ಪಾತ್ರ ದರ್ಶನದಲ್ಲಿ ಉಲ್ಲೇಖಿಸಲಾಗಿದೆ. ಮುಂದೆ ಮದುವೆ ಮಾಡಿ ಗಂಡನ ಮನೆಗೆ ಕಳುಹಿಸುವಾಗ ತಾಯಿ ಹೇಳುವ ಮಾತುಗಳ ನೋಡಿ

ಅತ್ತೆಯ ಮನಿಯಾಗ ತೊತ್ತಾಗಿ ಇರಬೇಕು
ಹೊತ್ತಾಗಿ ನೀಡಿದರೂ ಉಣಬೇಕು
ಮಗಳೇ ತೌರಿಗೆ ಹೆಸರ ತರಬೇಕು

ಅಂದರೆ ಆಳಾಗಿ ದುಡಿಯುವಂತೆ ಮತ್ತೆ ಊಟಕ್ಕೆ ನೀಡಿದರೆ ಉಣಬೇಕು ಇಲ್ಲದಿದ್ದರೆ ಉಪವಾಸ. ತೌರಿಗೆ ಹೆಸರು ಮಾತ್ರ ತರಬೇಕು ಎಂದು ತಾಯಿ (ಹೆಣ್ಣು) ಹೇಳುತ್ತಾಳೆ. ಈ ಮಾತಿನಲ್ಲಿ ಮಗಳ ಸುಖಕ್ಕಿಂತ ತೌರಿನ ಕೀರ್ತಿ ಮುಖ್ಯವಾಗಿ ಹೆಣ್ಣಿನ ಜೀವನದಲ್ಲಿ ತೌವರು ಮನೆಯಿಂದ ಬೇರೆಯಾದೆ ಎನ್ನುವ ಭಾವನೆಯುಕ್ಕಿ ಬಂದು

"ನಾವೊಬ್ರ ಮನೆಯ ಸೊಸೆಯಾದೇ ತಂಗೆಮ್ಮ
ತವರೂರ ಸುದ್ದಿ ನಮಗೇಕೆ"[r]

ಅತ್ತೆ ಮನೆಗೆ ಬಂದ ಸೊಸೆಯ ಮಾತಾಗಿದೆ. ತವರನ್ನು ಹೆತ್ತವರನ್ನು ಬಿಟ್ಟು ಬಂದ ಮಹಿಳೆ ಅತ್ತೆಯ ಮನೆಯಲ್ಲಿ ಹೊಸ ಸಂಬಂಧಗಳೊಂದಿಗೆ ಬದುಕು ಪ್ರಾರಂಭಿಸಬೇಕು. ವಿವಾಹದಿಂದ ಏರ್ಪಡುವ ಹೊಸ ಸಂಬಂಧಗಳು ಕುಟುಂಬದ ಗಾತ್ರ ಹಾಗೂ ಸಂಬಂಧಗಳ ವ್ಯಾಪ್ತಿಯನ್ನು ವಿಸ್ತರಿಸುತ್ತವಷ್ಟೆ ಅಲ್ಲದೆ ಆ ಸಂಬಂಧಗಳ ವ್ಯಾಪ್ತಿಯೊಳಗೆ ಸೇರ್ಪಡೆಯಾಗುವ ವ್ಯಕ್ತಿಗಳ ವಯಸ್ಸು, ಲಿಂಗ ಹಾಗೂ ಪತಿ ಪತ್ನಿಯರೊಡನೆ ಅವರು ಹೊಂದಿರುವ ಸಂಬಂಧಗಳ ಸ್ವರೂಪದ ಆಧಾರದ ಮೇಲೆ ವಿಭಿನ್ನ ಪಾತ್ರಗಳನ್ನು

ವಹಿಸುತ್ತವೆ. ಈ ಪಾತ್ರ ಹಂಚಿಕೆ ಸ್ತ್ರೀ ಪುರುಷ ಅಸಮಾನತೆಯನ್ನು ಮತ್ತಷ್ಟು ಬಲಗೊಳಿಸುತ್ತದೆ. ವಿವಾಹ ಎಂಬ ಸಂಬಂಧ ಸೇರ್ಪಡೆಯಾದ ಮೇಲೆ ಸ್ತ್ರೀಯರಿಂದ ವಿಶೇಷ ನಡವಳಿಕೆಯನ್ನು ನಿರೀಕ್ಷಿಸುವ ಸಮಾಜ, ಪುರುಷನಿಂದ ನಿರೀಕ್ಷಿಸುವುದಿಲ್ಲ. ಸ್ತ್ರೀ ತನ್ನ ಅಭಿರುಚಿ, ಆಸಕ್ತಿ ಆಯ್ಕೆಯ ಸ್ವಾತಂತ್ರ್ಯ ಎಲ್ಲವನ್ನು ತ್ಯಜಿಸಿ ಕುಟುಂಬದವರ ಆಸಕ್ತಿ ಅಭಿರುಚಿ, ಆಯ್ಕೆಯನ್ನು ಅನುಕರಣೆ ಮಾಡಬೇಕಾಗುತ್ತದೆ. ಇಲ್ಲಿ ಸಂಪೂರ್ಣವಾಗಿ ತನ್ನ ಸ್ವತಂತ್ರ ವ್ಯಕ್ತಿತ್ವಕ್ಕೆ ಪೆಟ್ಟು ಬಿದ್ದು ಕೇವಲ ಇಂತಹ ಹೆಂಡತಿಯೆಂದು ಗುರುತಿಸಲ್ಪಡುತ್ತಾಳೆ. ಅನೇಕ ಕುಟುಂಬಗಳಲ್ಲಿ ಅವಳ ಮೂಲ ಹೆಸರನ್ನು ಬದಲಾಯಿಸಿ ತಮಗೆ ಇಷ್ಟ ಬಂದ ಹೆಸರನ್ನು ಇಡುವಷ್ಟು ಆಕೆಯ ಅಸ್ತಿತ್ವವನ್ನು ಅಳಿಸಲು ಪ್ರಯತ್ನ ನಡೆಯುತ್ತದೆ. ಹೀಗೆ ಪ್ರಾರಂಭಗೊಳ್ಳಲು ಶೋಷಣೆ ದಿನನಿತ್ಯದ ಕಾರ್ಯ ಚಟುವಟಿಕೆಗಳಲ್ಲಿ ಬೆರೆತು ಹೋಗುತ್ತವೆ. ಸಾಮಾನ್ಯವಾಗಿ ಅವಿಭಕ್ತ ಕುಟುಂಬಗಳಲ್ಲಿ ಮಹಿಳೆ ಮನೆಯ ಹೊರಗಿನ ಯಾವುದೇ ವಹಿವಾಟಿನಲ್ಲಿ ತಲೆ ಹಾಕದೆ ಇದ್ದರೂ ಕೂಡ ಕುಟುಂಬದ ಪ್ರಮುಖ ಉದ್ಯೋಗವಾದ ಕೃಷಿ (ರೈತಾಪಿ ಮನೆತನದ)ಯಲ್ಲಿ ಮನೆಯ ಹೊರಗೂ ದುಡಿಯುತ್ತಾಳೆ. ಕೃಷಿಯಲ್ಲಿ ಕೆಲವೊಂದು ಕಾರ್ಯಗಳು ಮಹಿಳೆಗೆಂದೆ ಗುರುತಿಸಲ್ಪಟ್ಟವು. ಇವಲ್ಲದೆ ಮನೆತನದ ಯಾವುದೇ ವೃತ್ತಿ ಇರಲಿ ಕಂಬಾರಿಕೆ, ಕುಂಬಾರಿಕೆ, ಬಡಿಗತನ ಮುಂತಾದವುಗಳಲ್ಲಿ ಗಂಡಿಗೆ ಸರಿಸಮಾನವಾಗಿ ದುಡಿದು ಮನೆಯ ಒಳಗಿನ ಎಲ್ಲ ಕೆಲಸಗಳನ್ನು ಪೂರೈಸಿದರೂ ಅದು ಸಹಾಯವೆಂದು ಪರಿಗವಿತವಾಗುತ್ತದೆಯೇ ವಿನಾಃ ಕೆಲಸ ಎಂದು ಪರಿಗಣಿತವಾಗುವುದಿಲ್ಲ. ಹೀಗೆ ಮನೆಯ ಒಳಗೆ ಮತ್ತು ಮನೆಯ ಹೊರಗೆ ದುಡಿದರೂ ಮನೆಯಲ್ಲಿ ಗಂಡಿನ ಸರಿಸಮ ಸ್ವಾತಂತ್ರ್ಯವಿಲ್ಲ. ಅತ್ತೆಯನ್ನು ಕೇಳದೆ ಏನು ಮಾಡಲು ಶಕ್ಯಳಲ್ಲ. ಅವಿಭಕ್ತ ಕುಟುಂಬದಲ್ಲಿ ಹಿರಿಯ ಹೆಣ್ಣುಮಕ್ಕಳು ಕಿರಿಯ ಹೆಣ್ಣುಮಕ್ಕಳೊಂದಿಗೆ ಅಧಿಕಾರಯುತ ಧ್ವನಿಯಲ್ಲಿಯೇ ಮಾತನಾಡಿಸುತ್ತಾರೆ. ಅವರನ್ನು ನಡೆಸಿಕೊಳ್ಳುತ್ತಾರೆ. ತನ್ನ ಮಗನಿಗೆ ತನ್ನ ರಕ್ತ ಸಂಬಂಧದಲ್ಲಿಯೇ ಮದುವೆ ಮಾಡಬೇಕೆಂದು ಹಂಬಲಿಸುತ್ತಾಳೆ. ಆಕಸ್ಮಾತ ಒಂದು ಕುಟುಂಬದಲ್ಲಿ ಇಬ್ಬರು ಸೊಸೆಯಂದಿರಿದ್ದು ಒಬ್ಬಳು ಹೊರಗಿನವಳಾಗಿ ಮತ್ತೊಬ್ಬಳು ಸೋದರ ಸಂಬಂಧಿಯಾಗಿದ್ದರಂತೂ ಹೊರಗಿನ ಸೊಸೆಯ ಪಾಡು ಹೇಳತೀರದು. ಇಲ್ಲಿ ತಾವು ಹೆಣ್ಣು ಎಂಬುದನ್ನು ಮರೆತು ತಮ್ಮ ಅಧಿಕಾರಕ್ಕಾಗಿ ಸೊಸೆಯನ್ನು ನಡೆಸಿಕೊಳ್ಳುತ್ತಾರೆ. ಇಲ್ಲಿ ಹೆಣ್ಣಿಗೆ ಹೆಣ್ಣೆ ಶತ್ರು ಎಂಬ ಮಾತನ್ನು ನಿಜವೆಂದು ನಂಬುವಂತಿರುತ್ತದೆ ಅವರ ಪ್ರವೃತ್ತಿ. ಕಿರಿ ಸೊಸೆ ಹಿರಿ ಸೊಸೆಯರಲ್ಲಿಯೂ ಭೇದ ಭಾವ ಕಿರುಕುಳದ ಪ್ರಭಾವವಿರುತ್ತದೆ. ಇಲ್ಲಿ ವರದಕ್ಷಿಣೆಯ ಪ್ರಭಾವವು ಬೀರದಿರುವುದಿಲ್ಲ. ಹೆಚ್ಚು ವರದಕ್ಷಿಣೆ ತಂದ ಸೊಸೆಗೆ ಒಂದು ರೀತಿಯ ಉಪಚಾರ, ತರದಿದ್ದ ಸೊಸೆಗೆ ಮತ್ತೊಂದು ರೀತಿಯ ಉಪಚಾರವಿರುತ್ತದೆ.

ಅತ್ತೆಯ ನಂತರದ ಸ್ಥಾನ ಹಿರಿಸೊಸೆಯದ್ದಾಗಿದ್ದರಿಂದ ನಾನು ಹಿರಿಸೊಸೆ ಎನ್ನುವ ಅಹಂನಿಂದ ಕಿರಿಸೊಸೆಯನ್ನು ನಡೆಸಿಕೊಳ್ಳುವ ಪ್ರವೃತ್ತಿ ಎದ್ದು ಕಾಣುತ್ತದೆ. ಆಕಸ್ಮಾತ ಕಿರಿಸೊಸೆ ತನ್ನ ಅಭಿಪ್ರಾಯ

ವ್ಯಕ್ತಪಡಿಸಲು ಪ್ರಯತ್ನ ಪಟ್ಟರೆ "ನಾ ನಿನಗಿಂತ ಮೊದಲ ಈ ಮನಿ ಹೊಸ್ತಿಲ ತುಳಿದು ಬಂದಿನಿ" ಎಂದು ಅಧಿಕಾರದ ಧ್ವನಿಯಿಂದ ಹೇಳುತ್ತಾಳೆ. ಇದಕ್ಕೆ ಉದಾಹರಣೆ ಎಂಬಂತೆ "ಭಾಗೀರತಿ ಕೆರೆಗೆ ಹಾರವಾಗಿದ್ದು". ಹೀಗೆ ಸೊಸೆಯಾಗಿ ಬಂದು ತನ್ನ ಅಸ್ತಿತ್ವಕ್ಕಾಗಿ ಹೆಣಗಾಡುತ್ತಲೆ ಇರುವ ಇವಳಿಗೆ ಸಂತಾನ ಭಾಗ್ಯವಾಗಿದ್ದರೆ ಆ ಮನೆಯಲ್ಲಿ ಒಂದು ಸ್ಥಾನ, ಮರ್ಯಾದೆ. ಇಲ್ಲದಿದ್ದರೆ ಬಂಜೆ ಎನ್ನುವ ಶಬ್ದ ಹೊತ್ತುಕೊಂಡು ಮನೆಯವರಿಂದ ತಾತ್ಸಾರಕ್ಕೆ ಒಳಗಾಗಿ ಗಂಡನ ಪ್ರೀತಿಯಿಂದ ದೂರವಾಗಿ ಜೀವಂತ ಶವದಂತೆ ಬಾಳು ನಡೆಸಬೇಕಾಗುತ್ತದೆ. ಅದಕ್ಕೆ ಗೃಹಿಣಿ ಪ್ರತಿನಿತ್ಯ ದೇವರಿಗೆ ಬೇಡಿಕೊಳ್ಳಲು ಮಾತು ಒಂದೆ "ಬಂಜೆ" ಎಂಬ ಶಬ್ದದ ಕೊಡದಿರು ಎಂದು ಪ್ರಾರ್ಥಿಸುತ್ತಾಳೆ. ವೈದಿಕ ಧರ್ಮದಲ್ಲಿ ಸ್ತ್ರೀ ತಾಯಿಯಾದರೇನೇ ಅವಳಿಗೆ ಮೋಕ್ಷ ಎಂದು ಬಂಜೆತನ ಮತ್ತಷ್ಟು ಹೀನಾಯವಾಗಿ ಕಾಣುವಂತೆ ಮಾಡಿದೆ. ಬಂಜೆಯಾದಳಂತೂ ಮನೆಯ ಒಳಗೆ ಹಿಂಸೆಯ ಪರಾಕಾಷ್ಠೆಯನ್ನು ಮುಟ್ಟುವಳು. ಕೊಟ್ಟ ಮನೆಯಲ್ಲಿ ಸ್ಥಾನ ಪಡೆಯಬೇಕಾದರೆ ಆ ವಂಶೋದ್ಧಾರದ ಕಾರ್ಯದ ಸಂತಾನೋತ್ಪತ್ತಿ ಮಾಡುವುದಾಗಿದೆ. ಕೆಲವೊಂದು ಕುಟುಂಬಗಳಲ್ಲಿ ಲೈಂಗಿಕ ಕ್ರಿಯೆ ಕೇವಲ ಸಂತಾನ ಪ್ರಾಪ್ತಿಗಾಗಿಯೇ ಎನ್ನುವ ಕೀಳು ಭಾವನೆಯು ಇದೆ. ಆದ್ದರಿಂದ ಹೆಣ್ಣು ತಾಯಿಯಾಗಲು ಹಂಬಲಿಸುತ್ತಾಳೆ. ಇದು ಕೌಟುಂಬಿಕ ಹಿಂಸೆಯಲ್ಲಿ ಬರುವಂತಹದ್ದು. ಈ ಬಂಜೆತನಕ್ಕೆ ಗಂಡನು ಕಾರಣನಾಗಿರಬಹುದು. ಆದರೆ ಅದನ್ನು ಯಾರು ಮಾನ್ಯ ಮಾಡುವುದಿಲ್ಲ. ಈ ಸಮಾಜದಲ್ಲಿ ಏನೆ ಅನಾಹುತವಾದರೂ ಅದಕ್ಕೆ ಸ್ತ್ರೀಯನ್ನೆ ಜವಾಬ್ದಾರಳನ್ನಾಗಿಸುತ್ತದೆ. ಸ್ತ್ರೀಯ ಬದುಕನ್ನು ನರಕವನ್ನಾಗಿಸುವ ಕೊನೆಯ ಹಂತವೆ ವಿಧವೆಯದು. ಇಲ್ಲಿ ವಿಧವೆಯ ಪಾಡು ನಾಯಿಗಿಂತ ಕಡೆಯದ್ದಾಗಿದೆ. ತವರಿನ ಮಗಳಲ್ಲ, ಗಂಡನ ಮನೆಯ ಸೊಸೆಯಲ್ಲದ ಆಶ್ರಯಕ್ಕಾಗಿ ಅಲೆದಾಡುವ ಸ್ಥಿತಿ ಅವಳದು. ಗಂಡನ ಸಂಬಂಧಿಕರಲ್ಲೋ, ಅಣ್ಣನ ಮನೆಯಲ್ಲಿಯೋ ಬಾಡಿಗೆ ಎತ್ತಿನಂತೆ ತುತ್ತು ಕೂಳಿಗಾಗಿ ದುಡಿಯವ ಮಾರ್ಮಿಕ ಸಂದರ್ಭ. ಕೇವಲ ಇಷ್ಟೆ ಆದರೆ ಒಳ್ಳೆಯದಾಗಿತ್ತು. ಆದರೆ ಸಮಾಜ ಅವಳನ್ನು ಇನ್ನೂ ಕ್ರೂರಿ ಎಂದು ತೋರಿಸುವಂತೆ ತಲೆ ಬೋಳಿಸುವುದು, ಬಣ್ಣದ ಸೀರೆಗಳನ್ನು ಉಡದಂತೆ ಕೇವಲ ಬಿಳಿ ಸೀರೆಗಳನ್ನೇ ಉಟ್ಟುಕೊಳ್ಳುವಂತೆ ಮಾಡಿ, ಯಾವುದೇ ಮಂಗಳಕರ ಸಮಾರಂಭಗಳಿಗೆ ಪ್ರವೇಶವಿಲ್ಲದಂತೆ ವ್ರತೋಪಾಸಗಳನ್ನು ಮಾಡುತ್ತಾ ಸನ್ಯಾಸಿನಿ ಎಂಬಂತೆ ಜೀವಿಸಬೇಕು. ಹೀಗೆ ದಿನವೂ ಸಾಯುವುದಕ್ಕಿಂತ ಒಮ್ಮೆಲೇ ಸಾಯುವುದು ಲೇಸು ಎಂಬಂತೆ ಗಂಡನ ಚಿಂತೆಯಲ್ಲಿಯೇ ಆಕೆಯನ್ನು ಸುಟ್ಟು ಸತಿ ಎನ್ನುವ ಪಟ್ಟ ಕಟ್ಟುವುದು ವೇದಗಳ ಕಾಲದಲ್ಲಿ ರಾಜಮನೆತನಗಳಲ್ಲಿ ನಡೆಯುವ ಪದ್ಧತಿಗಳಾಗಿದ್ದವು.[೧೧] ಬಂಜೆಯಾದವಳು ಗಂಡ ಸಂತಾನ ಕ್ಕೋಸ್ಕರ ಎರಡನೆಯ ಮದುವೆ ಮಾಡಿಕೊಳ್ಳಲು ಅವಕಾಶವಿದ್ದುದರಿಂದ ಮಹಿಳೆ ಸಂತಾನ ಭಾಗ್ಯ ಕೊಡೋ ಶಿವನೆ ಎಂದು ಪ್ರಾರ್ಥಿಸುತ್ತಾಳೆ.

ಹೀಗೆ ಹೊಸ್ತಿಲ ಒಳಗೆ ಸ್ತ್ರೀ ಪಡುವಂತ ಮಾನಸಿಕ, ದೈಹಿಕ ಯಾತನೆ ಹೇಳತೀರದು. ಸೊಸೆಯಾಗಿ, ವಿಧವೆಯಾಗಿ, ಬಂಜೆಯಾಗಿ ನಾನಾ ರೀತಿಗಳಿಂದ ಕಷ್ಟಕೋಟಲೆಗಳನ್ನು ಅನುಭವಿಸಿದರೂ ಅದರ ವಿರುದ್ಧ ಮಾತನಾಡುವ ಸಾಹಸ ಪ್ರವೃತ್ತಿ ಕಾಣಿಸುತ್ತಿಲ್ಲ. ಕಾರಣ ಅದು ಮನೆಯ ಒಳಗೆ ನಡೆಯುವಂತ ಖಾಸಗಿ ವಿಚಾರವಾಗುತ್ತದೆ. ಹೊಸ್ತಿಲ ಒಳಗೆ ಏನೆ ನಡೆದರೂ ಅದು ಖಾಸಗಿ ವಿಚಾರವಾಗಿ ಸಾರ್ವಜನಿಕರು ದೂರ ಸರಿಯುತ್ತಾರೆ. ಅಷ್ಟೇ ಏಕೆ ಶೋಷಿತ ಮಹಿಳೆ ಕೂಡ ಅದನ್ನು ಹೊರ ಹಾಕಲು ಇಚ್ಛಿಸುವುದಿಲ್ಲ. ಮನೆಯ ಮರ್ಯಾದೆಯನ್ನು ಬೀದಿಗೆಳೆಯುವುದು ತರವಲ್ಲವೆಂದು. ಏಕೆಂದರೆ ಮದುವೆಯ ಸಮಯದಲ್ಲಿ ತಾಯಿಯು ಕೊಟ್ಟ ಬೋಧನೆ "ತಾಳಿಕೊಳ್ಳು" ಎನ್ನುವುದು ಅದು ಅಲ್ಲದೆ ಹೊಸ್ತಿಲ ಒಳಗಿನ ಕುಟುಂಬದವರು ಕೊಡುವ ಹಿಂಸೆ ಎಷ್ಟೋ ಸಂದರ್ಭದಲ್ಲಿ ಹೊರಗೆ ಪ್ರಚಾರವೇ ಆಗುವುದಿಲ್ಲ. ಪೊಳ್ಳು ಪ್ರತಿಷ್ಠೆ ಹುಸಿ ವ್ಯಕ್ತಿತ್ವ ಕಾಪಾಡುವ ನೆಪದಲ್ಲಿ ಸ್ತ್ರೀ ತನ್ನನ್ನು ತಾನೇ ಆತ್ಮಹತ್ಯೆಗೆ, ತನ್ನನ್ನು ಸಮರ್ಪಿಸಿ ಕೊಳ್ಳುತ್ತಾಳೆ. ಇಂತಹ ಅನಾಹುತಗಳು ನಡೆದರೂ ಅವು ಗಂಭೀರ ಸ್ವರೂಪ ಪಡೆಯುವುದೇ ಇಲ್ಲ. ಬಲಿಷ್ಟ ಪುರುಷ ಪ್ರಧಾನ ವ್ಯವಸ್ಥೆ ಅದನ್ನು ಹೇಳ ಹೆಸರಿಲ್ಲದೆ ಮುಚ್ಚಿ ಹಾಕಿ ಏನು ನಡೆದೆ ಇಲ್ಲ ಎನ್ನುವ ವಾತಾವರಣ ಸೃಷ್ಟಿ ಮಾಡುತ್ತಾರೆ. ಇನ್ನೂ ತವರಿವರು "ನಮ್ಮ ಮಗಳೇ ಹೋದ ಮೇಲೆ ಏನು ಮಾಡಿದರೂ ಪ್ರಯೋಜನವಿಲ್ಲ" ಎಂದು ನಿಟ್ಟುಸಿರು ಬಿಡುತ್ತಾರೆ. ಈ ರೀತಿ ಯೋಚಿಸದೆ ಅನ್ಯಾಯದ ವಿರುದ್ಧ ತಲೆ ಎತ್ತಿದರೆ ಮುಂದಿನ ಸಾವಿರಾರು ಮಹಿಳೆಯರ ಬಾಳು ಹಸನಾಗಿಸಬಹುದು. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಮಹಿಳೆಗೆ 'ಹೆಣ್ಣಾಗಲು' ತರಬೇತಿ ನೀಡುವ ಬದಲು 'ಆತ್ಮವಿಶ್ವಾಸ' ಮತ್ತು ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಮಾಡಬೇಕು.

ಸ್ತ್ರೀ ಶಾರೀರಿಕವಾಗಿ ಗಂಡಿಗಿಂತ ಭಿನ್ನತೆಯನ್ನು ಹೊಂದಿದ್ದು ಪ್ರಕೃತಿಯ ನಿಯಮ. ಅದನ್ನೇ ಅಸ್ತ್ರವನ್ನಾಗಿಸಿಕೊಂಡು ಪುರುಷ ಅವಳನ್ನು ಅಬಲೆಯ ಸ್ಥಾನಕ್ಕೆ ಸೀಮಿತಗೊಳಿಸುವ ಹುನ್ನಾರ ಮಾಡುತ್ತ ಬಂದಿದ್ದಾನೆ. ಶಾರೀರಿಕ ಭಿನ್ನತೆಯನ್ನು ಮುಂದೊಡ್ಡಿ ಮಾನಸಿಕವಾಗಿಯೂ ಆಕೆಯನ್ನು ಅಶಕ್ತಳನ್ನಾಗಿಸುವ ಪ್ರಯತ್ನ ಬಹುಮಟ್ಟಿಗೆ ಈ ಪ್ರಯತ್ನ ಸಫಲವಾದರೂ ನಂಬಲು ಹಿಂದೇಟು ಹಾಕುವಂತೆ ಮಾಡುತ್ತದೆ. ಸಂಸ್ಕೃತದ ಈ ನುಡಿ

"ಸ್ತ್ರೀ ಕುಸುಮದಂತೆ ಮೃದು
ವಜ್ರದಂತೆ ಕಠಿಣ"

ಇಲ್ಲಿ ಎರಡು ವಿರುದ್ಧಗುಣಗಳುಳ್ಳ ವಸ್ತುಗಳಿಗೆ ಹೆಣ್ಣಿನ ಮನಸ್ಥಿತಿಗೆ ಹೋಲಿಕೆ ಮಾಡಲಾಗಿದೆ. ಅದಕ್ಕೆ ಹಿರಿಯರು "ಹೆಣ್ಣಿನ ಮನದ ಆಳ, ಮೀನಿನ ಹೆಜ್ಜೆಯ ಗುರುತುಗಳನ್ನು ತಿಳಿಯಲು ಸಾಧ್ಯವಿಲ್ಲ". ಸ್ತ್ರೀ ತನ್ನ ಶೀಲ, ಪಾತಿವ್ರತ್ಯ ಮುಂತಾದ ಸೂಕ್ಷ್ಮ ವಿಷಯಗಳಿಂದ ಪುರುಷನ ಅಧೀನದಲ್ಲಿ ಬದುಕುವ ಅಸಹಾಯಕ ಪರಿಸ್ಥಿತಿ ಇದೆ. ಆದರೆ ಈ ಎರಡು ಅಂಶಗಳು ಪುರುಷನಿಗೆ ಅನ್ವಯಿಸುವುದಿಲ್ಲವೆ?

ಇಲ್ಲ ಎಂದು ಪುರುಷ ಎದೆ ತಟ್ಟಿಕೊಂಡು ಹೇಳಬಹುದು. ಆದರೆ ಶೀಲ ಎಲ್ಲರಿಗೂ ಒಂದೆ. ಹೇಗೆ ಪುರುಷ ತನ್ನ ಪತ್ನಿ ಪತಿವ್ರತೆಯಾಗಿರಬೇಕೆಂದು ಬಯಸುತ್ತಾನೆಯೋ, ಸ್ತ್ರೀ ಕೂಡ ತನ್ನ ಗಂಡ ಪತ್ನಿ ವ್ರತಸ್ಥನಾಗಿರಬೇಕೆಂದು ಬಯಸುವಳು. ವ್ಯಕ್ತಿ ಯಾರೇ ಆಗಿರಲಿ (ಗಂಡು ಅಥವಾ ಹೆಣ್ಣು) ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾದರೆ ಸಮಾಜದಲ್ಲಿ ಸ್ಥಿತಪ್ರಜ್ಞನಾಗಿರಬೇಕು. ತನ್ನ ಪರಿಸರಕ್ಕೆ ಹೊಂದಿಕೊಳ್ಳುವಂತ ಗುಣಧರ್ಮವನ್ನು ಹೊಂದಿರಬೇಕು. ಚಿತ್ತ ಚಾಂಚಲ್ಯಕ್ಕೆ ಸಣ್ಣ ಸಣ್ಣ ಸಂದೇಹಗಳೇ ಕಾರಣವಾಗಬಹುದು. ರಾಮಾಯಣದ ಸೀತೆಯ ಪಾಡು ಈ ಸಂದೇಹದ ಬೀಜದಿಂದಲೆ ಹುಟ್ಟಿ ಹೆಮ್ಮರವಾಗಿ ಬೆಳೆದು ಇಂದಿಗೂ ಫಲಕೊಡುತ್ತಲೇ ಇದೆ. ಅಂದರೆ ಈ ಮಾತಿನ ಅರ್ಥ ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ. ಆಕೆ ಬುದ್ಧಿವಂತಿಕೆಯನ್ನು ತೋರಿಸುವುದಾಗಲೀ, ಬಳಸುವುದಾಗಲೀ ಸಮಾಜಕ್ಕೆ ನುಂಗಲಾರದ ತುತ್ತು. ಯಾವಾಗಲು ಆಳುವ ವರ್ಗ ಆಳಿಸಿಕೊಳ್ಳುವ ವರ್ಗದಿಂದ ಪರಿಪೂರ್ಣ ನಿರಾತಂಕವಾಗಿ, ನಿರ್ಭಯದಿಂದ ಇರಲು ಸಾಧ್ಯವಿಲ್ಲ. ಏಕೆಂದರೆ ಸಮುದ್ರ ಶಾಂತವಿದೆಯೆಂದು ಅಂದುಕೊಂಡು ಮರುಕ್ಷಣವೇ ರಭಸವಾಗಿ ಅಲೆಗಳು ಅಪ್ಪಳಿಸುತ್ತವೆ. ಹೀಗೆಯೇ ಸ್ತ್ರೀಯನ್ನು ಆದಷ್ಟು ಮಟ್ಟಿಗೆ ಹತ್ತಿಕ್ಕಬೇಕು ಎಂದು ಎಲ್ಲಾ ಕಡೆಗಳಿಂದಲೂ ಪ್ರಯತ್ನಗಳು ನಡೆದೆ ಇರುತ್ತವೆ. ಹಿಂದೆ ಚಿತ್ತ ಚಾಂಚಲ್ಯದ, ಶೀಲದ ಬಗ್ಗೆ ಮಾತು ಬಂದಿತ್ತಲ್ಲವೆ? ಸ್ತ್ರೀಯನ್ನು ಹೊಸ್ತಿಲ ಒಳಗೆ (ಚೌಕಟ್ಟಿನಲ್ಲಿಯೇ) ಯಾಕೆ ಬಂಧಿಸಲಾಯಿತು ಎಂದರೆ ಆಕೆ ಮಾನಸಿಕವಾಗಿ, ದೈಹಿಕವಾಗಿ ಕೋಮಲೆ, ಚಂಚಲೆ ಎಂದು ಹೇಳುತ್ತದೆ ಪುರುಷ ಪ್ರಧಾನ ವ್ಯವಸ್ಥೆ. ಅದೇ ವ್ಯವಸ್ಥೆ ಹೇಳುವಂತೆ ಸ್ತ್ರೀಗೆ ಸ್ವತಂತ್ರ ಇದೆ. ಆದರೆ ಆ ಸ್ವಾತಂತ್ರ್ಯ ಶೀಲ, ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುವಂತಿರಬೇಕು. ಇಲ್ಲಿ ಕಾಪಾಡುವವರು ಮತ್ತು ಹರಣ ಮಾಡುವವರು ಪುರುಷನೇ ಆಗಿರುವುದರಿಂದ ಸ್ತ್ರೀ ತಾನು ಮಾನಸಿಕವಾಗಿಯೂ ದೈಹಿಕವಾಗಿಯೂ ಅಬಲೆ ಅಲ್ಲ. ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳುವಷ್ಟು ಸದೃಢಳಾಗಿದ್ದಾಳೆ. ತನ್ನ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳಬಲ್ಲಳು ಎಂದು ಪ್ರಪಂಚಕ್ಕೆ ಮನವರಿಕೆ ಮಾಡಿಸಬೇಕಾಗಿದೆ. ಆಧುನಿಕ ಮಹಿಳೆ ಈ ನಿಟ್ಟಿನಲ್ಲಿ ಮೇಲುಗೈ ಸಾಧಿಸಿದ್ದಾಳೆ. ಆದ್ದರಿಂದ ಇಂದಿನ ಮತ್ತು ಹಿಂದಿನ ಮಹಿಳೆಯರಲ್ಲಿ ಅಜಗಜಾಂತರ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ. ಹಿಂದಿನ ಮಹಿಳೆಗೆ ಮನೆಯ ಹೊಸ್ತಿಲು ಅಂತಿಮ ಗಡಿ ರೇಖೆಯಾದರೆ ಇಂದಿನ ಮಹಿಳೆ ಆ ಹೊಸ್ತಿಲನ್ನು ದಾಟಿ ಹೊರ ಬಂದಿದ್ದಾಳೆ. ಪ್ರತಿಯೊಂದು ಕ್ಷೇತ್ರದಲ್ಲಿ ತನ್ನ ಮೇಲುಗೈ ಸಾಧಿಸಿದ್ದಾಳೆ(ಶೈಕ್ಷಣಿಕ, ರಾಜಕೀಯ, ವೈದ್ಯಕೀಯ ಮುಂತಾದ ಕ್ಷೇತ್ರಗಳಲ್ಲಿ). ಇದೆಲ್ಲಾ ಸಾಧ್ಯವಾಗಬೇಕಾದರೆ ಮುಖ್ಯವಾಗಿ ಸ್ತ್ರೀಗೆ ಶಿಕ್ಷಣದ ಅಗತ್ಯವಿದೆ. ಶಿಕ್ಷಣದಿಂದ ಆತ್ಮಸ್ಥೈರ್ಯ ಉಂಟಾಗುತ್ತದೆ. ಆರ್ಥಿಕ ಬಲ ಉಂಟಾಗಿ ಬದುಕುವ ರೀತಿಯಲ್ಲಿ ಬದಲಾವಣೆ ಕಾಣಿಸಿಕೊಂಡು ಸಮಾಜವನ್ನು ಎದುರಿಸುವ ಶಕ್ತಿಯೂ ಬರುತ್ತದೆ. ಇದರಿಂದಾಗಿ ಅವಳು ಮಾನಸಿಕವಾಗಿ ಭೌತಿಕವಾಗಿ ಅಭಿವೃದ್ಧಿಯನ್ನು ಸಾಧಿಸಬಲ್ಲಳು. ಆಕೆ ಹೊಸ್ತಿಲು ಒಂದು ಬೇಲಿ ಎಂದೆನಿಸದೆ ಅದು ಕೂಡ ತನ್ನ


ವಿಸ್ತಾರತೆಯ ಪ್ರಮಾಣವನ್ನು ವಿಕಸಿತಗೊಳಿಸುತ್ತದೆ. ಈ ನಿಟ್ಟಿನಲ್ಲಿ ಇಂದಿನ ಮಹಿಳೆ ಕೇವಲ ಅಸ್ತಿತ್ವ ಮತ್ತು ಅಧಿಕಾರಕ್ಕೆ ಅಪ್ರಬುದ್ಧವಾಗಿ ಪ್ರಯತ್ನ ಮಾಡದೆ ಪ್ರಬುದ್ಧಳಾಗಿ ಆಲೋಚಿಸಿ ಅಸ್ತಿತ್ವ ಮತ್ತು ಅಧಿಕಾರ ಎರಡನ್ನು ಪಡೆದುಕೊಂಡು ಸಮಾಜದ ಪ್ರಮುಖ ಪ್ರಜೆಯಾಗಿ ಬಾಳುವತ್ತ ಪ್ರಯತ್ನ ಸಾಗಬೇಕು. ಈ ನಿಟ್ಟಿನಲ್ಲಿ ನಡೆದ ಪ್ರಯತ್ನದಿಂದ ಮಹಿಳೆ ದ್ವಿಭಾರ ಹೊರವಂತಾಯಿತು. ಕೈಗಾರಿಕಾ ಕ್ರಾಂತಿಯಿಂದಾಗಿ ಮಹಿಳೆ ಕೂಡ ಕಾರ್ಖಾನೆಯಲ್ಲಿ ದುಡಿಯಲು ಮನೆಯಿಂದ ಹೊರಗೆ ಬಂದಳು. ಕಾರಣ ತಮ್ಮ ಕೌಟುಂಬಿಕ ಆರ್ಥಿಕ ಆದಾಯವನ್ನು ಹೆಚ್ಚಿಸಲು, ಸಮಾಜದಲ್ಲಿ ಸ್ಥಾನಮಾನ ಹೆಚ್ಚಿಸಿಕೊಳ್ಳಲು ಸ್ತ್ರೀ ಉದ್ಯೋಗ ಮಾಡಲು ಮುಂದಾದಳು. ಇದರಿಂದ ಒಂದಿಷ್ಟು ಹಣ ಸಂಪಾದನೆ ಜೊತೆಗೆ ವೈಚಾರಿಕ ಮನೋಭಾವನೆಯು ಬೆಳೆದು ತನ್ನ ಶೋಷಣೆಗೆ ಪ್ರತಿಭಟಿಸುವ ಧೈರ್ಯ ಕೆಲವು ಮಹಿಳೆಯಲ್ಲಿ ಬಂತೇ ಪಿನಃ ಉದ್ಯೋಗಸ್ಥ ಪ್ರತಿ ಮಹಿಳೆಗೆ ಅಲ್ಲ. ಬದಲಾಗಿ ಶೋಷಣೆಯಲ್ಲಿ ಹೆಚ್ಚಳ ಕಾಣತೊಡಗಿತು.

ಹೀಗೆ ಹೊಸ್ತಿಲ ಒಳಗೆ ಮತ್ತು ಹೊರಗೆ ಏಕಕಾಲದಲ್ಲಿ ಸ್ತ್ರೀ ಶೋಷಣೆಗೆ ಒಳಗಾಗುತ್ತಿದ್ದಾಳೆ. ವೈಜ್ಞಾನಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದೇವೆ. ಆದರೆ ಮಾನಸಿಕವಾಗಿ ನಾವು ಭಾರತೀಯ ಸಂಸ್ಕೃತಿಯನ್ನು ಎಲ್ಲೋ ಒಂದು ಕಡೆ ಪಾಲಿಸಿಕೊಂಡೆ ಬರುತ್ತಿದ್ದೇವೆ. ಅದು ಎಲ್ಲೋ ಒಂದು ಕಡೆ ನಮ್ಮ ಸುಪ್ತಾವಸ್ಥೆಯಲ್ಲಿ ಜಾಗೃತವಾಗಿಯೇ ಇದೆ. ಸಾರ್ವತ್ರಿಕವಾಗಿ ಪಾಶ್ಚಾತ್ಯೀಕರಣದ ಅನುಕರಣೆಯನ್ನು ಮಾಡುವ ನೆಪದಲ್ಲಿ ನಮ್ಮನ್ನು ನಾವೇ ವಂಚಿಸಿಕೊಳ್ಳುತ್ತಿದ್ದೇವೆ. ಕಾರಣ ಸಾರ್ವಜನಿಕವಾಗಿ ಸ್ವಾತಂತ್ರ್ಯದ ಬಗ್ಗೆ, ಸ್ವಚ್ಛಂದತೆಯ ಬಗ್ಗೆ ಭಾಷಣ ಮಾಡಿದರೂ ಅದೇ ವಿಚಾರ ವ್ಯಕ್ತಿಗತ ಸಂಬಂಧಕ್ಕೆ ಎದುರಾದಾಗ ಸಮ್ಮತಿಸಲು ಮನಸ್ಸು ಹಿಂದೆ ಸರಿಯುತ್ತದೆ. ಆದ್ದರಿಂದ ನಾವು ಕೇವಲ ತೋರಿಕೆಗೆ ಬದಲಾಗದೆ ಕಾಯಾ-ವಾಚಾ-ಮನಸಾ ಅಭಿವೃದ್ಧಿ ಹೊಂದುತ್ತ ಸಾಗಿದರೆ ಸ್ತ್ರೀ ಹೊಸ್ತಿಲ ಒಳಗೆ ಮತ್ತು ಹೊಸ್ತಿಲ ಹೊರಗೆ ನಿರಂತರವಾಗಿ ನೆಮ್ಮದಿಯ ಜೀವನ ಸಾಗಿಸಬಹುದು. ಗಾಂಧಿ ಕಂಡ ನಿಜವಾದ ಸ್ತ್ರೀ ಸ್ವಾತಂತ್ರ್ಯ ನಮ್ಮದಾಗಿಸಬಹುದು.

೪.೩. ಮಕ್ಕಳ ಪ್ರಧಾನ ನೆಲೆಗಳು

ಪ್ರತಿ ದಂಪತಿಗಳು ತಮ್ಮ ಸಂತಾನದ ಬಗ್ಗೆ ಅನೇಕ ಸುಂದರ ಕನಸುಗಳನ್ನು ಕಟ್ಟಿರುತ್ತಾರೆ. ಅನೇಕ ಆಸೆ-ಆಕಾಂಕ್ಷೆಗಳನ್ನು ಹೊಂದಿರುತ್ತಾರೆ. ಜನಿಸಿದ ಬಳಿಕವೋ ಆ ಎಲ್ಲಾ ಕನಸುಗಳನ್ನು, ಆಸೆ-ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವ ತವಕ. ಮಾಂಸದ ಮುದ್ದೆಯಾಗಿ ಜನಿಸಿದ ಮಾನವ ಶಿಶುವನ್ನು ಅನೇಕ ಸಂಸ್ಕಾರಗಳಿಂದ ಸಾಮಾಜಿಕರಣಕ್ಕೆ ಒಳಪಡಿಸಿ ಮನುಷ್ಯನನ್ನಾಗಿ ರೂಪಿಸುವುದರಲ್ಲಿ ತಂದೆ-ತಾಯಿ, ಬಂಧು-ಬಳಗದವರ ಪಾತ್ರ ಹಿರಿದಾದುದು. ಮಗುವೂ ಸಹ ತಂದೆ-ತಾಯಿ, ಗುರು-ಹಿರಿಯರ ಮಾರ್ಗದರ್ಶನದಲ್ಲಿ ಭಾಷೆ, ಸಂಸ್ಕೃತಿ, ಧರ್ಮ ಎಲ್ಲವನ್ನು ಕಲಿತು ತನಗರಿವಿಲ್ಲದೆಯೇ ತನ್ನ ವ್ಯಕ್ತಿತ್ವದ

ವಿಕಾಸ ಮಾಡಿಕೊಳ್ಳುತ್ತಿರುತ್ತದೆ. ಹಾಗೆಯೇ ತಾನು ಇತರರೊಂದಿಗೆ ಯಾವ ರೀತಿ ನಡೆದುಕೊಳ್ಳಬೇಕು, ತನ್ನ ಜವಾಬ್ದಾರಿಯೇನು ಎಂಬುದನ್ನು ಕ್ರಮೇಣ ಅರಿತು ಯೋಗ್ಯ ವ್ಯಕ್ತಿಯಾಗಿ ರೂಪಿತಗೊಳ್ಳಲು ಪ್ರಯತ್ನಪಡುತ್ತಿರುತ್ತದೆ. ಆದ್ದರಿಂದ ತಂದೆ-ತಾಯಿಯರು ತಮ್ಮ ಮಕ್ಕಳ ಬೆಳವಣಿಗೆಯಲ್ಲಿ ಅವರ ವಯೋಧರ್ಮಕ್ಕನುಗುಣವಾಗಿ ಅನೇಕ ಬಗೆಯ ಆಚರಣೆಗಳನ್ನು ಮಾಡುತ್ತಾರೆ. ಈ ನಿಟ್ಟಿನಲ್ಲಿ ಮಗುವಿನ ಜೀವನದಲ್ಲಿ ಹೊಸ್ತಿಲಿನೊಂದಿಗೆ ಮಾಡುವ ಆಚರಣೆಯೂ ಸೇರಿಕೊಂಡಿದೆ.



ಹೊಸ್ತಿಲಿನ ಮುಂದೆ ಕುಳಿತುಕೊಂಡಿರುವ ಮಕ್ಕಳು

ಮಗುವೊಂದು ಜನಿಸಿದ ಬಳಿಕ ಅದರ ಬಾಲಲೀಲೆಗಳನ್ನು ನೋಡುವುದೆಂದರೇನೆ ತಂದೆ ತಾಯಿಗಳ ಕಣ್ಣಿಗೆ ಹಬ್ಬ. ಅದು ಮಾಡುವ ಪ್ರತಿಯೊಂದು ಚಟುವಟಿಕೆಯನ್ನು ಗಮನಿಸುತ್ತಾ ಇರುತ್ತಾರೆ. ಅದು ಅಂಬೆಗಾಲು ಹಾಕುವುದು, ಎಡುವುತ್ತಾ ನಡೆಯುವುದು ಇವೆಲ್ಲ ಮಗುವು ದೈಹಿಕವಾದ ಬೆಳವಣಿಗೆಯನ್ನು ಹೊಂದಿ ಯಾವ ವಯಸ್ಸಿಗೆ ಯಾವ ಬೆಳವಣಿಗೆಯಾಗಬೇಕೋ ಆ ಎಲ್ಲಾ ಬೆಳವಣಿಗೆ ಹೊಂದುತ್ತಿದೆ ಎಂದು ತಿಳಿದುಕೊಳ್ಳುವ ಅಪೂರ್ವ ಸನ್ನಿವೇಶ. ಈ ಘಳಿಗೆಯ ಅತಿ ಮಹತ್ವಪೂರ್ಣ ಸನ್ನಿವೇಶ ಮಗು ಮೊದಲ ಬಾರಿಗೆ ಹೊಸ್ತಿಲ ದಾಟಿದಾಗ.

ಹೊಸ್ತಿಲ ದಾಟಿದಾಗ : ಪ್ರಥಮ ಬಾರಿಗೆ ಮಗು ಹೊಸ್ತಿಲು ದಾಟಿದಾಗ ತಾಯಿಗೆ ಎಲ್ಲಿಲ್ಲದ ಸಂಭ್ರಮ. "ನನ್ನ ಮಗು ಹೊಸ್ತಿಲು ದಾಟಿತು" ಎಂದು ಸಂತೋಷದಿಂದ ಎಲ್ಲರಿಗೂ ಹೇಳುತ್ತಾಳೆ. ಸಿಹಿತಿಂಡಿ ಮಾಡಿ ಮನೆಯವರಿಗೆ, ಅಕ್ಕಪಕ್ಕದವರಿಗೆ ಹಂಚುವುದು ವಾಡಿಕೆ. ಕರ್ನಾಟಕದ ಎಲ್ಲ ಕಡೆಗಳಲ್ಲಿಯೂ

ಕಂಡುಬರುವ ಈ ಆಚರಣೆಯಲ್ಲಿ ಕೊಂಚ ವ್ಯತ್ಯಾಸವಿರುವುದು. ಕೆಲವೊಂದು ಕಡೆ 'ಕರ್ಚಿಕಾಯಿ' ಮಾಡಿ ಹಂಚುತ್ತಾರೆ. ಇಲ್ಲಿ ಕರ್ಚಿಕಾಯಿ ಮಾಡುವುದರ ಹಿಂದೆ ಅಡಗಿದ ವಿಚಾರವೆಂದರೆ ಕರ್ಚಿಕಾಯಿ ಮಗುವಿನ ಪಾದದ ಸಂಕೇತ. ಇನ್ನೂ ಕೆಲವು ಕಡೆಗಳಲ್ಲಿ 'ಕರಿಗಡಬು' ಮಾಡಿ ಹಂಚುವುದು ಇದೆ. ಇನ್ನೂ ಕೆಲವು ಕಡೆ ಮಗು ಹೊಸ್ತಿಲು ದಾಟಿದ ತಕ್ಷಣ ಅಲ್ಲಿಯೇ ನಿಲ್ಲಿಸಿ ತೆಂಗಿನಕಾಯಿ ಒಡೆದು ಸಕ್ಕರೆಯಲ್ಲಿ ತೆಂಗಿನ ಕಾಯಿಯ ಹೋಳುಗಳನ್ನು ಕಲಿಸಿ ಮನೆಯವರಿಗೆ, ಅಕ್ಕಪಕ್ಕದವರಿಗೆ ಹಂಚುವುದು. ಹಾಗೆಯೇ ಒಣ ಕೊಬ್ಬರಿ(ಗಿಟಕ) ಅಲ್ಲಿಯೆ ಒಡೆದು ಎಲ್ಲರಿಗೂ ಹಂಚಿ ಸಂತೋಷ ಪಡುವುದು ಪ್ರಚಲಿತವಾದ ಸಂಪ್ರದಾಯ.

ಈ ಹೊಸ್ತಿಲ ದಾಟಿದುದರ ಹಿಂದೆ ವೈಜ್ಞಾನಿಕ ಸಂಗತಿ ಇದೆ. ಹುಟ್ಟಿದ ಮಗು ಒಂದಲ್ಲ ಒಂದು ದಿನ ಹೊರ ಜಗತ್ತಿಗೆ ಪಾದಾರ್ಪಣೆ ಮಾಡಲೇಬೇಕಲ್ಲವೆ. ಕೇವಲ ಮನೆ ಎಂಬ ನಾಲ್ಕು ಗೋಡೆಗಳಲ್ಲಿ ಕುಟುಂಬದವರೊಂದಿಗೆ ಇರುವ ಮಗು ಹೊರ ಜಗತ್ತಿಗೆ ಅಂದರೆ ಸಮಾಜ ಜೀವನಕ್ಕೆ ಕಾಲಿಡುತ್ತಾನೆ. ಇಲ್ಲಿ ವೈಯಕ್ತಿಕ ಬದುಕಿನಿಂದ ಸಾಮೂಹಿಕ ಬದುಕು ಪ್ರಾರಂಬಿಸುವ ಮೊದಲ ಹಂತವಾಗಿದೆ. ಅದು ಅಲ್ಲದೆ ಮಗುವಿನ ಕಾಲಿನ ಸ್ನಾಯುಗಳು ಬಲಿಷ್ಠವಾಗಿವೆ. ಮಗು ಕಾಲು ಎತ್ತಿಡಲು, ನಡೆಯಲು ಸಶಕ್ತನಿದ್ದಾನೆ ಎಂಬುದು ತಿಳಿಯುತ್ತದೆ. ಈ ಹೊಸ್ತಿಲು ದಾಟಿದಾಗ ಮಾಡುವ ಆಚರಣೆಯಲ್ಲಿ ಲಿಂಗಾಧಾರಿತವಾಗಿ ಭೇದವೂ ಮತ್ತು ಚೊಚ್ಚಲ ಮಗು ಅಥವಾ ಎರಡು, ಮೂರು. ಹೀಗೆ ಸಂಖ್ಯೆಗನುಗುಣವಾಗಿ ಮಹತ್ವವನ್ನು ಪಡೆದುಕೊಳ್ಳುತ್ತದೆ. ಹೊಸ್ತಿಲು ದಾಟುವ ಮಗು ಚೊಚ್ಚಲ ಮಗುವಿದ್ದು ಗಂಡಾಗಿದ್ದರೆ ತಂದೆ ತಾಯಿಗಳಿಗೆ ಇನ್ನೂ ಸಂತೋಷ. ಒಂದು ವೇಳೆ ಚೊಚ್ಚಲ ಹೆಣ್ಣು ಮಗುವಾಗಿದ್ದರೂ (ಚೊಚ್ಚಲ ಮಗು ಯಾವುದಾಗಿದ್ದರು ಗಂಡು-ಹೆಣ್ಣು ಆಚರಣೆಯಲ್ಲಿ ಏನು ವ್ಯತ್ಯಾಸವಿರುವುದಿಲ್ಲ.) ಸಂಭ್ರಮ ಪಡುತ್ತಾರೆ. ಆದರೆ ಎರಡನೆಯ ಮಗುವಾಗಿದ್ದು ಹೆಣ್ಣಾಗಿದ್ದರೆ ತಾಯಿಯಾದವಳಂತೂ ಸಂಭ್ರಮಿಸುತ್ತಾಳೆಯೇ ಹೊರತು ತಂದೆ, ಮನೆಯವರು ತಾತ್ಸಾರತೆಯ ಉತ್ತರ ಬರುತ್ತದೆ. "ಹೊಸ್ತಿಲ ದಾಟಿದಳಾ, ಆಯ್ತು ಬಿಡು" ಎಂದು ಮಕ್ಕಳಲ್ಲಿಯೂ ಲಿಂಗಾಧಾರಿತ ತಾರತಮ್ಯ ವೆಸಗುವುದು ನಿಜವಾಗಿಯೂ ನಮ್ಮದು ಪುರುಷ ಪ್ರಧಾನ ಸಂಸ್ಕೃತಿಗೆ ಹಿಡಿದ ಕನ್ನಡಿಯಾಗಿದೆ. ಈ ತಾರತಮ್ಯ ಮಗುವಿನ ಪ್ರತಿಯೊಂದು ಆಚರಣೆಯಲ್ಲಿ ಕಂಡು ಬರುತ್ತದೆ. ತೊಟ್ಟಿಲು ಶಾಸ್ತ್ರ (ನಾಮಕರಣ), ಜಾವಳ ತೆಗೆಯುವುದು, ಹೀಗೆ ವಿಜೃಂಭಣೆ ಸಾಧಾರಣ. ಇದು ಕಂಡುಬರುತ್ತದೆ. ವಿಚಿತ್ರವೆಂದರೆ ತಾಯಿ ಹೆಣ್ಣು, ಅಜ್ಜಿಯಾದ, ದೊಡ್ಡಮ್ಮ, ಚಿಕ್ಕಮ್ಮ ಸೋದರತ್ತೆ ಇವರೆಲ್ಲ ಹೆಣ್ಣಾಗಿದ್ದು ಇವರು ಕೂಡ 'ಹೆಣ್ಣು ಮಗು' ಬಿಡು ಮನೆಯಷ್ಟೆ ಮಂದಿ ಮಾಡಿಕೊಂಡು ಬಿಟ್ಟರ ಸಾಕು. ಇದೇನು ಗಂಡು ಮಗುವೇ ವಿಜೃಂಭಣೆಯಿಂದ ಮಾಡೋದಕ್ಕೆ ಎನ್ನುತ್ತಾರೆ. ಇಲ್ಲಿ ಹೆಣ್ಣು ಪ್ರತಿಭಟಿಸುವ ಬದಲು ಸಹಕರಿಸುವ ಮನೋಭಾವನೆ ಕಾಣುತ್ತೇವೆ.

ಹೊಸ್ತಿಲು ಕೇವಲ ಈ ಒಂದು ಸಂದರ್ಭಕ್ಕೆ ಮಾತ್ರ ಸೀಮಿತವಾಗಿರದೆ ಮಗುವಿಗೆ ಸಂಬಂಧಪಟ್ಟ ರೋಗಗಳ ನಿವಾರಣೆಯಲ್ಲಿಯೂ ಪ್ರಮುಖ ಪಾತ್ರವಹಿಸುತ್ತದೆ.

೧. ಮಕ್ಕಳಿಗೆ ಬಾಲಗ್ರಹವಾದರೆ

ಲಕ್ಷಣ : ಮಗುವಿಗೆ ಹೊಟ್ಟೆ ಉಬ್ಬರಿಸಿಕೊಳ್ಳುತ್ತದೆ, ಭೇದಿ ಆಗುತ್ತದೆ, ಜ್ವರ ಬರುತ್ತದೆ

ಚಿಕಿತ್ಸೆ : ಮನೆ ತಲೆಬಾಗಿಲ ಮೂಲೆಯಲ್ಲಿ ಸಗಣಿ ಕಟ್ಟೆ ಕಟ್ಟಿ ಅದರಲ್ಲಿ ಸಗಣಿ ಬಗ್ಗಡ ತುಂಬಿ, ಒಂದು 'ಹೊರಗಲ ಮಡಕೆ'ಯ ಬಾಯಿಗೆ ಅಂಗಣ್ಣೆದಾರ ಕಟ್ಟಿ, ಎರಡಕ್ಕೂ ಅರಿಶಿನ ಕುಂಕುಮವಿಟ್ಟು, ಕಟ್ಟೆಗೆ ಹಣ್ಣುಕಾಯಿ ಪೂಜೆ ಮಾಡಿ, ಮಡಕೆಯನ್ನು ಮಗುವಿನ ಮುಖದಿಂದ ಕೆಳಕ್ಕೆ ನೀವಳಿಸಿ, ಅದರೊಳಗೊಂದು ಜೀವಂತ ಕಪ್ಪೆ ಹಾಕಿ ತಕ್ಷಣ ಆ ಬಗ್ಗಡದ ಮೇಲೆ ಡಬ್ಬಾಕುತ್ತಾರೆ. ಬಗ್ಗಡ ಗಟ್ಟಿಯಾದರೆ ಮಗುವಿನ ಬಾಲಗ್ರಹವಾಗಿರುವುದು ನಿಜವೆಂದು ಅರಿಯುತ್ತಾರೆ. ಮತ್ತು ಈ ಕ್ರಮದಿಂದ ಅದರ ಪರಿಹಾರವಾಗುತ್ತದೆಂದು ನಂಬುತ್ತಾರೆ. ಮೂರು ದಿನದ ಮೇಲೆ ಮಡಕೆ ಕಿತ್ತಾಕುತ್ತಾರೆ.[೯]

೨. ಹಾಲಾರ ಹುಣ್ಣು (ಪೈನ್, ಸಿಂವ) : ಮಕ್ಕಳಿಗೆ ಗದ್ದಕ್ಕೆ ಹುಣ್ಣು (ಗುಳ್ಳೆಗಳು ಕಾಣಿಸಿಕೊಂಡು ಕೆಂಪಗಾಗಿ ಹುಣ್ಣು ಕಾಣಿಸಿಕೊಳ್ಳುತ್ತದೆ) ಅದಕ್ಕೆ ಹಾಲಾರ ಹುಣ್ಣು, ಪೈನ್ ಅಥವಾ ಸಿಂವ ಎಂದು ವಿವಿಧ ಹೆಸರುಗಳಿಂದ ಕರೆಯುತ್ತಾರೆ.

ಚಿಕಿತ್ಸೆ : ಬೀದರ್ ಜಿಲ್ಲೆಯ ಕಡೆಗಳಲ್ಲಿ ಸಿಂವ ಎಂದು ಕರೆಸಿಕೊಳ್ಳುವ ಈ ಹುಣ್ಣಿಗೆ ಊರ ಹನುಮಂತನ (ಆಂಜನೆಯ) ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ (ಗುಡಿ) ದೇವರ ಕಟ್ಟೆಗೆ ಜಾಜಾ (ಕೆಂಪು ಮಣ್ಣು) ಹಚ್ಚಿ ಎಣ್ಣೆ ಸವರಿ ಅದನ್ನು ಮಗುವಿನ ಗದ್ದಕ್ಕೆ ಹಚ್ಚಿ ಮನೆಗೆ ಕರೆದುಕೊಂಡು ಬಂದು ಹೊಸ್ತಿಲ ಮೇಲೆ ಕೂಡಿಸಿ ಮಂಡಾಳು (ಮಂಡಕ್ಕಿ) ತಿನ್ನಿಸಿ ಮನೆಯ ಒಳಗೆ ಕರೆದುಕೊಂಡು ಬರುತ್ತಾರೆ.

ಕೆಲವೊಂದು ಕಡೆಗೆ ಈ ಹುಣ್ಣಿಗೆ ಹಾಲಾರ ಹುಣ್ಣು ಅಥವಾ ಪೈನ ಎಂದು ಕರೆಸಿಕೊಳ್ಳುವ ಇದರ ಚಿಕಿತ್ಸೆ ಬೇರೆ ರೀತಿಯಲ್ಲಿ ಇದೆ. ಮಗುವಿನ ಸೋದರ ಮಾವ ಮಗುವನ್ನು ಹೊಸ್ತಿಲ ಮೇಲೆ ಕೂಡಿಸಿ ಮಂಡಾಳು ತಿನ್ನಿಸಿ ಬಳಪದಿಂದ ಏನೋ ಬರೆದಂತೆ ಮಾಡಿ, ಎಕ್ಕಿ ಎಲಿ ಅಥವಾ ಅರಳಿ ಎಲಿ ಬಾಗಿಲಿನ ಹಣೆಪಟ್ಟಿಗೆ (ಉತ್ರಾಣಿಗೆ) ಕಟ್ಟುತ್ತಾರೆ. ವೈಜ್ಞಾನಿಕವಾಗಿ ವಿವೇಚಿಸಿದರೆ ಅರಳಿ (ಅಶ್ವ) ಗಿಡ ಹೆಚ್ಚು ಆಮ್ಲಜನಕ ಬಿಡುಗಡೆ ಮಾಡುತ್ತದೆ. ಇದರಿಂದ ಮಗುವಿನ ಆರೋಗ್ಯ ಬೇಗನೆ ಸುಧಾರಿಸುತ್ತದೆ. ಇನ್ನೂ ಕೆಲವು ಕಡೆಗಳಲ್ಲಿ ಈ ರೀತಿ ಆದ ಮಗುವಿಗೆ ಕೈಯಲ್ಲಿ ಸೇರು ಕೊಡುತ್ತಾರೆ. ಅದಕ್ಕೆ ಕೆಂಪು ಬಣ್ಣ ಹಚ್ಚಿ ಊರೊಳಗೆ ಒಂಭತ್ತು ಮನಿಗಳಿಗೆ ಕಳುಹಿಸಿ 'ಜಿರಿಲಿ ಜ್ವಾಳ ನೀಡಿರಿ' ಎಂದು ಮನೆ ಮನೆಗೆ ಕಾಳುಗಳನ್ನು ಬೇಡಿಕೊಂಡು ತಂದು ಆ ಕಾಳುಗಳನ್ನು ಕುದಿಸಿ ಮರದೊಳಗೆ ಹಾಕಿ ಆ ಮಗುವನ್ನು ಹೊಸ್ತಿಲ ಮೇಲೆ ಕೂಡಿಸಿ ಮೂರು ಬಾರಿ ಕೇರಿ ಬಿಟ್ಟರೆ ವಾಸಿಯಾಗುತ್ತದೆ

ಎಂದು ಜನವದರ ನಂಬಿಕೆ. ಸಾಮಾನ್ಯವಾಗಿ ಮಕ್ಕಳನ್ನು ಹೊಸ್ತಿಲ ಮೇಲೆ ಕೂಡುವುದಾಗಲೀ ಮರದ ಗಾಳಿ ಬಡಿಯುವುದಾಗಲೀ ನಿಷಿದ್ಧ. ಆದರೆ ಇಂತಹ ಸಮಯದಲ್ಲಿ ನಿಷಿದ್ಧ ಕಾರ್ಯಗಳೇ ಪ್ರಮುಖ ಕಾರ್ಯವಾಗಿ ಮಾರ್ಪಡುತ್ತವೆ. ಅಂದರೆ ಮನುಷ್ಯ ತನ್ನ ಅನುಕೂಲಕ್ಕೆ ತಕ್ಕಂತೆ ನಿಯಮಗಳನ್ನು ಸೃಷ್ಟಿ ಮಾಡಿಕೊಳ್ಳುತ್ತಾನೆ.

೩. ಸಂದು : ಮಕ್ಕಳು ಚಟುವಟಿಕೆಯಿಂದಿರದೆ, ಜ್ವರ ಬರುವುದು, ಸುಸ್ತಾಗುವುದು, ಈ ಎಲ್ಲ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ಚಿಕಿತ್ಸೆ : ತಾಮ್ರದ ದುಡ್ಡು ತೆಗೆದುಕೊಂಡು ಅದಕ್ಕೆ ಅರಿಶಿನ ಕುಂಕುಮ ಅಕ್ಷತೆ ಕಾಳುಗಳಿಂದ ಪೂಜಿಸಿ, ಹೊಸ ಬಟ್ಟೆ (ಬಿಳಿ)ಯಲ್ಲಿ ಕಟ್ಟಿ ಮಗುವನ್ನು ಹೊಸ್ತಿಲ ಮೇಲೆ ಕೂಡಿಸಿ ಮಗುವಿನ ಸೋದರತ್ತೆ, ಅಜ್ಜಿ ಇಲ್ಲವೆ ಮನೆಯ ಪಕ್ಕದವರು(ಯಾರಾದರೂ) ಕೊರಳಿಗೆ ಕಟ್ಟುತ್ತಾರೆ. ಇದು ಒಂದು ವಾರದ ವರೆಗೆ ಇದ್ದರೆ ಮಗುವಿಗೆ ಗುಣವಾಗುತ್ತದೆ ಎಂಬುದು ರಾಯಚೂರು ಜಿಲ್ಲೆಯ ಕಡೆಗಳಲ್ಲಿ ಮಾಡುವ ಪದ್ಧತಿಯಾಗಿದೆ. ಇದಕ್ಕೆ ಸಂದು ಕಟ್ಟುವುದು ಎನ್ನುತ್ತಾರೆ.

ಇಲ್ಲಿ ಒಂದು ವಿಷಯ ಗಮನಿಸಿದಾಗ ಈ ಎಲ್ಲಾ ಚಿಕಿತ್ಸೆಗಳು ಹೊಸ್ತಿಲ ಮೇಲೆಯೇ ಮಾಡುವುದೇಕೆಂದು, ಕಾರಣ ಇಷ್ಟೇ. ಏನೇ ರೋಗ ಬರಲಿ ಅದು ಹೊಸ್ತಿಲಿನಿಂದ ಆಚೆಯೇ ಹೋಗಲೀ ಅದು ಹೊಸ್ತಿಲ ಈಚೆಗೆ ಮನೆಯ ಒಳಗೆ ಪ್ರವೇಶಿಸದಿರಲಿ ಎನ್ನುವುದು ಆಗಿದೆ. ಹೀಗೆ ಜನಬದುಕಿನಲ್ಲಿ ಸಂಸ್ಕೃತಿಗಳಲ್ಲಿ ಹೊಸ್ತಿಲು ಇತ್ಯಾತ್ಮಕ ಮತ್ತು ನೇತ್ಯಾತ್ಮಕವಾದ ಕಾರ್ಯನಿರ್ವಹಿಸುವ ವಿಭಿನ್ನ ಸಂದರ್ಭಗಳನ್ನು ಕಾಣಬಹುದಾಗಿದೆ.

ಅಡಿಟಿಪ್ಪಣಿಗಳು

೧. ಜವಳಿ ಬಿ.ಸಿ, ಹರಿಹರ ಕವಿಯ ಸ್ತ್ರೀಪಾತ್ರ ದರ್ಶನ, ೧೯೮೩;೪೫

೨. ಕೃಷ್ಣಪ್ಪ ಜಿ., ಬೇಂದ್ರೆಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ, ೨೦೦೧;೧೪

೩. ಅದೇ, ಪು.೧೪

೪. ಜವಳಿ ಬಿ.ಸಿ., ಪೂರ್ವೋಕ್ತ, ಪು.೫೧

೫. ಕೃಷ್ಣಪ್ಪ ಜಿ., ಪೂರ್ವೋಕ್ತ, ಪು.೧೫

೬. ಅದೇ, ಪು.೨೮, ೨೯

೭. ಅದೇ, ಪು.೨೯

೮. ಕೃಷ್ಣಪ್ಪ ಜಿ., ಪೂರ್ವೋಕ್ತ, ಪು.೧೬

೯. ಗೋವಿಂದರಾಜು ಟಿ., ೧೯೯೩, ಚನ್ನದೇವಿ ಅಗ್ರಹಾರ ಜಾನಪದೀಯ ಅಧ್ಯಯನ, ೧೯೯೩;೨೦೦

ಅಧ್ಯಾಯ ೫

ಆಚರಣಾತ್ಮಕ ಸಂಬಂಧಗಳು ಹಾಗೂ ವಿಧಿ ನಿಷೇಧಗಳು

೫.೧. ಕುಟುಂಬ

೫.೨. ಕೃಷಿ

೫.೩. ದೈವ

೫.೪. ಸಮುದಾಯ

೫

ಆಚರಣಾತ್ಮಕ ಸಂಬಂಧಗಳು ಹಾಗೂ ವಿಧಿ ನಿಷೇಧಗಳು

೫.೧. ಕುಟುಂಬ

ಕುಟುಂಬವು ಅತ್ಯಂತ ಚಿಕ್ಕದೂ ಮೂಲಭೂತವು ಆದಂತ ಸಾಮಾಜಿಕ ಸಂಸ್ಥೆ. ಪ್ರತಿಯೊಬ್ಬ ವ್ಯಕ್ತಿಯು ವ್ಯಕ್ತಿಯು ಹುಟ್ಟಿನಿಂದ ಸಾವಿನವರೆಗೆ ಕುಟುಂಬದ ವ್ಯವಸ್ಥೆಯ ಒಳಗೆ ಬದುಕುತ್ತಾನೆ. ಕುಟುಂಬದ ಕಾರ್ಯ ಕೇವಲ ಸಂತಾನೋತ್ಪತ್ತಿ, ಸಂರಕ್ಷಣೆ, ಆರ್ಥಿಕ ಮತ್ತು ಭಾವನಾತ್ಮಕ ಭದ್ರತೆ ಮಾತ್ರವಲ್ಲ ಆಯಾ ಕಾಲದ ಸಮಾಜದ ಮೌಲ್ಯಗಳನ್ನು ಆಚರಣೆ-ನಂಬಿಕೆಗಳನ್ನು ಒಟ್ಟಿನಲ್ಲಿ ಸಮಾಜದ ಸಂಸ್ಕೃತಿಯನ್ನು ತನ್ನ ಸದಸ್ಯರಿಗೆ ಪರಿಚಯಿಸುವಂತಹ ಸಾಮಾಜಿಕ ಸಂಸ್ಥೆ. ಆ ಆಚರಣೆ ಸಂಪ್ರದಾಯಗಳಲ್ಲಿ ಮನೆಗೆ ರಕ್ಷಣೆ ಒದಗಿಸುವ ಮತ್ತು ಮನೆಯ ಗಡಿಯಾಗಿರುವ ಹೊಸ್ತಿಲಿನ ಪಾತ್ರ ವಿಶಿಷ್ಟವಾಗಿದೆ. ಅದು ಮದುವೆ ಸಂದರ್ಭದಲ್ಲಾಗಿರಬಹುದು, ಅಥವಾ ಹುಟ್ಟು ಸಾವಿನ ಸಮಯದಲ್ಲಾಗಿರಬಹುದು, ಒಟ್ಟಾರೆಯಾಗಿ ಮಾನವನ ಕೌಟುಂಬಿಕ ಹಿನ್ನೆಲೆಯಲ್ಲಿ ಬರುವಂತಹ ಪ್ರತಿಯೊಂದು ಸಂದರ್ಭದಲ್ಲಾಗಿರ ಬಹುದು.

ಹುಟ್ಟು ಮದುವೆ ಸಾವು ಎನ್ನುವ ಬಂಧನದೊಂದಿಗೆ ಆಚರಣೆ-ಸಂಪ್ರದಾಯಗಳಂತಹ ಅನೇಕ ವಿಧಿ ನಿಷೇಧಗಳು ಬರೆತುಕೊಳ್ಳುತ್ತವೆ. ಮಾನವನ ಹುಟ್ಟಿನಷ್ಟೇ ಸತ್ಯವಾದದ್ದು, ಘೋರವಾದದ್ದು ಸಾವು.

ಮದುವೆ ಸಂತೋಷ-ಸಂಭ್ರಮ ತಂದರೆ, ಸಾವು ದುಃಖ ವಿಷಾದಗಳನ್ನು ತಂದೊಡ್ಡುವುದು. ಮದುವೆ ಎಂಬ ಪವಿತ್ರ ಬಂಧನದಿಂದ ವ್ಯಕ್ತಿಯೊಬ್ಬ ಹೊಸ ಬಾಳಿನ ಹೊಸ್ತಿಲಿನಲ್ಲಿ ಕಾಲಿಟ್ಟರೆ, ಸಾವಿನಿಂದ ತನ್ನ ಜೀವನದ ಹೊಸ್ತಿಲಿನಿಂದಲೇ ದೂರವಾಗುತ್ತಾನೆ. ಹುಟ್ಟು ಮತ್ತು ಸಾವು ಇವೆರಡರ ನಡುವೆ ಇರುವ ಬದುಕಿನಲ್ಲಿ ಹೊಸ್ತಿಲು ಮನುಷ್ಯ ಜೀವನದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಮದುವೆ ಸಂದರ್ಭದಲ್ಲಿ ಹೊಸ್ತಿಲಿನ ಬಗೆಗೆ ಅನೇಕ ಆಚರಣೆ ಸಂಪ್ರದಾಯಗಳು ಬೆಳಕಿಗೆ ಬರುತ್ತವೆ. ಒಟ್ಟು ಮಾನವನ ಬದುಕಿಗೆ ವಿವಿಧ ವಿನ್ಯಾಸಗಳಲ್ಲಿ ಹೊಸ್ತಿಲಿನ ಪಾತ್ರ ಎಷ್ಟು ಮಹತ್ವದ್ದು ಎಂಬುದನ್ನು ಮನಗಾಣುವುದು ಇಲ್ಲಿನ ಉದ್ದೇಶವಾಗಿದೆ.

ಮದುವೆ

ಮಾನವ ಜೀವನದ ಬಹುಮುಖ್ಯ ಘಟ್ಟ ಮದುವೆ. ಗಂಡು-ಹೆಣ್ಣುಗಳ ಮಿಲನದ ಸಂಕೇತವೂ ಅಹುದು. ಭಾರತೀಯ ಪರಂಪರೆಯಲ್ಲಿ ಮದುವೆಗೆ ಪ್ರಮುಖ ಸ್ಥಾನ. ಅದೊಂದು ಪವಿತ್ರ ಕಾರ್ಯವೂ ಆದಂತೆ ಅನಿವಾರ್ಯ ಕ್ರಿಯೆಯೂ ಹೌದು. ಭಾರತೀಯ ಸಂಸ್ಕೃತಿಯ ಪ್ರಕಾರ ಮದುವೆಯಾಗದವರು ಮಂಗಳ ಕಾರ್ಯಗಳಿಂದ ದೂರಿರಬೇಕು. ಮದುವೆಯಾಗದೆ ಸತ್ತರೆ ಸ್ವರ್ಗ ದೊರೆಯುವುದಿಲ್ಲವೆಂದು, ಶವದೊಂದಿಗೆ ಎಕ್ಕೆ ಗಿಡ ಇಲ್ಲವೆ ಮಣ್ಣಿನ ಮೂರ್ತಿಯೊಡನೆ ಮದುವೆ ಮಾಡಿ ಶವ ಸಂಸ್ಕಾರ ಮಾಡುವ ರೂಢಿ ಇಂದಿಗೂ ಕೆಲ ಸಮುದಾಯಗಳಲ್ಲಿ ಪ್ರಚಲಿತವಿದೆ.

ಸಾಮಾನ್ಯವಾಗಿ ಮದುವೆಯ ಕಾರ್ಯ ಪ್ರಾರಂಭವಾಗುವುದು ಗಂಡು-ಹೆಣ್ಣುಗಳನ್ನು ನೋಡುವುದು. ಒಪ್ಪಿಗೆ ನೀಡುವುದರ ಮುಖಾಂತರ. ಹಿಂದಿನ ದಿನಮಾನಗಳಲ್ಲಿ ಹೆಣ್ಣಿನ ತಂದೆಯೇ ಗಂಡಿನವರ ಮನೆಗೆ ಹೋಗಿ ಗಂಡಿನ ಬಗ್ಗೆ ವಿಚಾರಿಸುವುದು ಅವಮಾನಕರವಾಗಿತ್ತು. ಗಂಡಿನವರೇ ಹೆಣ್ಣಿನವರ ಮನೆಗೆ ಹೋಗಿ ಹೆಣ್ಣಿನ ಬಗ್ಗೆ ವಿಚಾರಿಸಿಕೊಂಡು ಹೋಗುತ್ತಿದ್ದರು. ಆಗ ಹೆಣ್ಣಿನವರು ನೋಡುತ್ತೇವೆ ಎಂದು ಹಾರಿಕೆಯ ಮಾತನಾಡುತ್ತಿದ್ದರು. ಹೀಗೆ ಎರಡು ಮೂರು ಸಾರಿ ಬಂದು ಹೋದ ಮೇಲೆ ಪರಸ್ಪರ ಒಪ್ಪಿಗೆಯಾದ ಮೇಲೆ ಮದುವೆ ನಿಶ್ಚಯವಾಗುತ್ತಿತ್ತು. ಈ ಸಂದರ್ಭವನ್ನು ಜನಪದ ಹಾಡೊಂದು ಕೆಳಗಿನಂತೆ ಚಿತ್ರಿಸುತ್ತದೆ.

> ಏಸಬ್ಯಾರೆ "ಹೊಚ್ಚಲಕ" ಎಡತಾಕಿ
> ಬಟ್ಟೆ ಚಂಬಳಗಿ ಸವದಾವ ಸೋಬಾನವೇ|
> ಬಟ್ಟೆನ ಚಂಬಳಗಿ ಸವದಾವ ಬೀಗತಿ
> ಚಿಂತಿಸಬ್ಯಾಡ ಕೊಡು ಮಗಳ ಸೋಬಾನವೆ||[೧]

ನಿಮ್ಮ ಹೊಸ್ತಿಲಿಗೆ ಹೆಣ್ಣು ಕೇಳಲು ಬಂದು ಬಂದು ತಮ್ಮ ಚಪ್ಪಲಿ ಸವೆದು ಹೋಗಿವೆ. ಈಗಲಾದರೂ ನಿಮ್ಮ ಮಗಳನ್ನು ಕೊಡಿರಿ ಚಿಂತಿಸಬೇಡಿರಿ. ನಾವು ಆಕೆಯನ್ನು ಸುಖದಿಂದ ನೋಡಿಕೊಳ್ಳುತ್ತೇವೆ ಎಂದು ಬೀಗತಿಯನ್ನು (ಬೀಗರನ್ನು) ಕೇಳಿಕೊಳ್ಳುವುದು ಈ ಪದ್ಯದ ಅರ್ಥವಾಗಿದೆ.

ಮದುವೆ ಆಮಂತ್ರಣ ಮತ್ತು ಹೊಸ್ತಿಲು

ಹೀಗೆ ಹೆಣ್ಣು ಗೊತ್ತಾದ ಬಳಿಕ ಮದುವೆಯ ಮುಂದಿನ ಕಾರ್ಯ ಆರಂಭಗೊಳ್ಳುತ್ತದೆ. ಮದುವೆಯೆಂದ ಮೇಲೆ ಬೀಗರು-ನೆಂಟರು, ಆಪ್ತರು ಎಲ್ಲರಿಗೂ ಆಮಂತ್ರಣ ಹೋಗಲೇ ಬೇಕಲ್ಲವೇ, ಮದುವೆಗೆ ಆಮಂತ್ರಣ ನೀಡುವಲ್ಲಿಯೂ ಜನಾಂಗಿಕವಾಗಿ, ವ್ಯತ್ಯಾಸವಿರುವುದು ಗಮನಾರ್ಹ ಸಂಗತಿ. ಪ್ರಧಾನ ಸಂಸ್ಕೃತಿಯೇ ಇರಲಿ, ಉಪ ಸಂಸ್ಕೃತಿಯೇ ಇರಲಿ, ಅಲ್ಲಿ ಇಂಥ ಸನ್ನಿವೇಶದಲ್ಲಿ ಹೊಸ್ತಿಲಿನ ಪಾತ್ರ ಮಹತ್ವದ್ದಾಗಿದೆ. ಸಾಮಾನ್ಯವಾಗಿ ಎಲ್ಲ ಸಂಸ್ಕೃತಿಯಲ್ಲಿಯೂ ಮದುವೆಗೆ ಆಮಂತ್ರಣ ನೀಡಲು ಮನೆಯ ಪ್ರಮುಖ ವ್ಯಕ್ತಿ ಮತ್ತು ಮುತ್ತೈದೆಯರು ಮನೆ-ಮನೆಗೆ ಹೋಗಿ ಮನೆಯ ಹೆಣ್ಣು ಮಕ್ಕಳಿಗೆ ಕುಂಕುಮ ಹಚ್ಚಿ ಮದುವೆಗೆ ಬನ್ನಿ ಎಂದು ಆಮಂತ್ರಿಸುವುದು ವಾಡಿಕೆ. ಒಂದು ಮನೆಯ ಹೆಣ್ಣುಮಕ್ಕಳಿಗೆ ಕುಂಕುಮ ಹಚ್ಚಿದಾಗ ಅವರು ಮೂವರಾದರೆ ನಾಲ್ಕೆಯ ವ್ಯಕ್ತಿಯನ್ನಾಗಿ ಪರಿಗಣಿಸಿ ಹೊಸ್ತಿಲಿಗೆ ಕುಂಕುಮ ಹಚ್ಚುತ್ತಾರೆ. ಕಾರಣ ಬೆಸ ಸಂಖ್ಯೆ ಅಪಶಕುನ. ಇವರ ಪ್ರಕಾರ ಹೊಸ್ತಿಲು ಲಕ್ಷ್ಮಿಯ ಸಂಕೇತ. ಬ್ರಾಹ್ಮಣ ಮತ್ತು ವಿಶ್ವಕರ್ಮ ಸಂಸ್ಕೃತಿಯಲ್ಲಿ ಹೊಸ್ತಿಲ ಮೇಲೆ ಅಕ್ಷತೆ ಕಾಳುಗಳನ್ನು ಹಾಕುವುದು ಕಾಣುತ್ತೇವೆ. ಇದಕ್ಕೆ "ಹೊಸ್ತಿಲು ಭಿನ್ನ" (ಭಿನ್ನಹ)ಎಂದು ಕರೆಯುತ್ತಾರೆ. ಅಂದರೆ ಸಹ ಕುಟುಂಬ ಪರಿವಾರದೊಡನೆ ಆಗಮಿಸಬೇಕೆಂದು ಅರ್ಥ. ಮುಧೋಳ ತಾಲ್ಲೂಕಿನ ಬದ್ನೂರು, ಬಂಟನೂರು, ಜುನ್ನೂರು ಗ್ರಾಮಗಳಲ್ಲಿ ಮದುವೆಗೆ ಅಥವಾ ಊಟಕ್ಕೆ ಹೇಳ ಹೋದಾಗ ಮನೆಯವರಿರದಿದ್ದರೆ ಊಟಕ್ಕೆ ಅಥವಾ ಮದುವೆಗೆ ಹೇಳಲು ಬಂದಿದ್ದೇವೆ ಎಂದು ತೋರಿಸಲು ಹೊಸ್ತಿಲ ಮೇಲೆ ಸಣ್ಣ-ಸಣ್ಣ ಕಲ್ಲುಗಳನ್ನಿಟ್ಟು ಬರುವ ಪದ್ಧತಿ ಇದೆ. ಇನ್ನೂ ಕೆಲವು ಕಡೆ ಬಳಪದಿಂದ ಬಾಗಿಲ ಮೇಲೆ ಬರೆದು ಬರುತ್ತಾರೆ. ಇದು ಹಳ್ಳಿಯಲ್ಲಿ ಇಂಥಹದಕ್ಕೆ ಕರೆದಿರುವರು ಎಂಬುದನ್ನು ಸಂವಹನಿಸುತ್ತದೆ.

ಮಲೆನಾಡ ಪ್ರದೇಶದ ಕೆಲವೊಂದು ಭಾಗಗಳಾದ ಸೋಮವಾರ ಪೇಟೆ, ಸಕಲೇಶಪೂರ, ಮೂಡಿಗೆರೆ, ಬೇಲೂರು ಚಿಕ್ಕ ಮಗಳೂರಿನಲ್ಲಿ ನೆಲೆಸಿರುವ ಶೈವ ಒಕ್ಕಲಿಗರಲ್ಲಿ ಮದುವೆಗೆ ಆಮಂತ್ರಣ ನೀಡುವ ಪದ್ಧತಿಯೂ ವಿಶಿಷ್ಟವಾಗಿದೆ. ಮದುವೆ ಮನೆಯ ಮಕ್ಕಳು ಒಂದು ಜೋಳಿಗೆಯಲ್ಲಿ ಎಲೆ-ಅಡಿಕೆ, ಅಕ್ಷತೆಕಾಳುಗಳು, ಲಗ್ನ-ಪತ್ರಿಕೆಯೊಂದಿಗೆ ಮನೆ-ಮನೆಗೆ ಹೋಗಿ ಅವರ ಹೊಸ್ತಿಲಿಗೆ ಕುಂಕುಮ ಹಚ್ಚಿ ಎರಡು ಎಲೆ, ಎರಡು ಅಡಿಕೆ ಇಟ್ಟು ಮದುವೆಗೆ ಆಮಂತ್ರಿಸುತ್ತಾರೆ'[೨] ಇನ್ನು ಉಪಸಂಸ್ಕೃತಿಯಾದ ಲಂಬಾಣಿ ಜನಾಂಗದವರು ಮದುವೆಗೆ ಆಮಂತ್ರಿಸುವ ಬಗೆ ವಿಶೇಷವಾಗಿದೆ. ಅವರಲ್ಲಿ ಮದುವೆಗೆ ಆಮಂತ್ರಣ ನೀಡುವಾಗ ಪ್ರತಿ ಮನೆಯ ಹೊಸ್ತಿಲ ಮೇಲೆ ತಂಬಾಕು ಇಟ್ಟು ಬರುತ್ತಾರೆ.

ಈ ಎಲ್ಲಾ ವಿಷಯಗಳನ್ನು ಗಮನಿಸಿದಾಗ ಆಮಂತ್ರಿಸುವ ವಿಧಾನದಲ್ಲಿ ಪ್ರಮುಖ ಪಾತ್ರ ಹೊಸ್ತಿಲಿನದ್ದೇ ಎಂಬುದು ಸ್ಪಷ್ಟವಾಗುತ್ತದೆ. ಆದೇ ರೀತಿ ಪ್ರಾದೇಶಿಕವಾದ ಆಚರಣಾತ್ಮಕ ಭಿನ್ನತೆ ಎದ್ದು ತೋರುತ್ತದೆ. ಕೆಲವೊಂದು ಸಂಸ್ಕೃತಿಯಲ್ಲಿ ಕುಂಕುಮ, ಅಕ್ಷತೆಕಾಳು, ಎಲೆ-ಅಡಿಕೆ ಪೂಜ್ಯನೀಯ ಸ್ಥಾನ ಪಡೆದುಕೊಂಡರೆ, ಲಂಬಾಣಿಗಳಲ್ಲಿ ಪ್ರತಿಯೊಂದು ಶುಭಕಾರ್ಯಗಳು ಪ್ರಾರಂಭವಾಗುವುದು ಸರಾಯಿ, ತಂಬಾಕುಗಳಿಂದ, ಅಂದರೆ ನಿಶೆ(ಮಾದಕ) ಬರುವಂತಹ ಪದಾರ್ಥಗಳಿಂದ ಇವರು ಇದರಲ್ಲಿಯೇ ಸಂತೋಷ ಹೊಂದುವರು. ಆದ್ದರಿಂದ ಬಹುಶಃ ಈ ಪದ್ಧತಿ ಜಾರಿಯಲ್ಲಿ ಬಂದಿರಬೇಕು. ಆಚರಣೆ ಏನೇ ಆದರೂ ಆಶಯ ಮಾತ್ರ ಒಂದೇ. ಮದುವೆಗೆ ಆಮಂತ್ರಣ ನೀಡುವುದು.

ಈ ರೀತಿ ಮದುವೆಯ ಸಡಗರದಲ್ಲಿ ಕೇವಲ ಜನರಷ್ಟೇ ಅಲ್ಲದೇ, ಬಾಗಿಲು, ಹೊಸ್ತಿಲು, ಸುಣ್ಣ-ಬಣ್ಣ, ತಳಿರು-ತೋರಣಗಳಿಂದ ಕಂಗೊಳಿಸುತ್ತಿರುತ್ತವೆ. ನೋಡಿದೊಡ್ಡನೆಯೇ ಮದುವೆಯ ಮನೆ ಎಂದು ಸಾರಿ ಹೇಳುವಂತಿರುತ್ತವೆ. ಮದುವೆ ಎನ್ನುವುದು ಮನೆಯವರಿಗೆಲ್ಲ ಒಂದು ಹಬ್ಬ. ಏನೆಲ್ಲ ಸಿದ್ಧತೆಗಳು ಈ ಸಂದರ್ಭದಲ್ಲಿ ಕಾಣಿಸಿಕೊಳ್ಳುತ್ತವೆ. ವಸ್ತ್ರ-ಒಡವೆಗಳು, ಮನೆಯ ಶೃಂಗಾರ ಅದರಲ್ಲೂ ವಿಶೇಷವಾಗಿ ಮನೆಯ ಮುಖ್ಯವಾಗಿರುವ ಹೊಸ್ತಿಲಿನ ಅಲಂಕಾರ ಯಾವುದೇ ಒಂದು ಸಂಭ್ರಮದಲ್ಲಿ ಎದ್ದು ಕಾಣುತ್ತದೆ. ಈ ಕೆಳಗಿನ ಪದ್ಯವೊಂದು ಮದುವೆ ಪ್ರಸಂಗದ ಸಂಭ್ರಮವನ್ನು ಹೇಳುವಂತಿದೆ.

'ಹೊಚ್ಚಲ' ಸಾರಿಸಿ ಹೊಸ ಮುತ್ತನೇರಿಸಿ
ನಾಳೇನ ಇವರ ಮನಿಯಾಗ ಸೋ|
ನಾಳೇನ ಇವರ ಮನಿಯಾಗ ಈ ಮನೆಯ
ಪುತ್ರಿಯ ಮದುವೆ ಸಡಗರ ಸೋ||[೩]

ಈ ಪದ್ಯದಲ್ಲಿನ 'ಸಾರಿಸಿ' ಎನ್ನುವ ಶಬ್ದ ಹೊಸ್ತಿಲು ಒಳಗೊಂಡಂತೆ ಇಡೀ ಮನೆಯ ಸಾರಣೆ ಮತ್ತ ಕಾರಣೆ(ಅಂದರೆ ಸುಣ್ಣ-ಬಣ್ಣಗಳಿಂದ ಮನೆಯನ್ನು ಸಿಂಗರಿಸುವುದು)ಯನ್ನು ಹೇಳುತ್ತದೆ. ಹೊಸ್ತಿಲು ಸಾರಿಸು ಎಂದರೆ ನೀರಿನಿಂದ ತೊಳೆದು ಶುದ್ಧೀಕರಿಸುವುದು. ಹೊಸ್ತಿಲ ಮೇಲೆ ಮತ್ತು ಮುಂದೆ ಬಗೆ-ಬಗೆಯ ಆಕರ್ಷಕ ರಂಗೋಲಿಯನ್ನು ಹಾಕುವುದು ಕೂಡ ಮದುವೆ ಸಂಭ್ರಮದಲ್ಲಿ ಎದ್ದು ಕಾಣುವ ಅಂಶವಾಗಿದೆ. ಈ ಎಲ್ಲಾ ಸಿದ್ಧತೆಯೊಂದಿಗೆ ಮೊದಲುಗೊಂಡು ಅನೇಕ ವಿಧಿ-ವಿಧಾನಗಳಿಂದ ಮದುವೆ ಮುಗಿದ ನಂತರ ಹೆಣ್ಣಿನ ಮನೆಯವರು ತಮ್ಮ ಮಗಳನ್ನು ಗಂಡಿನವರಿಗೆ ಒಪ್ಪಿಸುವಾಗ ಹುಟ್ಟಿದ ಮನೆಯನ್ನು ಬಿಟ್ಟು ವಧು ಕೊಟ್ಟ ಮನೆಯನ್ನು ಸೇರಲು ಹೋಗುವಾಗಿನ ದುಃಖ, ಆತಂಕಗಳ ಹಾಡುಗಳಲ್ಲಿ ಹೊಸ್ತಿಲಿನ ಉಲ್ಲೇಖಗಳನ್ನು ಕಾಣುತ್ತೇವೆ.

''ಹೊಸ್ತಿಲೊಳಗೆ'' ಹಣೆಯಿಟ್ಟಳಾಗ | ವಧು
ತವರನ್ನು ನೆನೆನೆನೆದತ್ತಳಾಗ

ಅತ್ತಳಾಗ| ಬೇಸತ್ತಳಾಗ| ಕೊನೆಗೆ

ಕೊಟ್ಟ ಮನೆಗೆ ಪಣ ತೊಟ್ಟಳಾಗ[೪]

ಇಲ್ಲಿ ಹೊಸ್ತಿಲಿಗೆ ಹಣೆಯಿಡುವಲ್ಲಿ ಆಕೆಯ ಕೃತಜ್ಞತಾ ಭಾವವಿದೆ. ತನ್ನನ್ನು ಜೋಪಾನ ಮಾಡಿ ಸಾಕಿ-ಸಲುಹಿದ ಮನೆಯವರನ್ನು, ತಂದೆ-ತಾಯಿಯರನ್ನು ಒಡಹುಟ್ಟಿದವರನ್ನು ಬಿಟ್ಟು ಹೋಗುವಾಗ ಅವಳಿಗೆ ದುಃಖ ಉಕ್ಕಿ ಬಂದರೂ ಬಿಡಬೇಕಾದ ಅನಿವಾರ್ಯತೆಯನ್ನು ಬಲ್ಲವಳು ಕೊಟ್ಟ ಮನೆಯೇ ತನ್ನ ಮನೆ ಎಂಬುದನ್ನು ನೆನೆದು ಅಲ್ಲಿ ತಾನು ಬಾಳಬೇಕಾದ ಹೊಸ ಹೊಣೆಗಾರಿಕೆಗೆ ತನ್ನನ್ನು ಒಡ್ಡಿಕೊಳ್ಳ ಬೇಕಾದ ಸವಾಲುಗಳಿಗೂ ಧೈರ್ಯ ತಂದುಕೊಳ್ಳುತ್ತಿರುವುದನ್ನು ಇಲ್ಲಿ ನೋಡಬಹುದಾಗಿದೆ. ಈ ತವರಿನ ಹೊಸ್ತಿಲು ಹೆಣ್ಣಿಗೆ ಬಂಧನ-ಕಂಠಕವಾಗಿರದೆ ಬಿಟ್ಟು ಹೋಗುವಲ್ಲಿನ ಕಳಕಳಿಯಿದೆ. ಮಧುರ ಸಂಬಂಧಗಳ ನೆನಪನ್ನು ಮರುಕಳಿಸುವುದಾಗಿದೆ. ತನ್ನನ್ನು ಪ್ರೀತಿಯಿಂದ ಬೆಳೆಸಿದ್ದು, ಉಲ್ಲಾಸ ಸ್ನೇಹ-ಸಂತೋಷಗಳನ್ನು ನೀಡಿದ್ದು. ಸೋದರ-ಸೋದರಿಯರ, ಗೆಳತಿಯರ ಸಖ್ಯ, ತಂದೆ-ತಾಯಿಯರ ಪ್ರೀತಿಯ ಮಡಿಲು ತನ್ನನ್ನು ಕೋಮಲವಾಗಿ ಬೆಳೆಸಿರುವುದನ್ನು ಆಕೆ ಬಲ್ಲಳು. ಪುಟ್ಟ ಮಗುವಾಗಿರುವಾಗ ಹೊಸ್ತಿಲು ದಾಟಿದ್ದನ್ನೇ ಸಂಭ್ರಮಿಸಿದ ಅಪ್ಪ ಅಮ್ಮಂದಿರನ್ನು ತಿಳಿದವಳು, ಕೂಸು ಇದ್ದ ಮನೆಗೆ ಬೀಸಣಿಕೆ ಯಾತಕ ಕೂಸು ಕಂದಮ್ಮ ಒಳ ಹೊರಗ, ಕೂಸು ಕಂದಮ್ಮ ಒಳ ಹೊರಗ ಆಡಿದರ ತಿರುಗಿದರ ಬೀಸಣಿಕೆ ಗಾಳಿ ಸುಳಿದಾವ. ಮಕ್ಕಳು ಒಳಗಿನಿಂದ ಹೊರಗೆ ಹೊರಗಿನಿಂದ ಒಳಗೆ ತಿರುಗಾಡಿದರೆ ತಂಪಾದ ಗಾಳಿ ಬೀಸಿ ಮನೆಯಲ್ಲಿ ತಂಪು ವಾತಾವರಣವನ್ನು ಸೃಷ್ಟಿಸುತ್ತವೆ. ಆದರೆ ಇಂದು ಆ ಹೊಸ್ತಿಲನ್ನೇ ದಾಟಿ ಹೊರಗೆ ಹೋಗಬೇಕಾದ ಅನಿವಾರ್ಯತೆ ಹೆಣ್ಣಿಗೆ ಬಂದಿದೆ. ಬಾಲ್ಯದ ಮಧುರ ನೆನಪೊಂದು ಕಡೆ ಭವಿಷ್ಯದಲ್ಲಿನ ಜವಾಬ್ದಾರಿ ಮತ್ತೊಂದೆಡೆ. ಪತಿಗೆ ಪತ್ನಿಯಾಗಿ ಪತಿಗೃಹಕ್ಕೆ ಬಂದು ನಿಲ್ಲುತ್ತಾಳೆ. ಹೀಗೆ ಈಕೆ ಗಂಡನ ಮನೆಯ ಹೊಸ್ತಿಲಿಗೆ ಬರುತ್ತಲೆ ಅಲ್ಲಿ ಹಾಕಿದ ಹಸೆ, ತುಂಬಿ ಇಟ್ಟ ದೀವಿಗೆ, ನೆರಳು ಮಾಡಲು ಕೊಡೆ ಹಿಡಿದು ನಿಂತ ಸಂಬಂಧಗಳು ಈ ಸಂದರ್ಭದಲ್ಲಿ ಮಾಡುವ ಹೊಸ್ತಿಲು ಪೂಜೆಗೆ ವಿಶೇಷ ಮಹತ್ವವಿದೆ. ಇವೆಲ್ಲ ಅವಳನ್ನು ಮನೆ 'ತುಂಬಿಸಿ' ಕೊಳ್ಳುವ ಹಿನ್ನೆಲೆಯಲ್ಲಿ ನಡೆಯುತ್ತವೆ.

"ಹೊಸ್ತಿಲಿಗೆ" ಹಸೆ ಬಂದ ಸುತ್ತೆ ದೀವಿಗೆ ಬಂದ

ಶುಕ್ರಮರು ಹಿಡಿದ ಕೊಡೆ ಬಂದ - ಓಪಾಸನದ

ಪೆಟ್ಟಿಗೆ ಬಂದ-ಬಳಿವಾರಿ.[೫]

ಈ ರೀತಿಯಾಗಿ ಬಂದವರನ್ನು ಹಾಗೇಯೇ ಒಳಗೆ ಕರೆದುಕೊಳ್ಳುವುದಿಲ್ಲ. ಅವರ ಸ್ವಾಗತಕ್ಕೆ ಹೊಸಬಾಳಿನ ನಾಂದಿಗೆ ಹೊಸ್ತಿಲು ಸಿಂಗರಿಸಿ, ದೀಪಗಳನ್ನು ಹಚ್ಚಿ ಸೇರಿನಲ್ಲಿ ಮುತ್ತನ್ನು (ಅಕ್ಕಿಯನ್ನು) ತುಂಬಿಟ್ಟು ಸಜ್ಜುಗೊಳಿಸುತ್ತಾರೆ.

"ಹೊಸ್ತಿಲಿಗೆ" ದೀವಿಗೆಯ ಹಚ್ಚಿರಿಸಿ ಅತ್ತಮ್ಮ
ಮುತ್ತ ತುಂಬಿರಿಸಿ ತಳಿಗೇಲಿ-ನಿನ್ನ ಕುವರ
ಮಿತ್ರೆಯೊಡಗೊಂಡು ಬರುತಾನೆ.[೬]

ಈ ಹಾಡು ವರ-ವಧುವನ್ನು ಕರೆದುಕೊಂಡು ತನ್ನ ಸ್ವಗೃಹಕ್ಕೆ ಬರುವ ಸಂದರ್ಭದಲ್ಲಿ ಹಾಡುವುದಾಗಿದೆ.

ಸಂಬಂಧಗಳ ಅಭಿವೃದ್ಧಿ ಮತ್ತು ಹಕ್ಕಿನ ಪ್ರಶ್ನೆ

ವಧು-ವರರು ಗೃಹಿಣಿ ಗೃಹಸ್ಥರಾಗಿ ಪ್ರಥಮ ಬಾರಿಗೆ ತಮ್ಮ ಗೃಹವನ್ನು ಪ್ರವೇಶ ಮಾಡುವ ಶುಭ ಘಳಿಗೆ ಗೃಹಿಣಿ ಗೃಹದ ಜವಾಬ್ದಾರಿಯೊಂದಿಗೆ ತನ್ನ ಹಕ್ಕನ್ನು ಭದ್ರಪಡಿಸುವುದು. ಈ ಗೃಹ ಪ್ರವೇಶದ ಆಚರಣೆಯೊಂದಿಗೆ, ಗೃಹಿಣಿಯಾದ ವಧುವನ್ನು ಗೃಹ ತುಂಬಿಸಿಕೊಳ್ಳುವುದು ಅತ್ಯಂತ ಸಡಗರ-ಸಂಭ್ರಮದ ಆಚರಣೆಯಾಗಿದೆ. ಈ ಸಮಯದಲ್ಲಿ ಗಂಡನ ಸಹೋದರಿಯರು ಬಾಗಿಲು ತಡೆಯುತ್ತಾರೆ. ವರನ ಸಹೋದರಿಯರು ಕೇಳಿದ ವಸ್ತು ಕೊಡುತ್ತೇನೆ ಎಂದು ಆಶ್ವಾಸನೆ ಕೊಟ್ಟ ಮೇಲೆ ಬಾಗಿಲು ಬಿಡುತ್ತಾರೆ. ಈ ಸಂದರ್ಭದಲ್ಲಿನ ಕೆಲವು ಹಾಡುಗಳು ಕೆಳಗಿನಂತಿವೆ

ನಾನು ನನ್ನ ಸತಿಯೊಡನೆ ಬಂದಿದ್ದೇನೆ ಆದ್ದರಿಂದ
ತಡೆವ ಬಾಗಿಲು ಬುಡಿ ನಮಗೆ
ತಡೆವೆ ಬಾಗಿಲು ಬಿಡುವುದು ತರವೇನೊ ತಮ್ಮಯ್ಯ
ನೀ ಕೊಡೋ ಚಾಜರಸ ಹೇಳಿ.[೭]

ಎಂದು ಸಹೋದರಿಯರಿಗೆ ತನ್ನ ತಮ್ಮನಿಗೆ ಕೇಳಿದಾಗ ತಮ್ಮ ಬಂಗಾರದ ಒಡವೆ, ರೇಷ್ಮೆ ಸೀರೆಯಲ್ಲವನ್ನು ಕೊಡುತ್ತೇನೆ. ಬಾಗಿಲ ತೆಗಿ ಎಂದು ಆಸೆ ಹಚ್ಚುತ್ತಾನೆ. ಆಗ ಸಹೋದರಿಯರು ನಮ್ಮ ಹತ್ತಿರ ಬಂಗಾರದ ಒಡವೆ ಸೀರೆ ಇದೆ ಎಂದು ನಿರಾಕರಿಸುತ್ತಾಳೆ. ಆಗ ತಮ್ಮ

ಕರೆಯೋ ಎಮ್ಮೆದನ ಕೊಡುವೆ ವರಲಮ್ಮಕ್ಸರನ ಕೊಡುವೆ
ಕರತೇರು ಸೀಸದ ಅರಮನೆ ಕೊಡುವೆ ತಡೆದ
ಬಾಗಿಲ ಬಿಡು ನಮಗೆ[೮]

ಎಂದು ಅಕ್ಕನನ್ನು ಕೇಳಿಕೊಳ್ಳುತ್ತಾನೆ. ಅಕ್ಕ ಮತ್ತೆ ಬಾಗಿಲ ಬಿಡುವುದಿಲ್ಲ. ನಂತರ ತಮ್ಮ ಹೇಳುತ್ತಾನೆ. ಕೊಡು ಕೊಡೆಂದರೆ ನಾನೇನು ಕೊಡಲಿ. ಒಡದ್ದೇಳಿರಕ್ಕ ದೃಢದಿಂದ ಎಂದು ಹೇಳುತ್ತಾನೆ. ಆವಾಗ ಅಕ್ಕ ಮುಂದೆ ಹುಟ್ಟಿದ ಮಗಳ ನಮಗೆ ಕೊಡುವೆನೆಂದು ಹೇಳಿನ್ನು.

ನಿಂದಿರ ಸಭೆಗಳಿರಾ ನೀವೆಲ್ಲಾ ಕೇಳಿರಿ ತಮ್ಮದೇವನ ಮಾತು
ಮುಂದಾವರಿ ಮಾತನ್ನು ಮರೆತಿರಿ[೯]

ಎಂದು ಬಾಗಿಲನ್ನು ಬಿಡುತ್ತಾಳೆ. ಇಲ್ಲಿ ಹೆಣ್ಣು ತನ್ನ ಕರುಳ ಬಳ್ಳಿಯ ಸಂಬಂಧವನ್ನು, ತೌರಿನ ಸಂಬಂಧವನ್ನು ತನ್ನ ಹಾಗೂ ತಮ್ಮನ ಸಂತಾನದ ಮೂಲಕ ಭದ್ರವಾಗಿ ಬೆಸೆಯುವ ಕ್ರಿಯೆಯನ್ನು ಕಾಣುತ್ತೇವೆ. ವಂಶಪಾರಂಪರ್ಯದ ಮುಂದುವರಿಕೆ ರಕ್ತ ಸಂಬಂಧದ ಹರಿಗಡಿಯವ ಹಂಬಲ ಮತ್ತು ಅವಿಭಕ್ತ ಕುಟುಂಬದ ಸುಳಿವು ಇಲ್ಲಿ ಕಾಣಸಿಗುತ್ತದೆ. ಅಕ್ಕ-ತಮ್ಮರ ನಡುವೆ ವಾದ-ವಿವಾದನಂತರ ಮತ್ತೊಂದು ಮಹತ್ವಪೂರ್ಣ ಆಚರಣೆಯನ್ನು ಮಾಡುತ್ತಾರೆ. ವಧು-ವರರನ್ನು ಹೊಸ್ತಿಲ ಬಳಿ ನಿಲ್ಲಿಸಿ ಮುತ್ತೈದೆಯರು ಆರತಿ ಬೆಳಗಿ ಹೆಸರು ಕೇಳುತ್ತಾರೆ. ನಂತರ ಅಕ್ಕಿ ತುಂಬಿದ ಸೇರನ್ನು ಹೊಸ್ತಿಲ ಮೇಲಿಟ್ಟು (ಕೆಲವೊಂದು ಕಡೆಗಳಲ್ಲಿ ತಾಮ್ರದ ತಂಬಿಗೆಯಲ್ಲಿ ಅಕ್ಕಿ ತುಂಬಿಡುತ್ತಾರೆ. ಇನ್ನೂ ಕೆಲವು ಕಡೆಗಳಲ್ಲಿ ಸೇರಿನಲ್ಲಿ ಅಕ್ಕಿ ಜೊತೆಗೆ ಬೆಲ್ಲದ ಚೂರು, ನಾಣ್ಯ ಹಾಕಿ ಇಡುತ್ತಾರೆ. ಇದು ಜನಾಂಗಿಕವಾಗಿ, ಪ್ರಾದೇಶಿಕವಾಗಿ ಭಿನ್ನ ರೀತಿಯಲ್ಲಿ ಕಂಡುಬರುತ್ತದೆ) ಆ ಸೇರನ್ನು ವಧು ತನ್ನ ಬಲಗಾಲಿನಿಂದ ಒದ್ದು ಒಳಗೆ ಬರಬೇಕು. ಈ ಸಂದರ್ಭಕ್ಕೆ ವಿಶೇಷ ಅರ್ಥ ಕೊಡುವ ಕೆಲವು ಹಾಡುಗಳು ಈ ಕೆಳಗಿನಂತಿವೆ.


ಆಕಳಂತಾ ಅತ್ತಿ ಗೋಕುಲಂತಾ ಮಾವ|
ಶ್ರೀ ಕೃಷ್ಣನಂಥ ಪತಿರಾಯ| ನಿದ್ದರ
ಸಾಕೀದ ತವರ ಮರತೇನ

ಸಾಮಾನ್ಯವಾಗಿ ಅತ್ತೆಯ ಮನೆಯಲ್ಲಿ ಕಷ್ಟ-ಕಿರುಕುಳವನ್ನು ಅನುಭವಿಸುವ ಸೊಸೆ, ಕೆಲವು ಸಲ ಅಪವಾದವೆಂಬಂತೆ ಸೊಸೆಯಾಗಿ ನಡೆಸಿಕೊಳ್ಳುವುದು ಅಲ್ಲ, ಮಗಳಾಗಿ ನೋಡಿಕೊಳ್ಳುವ ವಾತ್ಸಲ್ಯದ ಪರಿಸರವನ್ನು ಅವಳು ಕಾಣುತ್ತಾಳೆ. ಅಂಥ ಸಂದರ್ಭದಲ್ಲಿ ಈ ಮೇಲಿನ ತ್ರಿಪದಿ ಹುಟ್ಟಿಕೊಂಡಿದೆ. ಇಂತಹ ನಂದಗೋಕುಲದಂತಹ ಮನೆಗೆ ಮೊದಲ ಸಲ ಹೆಜ್ಜೆಯಿಡುವ ಸಂದರ್ಭದಲ್ಲಿ ಅತ್ತೆಯು ಸೊಸೆಯ ಕಾಲು ನೊಂದಾವೆಂದು, ಕಾಳಜಿ ಮಾಡುವ ರೇಷ್ಮೆ ವಸ್ತ್ರದ ಮೇಲೆ ಅವಳನ್ನು ಬರಮಾಡಿಕೊಳ್ಳುವುದು ಈ ಮುಂದಿನ ಪದ್ಯ ನೋಡುವಂತಿದೆ.

ಮಿತ್ರೆ ತನ್ನ ಸೊಸೆಗೆ ಬೆಟ್ಟುನೊಂದಾವೆಂದು
ಪಟ್ಟೆ ಹಾಸಿದಳೆ ನಡೆ ಮುಂದೆ ಅದರ ನಡುಗೆ
ಮುತ್ತ ತುಂಬಿದಳೆ ಚೌಕದಿ
ಮುತ್ತಿನ ಸಿದ್ದೆಗೆ ರತ್ನ ಹಳದಿ ತುಂಬಿ
ಮಿತ್ರೆ ತಂಗವ್ವ ಎಡವುತ್ತ ಬಾರೆಂದು
ಅತ್ತೆ ಕೌಸಲ್ಯೆ ನುಡಿದಳು
ಪುಟ್ಟ ಚಿನ್ನದ ರಾಣಿ ಮುತ್ತಿನ ಸಿದ್ದೆಯನೆಡಲು
ಅರ್ಥಿಯಲಿ ತನ್ನ ಬಲಗಾಲಲೊಡೆಯುತ್ತ

ಅಚ್ಯುತನ ಒಳಗೆ ನಡೆದಳು.[೧೦]

ಇಲ್ಲಿ ಸೊಸೆ ಸಿದ್ದೆ(ಸೇರು) ಒದೆಯುವುದು ಸುಂದರವಾಗಿ ವ್ಯಕ್ತವಾಗಿದೆ.



ನವವಧು ಹೊಸ್ತಿಲ ಮೇಲ್ಲಿರುವ ಸೇರನ್ನು ಒದೆಯುವುದು

ಹೀಗೆ ವಧು ತನ್ನ ಬಲಗಾಲಿನಿಂದ ಸೇರನ್ನು ಒದ್ದು ಒಳ ಪ್ರವೇಶಿಸುವಾಗ ಅವಳ ಬಲ ಪಾದವನ್ನು ಹೊಸ್ತಿಲ ಮೇಲೆ ಇಡುವಳು. ನಂತರ ಅವಳ ಹೆಬ್ಬೆರಳಿನ ಮಧ್ಯ ಒಂದು ಮೊಳೆಯನ್ನು ಇಟ್ಟು ಹೊಸ್ತಿಲಿಗೆ ಹೊಡೆಯುತ್ತಾರೆ. ಕೆಲವೊಂದು ಜನಾಂಗದವರು ನಾಣ್ಯದ ಜೊತೆಗೆ ಮೊಳೆಯನ್ನು ಹೊಡೆಯುತ್ತಾರೆ. ಹೊಸ್ತಿಲಿಗೆ ಎಷ್ಟು ಮೊಳೆಗಳಿವೆಯೋ ಅಷ್ಟು ಜನ ಸೊಸೆಯಂದಿರು ಆ ಮನೆಗೆ ಪ್ರವೇಶ ಮಾಡಿದ್ದಾರೆ ಎನ್ನುವ ಗುರುತಿನ ಸಂಕೇತವೂ ಇದು ಆಗಿದೆ. ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಎತ್ತಿ ಹಿಡಿವ ಈ ಮೊಳೆ ಹೊಡೆಯುವ ಸಂಪ್ರದಾಯ ಹೆಣ್ಣನ್ನು ಹೊಸ್ತಿಲಿನ ಒಳಗೆ ಬಂಧಿಸುವುದಾಗಿದೆ. ಪಾದಕ್ಕೆ ಹೊಸ್ತಿಲಿಗೆ ಸೇರಿಸಿ ಮೊಳೆಯನ್ನು ಹೊಡೆದು ಅಪ್ಪಣೆಯಿಲ್ಲದೆ ಆಕೆ ಮನೆಯಿಂದ ಹೊರಗೆ ಹೋಗಲು ಸಾಧ್ಯವೇ ಇಲ್ಲದ ಒಂದು ಸಂದರ್ಭದ ಸೃಷ್ಟಿಯು ಆಗಿದೆ. ಹಳ್ಳಿಯಲ್ಲಿ ಪ್ರಚಲಿತವಿರುವ ಒಂದು ಮಾತು "ಹೆಜ್ಜಾಗ ಗೂಟಾ ಬಡಿಲಿ" ಎಂಬುದು. ಅಂದರೆ ಇದು ಒಂದು ತಂತ್ರ ವಿದ್ಯೆಯೂ ಹೌದು. ಹಿಂದೆ ಮಾಟಮಂತ್ರ ಮಾಡುವವರು ವ್ಯಕ್ತಿಯೊಬ್ಬನ ನಾಶಕ್ಕಾಗಿ ಅವರ ನೆರಳಿಗೆ ಅಥವಾ ಹೆಜ್ಜೆಯ ಗುರುತಿಗೆ ಈ ಮೊಳೆ ಹೊಡೆಯುವುದು ಮತ್ತು ಹೆಜ್ಜೆಯ ಮಣ್ಣು ತಂದು ಅದಕ್ಕೆ ಮಾಟ ಮಾಡುವುದನ್ನು ಮಾಡುತ್ತಿದ್ದರು. ಹಾಗೆಯೇ ಪ್ರಾಣಿ ಬೇಟೆಯ ಸಂದರ್ಭದಲ್ಲಿ ಬೇಟೆಯನ್ನು ಕೈವಶ ಮಾಡಿಕೊಳ್ಳಲು ಈ ವಿದ್ಯೆಯನ್ನು ಉಪಯೋಗಿಸುತ್ತಿದ್ದರು. ಹೆಣ್ಣು ಪುರುಷನ ಆಧೀನವಾಗಿ ಬರುವ ಮದುವೆಯಂಥ ಸಂದರ್ಭಗಳಲೂ ಕೂಡ ಹೆಣ್ಣಿನ ಕಾಲಿಗೆ ಸಂಬಂಧಗಳ ಸಂಕೋಲೆಯನ್ನು ಬಿಗಿವ ತಂತ್ರವನ್ನಾಗಿ ಈ ಮೊಳೆ ಹೊಡೆಯುವ ತಂತ್ರವನ್ನು ಸಮಾಜ ಒಪ್ಪಿಕೊಂಡಿದೆ ಎನಿಸುತ್ತದೆ. ಬಹುಮುಖ್ಯವಾಗಿ ಮದುವೆಯ ಮೂಲಕ ಹೆಣ್ಣಿನ ಲೈಂಗಿಕ ಹಕ್ಕನ್ನು ತನ್ನದನ್ನಾಗಿಸಿಕೊಳ್ಳುವ ಅದರ ಮೇಲೆ ಪ್ರಭುತ್ವ ಸಾಧಿಸುವ ಗಂಡು 'ಶೀಲ, ಚಾರಿತ್ರ್ಯದ ಹೆಸರಿನಲ್ಲಿ ಅವಳನ್ನು ತನ್ನ ಸ್ವಾಧೀನ ಎಂಬಂತೆ ಬಳಸುವುದೇ ಹೆಚ್ಚು.

ಭಾರತದಂತಹ ಸಾಂಪ್ರದಾಯಿಕ ಸಮಾಜಗಳಲ್ಲಿ ಮದುವೆಗೆ ವಿಶೇಷಾರ್ಥವಿದ್ದಂತೆ ಸ್ತ್ರೀ ವಿಷಯದಲ್ಲಿ ಹಲವು ನಿಷೇಧತೆಗಳು ಇರುವುದನ್ನು ಕಾಣಬಹುದು.

ಮದುವೆಯ ಶುಭ ಸಂದರ್ಭದಲ್ಲಿ ಹೊಸ್ತಿಲಿಗೆ ಮೊಳೆ ಹೊಡೆಯುವುದು ಅವಳು ಈ ಮನೆಯಲ್ಲಿ ಶಾಶ್ವತವಾಗಿ ನಿಲ್ಲಲಿ ಎಂಬ ಉದ್ದೇಶ ವರನ ಮನೆಯವರಿಗಿದ್ದರೆ, ವಧುವಾದ ಇವಳಿಗೆ ಈ ಮೊಳೆ ಹೊಡೆಯುವುದು ಹಕ್ಕಿನ ಸೂಚಕವಾಗಿ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಅಂತೆಯೇ ಇವಳ ಅಸ್ತಿತ್ವವನ್ನು ಅಲ್ಲಾಡಿಸುವ ಪ್ರಸಂಗ ಬಂದಾಗಲೆಲ್ಲ "ನಾ ಬಗಲಾಗ ಸಿರಿಗಂಟಕಟಗೊಂಡು ಬಂದಿಲ್ಲ. ಹೊಸ್ತಿಲಿಗೆ ಮಳಿ ಬಡದ ಬಂದಿನಿ" ಎಂದು ಗಟ್ಟಿಯಾಗಿ ನುಡಿಯುವ ಸಂದರ್ಭಗಳೂ ಇಲ್ಲದಿಲ್ಲ. ಇದು ಇವಳು ಈ ಮನೆಯ ಮೇಲೆ ಹೊಂದುವ ಹಕ್ಕನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಇಂಥ ನೆಲೆಗಳಲ್ಲಿ ಹೊಸ್ತಿಲ ಪ್ರವೇಶ ಹೆಣ್ಣಿನ ಹಕ್ಕಿನ ಪ್ರಶ್ನೆಯಾಗಿ ಹಕ್ಕು ಸ್ಥಾಪನೆಯ ನೆಲೆಗಟ್ಟಾಗಿ ಕಾಣುತ್ತದೆ.

ಅಕ್ಕಿ ತುಂಬಿದ ಸೇರನ್ನು ಒದೆಸುವುದು ಸೊಸೆ ಕಾಲ್ಗುಣದಿಂದ ಮನೆಯಲ್ಲಿ ಧಾನ್ಯಲಕ್ಷ್ಮಿ ನಲಿದಾಡಲಿ ಎಂದು ಸುಖ-ಸಮೃದ್ಧಿ ಬರಲೆನ್ನುವ ಹಿನ್ನೆಲೆಯಲ್ಲಿ ಈ ಆಚರಣೆ ಹುಟ್ಟಿಕೊಂಡಿದೆ. ಕೃಷಿ ಪ್ರಧಾನವಾದ ಕುಟುಂಬಗಳಲ್ಲಿ ನವ ವಧು ಗೃಹ ಪ್ರವೇಶ ಮಾಡುವಾಗ ಕೈಯಲ್ಲಿ ಸೆಡ್ಡಿ ಬಟ್ಟಲು(ಕೃಷಿಯ ಉಪಕರಣಗಳನ್ನು) ಕೊಡುತ್ತಾರೆ. ಇದು ಕೂಡ ಸಮೃದ್ಧಿಯನ್ನೇ ಸೂಚಿಸುತ್ತದೆ. ಫಲವಂತಿಕೆಯ ಪ್ರತೀಕವಾದ ಹೆಣ್ಣು ನಗುನಗುತ್ತಾ ಮನೆ ಪ್ರವೇಶ ಮಾಡಿದರೆ, ಬೆಳೆ ಸಮೃದ್ಧಿಯಿಂದ ಬರುತ್ತದೆ ಎಂದಿರಬೇಕು. ಸಂತಾನದ ಅಭಿವೃದ್ಧಿಯ ಆಶಯವು ಇದರಲ್ಲಿ ಕಾಣಲು ಸಾಧ್ಯ. ಬ್ರಾಹ್ಮಣ ಸಂಸ್ಕೃತಿಯಲ್ಲಿಯ ಹಲವಾರು ಉಪಪಂಗಡಗಳಿದ್ದು ಅವುಗಳಲ್ಲಿ ಕೆಲವೊಂದು ಪಂಗಡದವರು ಹೊಸ್ತಿಲಿಗೆ ಮೊಳೆ ಹೊಡೆಯುವುದು ಸಂಪ್ರದಾಯವೆಂದರೆ, ಕೆಲವೊಂದು ಪಂಗಡಗಳಲ್ಲಿ ಅದು ನಿಷಿದ್ಧ. ಕಾರಣ ಹೊಸ್ತಿಲು ಎಂದರೆ ಲಕ್ಷ್ಮೀ, ಮೊಳೆ ಹೊಡೆಯುವುದೆಂದರೆ ಲಕ್ಷ್ಮೀಗೆ ಅಪಮಾನ ಮಾಡಿದಂತೆಯೇ ಎಂದು ಅಭಿಪ್ರಾಯ. ಇಲ್ಲಿ ಶ್ರಮ ಪ್ರಧಾನ ಮತ್ತು ಶ್ರಮರಹಿತ ಕುಟುಂಬಗಳ ವಿಶ್ಲೇಷಣೆಯನ್ನು ಗಮನಿಸಬಹುದು. ಶ್ರಮ ಪ್ರಧಾನ ಸಂಸ್ಕೃತಿಯಲ್ಲಿ ಕಬ್ಬಿಣವು ಶ್ರೇಷ್ಠ ಹಾಗೂ ಲಕ್ಷ್ಮಿಯ ಸಂಕೇತವು ಕೂಡಾ. ಇಲ್ಲಿ ಕಬ್ಬಿಣದ ಉಪಕರಣಗಳು ದೈವದ ರೂಪದಲ್ಲಿ ಪೂಜಿಸಲ್ಪಡುತ್ತವೆ. ಕಬ್ಬಿಣದ ಬಳಕೆ ಇಲ್ಲದವರಿಗೆ ಕಬ್ಬಿಣದ ಮಹತ್ವ ತಿಳಿಯುವುದಾದರೂ ಹೇಗೆ? ಒಂದು ಸಂಸ್ಕೃತಿಯಲ್ಲಿ ಶ್ರೇಷ್ಠತೆಯನ್ನು ಪಡೆದುಕೊಂಡ ವಸ್ತುವೊಂದು, ಮತ್ತೊಂದು ಸಂಸ್ಕೃತಿಯಲ್ಲಿ ಕನಿಷ್ಠ ಸ್ಥಾನವನ್ನು ಪಡೆದುಕೊಳ್ಳುವುದನ್ನು ಗಮನಿಸಬಹುದು.

ಮದುವೆಯ ಆರಂಭದಿಂದ ಅಂತ್ಯದವರೆಗೆ ಹೊಸ್ತಿಲಿನ ಬಳಕೆ ಬಹುಮುಖ್ಯವಾಗಿ ಕಂಡುಬರುತ್ತದೆ. ಇದು ಹೊಸ್ತಿಲಿಗೂ ಹೆಣ್ಣಿನ ಬದುಕಿಗೂ ಇರುವ ನಿಕಟ ಸಂಬಂಧವನ್ನು ಒತ್ತಿ ಹೇಳುತ್ತದೆ.

ಮರಣ

ಸಾವಿನ ಸಂದರ್ಭದಲ್ಲಿ ಹೊಸ್ತಿಲಿನ ಒಳಗೆ ಮತ್ತು ಹೊಸ್ತಿಲ ಹೊರಗೆ ಹೀಗೆ ಎರಡು ರೀತಿಯ ಕಾರ್ಯ ನಡೆಯುತ್ತವೆ. ವ್ಯಕ್ತಿಯೊಬ್ಬನು ಸಾವಿಗೀಡಾದನೆಂದರೆ ಮನೆಯ ಜನರು ತಮ್ಮ ಬಂಧು ಬಳಗಕ್ಕೆ ಸುದ್ದಿ ಕಳುಹಿಸುತ್ತಾರೆ. ತಮಗೆ ಬೇಕಾದ ಪ್ರತಿಯೊಬ್ಬ ವ್ಯಕ್ತಿಯು ಬರುವವರೆಗೂ ಕಾಯುತ್ತಾರೆ. ಸಾವಿನ ಸಂಕೇತವೆಂಬಂತೆ ಮನೆಯ ಮುಂಬಾಗಿಲಿನ ಬಳಿ ಬೆಂಕಿ ಹಾಕುತ್ತಾರೆ. ಹೆಣದ ಮುಂದೆ ಕೂಡುವುದು ಹಾಡಿ ಹಾಡಿ ಅಳುವುದು, ಅಳುವಿನ ಜೊತೆಗೆ ಸತ್ತ ವ್ಯಕ್ತಿಯ ಗುಣಗಾನ ಮಾಡುವುದು ಒಟ್ಟಾರೆಯಾಗಿ ಆತನ ಇಡೀ ಜೀವನ ವೃತ್ತಾಂತವನ್ನೇ ಅಲ್ಲಿ ಹೇಳಲಾಗುತ್ತದೆ. ಇದು ಹೊಸ್ತಿಲ ಒಳಗಿನ ಕ್ರಿಯೆ. ಸತ್ತ ವ್ಯಕ್ತಿಯನ್ನು ಮನೆಯಿಂದ ಹೊರಗೆ ತಂದು ಮಲಗಿಸುವುದು, ಸ್ನಾನ ಮಾಡಿಸಿ ಶೃಂಗಾರ ಮಾಡುವುದು, ಚಟ್ಟ ಕಟ್ಟುವುದು, ಬಾಗಿಲ ಮುಂದೆ ಬೆಂಕಿ ಹಾಕುವುದು ಇತ್ಯಾದಿ ಕ್ರಿಯೆಗಳು ಹೊರಗಿನವಾಗಿವೆ.

ಕೆಲವೊಂದು ಜನಾಂಗದವರು ಸಾವಿನ ಮುನ್ಸೂಚನೆಯನ್ನು ಕಂಡ ತಕ್ಷಣ ಆ ವ್ಯಕ್ತಿಯನ್ನು ಮನೆಯಿಂದ ಹೊರಗೆ ತಂದು ಮಲಗಿಸುತ್ತಾರೆ. ಕಾರಣ ಒಳಗೆ ಪ್ರಾಣ ಹೋಗಬಾರದು. ಹಾಗಾದರೆ ದೋಷ ಎನ್ನುವ ನಂಬಿಕೆ ಇದೆ. ಇನ್ನೂ ಕೆಲವು ಕಡೆಗಳಲ್ಲಿ ಆತ ಬಾಳಿ ಬದುಕಿದ ಮನೆಯಾಗಿರುವುದರಿಂದ ಮನೆಯ ಒಳಗೆ ಪ್ರಾಣ ಹೋಗುವುದು ತಪ್ಪೇನಿಲ್ಲ ಎನ್ನುವ ಭಾವನಾತ್ಮಕ ಸಂಬಂಧಗಳನ್ನು ಕಾಣುತ್ತೇವೆ.

ವ್ಯಕ್ತಿಯೊಬ್ಬನ ಮರಣದ ನಂತರದ ವಿಧಿ-ವಿಧಾನಗಳಲ್ಲಿ ಹೊಸ್ತಿಲಿನ ಪಾತ್ರ ಗಮನಾರ್ಹವಾದದ್ದು. ಜೀವನದಲ್ಲಿ ಆಸೆ ಇದ್ದವರು ಇಚ್ಛೆ ನೆರವೇರದವರು ಸತ್ತರೇ, ದೆವ್ವ, ಪಿಶಾಚಿಗಳಾಗುತ್ತಾರೆ" ಎಂಬುದು ಜನರ ನಂಬಿಕೆ. ಇಂತಹ ವ್ಯಕ್ತಿ ಸತ್ತಾಗ ಆತನ ಶವ ಸಂಸ್ಕಾರಕ್ಕೆಂದು ಮನೆಯಿಂದ ಎತ್ತಿಕೊಂಡು ಹೋದ ಕೂಡಲೇ ಮನೆಯಲ್ಲಿರುವವರು ಮನೆ, ಅಂಗಳ ಮತ್ತು ಹೊಸ್ತಿಲ ಗುಡಿಸಿ ತೊಳೆದು ಹೊಸ್ತಿಲಿಗೆ "ಮೊಳೆ" ಹೊಡೆಯುತ್ತಾರೆ. ಕಾರಣ ಸತ್ತ ವ್ಯಕ್ತಿಯ ಆತ್ಮ ಮತ್ತೆ ಮರಳಿ ಮನೆಗೆ ಬರಬಹುದು, ಹಾಗೇನಾದರೂ ಬಂದರೆ ಹೊಸ್ತಿಲಿಗೆ ಹೊಡೆದ ಮೊಳೆಯನ್ನು ನೋಡಿ ನನಗೂ ಹೀಗೆ ಮಾಡಬಹುದು ಎಂದು ಹೆದರಿ ಮನೆಯ ಒಳಗೆ ಪ್ರವೇಶ ಮಾಡುವ ಸಾಹಸ ಮಾಡುವುದಿಲ್ಲ ಎಂಬುದೊಂದು ನಂಬಿಕೆ.

ಹೀಗೆ ಈ ಲೋಕದ ಸಂಬಂಧವನ್ನು ಕಡೆದುಕೊಂಡ ವ್ಯಕ್ತಿಗೆ ವರ್ಷಕ್ಕೆ ಒಂದು ದಿನ ಮಾತ್ರ ಪ್ರವೇಶಾವಕಾಶ. ಅಂದು ಮನೆಯಲ್ಲಿ ಯಾವುದೇ ರೀತಿಯ ಸಂತೋಷ-ಸಂಭ್ರಮ ತರುವ ಕಾರ್ಯಗಳು ನಿಷಿದ್ಧ ಅಷ್ಟೇ ಅಲ್ಲದೆ ಹೊಸ್ತಿಲ ಮೇಲೆ ಮತ್ತು ಅಂಗಳದಲ್ಲಿ ರಂಗೋಲಿ ಹಾಕುವುದು ಕೂಡ ನಿಷೇಧ. ಏಕೆಂದರೆ ಮನೆಯ ಮುಂದೆ ಹಾಕುವ ರಂಗೋಲಿ ಸಂತೋಷ-ಸಂಭ್ರಮ ಸೂಚಿಸುವುದರಿಂದ, ಹಬ್ಬದ ಇಂತಹ ವಾತಾವರಣವಿರುವುದು ಮನೆಯ ಒಳಗಿನ ಜನ ತಮ್ಮನ್ನು ಮರೆತು ನೆಮ್ಮದಿಯಿಂದ ಇದ್ದಾರೆ ಎಂದು ಭಾವಿಸುವ ಆತ್ಮಗಳು ಹಿರಿಯರ ದಿನದಂದು ಮನೆಯನ್ನು ಪ್ರವೇಶಿಸಲಾರವು ಎಂಬ ನಂಬಿಕೆ

ಮರಣ

ಸಾವಿನ ಸಂದರ್ಭದಲ್ಲಿ ಹೊಸ್ತಿಲಿನ ಒಳಗೆ ಮತ್ತು ಹೊಸ್ತಿಲ ಹೊರಗೆ ಹೀಗೆ ಎರಡು ರೀತಿಯ ಕಾರ್ಯ ನಡೆಯುತ್ತವೆ. ವ್ಯಕ್ತಿಯೊಬ್ಬನು ಸಾವಿಗೀಡಾದನೆಂದರೆ ಮನೆಯ ಜನರು ತಮ್ಮ ಬಂಧು ಬಳಗಕ್ಕೆ ಸುದ್ದಿ ಕಳುಹಿಸುತ್ತಾರೆ. ತಮಗೆ ಬೇಕಾದ ಪ್ರತಿಯೊಬ್ಬ ವ್ಯಕ್ತಿಯು ಬರುವವರೆಗೂ ಕಾಯುತ್ತಾರೆ. ಸಾವಿನ ಸಂಕೇತವೆಂಬಂತೆ ಮನೆಯ ಮುಂಬಾಗಿಲಿನ ಬಳಿ ಬೆಂಕಿ ಹಾಕುತ್ತಾರೆ. ಹೆಣದ ಮುಂದೆ ಕೂಡುವುದು ಹಾಡಿ ಹಾಡಿ ಅಳುವುದು, ಅಳುವಿನ ಜೊತೆಗೆ ಸತ್ತ ವ್ಯಕ್ತಿಯ ಗುಣಗಾನ ಮಾಡುವುದು ಒಟ್ಟಾರೆಯಾಗಿ ಆತನ ಇಡೀ ಜೀವನ ವೃತ್ತಾಂತವನ್ನೇ ಅಲ್ಲಿ ಹೇಳಲಾಗುತ್ತದೆ. ಇದು ಹೊಸ್ತಿಲ ಒಳಗಿನ ಕ್ರಿಯೆ. ಸತ್ತ ವ್ಯಕ್ತಿಯನ್ನು ಮನೆಯಿಂದ ಹೊರಗೆ ತಂದು ಮಲಗಿಸುವುದು, ಸ್ನಾನ ಮಾಡಿಸಿ ಶೃಂಗಾರ ಮಾಡುವುದು, ಚಟ್ಟ ಕಟ್ಟುವುದು, ಬಾಗಿಲ ಮುಂದೆ ಬೆಂಕಿ ಹಾಕುವುದು ಇತ್ಯಾದಿ ಕ್ರಿಯೆಗಳು ಹೊರಗಿನವಾಗಿವೆ.

ಕೆಲವೊಂದು ಜನಾಂಗದವರು ಸಾವಿನ ಮುನ್ಸೂಚನೆಯನ್ನು ಕಂಡ ತಕ್ಷಣ ಆ ವ್ಯಕ್ತಿಯನ್ನು ಮನೆಯಿಂದ ಹೊರಗೆ ತಂದು ಮಲಗಿಸುತ್ತಾರೆ. ಕಾರಣ ಒಳಗೆ ಪ್ರಾಣ ಹೋಗಬಾರದು. ಹಾಗಾದರೆ ದೋಷ ಎನ್ನುವ ನಂಬಿಕೆ ಇದೆ. ಇನ್ನೂ ಕೆಲವು ಕಡೆಗಳಲ್ಲಿ ಆತ ಬಾಳಿ ಬದುಕಿದ ಮನೆಯಾಗಿರುವುದರಿಂದ ಮನೆಯ ಒಳಗೆ ಪ್ರಾಣ ಹೋಗುವುದು ತಪ್ಪೇನಿಲ್ಲ ಎನ್ನುವ ಭಾವನಾತ್ಮಕ ಸಂಬಂಧಗಳನ್ನು ಕಾಣುತ್ತೇವೆ.

ವ್ಯಕ್ತಿಯೊಬ್ಬನ ಮರಣದ ನಂತರದ ವಿಧಿ-ವಿಧಾನಗಳಲ್ಲಿ ಹೊಸ್ತಿಲಿನ ಪಾತ್ರ ಗಮನಾರ್ಹವಾದದ್ದು. ಜೀವನದಲ್ಲಿ ಆಸೆ ಇದ್ದವರು ಇಚ್ಛೆ ನೆರವೇರದವರು ಸತ್ತರೇ, ದೆವ್ವ, ಪಿಶಾಚಿಗಳಾಗುತ್ತಾರೆ" ಎಂಬುದು ಜನರ ನಂಬಿಕೆ. ಇಂತಹ ವ್ಯಕ್ತಿ ಸತ್ತಾಗ ಆತನ ಶವ ಸಂಸ್ಕಾರಕ್ಕೆಂದು ಮನೆಯಿಂದ ಎತ್ತಿಕೊಂಡು ಹೋದ ಕೂಡಲೇ ಮನೆಯಲ್ಲಿರುವವರು ಮನೆ, ಅಂಗಳ ಮತ್ತು ಹೊಸ್ತಿಲ ಗುಡಿಸಿ ತೊಳೆದು ಹೊಸ್ತಿಲಿಗೆ "ಮೊಳೆ" ಹೊಡೆಯುತ್ತಾರೆ. ಕಾರಣ ಸತ್ತ ವ್ಯಕ್ತಿಯ ಆತ್ಮ ಮತ್ತೆ ಮರಳಿ ಮನೆಗೆ ಬರಬಹುದು, ಹಾಗೇನಾದರೂ ಬಂದರೆ ಹೊಸ್ತಿಲಿಗೆ ಹೊಡೆದ ಮೊಳೆಯನ್ನು ನೋಡಿ ನನಗೂ ಹೀಗೆ ಮಾಡಬಹುದು ಎಂದು ಹೆದರಿ ಮನೆಯ ಒಳಗೆ ಪ್ರವೇಶ ಮಾಡುವ ಸಾಹಸ ಮಾಡುವುದಿಲ್ಲ ಎಂಬುದೊಂದು ನಂಬಿಕೆ.

ಹೀಗೆ ಈ ಲೋಕದ ಸಂಬಂಧವನ್ನು ಕಡೆದುಕೊಂಡ ವ್ಯಕ್ತಿಗೆ ವರ್ಷಕ್ಕೆ ಒಂದು ದಿನ ಮಾತ್ರ ಪ್ರವೇಶಾವಕಾಶ. ಅಂದು ಮನೆಯಲ್ಲಿ ಯಾವುದೇ ರೀತಿಯ ಸಂತೋಷ-ಸಂಭ್ರಮ ತರುವ ಕಾರ್ಯಗಳು ನಿಷಿದ್ಧ ಅಷ್ಟೇ ಅಲ್ಲದೆ ಹೊಸ್ತಿಲ ಮೇಲೆ ಮತ್ತು ಅಂಗಳದಲ್ಲಿ ರಂಗೋಲಿ ಹಾಕುವುದು ಕೂಡ ನಿಷೇಧ. ಏಕೆಂದರೆ ಮನೆಯ ಮುಂದೆ ಹಾಕುವ ರಂಗೋಲಿ ಸಂತೋಷ-ಸಂಭ್ರಮ ಸೂಚಿಸುವುದರಿಂದ, ಹಬ್ಬದ ಇಂತಹ ವಾತಾವರಣವಿರುವುದು ಮನೆಯ ಒಳಗಿನ ಜನ ತಮ್ಮನ್ನು ಮರೆತು ನೆಮ್ಮದಿಯಿಂದ ಇದ್ದಾರೆ ಎಂದು ಭಾವಿಸುವ ಆತ್ಮಗಳು ಹಿರಿಯರ ದಿನದಂದು ಮನೆಯನ್ನು ಪ್ರವೇಶಿಸಲಾರವು ಎಂಬ ನಂಬಿಕೆ

ಜನರಲ್ಲಿವೆ. ಈ ನಂಬಿಕೆಯನ್ನು ಅನುಸರಿಸಿ ಅಂದು ರಂಗೋಲಿಯನ್ನು ಹಾಕದಿರುವ ಸಂಪ್ರದಾಯ ಬಹುತೇಕ ಕಡೆಗಳಲ್ಲಿ ರೂಢಿಯಲ್ಲಿದೆ.

ವಿಧಿ-ನಿಷೇಧಗಳು

ಹೊಸ್ತಿಲಿನ ಪಾತ್ರ ಕೇವಲ ಮದುವೆ ಮತ್ತು ಸಾವಿನ ಸಂದರ್ಭಗಳಿಗಷ್ಟೇ ಸೀಮಿತವಾಗಿರದೆ, ವ್ಯಕ್ತಿಯ ದೈನಂದಿನ ಬದುಕಿನುದ್ದಕ್ಕೂ ವಿಧಿ-ನಿಷೇಧಗಳ ರೂಪದಲ್ಲಿ ಚಾಚಿಕೊಂಡಿದೆ. ಕುಟುಂಬದಲ್ಲಿ ಮಾಡಲೇಬೇಕು, ಮಾಡಲೇಬಾರದು ಎನ್ನುವ ಕೆಲವೊಂದು ನಿಯಮಗಳಿವೆ. ಅವುಗಳನ್ನು ಪರಂಪರಾಗತವಾಗಿ ನಿಭಾಯಿಸಿಕೊಂಡು ಬಂದವರು ನಮ್ಮ ಹಿರಿಯರು. ಹಿರಿಯರು ಕೆಲವೊಂದು ಕೆಲಸ-ಕಾರ್ಯಗಳಿಗೆ ನಿರ್ಬಂಧ ಹಾಕಿದಾಗ ಕಿರಿಯರಿಗೆ ಕಿರಿಕಿರಿ ಎನಿಸಲೂಬಹುದು. ಮನುಷ್ಯನಿಗೆ "ಮಾಡಬಾರದು" ಎಂದರೇನೇ "ಮಾಡಿನೋಡುವ" ಎನ್ನುವ ಕುತೂಹಲ. ಆದ್ದರಿಂದ ಮೈಲಿಗೆ, ಸೂತಕ, ಅಪಶಕುನ, ಶಕುನ ಇವೆಲ್ಲವೂ ಈ ನಿಷೇಧದ ಅಡಿಯಲ್ಲಿಯೇ ಬರುವಂತವುಗಳು. ವ್ಯಕ್ತಿ ಬಯಸುವುದು ಶಕುನವೇ ಹೊರತು ಅಪಶಕುನಗಳನ್ನಲ್ಲ. ಆದ್ದರಿಂದ ಭಯದಿಂದಲಾದರೂ ಅವುಗಳನ್ನು ಪಾಲಿಸುತ್ತಾನೆ. ತನ್ನ ಮುಂದಿನ ಪೀಳಿಗೆಯೂ ಪಾಲಿಸುವಂತೆ ಒತ್ತಾಯಿಸುತ್ತಾನೆ. ಈ ನಿಟ್ಟಿನಲ್ಲಿ ಜನ ಬದುಕಿನಲ್ಲಿರುವ ಹೊಸ್ತಿಲಿನ ಪ್ರಾಮುಖ್ಯತೆಯನ್ನು ನೋಡಬಹುದು. ವಿಧಿ-ನಿಷೇಧಗಳಲ್ಲಿ ಅಧ್ಯಯನದ ಅನುಕೂಲಕ್ಕಾಗಿ

೧. ಸ್ತ್ರೀ ಸಂಬಂಧಿ ನಿಷೇಧಗಳು
೨. ಸಸ್ಯ ಸಂಬಂಧಿ ನಿಷೇಧಗಳು
೩. ಪ್ರಾಣಿ ಸಂಬಂಧಿ ನಿಷೇಧಗಳು
೪. ಸಾಮಾನ್ಯ ನಿಷೇಧಗಳು

ಎಂದು ವರ್ಗೀಕರಿಸಿಕೊಳ್ಳಲಾಗಿದೆ.

೧. ಸ್ತ್ರೀ ಸಂಬಂಧಿ ನಿಷೇಧಗಳು

'ಕುಂತರ ಕುತಿಗಿಮಟ ನಿಂತರ ಎದಿಮಟ' ಎನ್ನುವ ಮಾತಿನಂತೆ ನಿಷೇಧಗಳು ಸ್ತ್ರೀ ಜೀವನದುದ್ದಕ್ಕೂ ಹಂತ-ಹಂತವಾಗಿ ಕಾಣಿಸಿಕೊಳ್ಳುತ್ತವೆ. ನಿಷೇಧಗಳನ್ನು ಎದುರು ಮಾತನಾಡದೇ ಪಾಲಿಸಿಕೊಂಡು ಬಂದರೆ ಸಮಾಜದಲ್ಲಿ ಸ್ತ್ರೀಗೆ ಗೌರವ, ಇಲ್ಲವಾದರೆ ಸಮಾಜದ ದೃಷ್ಟಿಯಲ್ಲಿ ಮಹಾಪರಾಧ ಮಾಡಿದಂತೆ. ಇಂತಹ ಹಲವಾರು ನಿಷೇಧಗಳು ಹೊಸ್ತಿಲಿಗೆ ಸಂಬಂಧಪಟ್ಟಂತೆ ಸ್ತ್ರೀ ಜೀವನದಲ್ಲಿ ಹಾಸುಹೊಕ್ಕಾಗಿವೆ. ಇವುಗಳನ್ನು ಪರಿಶೀಲಿಸಿದರೆ ನಿಜವಾಗಿಯೂ ಸ್ತ್ರೀ ಈ ಜಗತ್ತಿನಲ್ಲಿ ಜೀವಿಸುವುದು ಅಷ್ಟು ಸುಲಭದ ಸಂಗತಿಯಲ್ಲ ಎನ್ನುವುದು ನಮಗರಿವಾಗುತ್ತದೆ. ಅಥವಾ ಸ್ತ್ರೀ ಏಳ್ಗೆಯನ್ನು ಬಯಸದ ಪುರುಷಶಾಹಿತ್ವವೇ ಈ ನಿಷೇಧಗಳನ್ನು ಹುಟ್ಟು ಹಾಕಿರಬಹುದು ಎಂಬ ಅನುಮಾನ ಬರುವುದು ಸಹಜ.

"ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಾಂಗ" ಎನ್ನುವ ಮಾತು ಬಹು ಪ್ರಚಲಿತವಾದದ್ದು. ಈ ನಿಷೇಧಗಳೊಂದಿಗೆ ಬದುಕು ನಡೆಸುವಾಗ ಒಮ್ಮೊಮ್ಮೆ ಹೆಣ್ಣಿಗೂ ಕೂಡ "ಯಾಕಾದರೂ ಹೆಣ್ಣಾಗಿ ಹುಟ್ಟಿದ್ದೇನೋ" ಎಂದೆನಿಸುತ್ತದೆ. ಇಂತಹ ಅಮಾನವೀಯ ನಿಷೇಧಗಳನ್ನು ಕೆಳಗೆ ವಿವರಿಸಲಾಗಿದೆ.

೧. ಸ್ತ್ರೀ ಹೊಸ್ತಿಲ ಮೇಲೆ ಕೂಡಬಾರದು, ನಿಲ್ಲಬಾರದು.

೨. ತಲೆಯ ಮೇಲೆ ಕೈ ಹೊತ್ತುಕೊಂಡು ತಲಬಾಗಿಲ ಹೊರಗೆ ನಿಲ್ಲಬಾರದು, ತಲೆಯನ್ನು ಹಿಕ್ಕಿಕೊಳ್ಳಬಾರದು.

೩. ಸ್ತ್ರೀ ಉಟ್ಟಿದ್ದ ಸೀರೆಯ ನೀರಿಗೆಗಳು ಹೊಸ್ತಿಲಿಗೆ ತಾಕಬಾರದು.

೪. ಸ್ತ್ರೀ ಕಾಲುಂಗುರ ಹೊಸ್ತಿಲಿಗೆ ಬಡಿದು ಶಬ್ದ ಮಾಡಬಾರದು.

೫. ಪುರುಷನ ಅನುಮತಿಯಿಲ್ಲದೆ ಹೊಸ್ತಿಲು ದಾಟಬಾರದು.

೬. ಹೊಸ್ತಿಲ ದಾಟಿದ ಹೆಣ್ಣು ಅಂಕುಶವಿಲ್ಲದ ಆನೆ, ಬೇಲಿ ಇಲ್ಲದ ನೆಲ.

೭. ಋತುಮತಿಯಾದ ಬಾಲಕಿ ಹೊಸ್ತಿಲಿನಿಂದ ಆಚೆ ಹೋಗಬಾರದು.

೮. ಬಾಣಂತಿ ಹೊಸ್ತಿಲಿನಿಂದ ಆಚೆ ಹೋಗಬಾರದು.

೯. ಹೆಣ್ಣು ಮಕ್ಕಳು ತಲೆಸ್ನಾನ ಮಾಡಿ ಕೂದಲು ಬಿಚ್ಚಿಕೊಂಡು ಹೊಸ್ತಿಲು ದಾಟಬಾರದು. ದಾಟಿದರೆ ಹೊಸ್ತಿಲ ಮೇಲೆ ಕೂದಲ ನೀರು ಸರಾಗವಾಗಿ ಬಿದ್ದು ಮನೆಯೂ ಸರಾಗವಾಗಿ ನಾಶವಾಗುತ್ತೆ.

ಇಂಥ ಹಲವು ನಿಷೇಧಗಳು ಸ್ತ್ರೀ ಬದುಕಿನುದ್ದಕ್ಕೂ ಕಾಣುತ್ತವೆ. ಪ್ರಮುಖವಾಗಿ ಮನೆಯ ಜವಾಬ್ದಾರಿಯನ್ನು ಹೊತ್ತವಳು ಮಹಿಳೆ. ಇಂಥ ತರಬೇತಿಯನ್ನು ಆಕೆಗೆ ಬಾಲ್ಯದಿಂದಲೇ ನೀಡುತ್ತಾ ಬರಲಾಗುತ್ತದೆ. ಸ್ತ್ರೀ ಮಾಡುವ ಪ್ರತಿಯೊಂದು ಕೆಲಸ ಕಾರ್ಯವನ್ನು, ಅವಳ ನಡತೆಯನ್ನು ಮನೆಯ ಹಿರಿಯರು ಸೂಕ್ಷ್ಮವಾಗಿ ಗಮನಿಸುತ್ತಾ, ರೂಢಿಸುತ್ತಾ ಇರುತ್ತಾರೆ. ಎಲ್ಲಾದರೂ ಸ್ವಲ್ಪ ವ್ಯತ್ಯಾಸ ಕಂಡುಬಂದರೆ ಉಪದೇಶ ಪ್ರಾರಂಭವಾಗುತ್ತದೆ. ತಿಳಿದೋ ತಿಳಿಯದೆಯೋ ಅವಳು ಹೊಸ್ತಿಲ ಮೇಲೆ ಕುಳಿತರೆ ಹಾವು ತುಳಿದಂತೆ ಆಡುತ್ತಾರೆ. ತಕ್ಷಣ ಎಬ್ಬಿಸುತ್ತಾರೆ. "ಹೊಸ್ತಿಲ ಮ್ಯಾಗ ಕುಂತ ನಿಮ್ಮಪ್ಪಗ ಸಾಲ ಮಾಡಬೇಕಂತ ಮಾಡಿಯೇನು?" ಎಂದು ಹೆದರಿಸುತ್ತಾರೆ. ತಲಬಾಗಿಲ ಹೊಗೆ ತಲೆಯ ಮೇಲೆ ಕೈ ಹೊತ್ತು ಕೊಂಡು ನಿಲ್ಲುವ ಭಂಗಿ ಅವಳ ಸೌಂದರ್ಯವನ್ನು ತೆರೆದು ತೋರಿಸಿದಂತೆ. ಹಿಂದೆ ರಾಜ-ಮಹಾರಾಜರ ಕಾಲದಲ್ಲಿ ಸುಂದರವಾದ ಸ್ತ್ರೀಯರು ರಾಜನ ಕಣ್ಣಿಗೆ ಬಿದ್ದರೆ ಅವಳನ್ನು ಪಡೆಯದೆ ಬಿಡುತ್ತಿರಲಿಲ್ಲ. ಆದ್ದರಿಂದ ತಂದೆ-ತಾಯಿಯರು ಆದಷ್ಟು ಮಟ್ಟಿಗೆ ಹೊರಗಿನವರ ದೃಷ್ಟಿಗೆ ಬೀಳದಂತೆ ತಮ್ಮ ಹದಿಹರೆಯದ ಹೆಣ್ಣು ಮಕ್ಕಳನ್ನು ಕಾಯುತ್ತಿದ್ದರು. ಇದು ಇಂದಿಗೂ ಮುಂದುವರೆದಿದೆ. ಬಹುಶಃ

ಈ ಕಾರಣದಿಂದಲೇ ಮುಸ್ಲಿಂ ಮಹಿಳೆಯರಲ್ಲಿ ಘೋಷಾ ಪದ್ಧತಿ ಜಾರಿಗೆ ಬಂದಿರಬಹುದು. ಸೀರೆಯ ನೀರಿಗೆಗಳಾಗಲೀ, ಕಾಲುಂಗುರವಾಗಲಿ ಹೊಸ್ತಿಲಿಗೆ ಬಡಿಯಬಾರದು ಎನ್ನುವ ವಿಷಯ ಇಲ್ಲಿ ಎರಡು ಅಂಶಗಳನ್ನು ಗಮನಿಸಬಹುದು. ಹಿರಿಯರ ಪ್ರಕಾರ 'ದರಿದ್ರ' ಬಡಿಯುತ್ತದೆ. ಇನ್ನೊಂದು ಸ್ತ್ರೀ 'ಅಂದವಾಗಿ' ಕಾಣುವುದನ್ನು ತಡೆಯುವುದು. ಸೀರೆ ಮೇಲಕ್ಕೆ ಉಟ್ಟರೆ ಚೆನ್ನಾಗಿ ಕಾಣಿಸುವುದಿಲ್ಲ. ಅಂದರೆ ಸ್ತ್ರೀ ಅಂದವನ್ನು ಮುಚ್ಚಿಟ್ಟು, ಕುರೂಪಿಯಾಗಿ ಕಾಣುವಂತೆ ಮಾಡುವುದು. ಕಾಲುಂಗುರ ಹೊಸ್ತಿಲಿಗೆ ಬಡಿದು ಶಬ್ದ ಮಾಡಬಾರದು. ಅಂದರೆ ಹಿಂದೆ ಅವಿಭಕ್ತ ಕುಟುಂಬಗಳು ಹೆಚ್ಚಾಗಿದ್ದವು. ಮನೆಯಲ್ಲಿ ಹಿರಿಯರಿರುವಾಗ ಕಿರಿಯರು ಬಹು ಎಚ್ಚರಿಕೆಯಿಂದ ನಡೆದಾಡಬೇಕು ಎನ್ನುವುದೇ ಇದರ ಮುಖ್ಯ ಗುರಿಯಾಗಿರಬಹುದು.

ಹೆಣ್ಣು ಮಕ್ಕಳು ತಲೆಗೆ ಸ್ನಾನ ಮಾಡಿ ಕೂದಲು ಬಿಚ್ಚಿಕೊಂಡು ಹೊಸ್ತಿಲು ದಾಟಬಾರದು, ಕೂದಲ ನೀರು ಹೊಸ್ತಿಲ ಮೇಲೆ ಬೀಳಬಾರದು. ಎನ್ನುವ ಪದ್ಧತಿ ಸ್ತ್ರೀಯನ್ನು ಬಂಧನದಲ್ಲಿಡುವ ಹುನ್ನಾರವೇ ಆಗಿರಬಹುದು.

ಹೆಣ್ಣು ಶಿಶು ಸ್ತ್ರೀಯಾಗುವುದು ಋತುಮತಿಯಾದ ಘಳಿಗೆಯಿಂದಲೇ, ಆ ಪೂರ್ವ ಅವಳಿಗೆ ಯಾವುದೇ ರೀತಿಯ ನಿರ್ಬಂಧಗಳು ಇರುವುದಿಲ್ಲ. ಋತುಚಕ್ರ ಆಕೆಯನ್ನು ಒಮ್ಮೆಲೆ ಸ್ತ್ರೀಯನ್ನಾಗಿ ಬದಲಿಸಿಬಿಡುತ್ತದೆ. ಆಗ ತನ್ನಿಂದ ತಾನೇ ನಿಷೇಧಗಳೆಂಬ ಬೇಲಿ ಅವಳನ್ನು ಸುತ್ತವರಿಯುತ್ತವೆ. ಆ ಸಮಯದಲ್ಲಿ ಅಂದರೆ ಋತುಮತಿಯಾದ ೫ ರಿಂದ ೯ ದಿನಗಳವರೆಗೆ(ಕೆಲವೊಂದು ಕಡೆಗಳಲ್ಲಿ ೧೧, ೨೧, ೩೦ ದಿನಗಳವರೆಗೆ ಇದರಲ್ಲಿಯೂ ಪ್ರಾದೇಶಿಕವಾಗಿ ಕೌಟುಂಬಿಕವಾಗಿ ವ್ಯತ್ಯಾಸವಿರುತ್ತದೆ.) ಮನೆಯ ಹೊಸ್ತಿಲು ದಾಟುವುದು ನಿಷಿದ್ಧ. ಹಾಗಾದರೆ ಮನೆಯ ಒಳಗೆ ಎಲ್ಲ ಕಡೆಗಳಲ್ಲಿ ಓಡಾಡಬಹುದೆ? ಅದೂ ನಿಷಿದ್ಧ. ಅವಳು ಯಾರನ್ನು ಮುಟ್ಟದೆ, ಒಂದು ಮೂಲೆಯಲ್ಲಿ ಕುಳಿತಿರಬೇಕಾಗುತ್ತದೆ.

ಜನ ಸಾಮಾನ್ಯರ ಹೇಳಿಕೆಯಂತೆ ಮೈಲಿಗೆ, ಅಪವಿತ್ರ, ಮುಟ್ಟಬಾರದು(೧೨ ವರ್ಷದ ಮೈಲಿಗೆ) ಆದರೆ ವಿಜ್ಞಾನ ಹೇಳುವುದು ಬೇರೆಯೇ. ಆ ಸಮಯದಲ್ಲಿ ಸ್ತ್ರೀಯ ಶರೀರದಲ್ಲಿ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಮಾನಸಿಕವಾಗಿ, ದೈಹಿಕವಾಗಿ ಸೂಕ್ಷ್ಮವಾದ ಪರಿಸ್ಥಿತಿಯಲ್ಲಿರುವ ಆಕೆಗೆ ವಿಶ್ರಾಂತಿ ಅಗತ್ಯವಾಗಿರುತ್ತದೆ. ಮಾನಸಿಕವಾಗಿ ಪೂರ್ತಿಯಾಗಿ ಬದಲಾವಣೆಯನ್ನು ಸಹಿಸದ ಸ್ಥಿತಿ ಇರುವುದರಿಂದ ಆ ಸಮಯದಲ್ಲಿ ಆಕೆ ನನಗೆ ಏನೋ ಆಗುತ್ತಿದೆ ಎನ್ನುವ ಭಯ-ಸಂಕೋಚ, ಕೀಳರಿಮೆ ಯಾರಿಗೂ ಹೇಳಲಾರದ ವೇದನೆ ಅನುಭವಿಸುತ್ತಿರುತ್ತಾಳೆ. ಆಕೆಗೆ ತಾಯಿಯ ಆಪ್ತತೆ ಅಗತ್ಯ. ಅವಳನ್ನು ಬೇರೆಯಾಗಿಡದೇ, ಅದರ ಬಗ್ಗೆ ಸೂಕ್ಷ್ಮವಾಗಿ ತಿಳಿ ಹೇಳುವ ಹೃದಯಗಳು ಬೇಕು. ಹಾಗೆ ಹೇಳುವುದು ನಮ್ಮ ಭಾರತೀಯ ಸಂಸ್ಕೃತಿಗೆ ಸಮ್ಮತವಾದುದಲ್ಲ. ಏನಿದ್ದರೂ ಹೆಣ್ಣು ಆ ಮಾನಸಿಕ, ದೈಹಿಕ

ಹಿಂಸೆಯನ್ನು ಅನುಭವಿಸಿಯೇ ಅರಿಯಬೇಕು. ಇದಕ್ಕೆ ಇರಬೇಕು "ಅನುಭವದ ಮಾತು ಸತ್ಯ" ಎನ್ನುವುದು. ಒಂದು ವೇಳೆ ಆ ಪೂರ್ವದಲ್ಲಿಯೇ ಅವಳಿಗೆ ದೈಹಿಕ ಸ್ಥಿತಿಯಲ್ಲಿ ಆಗುವ ಬದಲಾವಣೆಗಳ ಬಗ್ಗೆ ಮಾಹಿತಿಕೊಟ್ಟರೆ ಅವಳು ಮಾನಸಿಕವಾಗಿ ಸದೃಢವಾಗುತ್ತಾಳೆ.

ಮದುವೆಯಾದ ನಂತರ ಋತುಚಕ್ರದ ದಿನಗಳು ಹೆಣ್ಣಿನ ಫಲವತ್ತತೆಯ ದಿನಗಳಾಗಿ ಪರಿವರ್ತನೆ ಗೊಳ್ಳುತ್ತವೆ. ಮುಂದೆ ಪ್ರತಿ ತಿಂಗಳು ಈ ವೇದನೆಯನ್ನು ಅನುಭವಿಸಲು ಸಿದ್ಧಳಾಗಬೇಕು. ಪ್ರತಿ ಋತುಚಕ್ರದಲ್ಲಿಯೂ ಕೂಡ ಅವಳು ಮನೆ ಬಿಟ್ಟು ಹೋಗುವಂತಿಲ್ಲ. ಮನೆಯಲ್ಲಿಯೇ ಇರಬೇಕು. ಹೆಣ್ಣು ಆ ಸಮಯದ ಮಟ್ಟಿಗೆ ದುರ್ಬಲಳಾಗಿರುತ್ತಾಳೆ. ಆ ಸಮಯವೇ "ಗರ್ಭ ನಿಲ್ಲುವ ನಿರ್ಧಾರದ ಸಮಯ" ಹೊರಗೆ ತಿರುಗಾಡುವಾಗ ದುಷ್ಟ ಶಕ್ತಿಗಳು ಆಕೆಯ ಗರ್ಭ ಪ್ರವೇಶ ಮಾಡಿ ಕೆಟ್ಟ ಸಂತಾನ ಜನಿಸಬಹುದು. ಅದಕ್ಕಾಗಿಯೇ ಆ ಸಮಯದಲ್ಲಿ ಮನೆಯ ಹೊಸ್ತಿಲು ಅಥವಾ ಊರಿನ ಸೀಮೆ ದಾಟಬಾರದು ಎಂದು ನಿಷೇಧ ಒಡ್ಡಿರಬಹುದು.

ಭಾರತೀಯ ಸ್ತ್ರೀಯ ವಿಷಯದಲ್ಲಿ ಹೊಸ್ತಿಲಿನ ಪಾತ್ರ ಅವಳ ಬದುಕಿನುದ್ದಕ್ಕೂ ಹೀಗೆ ವಿವಿಧ ಮಜಲುಗಳಲ್ಲಿ ವಿವಿಧ ರೀತಿಯ ಪರಿಣಾಮಗಳನ್ನು ಬೀರಿದ್ದು, ಎದ್ದು ಕಾಣುತ್ತದೆ. ಸ್ತ್ರೀಯ ಜೈವಿಕ ಸಹಜವಾದಂಥ ಕ್ರಿಯೆಗಳು, ಸ್ವಭಾವಗಳು, ಪುರುಷ ಪ್ರಧಾನ ನೆಲೆಯ ಸಾಮಾಜಿಕ ಸಂಹಿತೆಗಳು ಹೊಸ್ತಿಲಿನ ಒಳಗೆ ಅವಳ ಬದುಕನ್ನು ನಿಯಂತ್ರಿಸಿದ್ದು ಕಂಡುಬರುತ್ತದೆ. ಹೊಸ್ತಿಲ ಒಳ ಹೋಗುವಾಗ (ಮನೆ ತುಂಬಿಸಿಕೊಳ್ಳುವ ಸಂದರ್ಭ) ಇರುವ ಸಂಭ್ರಮ ಅವಳು ಹೊರಬರಬೇಕೆನ್ನುವ ಸಂದರ್ಭದಲ್ಲಿರುವುದಿಲ್ಲ. ಬಸವಣ್ಣ ಹೇಳುವಂತೆ 'ಬಲಿಗೆಂದು ತಂದ ಕುರಿ ತನ್ನ ಕೊರಳಲ್ಲಿ ಕಟ್ಟಿದ ತಳಿರ ಮೇದು ಸಂತಸ ಪಡುವಂತೆ' ಹೆಣ್ಣಿನ ಸ್ಥಿತಿ. ಅಧೀನವಾದ ಇಂಥ ಸ್ಥಿತಿ ಅವಳನ್ನು ಮಾನಸಿಕವಾಗಿ, ದೈಹಿಕವಾಗಿ ದುರ್ಬಲಳನ್ನಾಗಿಸುತ್ತದೆನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಅವಳ ನಿರ್ಮಾಣ ಮತ್ತು ನಿರ್ನಾಮ ಎರಡೂ ಆಯಾಮಗಳಿಗೂ ಈ ಹೊಸ್ತಿಲು ಕಾರಣವಾಗಿದೆ ಎಂಬುದು ಗಮನಾರ್ಹ.

೨. ಸಸ್ಯ ಸಂಬಂಧಿ ನಿಷೇಧ

ಸಸ್ಯಗಳಿಗೆ ಸಂಬಂಧಿಸಿದಂತೆ ಯಾವ ಸಸ್ಯ ಮನೆಯ ಮುಂದಿರಬೇಕು, ಯಾವುದು ಇರಕೂಡದು ಎನ್ನುವ ನಂಬಿಕೆಗಳ ಕುರಿತು ನೋಡುಬಹುದು. ಮನೆಯ ಮುಂದೆ ಅಥವಾ ಬಾಗಿಲ ಬಳಿ ಬಾರಿಯ ಗಿಡ ಇರಬಾರದು. ಹಿಂದುಗಳ ಪ್ರಕಾರ ಬಾರಿ ಗಿಡ ಅಶುಭ. ಕಾರಣ ಇಷ್ಟೇ ಬಾರಿ ಗಿಡ ವಿಷಪೂರಿತ ಮುಳ್ಳುಗಳನ್ನು ಹೊಂದಿರುತ್ತದೆ. ಜೊತೆಗೆ ಹಣ್ಣನ್ನು ಬಿಡುತ್ತದೆ. ವ್ಯಕ್ತಿ ಹಣ್ಣಿನ ಆಸೆಯಿಂದ ಕೀಳಲು ಹೋದಾಗ ಮುಳ್ಳು ಚುಚ್ಚಿ ಆತನಿಗೆ ಹಾನಿಯುಂಟಾಗಬಹುದು. ಹಾಗೇಯೇ ಕೆಟ್ಟ ಘಳಿಗೆಯಲ್ಲಿ ವ್ಯಕ್ತಿಯೊಬ್ಬ ತೀರಿಕೊಂಡರೆ ಕೆಲವು ದಿನಗಳ ಮಟ್ಟಿಗೆ ಮನೆ ಬಿಡಬೇಕಾದ ಸಂದರ್ಭ ಬರುವುದು. ಆಗ

ಮನೆಯ ಮುಂದೆ ಬಾರಿ ಮುಳ್ಳುಗಳನ್ನು ಒಟ್ಟಿ ಹೋಗುತ್ತಾರೆ. ಕೆಟ್ಟ ಘಳಿಗೆಯಲ್ಲಿ ಬಾರಿ ಮುಳ್ಳು ಬಾಗಿಲಿಗೆ ಬಡಿಯುವುದು ರೂಢಿಯಲ್ಲಿದೆ. ಮನೆಯ ಮುಂದೆ ಬಾರಿ ಗಿಡ ಇದ್ದರೆ, ಸದಾಕಾಲ ಮುಳ್ಳುಗಳನ್ನು ಮನೆಯ ಮುಂದೆ ಹಾಕಿಕೊಂಡಂತೆ. ಅದು ಭಯವನ್ನು ತೋರ್ಪಡಿಸಿದಂತೆ ಕಾಣುತ್ತದೆ. ಅದಕ್ಕೆ ಏನೋ ತಮಗಾಗದವರಿಗೆ ಜನಪದರು "ನಿನ್ನ ಬಾಗಿಲಿಗೆ ಮುಳ್ಳು ಬಡಿಲಿ" ಎಂದು ಶಾಪ ಹಾಕುವುದುಂಟು. ಬಾರಿ ಮುಳ್ಳು ಹಾಕಿದ್ದಾರೆ ಎಂದರೇ ಭಯ ಪಡುವಂತಹ ವಾತಾವರಣ ಏರ್ಪಡುತ್ತದೆ. ಯಾರೂ ಆ ಮನೆಯ ಕಡೆಗೆ ತಿರುಗಿ ನೋಡುವ ಸಾಹಸ ಮಾಡುವುದಿಲ್ಲ. ಮುಳ್ಳಿನ ಭಯದಿಂದ ಮನೆಗೆ ರಕ್ಷಣೆ ದೊರೆಯುತ್ತದೆ.

ಇದಕ್ಕೆ ಇನ್ನು ಒಂದು ವಿಶೇಷ ಅರ್ಥವಿರುವುದನ್ನು ನೋಡಬಹುದು. ಸಾಮಾನ್ಯವಾಗಿ ದೇವರ ಪೂಜೆಗೆ ಬಳಸುವ ಹೂಗಳು, ಮನೆಗೆ ಬಳಸುವ ಮರಮುಟ್ಟುಗಳು ಹಣ್ಣುಕೊಡದ ಗಿಡಮರವು. ಹಣ್ಣಾಗುವ ಹೂಗಳನ್ನು ಹರಿದು ಹಣ್ಣಿನ ಬೆಳೆಗೆ ಹಾನಿಯುಂಟು ಮಾಡದ ಸಂಪ್ರದಾಯ ನಮ್ಮ ದೇಶದಲ್ಲಿದೆ. ಹಣ್ಣು ಕೆಲವೊಂದು ಸಮುದಾಯಗಳ ಜೀವನ ನಿರ್ವಹಣೆಯ ಭಾಗ, ಬದುಕು ಕೊಡುವ ಮರಗಳನ್ನು ಬೆಳೆಸುತ್ತಾರೆಯೇ ಹೊರತು, ಅಳಿಸುವುದಿಲ್ಲ. ಈ ದೃಷ್ಟಿಯಿಂದ ಬಾರಿಗಿಡ ಸಿಹಿಯಾದ ಹಣ್ಣು ಕೊಡುವ ಮರವಾದ ಕಾರಣ ಅದನ್ನು ಕಡಿದು ಮನೆಗೆ ಬಳಸಬಾರದೆನ್ನುವ ನಂಬಿಕೆ ಪ್ರಚಲಿತಗೊಂಡಿರಬೇಕು.

೩. ಪ್ರಾಣಿ ಪಕ್ಷಿ ಸಂಬಂಧಿ ನಿಷೇಧಗಳು

ಪ್ರಪಂಚದಲ್ಲಿ ಮಾನವ ಹೊರತಾಗಿ ಪ್ರಾಣಿ, ಪಕ್ಷಿ, ಕ್ರಿಮಿ-ಕೀಟಗಳು ಕೂಡ ಬದುಕುತ್ತವೆ. ಇವುಗಳ ಇರುವಿಕೆ ಮಾನವನ ಜೀವನದ ಮೇಲೆ ಶಕುನ-ಅಪಶಕುನಗಳ ರೂಪದಲ್ಲಿ ಪ್ರಭಾವ ಬೀರುತ್ತದೆ. ಕಾಗೆ, ಉಡ, ಗೂಬೆ ಮೊದಲಾದ ಹಕ್ಕಿಗಳು ಮನೆಯ ಒಳಗೆ ನುಗ್ಗಬಾರದು. ಬೆಕ್ಕು ಮನೆಯ ಮುಂದೆ ಅಳಬಾರದು. ಮನೆಯ ಒಳಗೆ ಸಾಯಬಾರದು. ಹೊಸ್ತಿಲ ಮೇಲೆ ನಿಂತು ಕೋಳಿ ಕೂಗಬಾರದು. ಮನೆಯ ಒಳಗೆ ಹಂದಿ ಬರಬಾರದು.

ಪ್ರಕೃತಿಯ ಮಧ್ಯ ಸ್ವಚ್ಛಂಧವಾಗಿ ಬದುಕುವ ಹಕ್ಕಿಗಳು ತಮಗೆ ಅರಿವಿಲ್ಲದಯೇ ಆಕಸ್ಮಿಕವಾಗಿ ಮನೆಯ ಒಳಗೆ ಹಾರಿ ಬರುತ್ತವೆ. ಹಾಗೆ ಬರುವ ಕಾಗೆ, ಉಡ, ಗೂಬೆಗಳು ಕೇಡಿನ ಸಂದೇಶವನ್ನು ಹೊತ್ತೇ ಬರುತ್ತವೆ ಎನ್ನುವ ನಂಬಿಕೆ. ಆದ್ದರಿಂದ ಅವುಗಳಿಗೆ ಮನೆಯ ಒಳಗೆ ಪ್ರವೇಶ ನಿಷೇಧ. ಅವು ಶನಿ, ಅನಿಷ್ಟ, ದಾರಿದ್ರ್ಯದ ಮುನ್ಸೂಚನೆ. ಒಂದು ವೇಳೆ ಅಪ್ಪಿ ತಪ್ಪಿ ಮನೆಯ ಒಳಗೆ ಬಂದರೆ ಆ ಮನೆಯನ್ನು ಸ್ವಲ್ಪ ದಿನಗಳ ಮಟ್ಟಿಗಾದರೂ ಬಿಡಬೇಕೆಂದು ಹೇಳುತ್ತಾರೆ.

ಸಾಮಾನ್ಯವಾಗಿ ಬೆಕ್ಕು ಮನೆಯ ಒಳಗೆ ಇರುವುದನ್ನು ಕಾಣುತ್ತೇವೆ. ಕೆಲವರು ಬೆಕ್ಕನ್ನು ಸಾಕುವುದು ಉಂಟು. ಮನೆಯಲ್ಲಿರುವ ಇಲಿಗಳನ್ನು ತಿಂದು ಮನೆಯ ಧಾನ್ಯಗಳನ್ನು ರಕ್ಷಿಸುವಂತ ಪ್ರಮುಖವಾದ ಕಾರ್ಯ ಮಾಡುತ್ತದೆ. ಆದರೆ ಅದು ಅಳುವುದು ಮನೆಗೆ ಶ್ರೇಯಸ್ಸಲ್ಲ. ಹಾಗೇನಾದರೂ ಅಳುತ್ತಿದ್ದರೆ ಅದನ್ನು ಮನೆಯಿಂದ ತಕ್ಷಣ ಓಡಿಸಲಾಗುತ್ತದೆ. ಬೆಕ್ಕಿನ ಅಳುವ ಧ್ವನಿ ಕೇಳಲು ಭಯಾನಕವಿರುತ್ತದೆ. ಚಿಕ್ಕ ಮಕ್ಕಳು ಅದನ್ನು ಕೇಳಿ ಹೆದರುವ ಸಂಭವವಿರುತ್ತದೆ. ಆದ್ದರಿಂದ ಅದು ಮನೆಯಲ್ಲಿ ಅಳಬಾರದು ಮತ್ತು ಮನೆಯಲ್ಲಿ ಸಾಯಬಾರದು. ಸಾವು ಯಾರಿಗಾದರೂ ಹೇಳಿ ಕೇಳಿ ಬರುತ್ತದೆಯೇ? ಸಾವು ಆಕಸ್ಮಿಕ. ಎಲ್ಲಿಯಾದರೂ ಹೇಗಾದರೂ ಬರಬಹುದು. ಅಕಸ್ಮಾತ ಬೆಕ್ಕು ಮನೆಯ ಒಳಗೆ ಸತ್ತರೆ ಮನೆಯನ್ನು ಸ್ವಲ್ಪ ದಿನದ ಮಟ್ಟಿಗೆ ಬಿಡಬೇಕು. ಸತ್ತರೆ ಏನಾಯಿತು? ಎಂದು ಧೈರ್ಯ ಮಾಡಿ ಅದೇ ಮನೆಯಲ್ಲಿ ಯಾರಾದರೊಬ್ಬರು ವಾಸಿಸತೊಡಗಿದರೆ, ಎಲ್ಲರಿಗೂ ಅದರಲ್ಲಿ ಏನು ಅನಿಷ್ಟವಿಲ್ಲ ಎಂದು ಮನವರಿಕೆಯಾಗುತ್ತದೆ. ಆದರೆ ''ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವರ್‍ಯಾರು'' ಧೈರ್ಯ ಮಾಡುವವರ್‍ಯಾರು ಈ ನಂಬಿಕೆ ಹೀಗೆ ಒಬ್ಬರಿಂದ ಒಬ್ಬರಿಗೆ ಮುಂದುವರೆದುಕೊಂಡು ಬರುತ್ತದೆ.

ಕೋಳಿಗಳು ಯಾವಾಗಲೂ ಮನೆಯ ಅಂಗಳದಲ್ಲಿ ಇರುವುದು ಕಂಡುಬರುತ್ತದೆ. ಅವುಗಳನ್ನು ಸಾಕಿ ದುಡ್ಡಿಗೆ ಮಾರುವವರಿರುತ್ತಾರೆ. ತಿನ್ನಬೇಕೆಂಬ ಚಪಲವೂ ಇರುತ್ತದೆ. ತಿಂದರೆ ಬರುವ ದುಡ್ಡಿಗೆ ಕಲ್ಲು ಹಾಕಿದಂತೆ ಎಂದು ಸುಮ್ಮನಾಗುತ್ತಾರೆ. ಅದಕ್ಕೇ ಹೊಸ್ತಿಲ ಮೇಲೆ ನಿಂತು ಕೂಗಿದ ಕೋಳಿಯನ್ನು ತಕ್ಷಣ ಕೊಯ್ಯಬೇಕು ಎನ್ನುವ ನಂಬಿಕೆ ಬಂದಿರಬಹುದು. ಆಗ ಆ ಕೋಳಿಯನ್ನು ಅವರು ತಿನ್ನಬಹುದು.

ಹಂದಿ ಎಂದರೆ ಮನುಷ್ಯ ಮೂಗು ಮುರಿಯುವ ಪ್ರಾಣಿಯಾಗಿದೆ. ಅದು ಅಪವಿತ್ರ. ಅದಕ್ಕೆ ಮನೆಯ ಒಳಗೆ ಪ್ರವೇಶಾವಕಾಶ ಒಂದು ಕಡೆ ಇರಲಿ, ಅದನ್ನು ಮುಟ್ಟುವುದೇ ಪಾಪ ಎಂಬ ಪ್ರಜ್ಞೆ. ಅದು ಅಪ್ಪಿ-ತಪ್ಪಿ ಮನೆಯ ಒಳಗೆ ಬಂದರೆ ಅದನ್ನು ಹೊರಗೆ ಬಿಡುವಂತಿಲ್ಲ. ಅದನ್ನು ಅಲ್ಲಿಯೇ ಕೊಂದು ಹೊಸ್ತಿಲ ಕೆಳಗೆ ಹೂತು ಹಾಕುತ್ತಾರೆ. ಜನಪದರ ಪ್ರಕಾರ ಹಂದಿ ಹಾಗೆ ಬಂದು ಹೊರಗೆ ಹೋದರೆ ಮನೆಯಲ್ಲಿನ ಲಕ್ಷ್ಮಿ ಹೊರಟು ಹೋಗುತ್ತಾಳೆ ಎಂಬ ನಂಬಿಕೆ.

ಈ ಹೇಳಿಕೆಯನ್ನು ಪೌರಾಣಿಕ ಹಿನ್ನೆಲೆಯಿಂದ ಸ್ಪಷ್ಟಪಡಿಸಿಕೊಳ್ಳಬಹುದು. ಶ್ರೀಮನ್ ನಾರಾಯಣ ದುಷ್ಟ ಶಕ್ತಿಯ ಸಂಹಾರಕ್ಕಾಗಿ ವರಾಹ(ಹಂದಿ) ರೂಪ ತಾಳಿದ್ದನು ಎಂದು ಪುರಾಣಗಳು ಹೇಳುತ್ತವೆ. ಆ ಪುರಾಣಗಳ ಪ್ರಕಾರವೇ ಮನೆಯ ಹೊಸ್ತಿಲು ಎಂದರೆ ಲಕ್ಷ್ಮಿಯ ಸಂಕೇತ. ಲಕ್ಷ್ಮಿಯ ಪತಿ ನಾರಾಯಣ ವರಾಹ(ಹಂದಿ)ವು ನಾರಾಯಣನ ಸಂಕೇತ. ಆದ್ದರಿಂದ ಅದು(ಹಂದಿ) ಮನೆಯ ಒಳಗೆ ಬಂದರೆ ಅದನ್ನು ಹೊರಗೆ ಬಿಡದೆ ಕೊಂದು ಹೊಸ್ತಿಲ ಅಡಿಯಲ್ಲಿಯೇ ಹೂತು ಹಾಕಬೇಕು. ಇದು ಲಕ್ಷ್ಮೀ-ನಾರಾಯಣನನ್ನು ಒಂದು ಗೂಡಿಸಿದಂತೆ ಎನ್ನುವುದು ಪ್ರಚಲಿತವಿರುವ ನಂಬಿಕೆ.

೪. ಸಾಮಾನ್ಯ ವಿಧಿ-ನಿಷೇಧಗಳು

೧. ಹೊಸ್ತಿಲ ಮೇಲೆ ಸೀನಬಾರದು.

೨. ಹೊಸ್ತಿಲ ಮೇಲೆ ಕೂಡಬಾರದು.

೩. ಬಾಗಿಲಿಗೆ ಎಂಜಲು ತಟ್ಟೆ ಬಡಿಸಬಾರದು.

೪. ಹೊಸ್ತಿಲಿನ ಆಚೆ-ಈಚೆ ನಿಂತು ವ್ಯವಹಾರ ಮಾಡಬಾರದು.

೫. ಹೊಸ್ತಿಲಿಗೆ ಕೈ-ಕಾಲು ಬಡಿಸಬಾರದು.

೬. ಹೊಸ್ತಿಲ ಮೇಲೆ ನಿಂತು ಭಿಕ್ಷೆ ಹಾಕಬಾರದು.

೭. ಹೊಸ ವಸ್ತುಗಳನ್ನು ಹೊಸ್ತಿಲ ಪೂಜೆ ಮಾಡದೆ ಒಳಗೆ ತರಬಾರದು(ದನ, ಕರು, ವಸ್ತು ಇತ್ಯಾದಿ)

೮. ಸಾಯಂಕಾಲ ದೀಪ ಹಚ್ಚಿದ ಮೇಲೆ ಕಸ ಬಳಿಯಬಾರದು.

೯. ರಾತ್ರಿ ವೇಳೆಯಲ್ಲಿ ಕಸ ಬಳಿದು ಹೊರಗೆ ಚೆಲ್ಲಬಾರದು.

೧೦. ಕಸ ಹೊಸ್ತಿಲಿನಿಂದ ಚಿಮ್ಮಿಸದೆ, ಕೈಯಿಂದ ಆಚೆ ಎತ್ತಿ ಹಾಕಬೇಕು.

ಹೊಸ್ತಿಲ ಮೇಲೆ ಸೀನಬಾರದು, ಹೊಸ್ತಿಲ ಮೇಲೆ ಕುಳಿತುಕೊಳ್ಳಬಾರದು ಮತ್ತು ಎಂಜುಲು ತಟ್ಟೆಯನ್ನು ಬಾಗಿಲಿಗೆ ಬಡಿಸಬಾರದು. ಇವನ್ನೆಲ್ಲ ವಿಶ್ಲೇಷಣೆ ಮಾಡಿದಾಗ ತಿಳಿದು ಬರುವುದೆಂದರೆ ಸ್ವಚ್ಛತೆ, ಸಂರಕ್ಷಣೆ ಮತ್ತು ಎಚ್ಚರಿಕೆ. ಹೊಸ್ತಿಲ ಮೇಲೆ ಸೀನಬಾರದು ನಿಜ, ಆದರೆ ಪಾಪ ಅದಕ್ಕೇನು ಗೊತ್ತು ಇದು ಹೊಸ್ತಿಲು, ನಾನು ಇಲ್ಲಿ ಬರಬಾರದು ಎಂದು. ಅದು ಮನುಷ್ಯನಲ್ಲಿನ ಅನಪೇಕ್ಷಿತ ವರ್ತನೆಗಳಲ್ಲೊಂದು. ಅದಕ್ಕೆ ಪರಿಹಾರವೆಂಬಂತೆ ಹೊಸ್ತಿಲಿಗೆ ನೀರು ಸಿಂಪಡಿಸಬಹುದು. ಸ್ವಲ್ಪ ವಿವೇಚಿಸಿದರೆ ಸೀನಿದಾಗ ಬಾಯಿಂದ, ಮೂಗಿನಿಂದ ಹೊಲಸು(ಎಂಜಲು) ಹೊರಬರುತ್ತದೆ. ಹೊಸ್ತಿಲಿಗೆ ಲಕ್ಷ್ಮಿ ಎಂದೇ ಪರಿಭಾವಿಸುವ ನಾವು ಲಕ್ಷ್ಮಿಗೆ ಅವಮಾನ ಮಾಡಿದಂತೆ. ನೀರನ್ನು ಸಿಂಪಡಿಸುವುದರ ಮೂಲಕ ಹೊಸ್ತಿಲನ್ನು ಪವಿತ್ರಗೊಳಿಸಬಹುದು. ಹೊಸ್ತಿಲ ಮೇಲೆ ಕೂಡಬಾರದು ಎಂದು ಹಿಂದಿನಿಂದಲೂ ಕೇಳುತ್ತಲೇ ಬಂದಿದ್ದೇವೆ. ಕಾರಣ ಮಾತ್ರ ಯಾರೂ ಹೇಳುವುದಿಲ್ಲ. ಎಲ್ಲ ಕಡೆಗಳಲ್ಲಿಯೂ ಕೇಳಿ ಬರುವ ಮಾತಿನಂತೆ 'ಸಾಲ ಹೆಚ್ಚಾಗುತ್ತದೆ' ಮತ್ತು ಸಾಲ ಕೊಟ್ಟವರು ಮನೆಯ ಹೊಸಿಲು ಮುಂದೆ ಧರಣಿ ಕುಂತಿರುತ್ತಾರೆ. ಬಹುಶಃ ಅದಕ್ಕೆ ಅದನ್ನು ನಿಷೇಧಿಸುವರೋ ಏನೋ, ಕಾರಣ ಏನೇ ಇರಲಿ ಲಕ್ಷ್ಮಿಯ ಸಂಕೇತವೆಂದು ಪೂಜಿಸುತ್ತೇವೆ. ಆದ್ದರಿಂದ ಹೊಸ್ತಿಲಿನ ಮೇಲೆ ಕೂಡಬಾರದು ಎಂದು ಹೇಳುತ್ತಾರೆ. ಎಂಜಲು ತಟ್ಟೆಯನ್ನು ಬಾಗಿಲಿಗೆ ಬಡಿಸುವುದು ಕೂಡ ಲಕ್ಷ್ಮಿಗೆ ಅವಮಾನ ಮಾಡಿದಂತೆ, ಇನ್ನೊಂದು ರೀತಿ ಯೋಚನೆ ಮಾಡಿದರೆ ತಿಂದ ಅನ್ನ ಕೆಳಗೆ ಬಿದ್ದು ತುಳಿಯಬೇಕಾಗುತ್ತದೆ. 'ತಿನ್ನುವ ಅನ್ನಕ್ಕೆ ತುಳಿದು

ಅಪಮಾನ ಮಾಡುವುದು ಸರಿಯೇ? ಆದ್ದರಿಂದ ಮಾಡುವ ಕೆಲಸದಲ್ಲಿ ಎಚ್ಚರಿಕೆ ಹಾಗೂ ದೇವರ ನೆಪದಲ್ಲಿ ಸ್ವಚ್ಛತೆಯನ್ನು ಕಾಪಾಡುವ ವಿಚಾರಗಳು ತಿಳಿದುಬರುತ್ತವೆ.

ಹೊಸ್ತಿಲ ಮೇಲೆ ನಿಂತು ಭಿಕ್ಷೆ ಹಾಕುವುದು ಹೊಸ್ತಿಲ ಆಚೆ-ಈಚೆ ನಿಂತು ವ್ಯವಹರಿಸುವುದು ನಿಷೇಧ. ಕಾರಣ ಹೊಸ್ತಿಲು ಮನೆಯ ಸೀಮೆಯಾದ್ದರಿಂದ ಅದರಡಿಯಲ್ಲಿ ನಿಂತು ಭಿಕ್ಷೆ ಹಾಕಿದರೆ ಮನೆಯ ಸಂಪತ್ತು ಎಲ್ಲವನ್ನು ದಾನ ಮಾಡಿದಂತೆ, ಹೊಸ್ತಿಲಿನ ಹೊರಗೆ ಬಂದು ಭಿಕ್ಷೆ ಹಾಕಿದರೆ ನಮ್ಮ ಸಂಪತ್ತಿನಲ್ಲಿನ ಸ್ವಲ್ಪ ಭಾಗವನ್ನು ಮಾತ್ರ ಭಿಕ್ಷೆ ಹಾಕಿದಂತೆ ಎನ್ನುವ ನಂಬಿಕೆ ಜನ ಸಮುದಾಯದಲ್ಲಿದೆ.

ಹೊಸ್ತಿಲಿನ ಆಚೆ-ಈಚೆ ನಿಂತು ವ್ಯವಹರಿಸಿದರೆ ವ್ಯವಹಾರಕ್ಕೆ ಅನಾನುಕೂಲವಾಗಬಹುದು. ವ್ಯವಹರಿಸುವ ಪ್ರತಿಯೊಂದು ಅಂಶಗಳು ಅತಿ ಜಾಗೃತಿಯಿಂದ ಕೆಲವನ್ನು ಗುಟ್ಟಾಗಿ ನಿರ್ವಹಿಸಬೇಕಾಗುತ್ತದೆ. ಆದ್ದರಿಂದ ಹೊರಗೆ ಒಳಗೆ ನಿಂತು ವ್ಯವಹಾರ ಮಾಡುವುದು ಒಳ್ಳೆಯದಲ್ಲ.

ಮನೆಗೆ ತರುವ ಪ್ರತಿಯೊಂದು ವಸ್ತು ದನ, ಕರುಗಳಿರಲಿ, ಪೂಜೆ ಮಾಡದೆ ಹೊಸ್ತಿಲ ದಾಟಿ ಒಳಗೆ ತರುವಂತಿಲ್ಲ. ಜನಪದರು ಪ್ರತಿಯೊಂದು ವಸ್ತು ಮತ್ತು ಜೀವಿಯಲ್ಲಿ ದೈವಿ ಅಂಶವನ್ನು ಕಾಣುತ್ತಾರೆ.

ಸಾಯಂಕಾಲ ದೀಪ ಹಚ್ಚಿದ ಮೇಲೆ ಕಸ ಬಳಿಯುವುದಾಗಲಿ ರಾತ್ರಿ ವೇಳೆಯಲ್ಲಿ ಕಸ ಹೊರಗೆ ಹಾಕುವುದಾಗಲಿ, ಕಸ ಹೊಸ್ತಿಲಿನ ಬಳಿ ಪೊರಕೆಯಿಂದ ಚಿಮ್ಮಿಸುವುದಾಗಲಿ ನಿಷೇಧ. ಇದು ಸ್ತ್ರೀಯನ್ನು ಸದಾಕಾಲ ಚಟುವಟಿಕೆಯಿಂದ ಇರುವಂತೆ ಒಂದು ಕ್ಷಣವು ಸೋಮಾರಿತನಕ್ಕೆ ಅವಕಾಶ ಕೊಡದಂತೆ, ಯಾವ ಸಮಯದಲ್ಲಿ ಯಾವ ಕೆಲಸಗಳು ಆಗಬೇಕೋ ಅವು ಆಗಬೇಕು. ಮತ್ತು ಮನೆಯ ವಸ್ತುಗಳ ಸಂರಕ್ಷಣೆಯೇ ಆಗಿದೆ. ಜೊತೆಗೆ ಕಸ ಚಿಮ್ಮಿಸುವಾಗ ಧೂಳಿನ ಕಣಗಳು ಕಣ್ಣಿಗೆ ಬಿದ್ದು ಹಾನಿಯುಂಟಾಗಬಹುದು. ಅದನ್ನು ತಪ್ಪಿಸುವುದು ಇವರ ಉದ್ದೇಶವಿರಬಹುದು.

೫.೨. ಕೃಷಿ

ರೈತ ತಾನು ಬಳಸುವ ಪ್ರತಿಯೊಂದು ವಸ್ತುವಿನಲ್ಲಿ ದೈವಿಭಾವನೆಯನ್ನು ಕಾಣುತ್ತಾನೆ. ಹೊಸ್ತಿಲು ಕೂಡ ಅದಕ್ಕೆ ಹೊರತಾಗಿಲ್ಲ. ರೈತನ ಬದುಕಿನ ಪ್ರತಿಯೊಂದು ಹಂತದಲ್ಲಿ ಹೊಸ್ತಿಲಿಗೆ ತುಂಬಾ ಮಹತ್ವವಿದೆ. ಭೂಮಿಯನ್ನು ತಾಯಿಯೆಂದೇ ಪರಿಭಾವಿಸುವ ರೈತರು ಭೂಮಿತಾಯಿಯನ್ನು ಸಂತೃಪ್ತಿಗೊಳಿಸಲು ನಾನಾ ವಿಧದ ಪೂಜೆ-ಪುನಸ್ಕಾರಗಳನ್ನು ಆರಾಧನಾ ವಿಧಿಗಳನ್ನು ನಿಷ್ಠೆಯಿಂದ ಮಾಡುತ್ತಾ ಬಂದಿದ್ದಾನೆ. ಈ ನಿಷ್ಠೆ ಆತನ ಬದುಕಿಗೆ ಶ್ರೀರಕ್ಷೆಯಾಗಿ ಕಾಪಾಡುತ್ತಾ ಬಂದಿದೆ. ಹೀಗೆ ಕೃಷಿಯು ಕೇವಲ ವೃತ್ತಿಯಾಗದೆ ದೈವಿ ನೆಲೆಯಲ್ಲಿ ಬೆಳೆದುಬಂದಿತು. ರೈತ ತಾನು ಬೆಳೆದ ಬೆಳೆಯನ್ನು ಬಂದ ಲಾಭಗಳನ್ನು ತಾನೊಬ್ಬನೆ ತಿನ್ನದೇ, ಅದನ್ನು ದೈವದೊಂದಿಗೆ ಹಂಚಿಕೊಂಡು ತಿನ್ನುತ್ತಾನೆ. ರೈತನ

ಬದುಕಿನ ಪ್ರತಿಯೊಂದು ಕ್ಷಣಗಳು ಬಿತ್ತುವ, ಹರಗುವ, ರಾಶಿ ಮಾಡುವ ಬೆಳೆಯನ್ನು ಮನೆಗೆ ತರುವಾಗ, ಹೊಸದಾಗಿ ದನ-ಕರುಗಳನ್ನು ಖರೀದಿಸಿ ಮನೆಗೆ ತರುವಾಗ, ಕೃಷಿ ಸಂಬಂಧಿತ ಅನೇಕ ಚಟುವಟಿಕೆಗಳು ಮತ್ತು ಹಬ್ಬ-ಹುಣ್ಣಿಮೆಗಳಲ್ಲಿ ಹೊಸ್ತಿಲಿನ ಮಹತ್ವವನ್ನು ಕಾಣುತ್ತೇವೆ.

ಕೃಷಿ ಕಾರ್ಯಚಟುವಟಿಕೆಗಳ ಬೆನ್ನೆಲುಬೆಂಬರೆ ಎತ್ತುಗಳು. ಅವುಗಳೇ ಕೃಷಿಕರ ಜೀವಾಳ. ಬಸವಣ್ಣ ಎಂದು ಆರಾಧಿಸಲ್ಪಡುವ ಎತ್ತುಗಳು ಅವರ ನಂಬಿಕೆ ಮತ್ತು ಆಚರಣೆಯಲ್ಲಿ ಕೂಡ ಪ್ರತಿಫಲಿಸುತ್ತವೆ. ಹೊಸದಾಗಿ ದನಗಳನ್ನು ಖರೀದಿಸಿ ಮನೆಗೆ ತರುವಾಗ ನೇರವಾಗಿ ಅವುಗಳನ್ನು ಮನೆಯ ಒಳಗೆ ಕರೆದುಕೊಂಡು ಬರದೇ ಹೊಸ್ತಿಲ ಬಳಿಯಲ್ಲಿಯೇ ನಿಲ್ಲಿಸಿ ಮುತ್ತೈದೆಯರು ಆ ಎತ್ತುಗಳಿಗೆ(ದನ-ಆಕಳು) ನೀರು ಸಿಂಪಡಿಸಿ ಹಣೆಗೆ, ಕೊಂಬುಗಳಿಗೆ, ಮೈಗೆ ವಿಭೂತಿ-ಕುಂಕುಮ ಹಚ್ಚಿ ಹೂವಿನ ದಂಡೆ ಹಾಕಿ, ಬೆಲ್ಲ ತಿನ್ನಿಸಿ(ಕೆಲವೊಂದು ಕಡೆ ರೊಟ್ಟಿ ನಿವಾಳಿಸಿ ತಿನ್ನಿಸಿದರೆ, ಇನ್ನೂ ಕೆಲವೊಂದು ಕಡೆ ಆ ರೊಟ್ಟಿಯನ್ನು ಮನೆಯ ಮಾಳಿಗೆಯ ಮೇಲೆ ಹಾಕುತ್ತಾರೆ) ನೂತನ ವಧು ಗಂಡನ ಮನೆಯನ್ನು ಮೊದಲ ಬಾರಿಗೆ ಪ್ರವೇಶಿಸುವಂತೆ ಆ ಎತ್ತು(ದನ-ಆಕಳು)ಗಳನ್ನು ಕೂಡ ಅಷ್ಟೇ ಸಂಭ್ರಮ ಹಾಗೂ ಭಕ್ತಿಯಿಂದ ಬರಮಾಡಿಕೊಳ್ಳುತ್ತಾರೆ. ಎತ್ತು ಬಲಗಾಲನ್ನು ಮುಂದೆ ಮಾಡಿಯೇ ಹೊಸ್ತಿಲ ಒಳಗೆ ಕಾಲಿಡಬೇಕು. ಅಂದರೇನೇ ಶುಭವಾಗುವುದು ಎಂದು ಬಲವಂತದಿಂದಲಾದರೂ ಬಲಗಾಲನ್ನು ಮುಂದೆ ಮಾಡಿ ಕರೆದುಕೊಂಡು ಬರುತ್ತಾರೆ. ದನಕರುಗಳನ್ನು ಯಾಂತ್ರಿಕವಾಗಿ ಅಥವಾ ಔಪಚಾರಿಕವಾಗಿ ಕರೆದುಕೊಂಡು ಬರುವುದರ ಬದಲು ಹೊಸ್ತಿಲು ಪೂಜೆಯೊಂದಿಗೆ ಬಲಗಾಲು ಮೊದಲು ಮಾಡಿ ತರುವುದು ಕೃಷಿಕರು ಪಶುಗಳ ಮೇಲಿಟ್ಟ ಭಕ್ತಿ ಮತ್ತು ನಂಬಿಕೆಯನ್ನು ವ್ಯಕ್ತಪಡಿಸುತ್ತವೆ.

ರೈತ ತಾನು ಬೆಳೆದ ಬೆಳೆಗಳನ್ನು ಮನೆಗೆ ನೇರವಾಗಿ ತರದೆ ಊರಿನ ಎಲ್ಲ ಆಯಗಾರರಿಗೆ ದಾನ-ಧರ್ಮ ಮಾಡಿ ಉಳಿದ ಬೆಳೆಯನ್ನು ತರುವಾಗಲೂ ಹೊಸ್ತಿಲಪಾತ್ರ ಪ್ರಮುಖವಾಗಿದೆ.

ಒಂದು ತಾಳದ ಬೆಳೆಯು ಬಂದವರಿಗಿಲ್ಲೆನ್ನೆ
ಮುಂದು ಕೊಡುಗೈಯ ಒಕ್ಕಲಿನ ನಾಡೋಳು
ಹೊಂದಿ ದಾಸೋಹ ರೈತನಿಗೆ[11]

ಎಂದು ಹಾಡುವಲ್ಲಿ ದಾನ ಪ್ರಕ್ರಿಯೆಯು ಅರ್ಥವಾಗುತ್ತದೆ. ಹೀಗೆ ತಂದ ಬೆಳೆಯನ್ನು ಆಯಾ ಸಂಪ್ರದಾಯದಂತೆ ಪೂಜಿಸಿ ಧಾನ್ಯ ಲಕ್ಷ್ಮೀಯನ್ನು ಮನೆಯ ಒಳಗೆ ಬರಮಾಡಿಕೊಳ್ಳುವ ವಾಡಿಕೆಯುಂಟು.

ನಿಸರ್ಗದೊಂದಿಗೆ ನೇರ ಒಡನಾಟ ಇರುವುದು ಕೃಷಿಕರಿಗೆ. ಆದ್ದರಿಂದ ಅವರು ನಿಸರ್ಗದ ವಸ್ತುಗಳಲ್ಲಿ ಅಚಲವಾದ ದೈವಭಾವನೆಯನ್ನು ಹೊಂದುವರು. ಇದನ್ನು ಕೃಷಿಗೆ ಸಂಬಂಧಪಟ್ಟ ಅನೇಕ ಹಬ್ಬ-ಹುಣ್ಣಿಮೆಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದು. ಕೃಷಿಗೆ ಸಂಬಂಧಪಟ್ಟ ಆಚರಣೆಗಳಲ್ಲಿ ಬನದ ಹುಣ್ಣಿಮೆ,

ತೆನಿಕಟ್ಟುವ ಹುಣ್ಣಿಮೆ, ಸಂಕ್ರಾಂತಿ, ಕಾರಹುಣ್ಣಿಮೆ ಈ ಮುಂತಾದ ಹಬ್ಬಗಳಲ್ಲಿ ಹೊಸ್ತಿಲಿನ ಬಗೆಗೆ ವಿಶೇಷ ಆಚರಣೆಗಳು ಕಂಡುಬರುತ್ತವೆ. ರೈತನ ಬದುಕಿನ ಅಪೂರ್ವ ಕ್ಷಣಗಳಾದ ಈ ದಿನಗಳಲ್ಲಿ ಹೊಸ್ತಿಲಿನ ಮುಖೇನ ಮಾಡುವ ಆಚರಣೆಗಳು ಮಹತ್ವದ್ದಾಗಿವೆ. ಸದಾ ಅನಿಶ್ಚಿತತೆ ಯಲ್ಲಿಯೇ ಬದುಕುವ ರೈತನ ಬದುಕಿನ ಸಂತಸದ ಕ್ಷಣಗಳು ಎಂದರೆ ಬಿತ್ತಿಗೆಯ ಸಾಲಿನಲ್ಲಿ ಬೀಜಗಳು ಮೊಳಕೆ ಒಡೆದು ಹಸಿರಿನ ಸಾಲು ಮೂಡುವುದು. ಹಸಿರಿನ ಈ ಫಸಲಿಗೆ ಮಳೆ ಕೈಕೊಡದೆ ಕೀಟಗಳು ತಿನ್ನದೆ, ರೋಗಗಳು ಬೀಳದೆ, ತೆನೆ ತುಂಬಿ ತೂಗುವ ಪೈರುಗಳನ್ನು ನೋಡುವ ರೈತ ಅದು ರಾಶಿಯಾಗಿ ಮನೆಗೆ ಬರುವ ಮುನ್ನವೇ ಆಯ್ದು ತೆನೆಗಳನ್ನು ಒಯ್ದು ಬಾಗಿಲಿಗೆ ಕಟ್ಟಿ ಸಿಂಗರಿಸುತ್ತಾನೆ.


ಬೀದರ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಆಚರಣೆಗೊಳ್ಳಲ್ಪಡುವ ಬನದ ಹುಣ್ಣಿಮೆ ಮತ್ತು ತೆನಿಕಟ್ಟುವ ಹುಣ್ಣಿಮೆ ಒಂದಕ್ಕೊಂದು ಪೂರಕವಾದ ಹುಣ್ಣಿಮೆಗಳಾಗಿವೆ. ಬನದ ಹುಣ್ಣಿಮೆಯೆಂದು ದೇವರು ಬನ(ವನ)ಕ್ಕೆ ಹೋಗುತ್ತಾನೆ. ಮರಳಿ ಮನೆಗೆ ಬರುವುದು ತೆನಿ ಕಟ್ಟುವ ಹುಣ್ಣಿಮೆಯಂದು. ಅಂದು ಸಂತೋಷ-ಸಂಭ್ರಮದಿಂದ ದೇವರಿಗೆ ಸ್ವಾಗತಿಸುವ ತಯಾರಿ ನಡೆದಿರುತ್ತದೆ. ದೇವರು ಬನಕ್ಕೆ ಹೋದ ಕಾರಣದಿಂದಲೋ, ಚಳಿಯ ಕಾರಣದಿಂದಲೋ ಬೆಳೆಗಳು ಹುಲುಸಾಗಿ ಬೆಳೆದು ತೆನೆಗಳು ತುಂಬಿ ತೂಗಾಡುತ್ತಿರುತ್ತವೆ. ಜನಪದರ ನಂಬಿಕೆಯೆಂದರೆ ದೇವರು ಅಲ್ಲಿಗೆ ಹೋದ ಕಾರಣದಿಂದಲೇ ಬೆಳೆ ಹುಲುಸಾಗಿ ಬೆಳೆದಿದೆ, ಎಂದು ತೆನಿಕಟ್ಟುವ ಹುಣ್ಣಿಮೆಯ ದಿವಸ ಹೊಲಕ್ಕೆ ಹೋಗಿ ಆಯ್ದು ತೆನೆಗಳನ್ನು ತಂದು ದೇವರ ಮುಂದೆ ಹೊಸ್ತಿಲಿನ ಮೇಲೆ ಬಾಗಿಲಿಗೆ ಕಟ್ಟುತ್ತಾರೆ. ಮತ್ತು ಅಂಗಳದಲ್ಲಿ ಒಂದು ಹೊರಸು ಹಾಕಿ ಅದರ ಮೇಲೆ ಬಸವಣ್ಣನನ್ನು ಇಟ್ಟು ಮನೆಯಲ್ಲಿ ಮಕ್ಕಳು ಗಂಗಾಳು ಬಾರಿಸುತ್ತಾ "ಮನಿಯಾನ ದೇವರು ಹೊರಗೋ ಹೊರಗಿನ ದೇವರು ಒಳಗೋ" ಎಂದು ಹೇಳುತ್ತಾ ದೇವರ ಮನೆಯಿಂದ ತಲಬಾಗಿಲ ಹೊಸ್ತಿಲಿಗೆ, ತಲಬಾಗಿಲ ಹೊಸ್ತಿಲಿನಿಂದ ದೇವರ ಕೋಣೆಯತನಕ ಐದು ಬಾರಿ ಸುತ್ತಾಡಿ ದೇವರನ್ನು ಕರಕೊಳ್ಳುತ್ತಾರೆ.

ಇಂತಹದ್ದೆ ಆಶಯ ಆಚರಣೆಯುಳ್ಳ ಇನ್ನೊಂದು ಹಬ್ಬವೆಂದರೆ "ಹೊಸತು ಹೊಸಕ್ಕಿ" ಇದು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಣಬಹುದು. ಅಲ್ಲಿ ಮನೆಯ ಹಿರಿಯರು, ಮುತ್ತೈದೆಯರು, ಮಕ್ಕಳು ಹೊಲಕ್ಕೆ ಹೋಗಿ ಪೈರುಗಳನ್ನು ಪೂಜಿಸಿ ಆಯ್ದು ಸಸಿಗಳನ್ನು ತಂದು ಮನೆಯ ಬಾಗಿಲಿಗೆ, ಹೊಸ್ತಿಲ ಮೇಲೆ, ತುಳಸಿ ಕಟ್ಟೆಗೆ, ದೇವರ ಮನೆಯ ಬಾಗಿಲಿಗೆ, ಕೊಟ್ಟಿಗೆಯ ಬಾಗಿಲಿಗೆ, ವ್ಯವಸಾಯದ ಉಪಕರಣಗಳಿಗೆ ಕಟ್ಟುತ್ತಾರೆ. ಹಬ್ಬದೂಟದೊಂದಿಗೆ ಸಂತೋಷ ಹೊಂದುತ್ತಾರೆ.[೨]

ಈ ಎರಡು ಹಬ್ಬಗಳನ್ನು ಗಮನಿಸಿದಾಗ ಆಚರಣೆಯಲ್ಲಿ ಸಾಮ್ಯತೆ ಕಂಡುಬರುತ್ತದೆ. ಎರಡು ಕೃಷಿ ಪ್ರಧಾನವಾದ ಹಬ್ಬಗಳಾಗಿದ್ದು, ನಾಡವರು ಉತ್ತಮ ಬೆಳೆಗಾಗಿ ಹರಸಿಕೊಂಡು ಸಸಿಗಳನ್ನು ತಂದು

ಬಾಗಿಲುಗಳಿಗೆ ಕಟ್ಟಿದರೆ, ಉತ್ತರ ಕರ್ನಾಟಕದಲ್ಲಿ ತೆನೆಗಳನ್ನು ತಂದು ಕಟ್ಟುವ ಸಂಪ್ರದಾಯವಿದೆ. ಆಚರಣೆ ಮತ್ತು ಆಶಯ ಎರಡರಲ್ಲಿಯೂ ಸಾಮ್ಯತೆ ಗೋಚರವಾಗುತ್ತದೆ.

ಕೃಷಿ ಬದುಕಿನ ಮತ್ತೊಂದು ಮಹತ್ವಪೂರ್ಣ ಹಬ್ಬ ಸಂಕ್ರಾಂತಿ ಹಬ್ಬ. ಇದು ಸುಗ್ಗಿಯ ಕಾಲದ ಸಂಭ್ರಮವಾಗಿದೆ. ರೈತ ಬೆಳೆದ ಬೆಳೆಯನ್ನು ತಾನೊಬ್ಬನೆ ತಿನ್ನದೆ ದೈವದೊಂದಿಗೆ ಹಂಚಿ ತಿನ್ನುವ ಪರಿಪಾಠ ರೂಡಿಸಿಕೊಂಡು ಬಂದಿದ್ದಾನೆ. ಸಂಕ್ರಾಂತಿ ಹಬ್ಬದ ಹೊತ್ತಿಗಾಗಲೇ ಬೆಳೆಗಳು ಸಂಪೂರ್ಣ ಬೆಳೆದು ರಾಶಿಗೆ ಯೋಗ್ಯವಾಗಿರುತ್ತವೆ. ಸಂಕ್ರಾಂತಿಯಂದು ಸಗಣಿಯಿಂದ ಬಟ್ಟಲಿನಾಕಾರ ಮಾಡಿ ಅದರ ಒಳಗೆ ಸಜ್ಜೆ, ಎಳ್ಳು, ಬೆಲ್ಲ, ಬಾರಿ ಹಣ್ಣು, ಕಬ್ಬಿನ ತುಂಡು ಎಲ್ಲವನ್ನು ಇಟ್ಟು ಹೊಸ್ತಿಲ ಎರಡು ಬದಿಗೆ, ಅಂಗಳದಲ್ಲಿ ಇಟ್ಟು ಅರಿಶಿನ-ಕುಂಕುಮದೊಂದಿಗೆ ಪೂಜಿಸಿ ಕೈಮುಗಿಯುತ್ತಾರೆ. ಬಾಗಿಲಿಗೆ ತಳಿರು-ತೋರಣ ಕಟ್ಟಿ ಅಂಗಳದಲ್ಲಿ ವಿವಿಧ ಬಗೆಯ ಬಣ್ಣಗಳಿಂದ ಕೂಡಿದ ರಂಗೋಲಿ ಹಾಕುತ್ತಾರೆ.



ಸಂಕ್ರಾಂತಿ ಹಬ್ಬದ ಹೊಸ್ತಿಲು ಮತ್ತು ಅಂಗಳದ ಅಲಂಕಾರ

ಪ್ರಕೃತಿಯನ್ನು ನಂಬಿಕೊಂಡು ಬಾಳ್ವೆ ಮಾಡುವ ರೈತ ತನ್ನ ಪ್ರತಿಯೊಂದು ಸಂತೋಷದ ಲಾಭದ ವಿಷಯಗಳನ್ನು ಅದರೊಂದಿಗೆ ವಿನಿಮಯ ಮಾಡಿಕೊಂಡೇ ಅನುಭವಿಸುತ್ತಾನೆ. ಇಲ್ಲಿ ದೈವದೊಂದಿಗೆ ಹಂಚಿಕೊಂಡು ತಿನ್ನುವ ಪರಿಪಾಠ ಎದ್ದು ಕಾಣುತ್ತದೆ.

ಜೂನ್ ತಿಂಗಳಲ್ಲಿ ಬರುವ ಮತ್ತೊಂದು ವಿಶಿಷ್ಟವಾದ ಹಬ್ಬವೆಂದರೇ ಕಾರಹುಣ್ಣಿಮೆ. ಗ್ರಾಮೀಣ ಬದುಕಿನ ಸಮುದಾಯಿಕ ಮತ್ತು ಸಂಪ್ರದಾಯಿಕವಾದ ಹಬ್ಬವಾಗಿದೆ. ಅಂದು ಹೊಸ್ತಿಲ ಸಂಬಂಧಿ

ಆಚರಣೆಯಲ್ಲಿ ವಿಶೇಷತೆ ಇದೆ. ಅಂದು ಹೊಸ್ತಿಲು ವಿಶೇಷವಾಗಿ ಅಲಂಕರಿಸಿಕೊಳ್ಳುತ್ತದೆ. ಹೊಸ್ತಿಲು ತೊಳೆದು ಎಳ್ಳೆಣ್ಣೆ ಅಥವಾ ಡಾಂಬರ ಎಣ್ಣೆ ಹಚ್ಚಿ, ಅರಿಶಿನ-ಕುಂಕುಮಗಳಿಂದ ಹೂಗಳಿಂದ ಪೂಜಿಸಿ, ಬಾಗಿಲಿಗೆ ತಳಿರು ತೋರಣ ಕಟ್ಟುತ್ತಾರೆ. ಇಲ್ಲಿ ಎರಡು ಮಹತ್ವಪೂರ್ಣವಾದ ಆಚರಣೆಗಳು(ಅಂಶಗಳು) ಎದ್ದುಕಾಣುತ್ತವೆ. ಒಂದು "ಕರಿ ಹರಿಯುವುದು, ಎರಡು ಹೊಸ್ತಿಲಿಗೆ ಡಾಂಬರ ಎಣ್ಣೆ ಅಥವಾ ಎಳ್ಳೆಣ್ಣೆ ಹಚ್ಚುವುದು. ಅಂದು ಬೆಳಗಿನ ಪೂಜೆ ಹೊಸ್ತಿಲಿಗೆ ಡಾಂಬರ ಎಣ್ಣೆ ಅಥವಾ ಎಳ್ಳೆಣ್ಣೆ ಹಚ್ಚುವುದರೊಂದಿಗೆ ಪ್ರಾರಂಭವಾದರೆ ಸಾಯಂಕಾಲದ ಆಕರ್ಷಣೆ ಕರಿ ಹರಿಯುವುದು. ಊರಿನ "ಹೆಬ್ಬಾಗಿಲಿನ"(ಅಗಸೆ ಬಾಗಿಲು) ಹಾಗೂ ಹೊಳೆ ಸಾಲಲ್ಲಿ ಚಪ್ಪರ ಹಾಕಿ, ಹೆಬ್ಬಾಗಿಲಿನ ಎರಡು ಕಡೆಗೂ ಬೇವಿನ ತೊಪ್ಪಲು ಹಾಗೂ ಕೊಬ್ಬರಿಯ ಹೋಳನ್ನು ಕಟ್ಟಿರುತ್ತಾರೆ. ಸಿಂಗರಿಸಿಕೊಂಡು ಬಂದ ಎತ್ತುಗಳನ್ನು ಹೊಳೆ ಸಾಲಿನಿಂದ ಓಡಿಸಿಕೊಂಡು ಯಾರು ಮೊದಲು ಹೆಬ್ಬಾಗಿಲಿನ ಬೇವಿನ ತೊಪ್ಪಲು ಹಾಗೂ ಕೊಬ್ಬರಿಯನ್ನು ಬಾರುಕೋಲಿನಿಂದ ಕೆಳಗೆ ಬೀಳಿಸುತ್ತಾರೋ ಅವರು ಗೆದ್ದಂತಾಗುತ್ತದೆ.[೧೩] ಎತ್ತುಗಳ ವಿಜಯ ತಮ್ಮ ವಿಜಯವೆಂದರೆ ತಿಳಿಯುತ್ತಾರೆ. ವಿಜಯಹೊಂದಿ ಮನೆಗೆ ಮರಳಿ ಬರುವ ಆ ಎತ್ತುಗಳ ಠೀವಿಗಿಂತ ಅವುಗಳ ಯಜಮಾನನ ಠೀವಿಯೇ ನೋಡುವ ಹಾಗಿರುತ್ತದೆ. ಎತ್ತುಗಳನ್ನು ಹೊಸ್ತಿಲ ಬಳಿ ನಿಲ್ಲಿಸಿ, ಊರ ಜನ ನೋಡಿರುವುದರಿಂದ ದೃಷ್ಟಿ ತಾಕುತ್ತದೆ ಎಂದು ಎತ್ತುಗಳಿಗೆ ದೃಷ್ಟಿ ತೆಗೆದು ಕುಂಕುಮ-ಅರಿಶಿನ ಹಚ್ಚಿ ಆರತಿ ಬೆಳಗಿ, ಬೆಲ್ಲ ತಿನ್ನಿಸಿ ಒಳಗೆ ಕರೆದುಕೊಳ್ಳುತ್ತಾರೆ. ಮನೆಗೆ ಗಡಿ ಹೊಸ್ತಿಲಾದರೇ ಊರಿಗೆ ಗಡಿ ಅಗಸಿ, ಸ್ಪರ್ಧೆ ನಡೆಯುವುದು ಅಗಸಿಗೆ ಕಟ್ಟಿದ ಹಗ್ಗ(ಕರಿ) ಹರಿಯವುದರ ಮುಖಾಂತರ ಬಿಳಿ ಎತ್ತು ಮತ್ತು ಕಂದು ಎತ್ತು ಈ ಬಣ್ಣಗಳು ಇಲ್ಲಿ ಮಹತ್ವದ ಅಂಶಗಳಾಗಿವೆ. ಬಿಳಿ ಎತ್ತು ಗೆದ್ದರೆ ಎರಿ ಹೊಲದ ಬೆಳೆ(ಹಿಂಗಾರಿ) ಹುಲುಸಾಗಿ ಬರುತ್ತದೆ. ಕಂದು ಎತ್ತು ಗೆದ್ದರೆ ಮಸಾರಿ ಹೊಲದ ಬೆಳೆ(ಮುಂಗಾರಿ) ಬೆಳೆಯುತ್ತದೆ ಎಂದು ರೈತನ ನಂಬಿಕೆಯಾಗಿದೆ. ಹೀಗೆ ಕೃಷಿಕನ ಬದುಕಿನಲ್ಲಿ ಪ್ರತಿಯೊಂದು ಕ್ಷಣಗಳು ಪವಿತ್ರವಾದವುಗಳೇ ಆಗಿರುವುದರಿಂದ ಮನೆಯ ಲಕ್ಷ್ಮಿಯಂತಿರುವ ಹೊಸ್ತಿಲಿನ ಪೂಜೆಯೊಂದಿಗೆ ಆತನ ಪ್ರತಿಯೊಂದು ಕೆಲಸಗಳು ಆರಂಭ ಮತ್ತು ಅಂತ್ಯಗೊಳ್ಳುತ್ತವೆ.

ವಿಧಿ-ನಿಷೇಧಗಳು

ಕೃಷಿಕರು ತಮ್ಮ ಬದುಕಿನುದ್ದಕ್ಕೂ ಕೇವಲ ಹಬ್ಬಗಳನ್ನಷ್ಟೇ ಆಚರಿಸದೇ, ವಿಧಿ-ನಿಷೇಧಗಳನ್ನು ಕೂಡ ಚಾಚೂ ತಪ್ಪದೇ ಆಚರಿಸುತ್ತಾ ಬಂದಿದ್ದಾರೆ. ಅಂತಹ ಕೆಲವೊಂದು ವಿಧಿ-ನಿಷೇಧಗಳು ಈ ಕೆಳಗಿನಂತಿವೆ.

೧. "ಆಷಾಡದಲ್ಲಿ ಅತ್ತೆ-ಸೊಸೆ, ಅತ್ತಿ-ಅಳಿಯ ಒಂದೇ ಬಾಗಿಲಿನಲ್ಲಿ ಓಡಾಡಬಾರದು." ಹಾಗೆ ಓಡಾಡಿದರೆ ಜೀವಮಾನವೆಲ್ಲ ಜಗಳವಾಡುತ್ತಿರಬೇಕಾಗುತ್ತದೆ.

೨. ವ್ಯವಸಾಯದ ಉಪಕರಣಗಳಾದ ನೊಗ, ಹಾರೆ ಮುಂತಾದವುಗಳು ಮನೆಯ ಬಾಗಿಲಿಗೆ ತಾಕಬಾರದು.

೩. ಹೊಲ ಉತ್ತಿ ಮನೆಗೆ ಬರುವಾಗ ಹೆಗಲ ಮೇಲೆ ನೇಗಿಲು ಮತ್ತು ನೊಗವನ್ನು ಹೇರಿಕೊಂಡು ಹೆಬ್ಬಾಗಿಲ ಮುಖಾಂತರ ಬರಬಾರದು. ಇತ್ಯಾದಿ.

ಕೃಷಿ ಪ್ರಧಾನವಾದ ಮನೆತನಗಳೇ ಹೆಚ್ಚಾಗಿದ್ದ ಕಾಲದಲ್ಲಿ ಆಷಾಡ ಮಾಸದಲ್ಲಿ ಅತ್ತೆ-ಸೊಸೆ ಹಾಗೂ ಅತ್ತೆ-ಅಳಿಯ ಒಂದೇ ಬಾಗಿಲಿನಲ್ಲಿ ಓಡಾಡಬಾರದು ಎಂದು ನಿಷೇಧ ಒಡ್ಡುವುದಕ್ಕೆ ಕಾರಣ ಹುಡುಕಹೊರಟರೆ, ಆ ಕಾರಣ ಆ ಕಾಲಕ್ಕೆ ಅತೀ ಸೂಕ್ತವಾದುದು ಎನಿಸುತ್ತದೆ. ಒಂದೆ ಸಾಮಾನ್ಯವಾಗಿ ಮದುವೆ ಮಾಡುವುದು ವೈಶಾಖ ಮಾಸದಲ್ಲಿ. ಹೊಲದಲ್ಲಿ ಕೆಲಸ ಕಾರ್ಯವಿರುತ್ತಿರಲಿಲ್ಲ. ಆದ್ದರಿಂದ ಮದುವೆಯಂತಹ ದೊಡ್ಡ ಕಾರ್ಯಗಳನ್ನು ಬೇಸಿಗೆಯಲ್ಲಿಯೇ ಮಾಡಿ ಮುಗಿಸುತ್ತಿದ್ದರು. ಬೇಸಿಗೆಯ ನಂತರ ಬರುವುದು ಆಷಾಡಮಾಸ. ಅಂದರೆ ಮುಂಗಾರಿ ಬೆಳೆಯನ್ನು ಬಿತ್ತುವುದಕ್ಕೆ ರೈತ ಬೇಸಿಗೆಯ ಬಿಸಿಲಿನಿಂದ ಬೀಳು ಬಿದ್ದ ಹೊಲವನ್ನು ಬಿತ್ತಿಗೆಗೆ ಅಣಿ ಮಾಡಿಕೊಳ್ಳುವ ಸಮಯ.

ಹೊಸದಾಗಿ ಮದುವೆಯಾದ ಗಂಡ-ಹೆಂಡಿರು ಒಬ್ಬರಿಗೊಬ್ಬರು ಬಿಟ್ಟಿರಲಾರರು, ಹಾಗೆ ಅಂತ ಎಲ್ಲಾ ಕೆಲಸ-ಕಾರ್ಯ ಬಿಟ್ಟು ಕೂಡುವುದು ಸರಿಯಲ್ಲ. ಆದ್ದರಿಂದ ಒಂದು ತಿಂಗಳ ಕಾಲ ಹೆಂಡತಿಯನ್ನು(ಸೊಸೆ) ತೌರಿಗೆ ಕಳುಹಿಸುವುದಕ್ಕಾಗಿ ಈ ಯೋಜನೆಯನ್ನು ಮಾಡಿರಬಹುದೇ? ಹೆಂಡತಿಯ ಅಗಲಿಕೆಯನ್ನು ತಾಳಲಾರದೇ ಗಂಡ ಆಕೆಯ ತೌರಿಗೇ ಹೋಗುವ(ಗಂಡ) ಸಂಭವವು ಉಂಟು ಎಂದು ಅತ್ತೆ-ಅಳಿಯ ಒಂದೇ ಬಾಗಿಲಿನಲ್ಲಿ ಓಡಾಡಬಾರದು ಎಂದು ನಿಷೇಧ ಮುಂದಿಟ್ಟರು. ಒಟ್ಟಿನಲ್ಲಿ ಆತ ತನ್ನ ಮನೆಯಲ್ಲಿಯೇ ಇದ್ದು ಕೃಷಿ ಕಾರ್ಯದಲ್ಲಿ ನಿರತನಾಗಲಿ ಎಂಬುದು ಈ ನಿಷೇಧಗಳ ಹಿಂದೆ ಅಡಗಿರಬಹುದಾದ ಸತ್ಯವಾಗಿರಬಹುದು. ಇನ್ನೊಂದು ರೀತಿಯಿಂದ ವಿಶ್ಲೇಷಣೆಯನ್ನು ಮಾಡಿದರೆ, ಆಷಾಡದಲ್ಲಿ ಬೀಸುವ ಗಾಳಿ, ಅದೇ ತಾನೆ ಮದುವೆಯಾದ ತಮ್ಮ ಮುದ್ದು ಮಗಳು ಈ ಗಾಳಿಯಲ್ಲಿ ಕೃಷಿ ಕೆಲಸ ಪ್ರಾರಂಭ ಮಾಡುವುದಾಗಲೀ ಅಥವಾ ಬೇಸಿಗೆಯಿಂದ ಬೆಳೆ ಇರದೆ ಮನೆಯಲ್ಲಿ ಧಾನ್ಯಗಳಿಲ್ಲದ ಕಾರಣಗಳಿಂದಲೇ ಮಗಳಿಗೆ ತೊಂದರೆಯಾಗಬಾರದು ಎನ್ನುವ ಕಾರಣಕ್ಕಾಗಿಯೋ ಈ ಕಾರಣ ಮುಂದೆ ಮಾಡಿರಬಹುದು. ಯಾಕೆಂದರೆ ಆಷಾಡ ಗಾಳಿಗೆ ಹೆದರಿ ಪುರುಷನ ಬಾಯಿಂದ ಬರುವ ಮಾತುಗಳು ನೋಡಿ "ಆಷಾಡ ಗಾಳಿ ಬೀಸಿದರ ಹೇಸಿ ನನ ಜೀವ ಹೆಣ್ಣಾಗಿ ಯಾಕ ಹುಟ್ಟಲಿಲ್ಲ" ಎಂದನಂತೆ. ಅಂದರೆ ಹೆಣ್ಣಿಗೆ ಈ ಸಮಯದಲ್ಲಿ ಒಂದು ತಿಂಗಳು ತೌರಿನ ಸುಖದಾಯಕ ದಿನಗಳಾದರೆ, ಗಂಡು ಹೊಲದಲ್ಲಿ ಸಪ್ಪೆ(ಹುಲ್ಲು) ಹೊರೆಯನ್ನು ಹೊತ್ತುಕೊಂಡು ಗಾಳಿಯಲ್ಲಿಯೇ ಮನೆಗೆ ಬರಬೇಕು. ಹೆಣ್ಣಿನ ವಿಶ್ರಾಂತಿಯನ್ನು ಕಂಡು ಗಂಡು ಒಂದು ಕ್ಷಣ ತಾನು ಹೆಣ್ಣಾಗಿ ಹುಟ್ಟಬಹುದಾಗಿತ್ತು ಎಂದು ಅಂದುಕೊಳ್ಳುವಷ್ಟು ಬಿರುಸಿನ ದಿನಗಳು.

ಈ ಒಂದು ತಿಂಗಳಲ್ಲಿ ಗಂಡ-ಹೆಂಡಿರ ಕೂಡುವಿಕೆಯಿಂದ ಸ್ತ್ರೀ ಗರ್ಭ ಧರಿಸಿದರೆ ಆಕೆಯ ಮಗು ಹೆರುವ ಸಮಯ ಬರುವುದು ಸುಗ್ಗಿಯ ದಿನಗಳಲ್ಲಿ. ಆಗ ಕೃಷಿ ಮನೆತನಗಳಲ್ಲಿ ಕೆಲಸದ ಭರಾಟೆ ಇರುತ್ತದೆ. ಇದನ್ನು ತಪ್ಪಿಸುವ ಕಾರಣಕ್ಕೆ ಈ ನಿಷೇಧ ಒಡ್ಡಿರಬಹುದು. ಹೀಗೆ ಒಂದೊಂದು ಮುಖದಿಂದ ನೋಡಿದರೆ ಒಂದೊಂದು ವಿಷಯಗಳು ಬೆಳಕಿಗೆ ಬರುತ್ತವೆ. ಇದರಲ್ಲಿ ಸ್ವಾರ್ಥ ಪರಾರ್ಥ ಎರಡು ಇರುವುದು ವೇದ್ಯವಾಗುತ್ತದೆ. ವ್ಯವಸಾಯದ ಸಾಮಾನುಗಳನ್ನು ಬಾಗಿಲಿಗೆ ತಾಕಿಸಿಕೊಂಡು ಬರುವ ಹಾಗಿಲ್ಲ. ಯಾಕೆ? ಯಾಕೆಂದರೆ ಕೃಷಿಯ ಉಪಕರಣಗಳು ಕಬ್ಬಿಣದಿಂದ ಮಾಡಿದವುಗಳಾಗಿರುತ್ತದೆ. ಬಾಗಿಲ ಮುಖಾಂತರ ಒಳಗೆ ತೆಗೆದುಕೊಂಡು ಬರುವಾಗ ಬಾಗಿಲಿಗೆ ತಾಕಿ, ಬಾಗಿಲಿಗೆ ಹಾನಿಯುಂಟಾಗಬಹುದು, ಆದ್ದರಿಂದ 'ತಾಕಿಸಬಾರದು' ಎಂದು ನಿಷೇಧ ಹಾಕಿದರು.

ಮೇಲಿನ ಆಶಯವನ್ನೆ ಹೊತ್ತಿರುವ ಮತ್ತೊಂದು ನಿಷೇಧವೆಂದರೆ, ಉತ್ತಿ-ಬಿತ್ತಿ ಮನೆಗೆ ಬರುವಾಗ ಎತ್ತುಗಳ ಹೆಗಲ ಮೇಲೆ ನೊಗವನ್ನು ಹೇರಿಕೊಂಡು ಹೆಬ್ಬಾಗಿಲ ಮುಖಾಂತರ ಬರಬಾರದು. ಇಲ್ಲಿಯು ಬಾಗಿಲ ಸುರಕ್ಷೆಯೇ ಪ್ರಮುಖವಾಗಿದೆ. ಏಕೆಂದರೆ ಹೊಲದಲ್ಲಿ ಮುಂಜಾನೆಯಿಂದ ಸಂಜೆಯವರೆಗೆ ದುಡಿದು ಬಳಲಿದ ಎತ್ತುಗಳು ಹೇಗೆಂದರೆ ಹಾಗೆಯೇ ಬರುತ್ತಿರುತ್ತವೆ. ಅವುಗಳ ಜೊತೆ ದುಡಿದ ಮಾನವರು ಕೂಡ ಬಳಲಿರುವುದರಿಂದ ಅವರ ಸಹನೆಯು ಮೀರಿರುತ್ತದೆ. ಮನೆಯಲ್ಲಿರುವ ಮಕ್ಕಳು ಹೆಬ್ಬಾಗಿಲ ಮುಂದೆ ಆಡುತ್ತಿರುತ್ತಾರೆ. ಹೆಬ್ಬಾಗಿಲ ಮುಖಾಂತರ ಬಂದರೆ ಮಕ್ಕಳಿಗೆ ಹಾನಿಯುಂಟಾಗಬಹುದು. ಮಕ್ಕಳನ್ನು ಎತ್ತಿ ಪಕ್ಕಕ್ಕೆ ಸರಿಸುವಷ್ಟರಲ್ಲೇ ಎತ್ತುಗಳು ಒಳಗೆ ನುಗ್ಗಬಹುದು. ಈ ಎಲ್ಲಾ ಹಾನಿಯನ್ನು ತಪ್ಪಿಸುವುದಕ್ಕೋಸ್ಕರ ನಿಷೇಧ ಹುಟ್ಟಿರಬಹುದು.

ಹೀಗೆ ನಿಷೇಧಗಳು ಆ ಸಮಯದಲ್ಲಿ ಕೊಂಚ ಅಹಿತಕರವಾದ ವಾತಾವರಣವನ್ನು ಸೃಷ್ಟಿಸಿದರೂ, ವಿವೇಚಿಸಿ ನೋಡಿದರೆ ಅದರಿಂದ ಲಾಭವೇ ಹೊರತು ಹಾನಿಯಿಲ್ಲ. ಆದರೆ ಕೆಲವೊಂದು ನಿಷೇಧಗಳು ಕೊಂಚ ಹೆಚ್ಚು ಕಿರಿಕಿರಿ ಉಂಟುಮಾಡುತ್ತವೆ. ಇಂತಹ ಕೆಲವೊಂದು ನಿಷೇಧಗಳನ್ನು ಕುರಿತು ನೋಡಬಹುದು.

ಹೊಸ್ತಿಲಿಗೆ ಸಂಬಂಧಪಟ್ಟ ಕೆಲವೊಂದು ಅತಿಮಾನುಷ ನಂಬಿಕೆಗಳು (ನಿಷೇಧಗಳು)

೧. ದೇವಸ್ಥಾನದಿಂದ ಬಂದಾಗ ಕಾಲನ್ನು ತೊಳೆದುಕೊಂಡು ಮನೆಯ ಒಳಗೆ ಹೋಗಬಾರದು.

೨. ದೇವಸ್ಥಾನಕ್ಕೆ ಹೋದ ಬಾಗಿಲಿನಿಂದ ಹಿಂದಿರುಗಿ ಬರಬಾರದು. ಒಂದೇ ಬಾಗಿಲಿದ್ದರೆ ಎಡದಿಂದ ಹೋಗಿ ಬಲದಿಂದ ಬರಬೇಕು. ನಮ್ಮ ಜೊತೆಯಲ್ಲಿ ಬಂದ ದೆವ್ವ, ದುಷ್ಟಶಕ್ತಿಗಳು ದೇವಾಲಯದ ಹೊರಗೆ ನಿಂತು ನಮ್ಮನ್ನೇ ಕಾಯುತ್ತಿರುತ್ತವೆ. ಬೇರೆ ದಾರಿಯಿಂದ ಬಂದರೆ ಅವು ಹೊರಟು ಹೋಗುತ್ತವೆ.

೩. ಮನೆಯ ಬಾಗಿಲಿಗೆ ಮೂರು ನಾಮ ಬಳಿದರೆ ಕೂಗು ಮಾರಿ ಬರುವುದಿಲ್ಲ.

೪. ಎಡ ಹೊಸ್ತಿಲ ಮೇಲೆ ನಿಂತು ತಲೆ ಬಾಚಿಕೊಳ್ಳಬಾರದು, ಬಾಚಿಕೊಂಡರೆ ನೆಲದ ಮೇಲೆ ಉದುರಿದ ಕೂದಲಿಗೆ ಲಕ್ಷ್ಮಿ ಎಡವಿ, ಬರುತ್ತಿದ್ದವಳು ಹೊರಟು ಹೋಗುತ್ತಾಳೆ.

೫. ಯಾರಾದರೂ ಸತ್ತರೆ ಹನ್ನೊಂದು ದಿನಗಳವರೆಗೆ ರಂಗೋಲಿ ಬಿಡಬಾರದು.

೬. ಹೆಣ್ಣು ಮಕ್ಕಳಿಗೆ ಸೋಗಲು ಹುಯ್ಯುವಾಗ ಹೊಸ್ತಿಲಿನಿಂದ ಹೊರಗೆ ಹೋಗುವವರೆಗೂ ಅವರೇ ಹಿಡಿದಿರಬೇಕು. ಪುನಃ ಮನೆಯ ಒಳಗೆ ಬರಬಾರದು.

೭. ಹೆಣವನ್ನು ಏಳು ಬಾಗಿಲ ದಾಟಿಸಬಾರದು.

೮. ತುಂಬಿದ ಮನೆಯಲ್ಲಿ ಹೆಣ್ಣು ಕಾಲು ಸವರಿ ಅಳಬಾರದು.

೯. ಹೊರಗಿನಿಂದ ಬಂದ ಅತಿಥಿಗಳಿಗೆ ಮೊದಲು ಕಾಲು ತೊಳೆಯಲು ನೀರು ಕೊಡಬೇಕು. ಒಬ್ಬೊಬ್ಬರ ಕಾಲ್ಗುಣ ಒಂದೊಂದು ತರ ಇರುತ್ತದೆ. ಒಳ್ಳೆಯದಾಗಬಹುದು, ಇಲ್ಲ ಕೆಟ್ಟದಾಗಬಹುದು.

೧೦. ಮಕ್ಕಳ ತಲೆಯ ಸುಳಿ ಹಾಲು ಕುಡಿಸುವಾಗ ತಾಯಿಯ ಎದೆಗೆ ತಾಕಿದರೆ ಎದೆ ಸುಳಿಯಾಗುತ್ತದೆ. ಅದಕ್ಕೆ ಒಂದು ಮಗು ಇರುವ ತಾಯಿ ಎಡ ಹೊಸ್ಲಲ್ಲಿ ನಿಂತಕೊಂಡು ಎದೆಗೆ ಕಾಲಿನಿಂದ ಇಳಿ ತೆಗೆದರೆ ಹೋಗುತ್ತದೆ.

೧೧. ಕುಂಬಳ ಕಾಯಿಯನ್ನು ಕುಯ್ಯಬಾರದು, ಹೊಸ್ಲ ಮೇಲೆ ಒಡೆಯಬೇಕು.

೫.೩. ದೈವ

ದೇವರ ಆಜ್ಞೆ ಇಲ್ಲದೆ ಭೂಮಿಯ ಮೇಲೆ ಒಂದು ಹುಲ್ಲು ಕಡ್ಡಿಯು ಅಲುಗಾಡುವುದಿಲ್ಲ'' ಎನ್ನುವ ಮಾತೊಂದಿದೆ. ಅಂದರೆ ಮಾನವ ಶಕ್ತಿಗೆ ಮೀರಿದ ಒಂದು ಶಕ್ತಿ ಇದೆ. ಅದರಿಂದಲೆ ಪ್ರಪಂಚದ ಮುನ್ನಡೆ ಸಾಧ್ಯ. ಕಷ್ಟ-ಸುಖ, ಸಮೃದ್ಧಿಯೂ ಸಹ. ಆ ಶಕ್ತಿಯ ಉಪಕಾರ ಸ್ಮರಣೆಗೋಸ್ಕರ ಅದನ್ನು ದೈವವೆಂದು ಪೂಜಿಸಿದ. ಈ ಭಯದಿಂದ ಅನೇಕ ರೀತಿಯ ಹಬ್ಬ-ಹರಿದಿನ, ಪೂಜೆ-ಪುನಸ್ಕಾರಗಳು ಜಾತ್ರೆ-ಉತ್ಸವ ಬಲಿ ಸಮರ್ಪಿಸಿ ಆ ಶಕ್ತಿಗೆ ಸಂತೃಪ್ತಿಗೊಳಿಸಿ ತಾನು ಸಂತೃಪ್ತಿಯನ್ನು ಪಡೆಯುತ್ತಿದ್ದಾನೆ.

ಜಾತಿ-ಮತ ಎಂಬ ವ್ಯವಸ್ಥೆಯ ಪರಿಧಿಯ ಒಳಗೆ ಜನಿಸುವ ಮಾನವ, ಸಹಜವಾಗಿಯೋ ಒತ್ತಾಯಪೂರ್ವಕವಾಗಿಯೋ, ಆ ಮತದ ಪ್ರಭಾವಕ್ಕೊಳಗಾಗುತ್ತಾನೆ. ಇಲ್ಲಿ ನಂಬಿಕೆ ಅಗತ್ಯ. ನಂಬಿಕೆ ಇಲ್ಲದಿದ್ದರೆ ದೇವರಾಗಲೀ ಮತಗಳಾಗಲೀ ಉಳಿಯುತ್ತಿರಲಿಲ್ಲ. ಒಂದೊಂದು ನಂಬಿಕೆಯಿಂದ ಒಂದೊಂದು ಆಚರಣೆ ಹುಟ್ಟಿಕೊಂಡಿವೆ. ಹೀಗೆಯೇ ಅನೇಕ ಆಚರಣೆ ಸಂಪ್ರದಾಯಗಳು ಹಬ್ಬ-ಹುಣ್ಣಿಮೆಗಳು ಹೊಸ್ತಿಲು ಸಂಬಂಧಪಟ್ಟಂತೆ ಹುಟ್ಟಿಕೊಂಡಿವೆ.

ಹಬ್ಬ ಯಾವುದೇ ಇರಲಿ ನಮಗೆ ನಮ್ಮ ಮನೆಗೆ ಅವಿಭಾಜ್ಯ ಅಂಗವಾಗಿರುವ ಹೊಸ್ತಿಲಿಗೆ ಮಾತ್ರ ಪ್ರಥಮ ಪೂಜೆ. ಗೃಹಿಣಿಯ ಗೃಹಕೃತ್ಯಗಳು ಆರಂಭವಾಗುವುದು ಕೂಡ ಹೊಸ್ತಿಲಿನ ಪೂಜೆಯೊಂದಿಗೆ. ಹಬ್ಬದ ಆರಂಭವೇ ಹೊಸ್ತಿಲು ಪೂಜೆ, ಅಲಂಕಾರ, ಬಾಗಿಲಿಗೆ ತಳಿರು-ತೋರಣ ಕಟ್ಟುವುದರೊಂದಿಗೆ ಪ್ರತಿಯೊಂದು ಹಬ್ಬ-ಹುಣ್ಣಿಮೆ ಒಂದೊಂದು ವಿಶೇಷತೆಯನ್ನು ಪ್ರತ್ಯೇಕತೆಯನ್ನು ಕಾಯ್ದುಕೊಂಡರೆ ಆ ಎಲ್ಲ ವಿಶೇಷತೆಯಲ್ಲಿ ಹೊಸ್ತಿಲು ಮಾತ್ರ ತನ್ನ ವಿಶೇಷತೆಯನ್ನು ಬಿಟ್ಟಿಲ್ಲ. ಇಂತಹ ಕೆಲವೊಂದು ಹಬ್ಬಗಳಲ್ಲಿ ಹೊಸ್ತಿಲಿನ ಮಹತ್ವ ಮತ್ತು ಪಾತ್ರದ ಬಗ್ಗೆ ವಿವರವಾಗಿ ನೋಡಬಹುದು.

ಯುಗಾದಿ

ಯುಗದ ಆದಿ ಯುಗಾದಿ. ಹಳೆಯ ಮತ್ತು ಹೊಸ ವರ್ಷಗಳನ್ನು ಜೋಡಿಸುವ ಸುವರ್ಣ ಸೇತುವೆ. ಈ ಹಬ್ಬದಲ್ಲಿ ವೈಯಕ್ತಿಕ ಬದುಕು ಸಾರ್ವಜನಿಕ ಬದುಕಿನ ಪ್ರತ್ಯೇಕತೆಯನ್ನು ಕಾಪಾಡುವಂತಹ ಸುವರ್ಣ ರೇಖೆಯಾದ ಹೊಸ್ತಿಲಿನ ಮತ್ತು ಬಾಗಿಲಿನ ಪಾತ್ರ ಹಿರಿದಾಗಿದೆ. ಯುಗಾದಿ ಎಂದ ಕೂಡಲೇ ನೆನಪಿಗೆ ಬರುವುದು ಬೇವು-ಬೆಲ್ಲ. ಬೇವಿನ ಕಹಿ, ಬೆಲ್ಲದ ಸಿಹಿ ಸುಖ-ದುಃಖಗಳ ಪ್ರತೀಕ.

ಅಂದು ಪ್ರಾತಃಕಾಲದಲ್ಲಿ ಎದ್ದು ಬೇವಿನ ಸೊಪ್ಪು ಮಿಶ್ರಿತ ನೀರಿನಿಂದ ಅಭ್ಯಂಜನ ಸ್ನಾನಮಾಡಿ ಹೊಸ್ತಿಲಿಗೆ ಪೂಜಿಸಿ ಮನೆಯ ಮುಖ್ಯದ್ವಾರ, ದೇವರ ಮನೆಯ ದ್ವಾರವನ್ನು ಮಾವಿನ ತಳಿರು-ತೋರಣಗಳಿಂದ ಅಲಂಕರಿಸಿ, ಮನೆಯ ಮುಂದೆ ಬಣ್ಣ-ಬಣ್ಣದ ರಂಗೋಲಿ ಬಿಡುತ್ತಾರೆ. ಹಾಗೆಯೇ ಬಾಗಿಲಿನ ಎರಡು ಕಡೆಗಳಲ್ಲಿ ಬೇವಿನ ಸೊಪ್ಪನ್ನು ಕಟ್ಟುತ್ತಾರೆ. ನಂತರ ಮನೆಯವರೆಲ್ಲ ಸ್ನೇಹಿತ ಬಂಧುಗಳೊಡಗೂಡಿ ಬೇವು-ಬೆಲ್ಲ ಸ್ವೀಕರಿಸುತ್ತಾರೆ.

ಈ ಹಬ್ಬದ ಪ್ರತಿಯೊಂದು ಹಂತದಲ್ಲಿ ಬೇವಿನ ಪ್ರಾಮುಖ್ಯತೆಯನ್ನು ಗಮನಿಸಬಹುದು. ಆಯುರ್ವೇದದ ಪ್ರಕಾರ ವಸಂತಕಾಲದಲ್ಲಿ ತಲೆದೋರುವ ಶಾರೀರಿಕ ರೋಗಗಳಿಗೆ ಬೇವು ಸಂಜೀವಿನಿ. ಬೇವು ಕ್ರಿಮಿನಾಶಕ ಶಕ್ತಿಯನ್ನು ಹೊಂದಿದೆ. ಉಷ್ಣತೆಯನ್ನು ತಗ್ಗಿಸಿ ಮೈಗೆ ತಂಪನ್ನು ಒದಗಿಸುವ ಶಕ್ತಿಯೂ ಅದಕ್ಕಿದೆ. ಸ್ವಲ್ಪ ಉಷ್ಣಗುಣದ ಬೆಲ್ಲವೂ ಸೇರಿದರೆ ದೇಹದಲ್ಲಿ ಸಮತೋಲನ ಸಾಧ್ಯ. ಜನಪದರ ನಂಬಿಕೆಯಂತೆ ಬೇವು ದೇವಿಯ ಪ್ರತೀಕ. ಜನಪದರ ಆರಾಧ್ಯ ದೇವತೆ ಸ್ತ್ರೀ ದೇವತೆ. ಫಲವಂತಿಕೆಯ ಪ್ರತೀಕ ಮಾವು-ಬೇವು ಚಿಗುರೊಡೆಯುವುದು. ಇಂತಹ ಶುಭ ಸಂದರ್ಭದಲ್ಲಿ ಈ ಯುಗಾದಿ ಹಬ್ಬ ಸಂಭ್ರಮದಿಂದ ಆಚರಿಸುತ್ತಾರೆ.

ಕಾರಹುಣ್ಣಿಮೆ

ಕೃಷಿಕರ ಮಹತ್ವಪೂರ್ಣ ಹಬ್ಬಗಳಲ್ಲೊಂದಾದ ಕಾರಹುಣ್ಣಿಮೆ ಬರುವುದು ಜೂನ್ ತಿಂಗಳಲ್ಲಿ. ಈ ಹುಣ್ಣಿಮೆಯಲ್ಲಿ ಎತ್ತುಗಳಿಗೆ ಪ್ರಮುಖವಾದ ಸ್ಥಾನ. ಅಂದು ಎತ್ತುಗಳನ್ನು ಹೊಳೆಗೋ, ಬಾವಿಗೋ,

ಹೊಡೆದುಕೊಂಡು ಹೋಗಿ ಮೈ ತೊಳೆದು ಕೊಂಬುಗಳಿಗೆ ಎಣ್ಣೆ ಹಚ್ಚಿ ವಿಭೂತಿ-ಕುಂಕುಮಗಳಿಂದ ಪೂಜಿಸುತ್ತಾರೆ. ಮೈಗೆ ಬಣ್ಣ ಹಚ್ಚಿ, ಕೊರಳಿಗೆ ಗೆಜ್ಜೆಯ ಸರ, ಜೂಲುಗಳನ್ನು ಕಟ್ಟುತ್ತಾರೆ. ಕೊಂಬುಗಳಿಗೆ ಬೆಳ್ಳಿಯ ಅಥವಾ ಹಿತ್ತಾಳೆಯ ಕವಚಗಳನ್ನು ಹಾಕುತ್ತಾರೆ. ಅಂದು ಹೊಸ್ತಿಲ ಆಚರಣೆಯಲ್ಲಿ ವಿಶೇಷತೆ ಇದೆ. ಎತ್ತುಗಳನ್ನು ಸಿಂಗಾರ ಮಾಡುವವರು ಸಾಮಾನ್ಯವಾಗಿ ಪುರುಷರು. ಈ ಕಡೆ ಮನೆಯ ಹೆಣ್ಣು ಮಕ್ಕಳು ಮನೆಯನ್ನು, ಅಂಗಳ ಹೊಸ್ತಿಲನ್ನು ತೊಳೆದು, ಹೊಸ್ತಿಲಿಗೆ ಡಾಂಬರ ಎಣ್ಣೆ-ಎಳ್ಳು ಎಣ್ಣೆ ಹಚ್ಚುತ್ತಾರೆ. ನಂತರ ಅರಿಶಿಣ-ಕುಂಕುಮ ತಳಿರು ತೋರಣಗಳಿಂದ ಅಲಂಕರಿಸುತ್ತಾರೆ. ಕಸೂತಿ ಹಾಕಿದ ಬಾಗಿಲ ಪರದೆಯನ್ನು ಕಟ್ಟಿ ಪೂಜಿಸುತ್ತಾರೆ. ಮನೆಯಲ್ಲಿ ಹಬ್ಬದ ಅಡಿಗೆಯನ್ನು ಮಾಡುತ್ತಾರೆ. ಮೊದಲ ನೈವೇದ್ಯ ಮನೆಯ ಎತ್ತಗಳಿಗೆ, ಹೊಸ್ತಲಿಗೂ ಕೂಡ ನೈವೇದ್ಯ ಹಿಡಿಯುತ್ತಾರೆ. ನಂತರ ಮನೆಯ ಮಂದಿಯೆಲ್ಲಾ ಊಟ ಮಾಡುತ್ತಾರೆ. ಹೊಸ್ತಿಲಿಗೆ ಡಾಂಬರ ಎಣ್ಣೆ ಅಥವಾ ಎಳ್ಳ ಎಣ್ಣೆ ಹಚ್ಚುವುದರ ಹಿಂದೆ ವೈಜ್ಞಾನಿಕ ಅಂಶವನ್ನು ಕಾಣಲು ಸಾಧ್ಯ. ಹೊಸ್ತಿಲು ಸಾಮಾನ್ಯವಾಗಿ ಕಟ್ಟಿಗೆಯಿಂದ ಮಾಡಿರುತ್ತಾರೆ. ದಿನನಿತ್ಯ ನೀರನಿಂದ ತೊಳಿಸಿಕೊಳ್ಳಲು ಹೊಸ್ತಿಲು ಕೊಳೆತು ಹೋಗುವ ಸಂಭವವಿರುತ್ತದೆ. ಎಣ್ಣೆ ಹಚ್ಚುವುದರಿಂದ ನೀರು ಜಾರಿ ಹೋಗುತ್ತವೆ. ಕಟ್ಟಿಗೆಗೆ ಅಪಾಯವಾಗುದಿಲ್ಲ. ಇದು ಸಾಂಪ್ರದಾಯಿಕ ಮತ್ತು ಸುರಕ್ಷೆಯ ದೃಷ್ಟಿಯಿಂದಲೂ ಒಳ್ಳೆಯದು. ಆಧುನಿಕ ಯುಗದಲ್ಲಿ ಎಣ್ಣೆಯ ಸ್ಥಾನವನ್ನು ವಾರ್ನಿಸ್ (ಪೇಂಟ್) ಪಡೆದಿಕೊಂಡಿದೆ.

ನಾಗರ ಪಂಚಮಿ

ನಾಗರ ಪಂಚಮಿ ವಿಶೇಷವಾಗಿ ಹೆಣ್ಣು ಮಕ್ಕಳ ಹಬ್ಬ. ಈ ಹಬ್ಬದ ಆಚರಣೆಗಾಗಿ ಹೆಣ್ಣು ಮಕ್ಕಳು ಗಂಡನ ಮನೆಯಿಂದ ತವರು ಮನೆಗೆ ಬರುತ್ತಾರೆ. ಅಂದು ಗೋಮಯದಿಂದ ಬಾಗಿಲು ಸಾರಿಸಿ ಚಿತ್ರಗಳನ್ನು ಬರೆದು ನೇಮದಿಂದ ನಾಗನನ್ನು ಪೂಜಿಸಬೇಕು. ಅಂದು ಹೊಸ್ತಿಲಿನ ವಿಶೇಷ ಆಚರಣೆಯನ್ನು ಕಾಣಬಹುದು. ಅದೇ ಭಂಡಾರ ಒಡೆಯುವುದು. ಆ ದಿನ ಮದುವೆಯಾದ ಹೆಣ್ಣು ತವರಿಗೆ ಬಂದಿರುತ್ತಾಳೆ. ಆಕೆ ಮತ್ತು ಆಕೆಯ ಸೋದರ ಮಾವನ ಮಧ್ಯೆ ನಡೆಯುವ ಒಂದು ಆಚರಣೆ. ಹೊಸ್ತಿಲ ಮೇಲೆ(ಕಣಕದಿಂದ) ಎರಡು ಪೂರಿ ಆಕಾರ ಮಾಡಿ ಒಂದರ ಒಳಗೆ ಕಡಲೆಬೇಳೆ, ಇನ್ನೊಂದರ ಒಳಗೆ ಕಣಕದ ಸಣ್ಣ-ಸಣ್ಣ ಕಡಲೆಬೇಳೆ ಗಾತ್ರದ ಉಂಡೆಗಳನ್ನು ಮಾಡಿ ತುಂಬುತ್ತಾರೆ. ಅವುಗಳನ್ನು ಹೊಸ್ತಿಲ ಮೇಲೆ ಇಡುತ್ತಾರೆ. ಹೆಣ್ಣು ಬೇಕೋ, ಹೊನ್ನು ಬೇಕೋ ಎಂದು ಸೋದರ ಮಾವ ಕೇಳುತ್ತಾನೆ. ಆಗ ಯಾವುದಾದರೂ ಒಂದು ಭಂಡಾರ(ಕಣಕದ ಬಟ್ಟಲು) ಒಡೆಯಬೇಕು. ಕಡಲೇಬೇಳೆ ಬಂದರೆ ಹೊನ್ನು(ಬಂಗಾರ), ಕಣಕದ ಉಂಡೆಗಳು ಬಂದರೆ ಹೆಣ್ಣು ಕೊಡಬೇಕು. ಮುಂದೆ ಹೆತ್ತು ಕೊಡು ಎಂದು ಹಾಸ್ಯ ಮಾಡುತ್ತಾರೆ. ನಂತರ ಮನೆಯ ಹೆಣ್ಣು ಮಗಳಿಗೆ ಉಡುಗರೆ ಕೊಟ್ಟು ಹಬ್ಬದ ಊಟ ಮಾಡುತ್ತಾರೆ.

ನಾಗರ ಪಂಚಮಿಯ ಮತ್ತೊಂದು ವಿಶೇಷವೆಂದರೆ ನೆಲ್ಲು ಬೆಳೆಯುವ ಪ್ರದೇಶದಲ್ಲಿ ನೆಲ್ಲಿನ ಸಸಿಗಳನ್ನು, ಉಳಿದ ಪ್ರದೇಶಗಳಲ್ಲಿ ಗೋಧಿಯ ಸಸಿಗಳನ್ನು, ಹಬ್ಬ ಒಂದು ವಾರ ಅಥವಾ ೧೫ ದಿವಸಗಳ ನಂತರ ಇದೆ ಎನ್ನುವಾಗ ಕತ್ತಲ ಕೋಣೆಗಳಲ್ಲಿ ಮಣ್ಣಿನ ಮಡಿಕೆ ಅಥವಾ ಪರಿಯಾಣಗಳಲ್ಲಿ ಬೆಳೆಸುತ್ತಾರೆ. ಹಬ್ಬದ ಸಮಯಕ್ಕೆ ಅವು ಗೇಣು ಉದ್ದ ಬೆಳೆದಿರುತ್ತವೆ. ಹಬ್ಬದ ದಿವಸ ಆ ಸಸಿಗಳನ್ನು ಕತ್ತರಿಸಿ ಅವುಗಳನ್ನು ದೇವರಿಗೆ, ಹೊಸ್ತಲಿಗೆ, ಬಾಗಿಲಿಗೆ, ನಾಗಪ್ಪನಿಗೆ, ಅಗಸಿಯ ಕಲ್ಲಿಗೆ(ಕರಿಕಲ್ಲು) ಏರಿಸಿ ಅಲಂಕರಿಸುತ್ತಾರೆ. ಮತ್ತು ಆ ಕಲ್ಲಿಗೆ ಎಣ್ಣೆಯೂ ಸಹ ಹಾಕುತ್ತಾರೆ.

ಸಸಿಗಳನ್ನು ಕತ್ತಲಕೋಣೆಯಲ್ಲಿ ಬೆಳೆಸುವುದರ ಉದ್ದೇಶ ಸೂರ್ಯನ ಕಾಂತಿ ಬೀಳದಿದ್ದರೆ ಸಸಿಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಅವು ನೋಡಲು ಬಂಗಾರದ ವರ್ಣದ ಹಾಗೆ ಕಾಣಿಸುತ್ತವೆ.(ಹಳದಿ ಬಣ್ಣ ಕೇದಿಗೆಯ ವರ್ಣದ್ದು) ಕೇದಿಗೆಯ ರೂಪದಂತೆ ಕಾಣುವ ಈ ಸಸಿಗಳು ನಾಗಪ್ಪನಿಗೆ ಪ್ರೀಯವಾದವು ಎಂದು ಕೇದಿಗೆ ಜಾಸ್ತಿ ಬೆಳೆಯದೆ ಇರುವ ಪ್ರದೇಶದಲ್ಲಿ ಈ ಆಚರಣೆಯು ಹುಟ್ಟಿಕೊಂಡಿರಬೇಕು.

ಶ್ರಾವಣಮಾಸ

ವರ್ಷದ ೧೨ ತಿಂಗಳುಗಳಲ್ಲಿಯೇ ಶ್ರೇಷ್ಟವಾದ ಮಾಸ ಶ್ರಾವಣಮಾಸ ಬರುವುದೆಂದರೇನೆ ಗೃಹಿಣಿಯರಿಗೆ ಎಲ್ಲಿಲ್ಲದ ಸಂಭ್ರಮ. ತಿಂಗಳ ಪೂರ್ತಿ ಪೂಜೆ-ಪುನಸ್ಕಾರದ ವಾತಾವರಣವೇ ಕಂಡುಬರುವುದು. ಮನೆ-ಮನಗಳ ಬೆಳಗುವ ಮಾಸವೂ ಹೌದು ಎನ್ನುತ್ತಾರೆ. ವಸುಧಾ ಸಿ.ಭಟ್. ಶ್ರಾವಣ ಮಾಸದ ಪ್ರತಿದಿನವೂ ಪವಿತ್ರದಿನವೇ. ಪ್ರತಿ ದಿನದ ಶುಭಾರಂಭ ಹೊಸ್ತಿಲು ಪೂಜೆಯೊಂದಿಗೆ.

ಕರಾವಳಿಯ ವಿಶಿಷ್ಟವಾದ ಆಚರಣೆ ಹೊಸ್ತಿಲು ಪೂಜೆ ಅಥವಾ ಹೊಸಲು ಪೂಜೆ. ಸಿಂಹ ಸಂಕ್ರಮಣದಿಂದ ಕನ್ಯಾ ಸಂಕ್ರಮಣದವರೆಗೂ ಸೋಣೆ ತಿಂಗಳು ಎಂದು ಕರೆಯಲ್ಪಡುವ ಮಾಸದಲ್ಲಿ ಈ ಪೂಜೆಗೆ ಪ್ರಾಮುಖ್ಯ ಕಲ್ಪಸಿದ್ದಾರೆ. ಅಂತೆಯೇ ಈ ಸಮಯದಲ್ಲಿಯೇ ಅರಳುವ ಸೋಣೆ ಹೂವಿಗೂ ವಿಶಿಷ್ಟತೆ ಇರುವುದು ವೇದ್ಯವಾಗುತ್ತದೆ. ಸೋಣೆ ಹೂವಿನಿಂದ ಶ್ರಾವಣ ಮಾಸದ ಪ್ರತಿ ಸೋಮವಾರ ಮತ್ತು ಶನಿವಾರ ಮನೆಯ ಪ್ರಧಾನ ಅಂಗಗಳಾದ ಬಾಗಿಲು, ಹೊಸ್ತಿಲು, ತುಳಸಿಕಟ್ಟೆ ಎಲ್ಲವನ್ನು ತೊಳೆದು, ಸಾರಣೆ-ಕಾರಣೆ ಗೈದು ಬಾಗಿಲಿನ ಎರಡು ಬದಿಗೆ ಇಟ್ಟು ಅಲಂಕರಿಸಿ ಕೈ ಮುಗಿಯುವರು.[೧೬]

ಶ್ರಾವಣ ಮಾಸದ ಹೊಸ್ತಿಲ ಪೂಜೆಯನ್ನು ಇನ್ನೂ ವಿವರವಾಗಿ ಹೇಳಿರುವವರು ವಸುಧಾ.ಸಿ.ಭಟ್.[೧೭] ಅವರು ಕರಾವಳಿಯ ವಿಶೇಷತೆ ಎಂದರೆ ಶ್ರಾವಣದಲ್ಲಿ ಹೊಸ್ಲಜ್ಜಿ ಬರುತ್ತಾಳೆ ಎಂದು ಆಕೆಯ ಸ್ವಾಗತಗೋಸ್ಕರ ಹೊಸ್ತಿಲಿನ ವಿಶೇಷ ಅಲಂಕಾರ ಮಾಡಲಾಗುತ್ತದೆ.

ಹೊಸ್ಲೇ ಹೊಸ್ಲೇ ಹೊನ್ನೊಸ್ಲೇ
ಚಿನ್ನದ ಗಿಂಡೀಲಿ ನೀರ್ ತಪ್ಪೆ

ಬೆಳ್ಳಿ ತಟ್ಟೇಲಿ ಹೂಕೊಯ್ಕೆ
ಸಾವಿತ್ರಿ ದೇವಿಗೆ ಸೊಸೆಯಾಪೆ
ಮಾಲಕ್ಷ್ಮೀ ದೇವಿಗೆ ಮಗಳಾಪೆ
ಒಲೆ ಭಾಗ್ಯ ಕಾದುಕೊಡು[೧೬]

ಎಂದು ಸುಮಂಗಲೆಯರು ಹೊಸ್ಲಜ್ಜಿಯನ್ನು ಬರಮಾಡಿಕೊಂಡು ಒಂದು ತಿಂಗಳವರೆಗೆ ಆಕೆಯನ್ನು ಉಪಚರಿಸಲು ನಾನಾ ವಿಧದ ಭಕ್ಷ್ಯ-ಭೋಜ್ಯಗಳನ್ನು ನೈವೇದ್ಯ ತೋರಿಸುತ್ತಾರೆ.

ಶ್ರಾವಣಮಾಸದಲ್ಲಿ ಮಧ್ಯದಲ್ಲಿ ಸಂಕ್ರಾಂತಿಯಿಂದ ಆರಂಭವಾಗುವ ಹೊಸ್ತಿಲ ಪೂಜೆ ಒಂದು ತಿಂಗಳುಗಳವರೆಗೆ ನಡೆಯುತ್ತದೆ. ಆ ದಿನ ಬೆಳಿಗ್ಗೆ ಮನೆಯ ಎಲ್ಲಾ ಹೊಸ್ತಿಲುಗಳು ಸಿಂಗಾರಗೊಂಡು ಪೂಜೆಗೊಳ್ಳಬೇಕು. ಬೆಳಿಗ್ಗೆ ಮತ್ತು ಸಾಯಂಕಾಲ ಎರಡು ಹೊತ್ತು ಪೂಜೆಗೊಳ್ಳುವ ಹೊಸ್ತಿಲಿನ ವಿಶೇಷತೆ ಇಲ್ಲಿ ಭಿನ್ನವಾಗಿದೆ. ಬೆಳಗಿನ ಪೂಜೆ ಹೊಸ್ತಿಲು ಬರೆಯುವಿಕೆಯಲ್ಲಿ ಅದರ ಮೇಲಿಟ್ಟ ನೀರು ಹೊರಗೆ ಬಿಟ್ಟರೆ, ಸಾಯಂಕಾಲದ ಆಚರಣೆಯ ನೀರನ್ನು ಒಳಗೆ ಬಿಡಲಾಗುತ್ತದೆ. ಅಂದರೆ ಹೊಸ್ಲಜ್ಜಿಯನ್ನು ಒಳಗೆ ಇಟ್ಟು ಪೂಜಿಸುವುದರಿಂದ ಮನೆಯನ್ನು ಬೆಳಗುವ ಅರಿವು ಉಂಟಾಗುತ್ತದೆ.

ಮೂರ್ಸಂಜೆ ಹೊತ್ತಲ್ಲಿ ಮಲಗಿರ್ಪ
ಹಿರಣ್ಯಾಕ್ಷನ ಕರುಳ ಮಾಲೆಯ ಕೊಯ್ದು
ಕೊರಳಲಿ ಧರಿಸಿದ ಲಕ್ಷ್ಮೀ ನರಸಿಂಹರಿಗೆ
ಶರಣು-ಶರಣೆಂಬೆ[೧೭]

ಈ ಹಾಡನ್ನು ಹಾಡುವುದರ ಮೂಲಕ ಹೊಸ್ತಿಲು ಪೂಜೆಯನ್ನು ಮಾಡುವುದುಂಟು. ಅದಕ್ಕೆ ಇರಬೇಕು ಸಾಯಂಕಾಲದ ಸಮಯದಲ್ಲಿ ಮಲಗಬಾರದು ಎಂದು ಹೇಳುವರು. ಹೊಸ್ಲಜ್ಜಿಯನ್ನು ಬರಮಾಡಿಕೊಂಡರೆ ಸಾಕೆ? ಅವಳ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಲ್ಲವೇ? ಅದಕ್ಕಾಗಿ ಮೊದಲ ದಿನ ದೋಸೆ ಮಾಡುವುದರ ಮೂಲಕ ಅವಳನ್ನು ಉಪಚಾರ ಮಾಡಿ, ಮುಂದೆ ಒಂದು ತಿಂಗಳುಗಳ ಕಾಲ ವಿವಿಧ ರೀತಿಯ ತಿಂಡಿ ಮಾಡುತ್ತಾರೆ. ಹಾಲಿನ ನೈವೇದ್ಯವೂ ಆಗಬೇಕು. ಹೊಸ್ಲಜ್ಜಿಯನ್ನು ಕಳುಹಿಸಿಕೊಡುವ ದಿನ ಮಾತ್ರ ಶಾವಿಗೆ ಮತ್ತು ಉಂಡ್ಲಕಾಯಿ ಮಾಡಬೇಕು. ಶಾವಿಗೆ ನಡೆ ಮಡಿ ಹಾಸಿ ಒಳ್ಳೆಯ ರೀತಿಯಿಂದ ಬೀಳ್ಕೊಟ್ಟರೆ ಒಂದು ವೇಳೆ ಅಜ್ಜಿ ಇನ್ನೂ ಹೋಗಲಿಲ್ಲ ಎನ್ನುವುದಾದರೆ ಉಂಡ್ಲಕಾಯಿಯಿಂದ ಹೊಡೆದಾದರೂ ಓಡಿಸಬೇಕು ಎನ್ನುವ ನಂಬಿಕೆ ಇದೆ. ಹೊಸ್ಲಜ್ಜಿ ಹೋಗುವ ಕೊನೆಯ ದಿವಸ ಶುಕ್ರವಾರವೋ, ಮಂಗಳವಾರವೋ ಬಂದರೆ ಆಕೆಯನ್ನು ಕಳುಹಿಸುವ ಸಂಪ್ರದಾಯವಿಲ್ಲ.

ಶ್ರಾವಣಮಾಸದಲ್ಲಿ ಹೆಣ್ಣುಮಕ್ಕಳು ಮನೆಗೆ ಬಂದರೆ ಹೊಸಿಲು ಪೂಜೆ ಮುಗಿಸಿಕೊಂಡು ಹೋಗಿ ಎನ್ನುತ್ತಾರೆ. ಹೊಸಿಲು ಪೂಜೆಗೆಂದೆ ಹೆಣ್ಣು ಮಕ್ಕಳು ತವರಿಗೆ ಬರುತ್ತಾರೆ. ಹೀಗೆ ಹೊಸ್ತಿಲಿಗೂ ಸ್ತ್ರೀಗೂ ವಿಶೇಷ ನಂಟು ಇದೆ.

ಹೊಸ್ತಿಲು ಹುಣ್ಣಿಮೆ

ಮಾರ್ಗಶೀರ್ಷ ಮಾಸದಲ್ಲಿ ಬರುವ ಹುಣ್ಣಿಮೆ ಇದಾಗಿದೆ. ಮನೆಗೆ ದೇವತೆಗಳ ಆಗಮನವಾಗುತ್ತದೆ ಎಂದು ಆ ಹುಣ್ಣಿಮೆಗೆ ಹೊಸ್ತಿಲು ಹುಣ್ಣಿಮೆ ಎಂದು ಕರೆಯುವರು. ದೇವತೆಗಳ ದೀಪಾವಳಿ ಎಂದು ಕರೆಸಿಕೊಳ್ಳುವ ಈ ಹುಣ್ಣಿಮೆಯ ದಿವಸ ಗೃಹಿಣಿ ಸೂರ್ಯೋದಯಕ್ಕೆ ಮುಂಚೆ ಎದ್ದು ಹೊಸ್ತಿಲು ತೊಳೆದು ಅರಿಶಿಣ-ಕುಂಕುಮ ಹೂಗಳಿಂದ ಪೂಜೆಸಿ, ರಂಗೋಲಿಯಿಂದ ಅಲಂಕರಿಸಿ ಹೊಸ್ತಿಲ ಎರಡು ಬದಿಯಲ್ಲಿ ದೀಪಗಳನ್ನು ಹಚ್ಚಿಟ್ಟು ದೇವತೆಗಳಿಗೆ ಸ್ವಾಗತ ಕೋರುತ್ತಾರೆ. ಅಂದು ದೇವತೆಗಳ ಆಗಮನ ಹೊಸ್ತಿಲಿನ ಮೇಲೆಯೇ ಎಂಬುದು ನಂಬಿಕೆ. ಅದಕ್ಕೆ ಪ್ರತಿದಿನವೂ ಸೂರ್ಯೋದಯಕ್ಕೆ ಮುಂಚೆ ಹೊಸ್ತಿಲು ತೊಳೆದು ಪೂಜಿಸಿ ರಂಗೋಲಿ ಹಾಕಿದರೆ ಆ ಮನೆಯಲ್ಲಿ ದೇವತೆಗಳು ಸದಾ ನೆಲೆಸಿರುತ್ತಾರೆ. ಆದ್ದರಿಂದ ಇಂದಿಗೂ ಸಹ ಕೆಲವೊಂದು ಸಂಪ್ರದಾಯಸ್ಥ ಕುಟುಂಬಗಳಲ್ಲಿ ಸೂರ್ಯೋದಯಕ್ಕೆ ಮುಂಚೆ ಹೊಸ್ತಿಲು ಪೂಜಿಸುವುದನ್ನು ಗಮನಿಸಬಹುದು.

ವಿಜಯದಶಮಿ

ವಿಜಯದಶಮಿ ಹೆಸರೆ ಸೂಚಸುವಂತೆ ವಿಜಯದ ಸಂಕೇತ. ಅಂದು ಪಾಂಡವರು ಅಜ್ಞಾತವಾಸ ಮುಗಿಸಿ ಮರಳಿ ನಾಡಿಗೆ ಬಂದ ದಿನವದು. ಅಂದು ಅವರು ತಮ್ಮ ಶಸ್ತ್ರಾಸ್ತ್ರಗಳನ್ನು ಹೊರತೆಗೆದು ಮೊದಲಿನಂತೆ ಲೋಕೋತ್ತರ ಸಾಹಸದಿಂದ ವಿಜೃಂಭಿಸಿದರಂತೆ ಆದ್ದರಿಂದಲೇ ಆಯುಧ ಪೂಜೆಯ ಸಾಂಪ್ರದಾಯ ವೇರ್ಪಟ್ಟಿರಬೇಕು. ವಿಜಯದಶಮಿಯೆಂದು ಸಗಣಿಯಿಂದ ಪಾಂಡವರನ್ನು ಮಾಡಿ, ಹೊಸ್ತಿಲಿನ ಎರಡು ಕಡೆಗಳಲ್ಲಿ ಇಟ್ಟು ಉತ್ರಾಣಿ, ಹೊನ್ನಂಬರಿಕೆ ಹೂಗಳನ್ನು ಚುಚ್ಚಿ ಅರಿಶಿನ-ಕುಂಕುಮಗಳಿಂದ ಪೂಜಿಸುತ್ತಾರೆ. ಹೀಗೆ ಹೊಸ್ತಿಲಿನಡಿಯಲ್ಲಿ ಅವರನ್ನು ನಿಲ್ಲಿಸಿ ಪೂಜೆ ಮಾಡಿ ಒಳಗೆ ಬರಮಾಡಿಕೊಳ್ಳುವುದೇ. ಆ ಆಚರಣೆಯ ಉದ್ದೇಶವಾಗಿರಬೇಕು.

ದೀಪಾವಳಿ

ದೀಪಗಳ ಹಬ್ಬ ದೀಪಾವಳಿ. ಊರಿಗೆ ಊರೆ ದೀಪಗಳ ಬೆಳಕಿನಿಂದ ರಾರಾಜಿಸುತ್ತದೆ. ಬಾಗಿಲು ತಳಿರು-ತೋರಣ ಮತ್ತು ಚಂಡು ಹೂವಿನಿಂದ ಅಲಂಕರಣಗೊಳಿಸಿದರೆ ರಾತ್ರಿ ಮನೆಯ ಮುಂದೆ ಹೊಸ್ತಿಲ ಮೇಲೆ ದೀಪಗಳನ್ನು ಇಟ್ಟು ಕತ್ತಲೆಯನ್ನು ಹೊಡೆದೊಡಿಸುವ ಹಬ್ಬ ಇದಾಗಿದೆ.

ಬಂದಿತು ದೀಪಾವಳಿ ಮನೆ-ಮನೆಯೊಳು
ಕುಡಿಯಾಡಿಸುತಿದೆ ನರು ಬೆಳಕು
ವಿದು ಸೊಡರಿನ ಮಿತಮಾನದೊಳಿರುಳನು
ಮೊಗೆದು ಸುರಿವ ಮೊದವ ತಳಕು

ಮೇಲಿನ ಪದ್ಯದ ಅರ್ಥವೂ ಕೂಡ ಬಾಳಿನ ಕತ್ತಲೆಯನ್ನು ಹೊಡೆದೊಡಿಸಿ ಅರಿವಿನ ಜ್ಯೋತಿಯನ್ನು ಹೊತ್ತಿಸಲು ಮನೆ-ಮನೆಗೆ ಬರುವುದು ದೀಪಾವಳಿ ಎನ್ನುವುದೇ ಆಗಿದೆ. ಆಶ್ವೀಜ ಮಾಸದ ಕೃಷ್ಣ ಚತುರ್ಥಿಯಿಂದ ಕಾರ್ತಿಕ ಮಾಸದ ಶಕ್ಲ ಪ್ರತಿಪದೆಯವರೆಗಿನ ಮೂರು ದಿನಗಳ ಈ ಹಬ್ಬದಲ್ಲಿ ಕೊನೆಯ ದಿನ ಬಲಿಪಾಡ್ಯ.

ಬಲಿಪಾಡ್ಯದಂದು ಬಲಿ ಚಕ್ರವರ್ತಿ ಭೂಮಿಗೆ ಬರುತ್ತಾನೆ ಎಂದು ಪ್ರತೀತಿ. ಹಾಗೆಂದು ಆತ ವಿಷ್ಣುವಿನಿಂದ ವರ ಪಡೆದಿದ್ದಾನಂತೆ.(ವಿಷ್ಣು ವಾಮನ ರೂಪ ತಾಳಿ ಬಂದು ಬಲಿ ಚಕ್ರವರ್ತಿಯಿಂದ ಮೂರು ಲೋಕಗಳನ್ನು ದಾನವಾಗಿ ಪಡೆದುದು ನಂತರ ತನ್ನ ವಿರಾಟ ರೂಪ ತೋರಿಸಿದಾಗ ಬಲಿ ಪ್ರತಿವರ್ಷಕ್ಕೆ ಒಂದು ಬಾರಿ ಭೂಮಿಗೆ ಬರುವ ಅವಕಾಶ ಕೊಡುವಂತೆ ವರ ಕೇಳಿದ್ದನಂತೆ) ದೀಪಾವಳಿಯ ಬಲಿಪಾಡ್ಯದಂದು ಬಲಿ ಚಕ್ರವರ್ತಿಯ ಸ್ವಾಗತಕ್ಕೋಸ್ಕರ ಹೊಸ್ತಿಲ ಮೇಲೆ ಒಂದು ತುಂಬಿದ ತಂಬಿಗೆಯನ್ನಿಟ್ಟು ಆ ತಂಬಿಗೆಯ ಕಂಠಕ್ಕೆ ಚೆಂಡು ಹೂವಿನಿಂದ ಸುತ್ತಿ ಅದರ ಮೇಲೆ ದೀಪ ಹಚ್ಚುತ್ತಾರೆ. ಬಲಿ ಬಂದು ಇವನ್ನೆಲ್ಲಾ ನೋಡಿ ಭೂಲೋಕ ಸುಭೀಕ್ಷೆಯಿಂದ ಕೂಡಿದೆ ಎಂದು ಸಂತೋಷದಿಂದ ಮರಳುತ್ತಾನೆ. ಚೆಂಡು ಹೂ ಬಂಗಾರದ ವರ್ಣದ್ದು. ಅದಕ್ಕೆ ಅಂದು ಬಾಗಿಲಿಗೆ, ವಾಹನಗಳಿಗೆ, ಎಲ್ಲೆಲ್ಲಿಯೂ ಚೆಂಡೂ ಹೂವಿನ ಅಲಂಕಾರವಿರುತ್ತದೆ. ಚೆಂಡು ಹೂವಿನ ಸಂಕೇತವೇ ಸಮೃದ್ಧಿ-ಸಂತೋಷ ಮತ್ತು ಸುಖ-ಶಾಂತಿಯಿಂದ ಕೂಡಿದ್ದಾಗಿದೆ.

ದೀಪಾವಳಿಯಲ್ಲಿ ಅಂಟಿಕೆ-ಪಂಟಿಕೆ ಹಾಡುವವರು ಮನೆ-ಮನೆಗೆ ಹೋಗಿ ಬಾಗಿಲನ್ನು ವೈಭವೀಕರಿಸಿ ಹಾಡುತ್ತಾರೆ.

ಬಡಕಲು ಬಂಕಾಪುರ ದೊಡ್ಡ ಊರಾಳುವ ರಾಜ್ಯ
ದೊಡ್ಡ ದೊರೆರಾಯರ ಅರಮನೆ
ದೊಡ್ಡ ದೊರೆರಾಯರ ಅರಮನೆ ಮುಂದೆ
ಅಗಸೆ ದಾಟುವುದೇ ಬೆಳಗಾದೇ

ಹೀಗೆ ಹೇಳುತ್ತಾ ಮನೆ ಬಾಗಿಲಿಗೆ ಬಂದು ನಿಂತು ಬಾಗಿಲ ತೆಗೆಯುವ ಹಾಡನ್ನು ಹಾಡುತ್ತಾರೆ.

ಬಾಗಿಲು ತೆಗಿರಮ್ಮ ಭಾಗ್ಯದ ಲಕ್ಷ್ಮಮ್ಮ
ಜ್ಯೋತೆಮ್ಮನ ಒಳಗೆ ಕರಕೊಳ್ಳಿ
ಜ್ಯೋತಿಗೆ ನೋಡಿ ಎಣ್ಣೆಗೆ ನೆರೆದರೆ
ಪುಣ್ಯಗಳು ನಿಮಗುಂಟು
ಗಡಾನೆದ್ದು ಬಾಗಿಲು ತೆಗೆಯರಿ
ಬಾಗಿಲ ತೆಗಿಲಿಕೆ ಬಾರಿಯ ಬಿಡುವಿಲ್ಲ

ನಾನೇಗೆ ಎದ್ದು ಬಾಕಾಲಿ ತೆಗೆಯಲಿ
ಬಾಲಯ್ಯ ಬಿಡುನಿದ್ರೆ ಬಾಳೆಯ ಹಣ್ಣ ಸುಲಕೊಟ್ಟು
ನಿಮ್ಮ ರಾಯರ ಕೈಲಿ ಕೊಟ್ಟು ಗಡಾನೆದ್ದು ಬಾಗಿಲ ತೆರೆಯಿರಿ[೦೮]

ಆಗ ಮನೆಯವರು ಬಂದು ಬಾಗಿಲು ತೆರೆದಾದ ಮೇಲೆ, ದೀಪಗಳನ್ನು ಹೊಸ್ತಿಲ ಮುಂದಿಟ್ಟುಕೊಂಡು ಹಬ್ಬದ ಹಾಡುಗಳನ್ನು ಹಾಡಿ ದೀಪ ವಿನಿಮಯ ಮಾಡಿಕೊಳ್ಳುತ್ತಾರೆ. ನಂತರ ಹೊಸ್ತಿಲು ಸ್ಮರಿಸಿ ಹಾಡನ್ನು ಹಾಡಿ ಹೋಗುತ್ತಾರೆ.

ಹೋಗಿ ಬರ್ತೀನಿ ಹೊಸಲೆ, ಹೋಗಿ ಬರ್ತೀನಿ ಬಾಗಿಲೆ
ನಾಗಸಂಪಿಗೆ ನಡುಮನೆ-ದೇವರ ಕೋಣೆ
ಇಂದೋಗಿ ಮುಂದೆ ಬರುತೀನಿ

ಎಂದು ಮುಂದಿನ ವರ್ಷದ ದೀಪಾವಳಿಗೆ ಮತ್ತೆ ಬರುವುದಾಗಿ ಹೇಳಿ ಹೊಸ್ತಿಲಿಗೆ ನಮಸ್ಕರಿಸಿ ಹೋಗುತ್ತಾರೆ.

ಹೀಗೆ ಪ್ರತಿಯೊಂದು ಹಬ್ಬ-ಹುಣ್ಣಿಮೆಗಳನ್ನು ಅವಲೋಕಿಸಿದಾಗ ಬೆಳಕಿಗೆ ಬರುವ ಸಂಗತಿ ಎಂದರೆ ಹೊಸ್ತಿಲಿನ ಮತ್ತು ಬಾಗಿಲಿನ ಪ್ರಾಮುಖ್ಯತೆ. ಹಬ್ಬ ಯಾವುದೇ ಇರಲಿ, ಪೂಜೆ ಏನೇ ಇರಲಿ ಹೊಸ್ತಿಲಿಗೆ ಮಾತ್ರ ಪ್ರಥಮ ಆದ್ಯತೆ. ಲಕ್ಷ್ಮೀಯ ಆವಾಸಸ್ಥಾನವಾದ ಹೊಸ್ತಿಲು ಮಾತ್ರ ಕೆಲವೊಮ್ಮೆ ದೇವರನ್ನು ಸ್ವಾಗತಿಸಲು ಪೂಜಿಸಿಕೊಂಡರೆ ಇನ್ನೊಮ್ಮೆ ಮನೆಗೆ ಮತ್ತು ಮನೆಯವರಿಗೆ ಶ್ರೀರಕ್ಷೆಯಾಗಿ ಕಾರ್ಯನಿರ್ವಹಿಸುತ್ತದೆ. ಹೀಗೆ ಹೊಸ್ತಿಲು ದೈವದ ರೂಪದಲ್ಲಿ ಸುಮಂಗಲೆಯರ ಮನೆಮನಗಳಲ್ಲಿ ಆರಾಧನೆಗೊಳ್ಳುತ್ತದೆ. ಆಧುನಿಕ ಯುಗದಲ್ಲಿ ಇಂತಹ ಸಂಪ್ರದಾಯಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಪ್ರವೃತ್ತಿಗಳು ಅಲ್ಲಲ್ಲಿ ಕಾಣುತ್ತವೆ.

೫.೪. ಸಮುದಾಯ

ಗ್ರಾಮೀಣ ಬದುಕಿನಲ್ಲಿ ವೈಯಕ್ತಿಕತೆಗಿಂತ ಸಾಮೂಹಿಕತೆಗೆ ಹೆಚ್ಚಿನ ಒತ್ತು ಇರುತ್ತದೆ. ಇಡೀ ಊರಿಗೆ ಒಳ್ಳೆಯದಾಗುವ ಆಲೋಚನೆಗಳನ್ನು ನಿರ್ಧಾರಗಳನ್ನು ಸಮುದಾಯದ ಜನ ಸೇರಿ ನಿರ್ಧರಿಸುತ್ತಾರೆ. ಸಮುದಾಯದಲ್ಲಿ ವೈಯೋಮಾನವನ್ನು ಅನುಸರಿಸಿ ಹಿರಿಯರೆನಿಸಿದವರನ್ನು ಸೇರಿಸಿ ನಿರ್ಧಾರವನ್ನು ತೆಗೆದುಕೊಳ್ಳಲಾಗುತ್ತದೆ. ಇಂತಹ ಹಿರಿಯರನ್ನು ದೈವದವರು, ದೈವ ಎಂದು ಕರೆಯುವುದು, ರೂಢಿ, ಭಾವಡಿ ಕಟ್ಟೆಯ ಮೇಲೆ ನಡೆಯುವ ಸಾಮೂಹಿಕ ಚರ್ಚೆ ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವ ಇವರನ್ನು ಪಂಚರು ಎಂದು ಕರೆಯುತ್ತಾರೆ. ಪಂಚರು ಎನ್ನುವ ಶಬ್ದವು ಐವರು ಎನ್ನುವುದನ್ನು ಸೂಚಿಸುತ್ತಿದ್ದರೂ, ಇವರು ಐವರೆ ಇರಬೇಕಾಗಿಲ್ಲ. ಸಮುದಾಯದಲ್ಲಿ ಯಾವ ಜಾತಿ ಯಾವ ದೈವ

ಶ್ರೇಷ್ಠ ಇಲ್ಲವೆ ಕನಿಷ್ಠ ಇರುವುದಿಲ್ಲ. ಯಾವುದು ಎಲ್ಲರಿಗೆ ಸಮಾನವಾದ ಸಾಮಾಜಿಕ ನ್ಯಾಯವನ್ನು ಸಾಮಾನ್ಯ ಭಾಗೀತ್ವವನ್ನು ಒದಗಿಸುವುದೋ ಅದು ಸಮುದಾಯ ಎಂದು ಕರೆಯಲು ಯೋಗ್ಯವಾಗಿರುತ್ತದೆ. ಸಮುದಾಯದಲ್ಲಿ ಸಮೂಹವಿದೆ. ಈ ಸಮೂಹದಲ್ಲಿ ಜನತೆ ಮುಖ್ಯ ಪಾತ್ರವನ್ನು ವಹಿಸುತ್ತಾರೆ. ಸಾಮಾನ್ಯ ಜನತೆಯೂ ಸಮಾಜದ ಎಲ್ಲ ಸ್ಥರಗಳಿಂದ ಬಂದವರಾಗಿದ್ದು, ಅವರ ದೈವಕ್ಕೆ, ಆಚರಣೆಗಳಿಗೆ, ಕಷ್ಟ ಸುಖಗಳಿಗೆ ಒಟ್ಟು ಸಮುದಾಯದ ಸ್ಪಂದನ ಇದ್ದೆ ಇರುತ್ತದೆ. ಉದಾಹರಣೆಗಾಗಿ ಒಂದು ಗ್ರಾಮದ ಅದಿದೇವತೆ ಈಶ್ವರನಾಗಿದ್ದರೂ, ಆ ಗ್ರಾಮದಲ್ಲಿನ ಹನುಮಂತ, ದುರ್ಗಮ್ಮ ಮೊದಲಾದ ದೇವತೆಗಳ ಉತ್ಸವ, ಪಲ್ಲಕ್ಕಿ ಮೊದಲಾದ ಸೇವಾ ಸಂದರ್ಭಗಳಲ್ಲಿ ಜಾತಿಮತ ಭೇದವೆಣಿಸದೇ, ಮೇಲುಕೀಳಿನ ತಾರತಮ್ಯವನ್ನು ಲಕ್ಷ್ಯಕ್ಕೆ ತಾರದೆ ಎಲ್ಲರೂ ಒಂದಾಗಿ ಪಾಲ್ಗೊಳ್ಳಲು ಒಂದು ಆಚರಣೆಗೆ ಮೊಹರಂನಂತಹ ಅನೇಕ ಹಬ್ಬಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಬಹುದು. ಗ್ರಾಮದ ಬದುಕಿನಲ್ಲಿ ಒಂದು ಕಲ್ಯಾಣ ಕಾರ್ಯವು ಯಾರ ಮನೆಯಲ್ಲಿಯೇ ನಡೆಯಲಿ, ಒಂದು ಸಾವಿನ ಶೋಕವು ಯಾರ ಮನೆಯಲ್ಲಾದರೂ ಕಾಣಿಸಿಕೊಳ್ಳಲಿ ಒಂದು ಬಣವೆಗೆ ಬೆಂಕಿ, ಒಂದು ಕುಟುಂಬಕ್ಕೆ ಸಿಡಿಲು ಹೀಗೆ ಏನೇ ಅನಾಹುತಗಳು ಸಂಭವಿಸಿದಾಗಲೂ ಸಮುದಾಯವು ಇಂತಹ ನೊಂದವರ, ಸಂತ್ರಸ್ಥರ ಸಂಕಟದ ಎಲ್ಲಾ ಕ್ರಿಯಾಕಲಾಪಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತದೆ ಎಂಬುದು ಗಮನಿಸಬೇಕಾದುದು.

ಪ್ರತಿಯೊಂದು ಗ್ರಾಮವು ತನ್ನದೇ ಆದ ಪೂಜೆ-ಪುನಸ್ಕಾರಗಳನ್ನು ಬಲಿಕೊಡುವ ಪದ್ಧತಿಯನ್ನು ಸಮುದಾಯದ ಒಳತಿಗಾಗಿ ಆಚರಿಸಿಕೊಂಡು ಬಂದಿರುತ್ತವೆ. ಇಲ್ಲಿ ಬಲಿಗೆ ಸಮರ್ಪಿತವಾಗುವ ಪ್ರಾಣಿ ಯಾವುದಾದರೂ ಆಗಲೀ ಜಾತ್ರೆಯಲ್ಲಿ ಪಾಲ್ಗೊಳ್ಳುವುದು ಮಾತ್ರ ಊರಿನ ಎಲ್ಲ ಜಾತಿ ಜನಾಂಗದವರು. ಸಮುದಾಯದ ಒಳಿತಿಗಾಗಿ ಬರುವ ಪೀಡೆಗಳನ್ನು ತಪ್ಪಿಸುವುದಕ್ಕೋಸ್ಕರ ನಗುವನ ಹಳ್ಳಿಯಲ್ಲಿ ಆಚರಿಸುವ ಮಾರಿಹಬ್ಬ ದೊಡ್ಡ ಜಾತ್ರೆಯಾಗಿ ಪರಿಣಮಿಸುತ್ತದೆ.

ಪೀಡ್ಗಳಿಯುವುದು(ಪೀಡೆ ಕಳೆಯುವುದು) ಎರಡು ಮೂರು ದಿವಸವಿದೆ ಎನ್ನುವಾಗಲೇ ಚಕ್ರರು(ಹರಿಜನರು) ಊರಿನಲ್ಲಿ ಅಕ್ಕಿ ಮತ್ತು ದುಡ್ಡು ಪಟ್ಟಿ ಎತ್ತುತ್ತಾರೆ. ಅಂದು(ಪೀಡ್ಗಳಿಯುವ ದಿನ) ಆ ಅಕ್ಕಿಯಿಂದ ಅನ್ನ ಮಾಡಿ, ಮಾರೆಮ್ಮನಿಗೆ ಪೂಜಿಸಿ ಕುರಿಬಲಿ ಸಮರ್ಪಿಸಿ, ಆ ರಕ್ತದಿಂದ ಅನ್ನವನ್ನು ಕಲಿಸಿ ಆ ರಕ್ತ ಮಿಶ್ರಿತ ಅನ್ನವನ್ನು ಅವರೇ ಹೊತ್ತುಕೊಂಡು ರಾತ್ರಿ ಎಲ್ಲರೂ ಮಲಗಿದ ಮೇಲೆ ಪ್ರತಿ ಮನೆಯ ಹೊಸಲಿಗೆ ಎರಚುತ್ತಾ ಹೋಗುತ್ತಾರೆ. ಇವರು ಹೀಗೆ ಎರಚುವುದನ್ನು ಯಾರೂ ನೋಡಬಾರದು ನೋಡಿದರೆ ರಕ್ತಕಾರಿ ಸಾಯುತ್ತಾರೆ ಎಂದು ಜನರ ನಂಬಿಕೆ. ಹೀಗೆ ಎರಚಿದ ಅನ್ನವನ್ನು ಬೆಳಿಗ್ಗೆ ಎದ್ದು ತೊಳೆದು ಹೊಸ್ತಿಲು ಬಾಗಿಲು ತೊಳೆದು ಸುಣ್ಣ ಬಣ್ಣ ಮಾಡಿ ಬಾಗಿಲಿಗೆ ತಳಿರು-ತೋರಣ ಕಟ್ಟಿ ರಂಗೋಲಿ ಕುಂಕಮದಿಂದ ಪೂಜಿಸಿ ಮಾರಿ ಹಬ್ಬವನ್ನು ಆಚರಿಸುತ್ತಾರೆ.

ಹೀಗೆ ಪ್ರತಿ ಮನೆಯ ಹೊಸ್ತಿಲಿಗೆ ಅನ್ನ ಎರಚುವುದರ ಹಿಂದಿನ ಉದ್ದೇಶ ಮನೆಯ ಒಳಗೆ ದುಷ್ಟಶಕ್ತಿ, ಪೀಡೆ-ಪಿಶಾಚಿ ಪ್ರವೇಶಿಸಬಾರದು ಎಂಬುದಾಗಿದೆ. ಬರುವ ಪೀಡೆಗಳು ಹೊಸ್ತಿಲಿನ ಆಚೆಯೇ ಹೋಗಲಿ ಎನ್ನುವ ನಂಬಿಕೆ ಈ ಆಚರಣೆಯ ಹಿಂದೆ ಅಡಗಿದೆ.

ರಾಯಚೂರು ಜಿಲ್ಲೆಯ ಕುರ್ಡಿ ಎನ್ನುವ ಗ್ರಾಮದಲ್ಲಿ ಇದೇ ತೆರನಾದ ಗ್ರಾಮದ ಒಳತಿಗಾಗಿ ಮಾಡುವ ಮತ್ತೊಂದು ಹಬ್ಬವೆಂದರೆ ದ್ಯಾಮವ್ವನ ಹಬ್ಬ. ಇದು ಜಾತ್ರೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಪ್ರತಿ ಮೂರು ವರ್ಷಕ್ಕೆ ಒಮ್ಮೆ ಈ ಜಾತ್ರೆಯ ವಿಶೇಷವೆಂದರೆ ಊರಿಗೆ ಬರುವ ಪೀಡೆ ದುಷ್ಟಶಕ್ತಿಯನ್ನು ನಿಯಂತ್ರಿಸುವುದು.

ಊರಿನ ಒಬ್ಬ ವ್ಯಕ್ತಿಯನ್ನು "ಭೂತಬಿಲ್ಲಿ" ಎಂದು ಮಾಡುತ್ತಾರೆ. ಭೂತ ಬಿಲ್ಲಿಯಾಗುವ ವ್ಯಕ್ತಿಯ ಮೈಯ ರೋಮಗಳನ್ನು ತೆಗೆದು, ಹೂಲಿಯ ಹಾಗೆ ಬಣ್ಣ ಹಚ್ಚುತ್ತಾರೆ. ಮೈ ಮೇಲೆ ಕೇವಲ ಲಂಗೋಟಿ ಮಾತ್ರ ಕಟ್ಟಿರುತ್ತಾರೆ. ಆತನ ಹೆಂಡತಿಯ ತಾಳಿ ತೆಗೆದು, ಕುಂಕುಮ ಅಳಿಸಿ ವಿಧವೆಯನ್ನಾಗಿ ಮಾಡುತ್ತಾರೆ. ಓಗೆ ಮಾಡುವುದರ ಅರ್ಥ ಆತ ಸತ್ತನೆಂದೇ ತಿಳಿಯುವುದು. ದೇವರ ಮುಂದೆ ಅನ್ನ ಮಾಡಿ ಆ ಅನ್ನವನ್ನು ಭೂತಬಿಲ್ಲಿಯಾದವನ ಮೇಲೆ ಹೊರಿಸಿ ಪೊತ್ತುಕೊಂಡು ಹೋಗಿ ಊರ ಅಗಸಿಯಿಂದ ಪ್ರಾರಂಭಿಸಿ ಊರಿನ ಸುತ್ತಲೂ ಹಾಕುತ್ತಾರೆ. ಹಾಗೆ ಅನ್ನ ಚೆಲ್ಲಿ ಮರಳಿ ಬಂದ ಮೇಲೆ ಮತ್ತೊಮ್ಮೆ ಆತನ ಹೆಂಡತಿಯೊಡನೆ ಮದುವೆ ಮಾಡಿ, ಹೊಸ ಸೀರೆ ಉಡಿಸಿ ಹೊಸ ತಾಳಿ ಮಾಡಿಸಿ ಕಟ್ಟಿಸುತ್ತಾರೆ. ಇದು ಆತನ ಪುನರ್ ಜನ್ಮ ಆದಂತೆಯೇ. ಆ ದಿನ ದ್ಯಾಮವ್ವನಿಗೆ ವಿಶೇಷ ಪೂಜೆ ಸಲ್ಲಿಸಿ ಕೋಣದ ಬಲಿ ಕೊಡುತ್ತಾರೆ. ಆ ಕೋಣದ ಮೇಣದ ಸಹಾಯದಿಂದ ಅದರ ತಲೆಯ ಮೇಲೆ ದೀಪ ಹಚ್ಚಿಡುತ್ತಾರೆ.

ನಗುವಿನ ಹಳಿ ಮತ್ತು ಕುರ್ಡಿ ಗ್ರಾಮಗಳಲ್ಲಿನ ಆಚರಣೆಗಳು ಒಂದೇ ಉದ್ದೇಶವನ್ನು ಹೊಂದಿದ್ದು ಆಚರಣೆಯಲ್ಲಿ ಕೊಂಚ ಭಿನ್ನತೆಯನ್ನು ಕಾಣುತ್ತೇವೆ. ಇಬ್ಬರ ಉದ್ದೇಶ ಊರಿಗೆ, ಮನೆಗೆ ದುಷ್ಟಶಕ್ತಿ, ಪೀಡೆಗಳ ನಿವಾರಣೆ ಮಾಡುವುದು. ನಗುವಿನ ಹಳ್ಳಿಯಲ್ಲಿ ಪ್ರತಿ ಮನೆಯ ಬಾಗಿಲಿಗೆ ಅನ್ನ ಎರಚಿದರೆ, ಕುರ್ಡಿ ಗ್ರಾಮದಲ್ಲಿ ಇಡೀ ಊರಿನ ಸುತ್ತ ಅನ್ನ ಹಾಕುತ್ತಾರೆ. ಪ್ರತಿ ಮನೆಗೆ ದುಷ್ಟ ಶಕ್ತಿ ನಿಗ್ರಹಿಸಿದರೆ ಇಲ್ಲಿ ಊರಿನ ಒಳಗೆ ದುಷ್ಟಶಕ್ತಿಯ ಪ್ರವೇಶ ನಿಗ್ರಹಿಸುವುದಾಗಿದೆ.

ಜನ ಸಮುದಾಯದೊಂದಿಗೆ ಆಚರಿಸುವ ಮತ್ತೊಂದು ಸಾಮುದಾಯಿಕ ಹಬ್ಬ ಮೋಹರಂ(ಆಲಾಯ). ಹಿಂದು ಮುಸ್ಲಿಂ ಎನ್ನುವ ಭೇದವಿಲ್ಲದೆ ನಡೆದುಕೊಳ್ಳುವ ಈ ಹಬ್ಬದಲ್ಲಿ ಗ್ರಾಮದ ಪ್ರತಿ ಮನೆಯಲ್ಲೂ ಹಬ್ಬದ ಸಡಗರವೇ ಕಾಣುತ್ತದೆ. ಹಿಂದೂ-ಮುಸ್ಲಿಂರೆನ್ನದೆ ಎಲ್ಲರೂ ದೇವರಿಗೆ(ಪೀರ) ಕಾಯಿ, ಕರ್ಪೂರ, ಲೋಬಾನ ಮತ್ತು ಕೆಂಪು ಸಕ್ಕರೆ ನೈವೇದ್ಯ ಮಾಡುತ್ತಾರೆ. ಹಬ್ಬದ ದಿವಸ ಪೀರ ದೇವರ ಹೊತ್ತವರೊಂದಿಗೆ ಅನೇಕ ಜನ ಸೇರಿ ಊರಿನ ತುಂಬ ಮೆರವಣಿಗೆ ಮಾಡುತ್ತಾರೆ. ಯಾರು ದೇವರಿಗೆ

ಹರಕೆ ಹೊತ್ತಿರುತ್ತಾರೋ ಅವರ ಮನೆಯ ಬಾಗಿಲಿಗೆ ಬಂದು ನಿಂತು ಬಿಡುತ್ತಾರೆ. ಮುಂದೆ ಹೋಗುವುದೇ ಇಲ್ಲ. ಮನೆಯವರು ಬಂದು ತಮ್ಮ ಹರಕೆಯನ್ನು ತೀರಿಸಿದ ಬಳಿಕವೇ ಮುಂದೆ ಸಾಗುತ್ತವೆ. ಹೀಗೆ ಇಡೀ ಗ್ರಾಮವೇ ಕೂಡಿಕೊಂಡು ಆಚರಿಸುವ ಮೊಹರಂ ಪಟ್ಟಣಗಳಲ್ಲಿ ಅಷ್ಟಾಗಿ(ಎಲ್ಲರೂ ಆಚರಿಸುವುದು) ಕಾಣದಿದ್ದರೂ ಗ್ರಾಮಗಳಲ್ಲಿ ಮಾತ್ರ ಯಾವುದೇ ಭೇದವಿಲ್ಲದೇ ಸಾಮೂಹಿಕವಾಗಿ ಆಚರಿಸಲ್ಪಡುತ್ತದೆ.

ಹೀಗೆ ಸಮುದಾಯದ ಬದುಕಲ್ಲೂ ಹೊಸ್ತಿಲಿನ ಪಾತ್ರ ಬಹಳ ಪ್ರಮುಖವಾದದ್ದು ಮೇಲಿನ ಚರ್ಚೆ ಹೊಸ್ತಿಲನ್ನು ಮನೆಗೆ ಸೀಮಿತವಾಗಿಸದೇ ಒಂದು ವಿಸ್ತೃತ ಮಾದರಿಯನ್ನಾಗಿ ಸಮುದಾಯದ ಸಾಂಸ್ಕೃತಿಕ ಸಂಕಥನವನ್ನಾಗಿ ಕಟ್ಟಿಕೊಡುತ್ತದೆ. ಹೊಸ್ತಿಲಿನ ಪ್ರಾಧಾನ್ಯತೆ ಮನೆಯಿಂದ ಆರಂಭವಾಗಿ ಊರು, ಊರ ಅಗಸಿ ಬಾಗಿಲು, ನಂತರ ಊರಿನ ಸೀಮೆ ಸರಹದ್ದುಗಳವರೆಗೂ ವಿಸ್ತೃತವಾಗುತ್ತದೆ. ಅಂದರೆ ಹೊಸ್ತಿಲು ಕುಟುಂಬದ ಸೀಮಾರೇಖೆಯಾದಂತೆ ಜನಸಮುದಾಯದ ಊರಿನ ಸೀಮಾರೇಖೆಯಾಗಿ ಸಾರ್ವತ್ರೀಕರಣಗೊಳ್ಳುವ ನೆಲೆ ಎಂದು ಇದನ್ನು ಹೇಳಬಹುದು. ಇದು ಬರೀ ಪರಿಕಲ್ಪನಾತ್ಮಕವಾದ ಸಂಬಂಧವಾಗಿರದೆ, ಸಾಂಸ್ಕೃತಿಕವಾದ ಸೈದ್ಧಾಂತಿಕ ಸಂಬಂಧವಾಗಿದೆ ಎಂಬುದು ಗಮನಿಸುವಂಥದ್ದು.

ಅಡಿಟಿಪ್ಪಣಿಗಳು

೧. ಶಿವಾನಂದ ಗುಬ್ಬಣ್ಣವರ(ಸಂ), **ಸೋಬಾನ ಪದಗಳ ಸಂಗ್ರಹ**, ೧೯೯೪;೩

೨. ಭಾನುಮತಿ ವೈ.ಸಿ., **ಮಲೆನಾಡ ಶೈವ ಬಕ್ಕಲಿಗರು-ಜಾನಪದೀಯ ಅಧ್ಯಯನ**, ೧೯೯೪;೫೬

೩. ಶಿವಾನಂದ ಗುಬ್ಬಣ್ಣವರ(ಸಂ), **ಪೂರ್ವೋಕ್ತ**, ಪು.೧೭

೪. ಕೇಶವಭಟ್ಟ ಟಿ., **ಹವ್ಯಕರ ಶೋಭಾನೆಗಳು**, ೧೯೮೬;೧೮೦

೫. ಕೇಶವಭಟ್ಟ ಟಿ., **ಪೂರ್ವೋಕ್ತ**, ಪು.೧೮೨.

೬. ಅದೇ,

೭. ಭಾನುಮತಿ ವೈ.ಸಿ., **ಪೂರ್ವೋಕ್ತ**, ಪು.೭೮.

೮. ಅದೇ, ಪು.೭೯.

೯. ಅದೇ.

೧೦. ಕೇಶವಭಟ್ಟ ಟಿ, **ಪೂರ್ವೋಕ್ತ**, ಪು.೨೦೧

೧೧. ವೀರೇಶ ಬಡಿಗೇರ, **ರಾಶಿಬುತ್ತಿ**, ೧೯೯೬;೨೩

೧೨. ನಾಯಕ ಎನ್.ಆರ್., **ಉತ್ತರ ಕನ್ನಡ ಜಿಲ್ಲೆಯ ನಾಡವರ ಸಂಸ್ಕೃತಿ**, ೨೦೦೧;೭೬.

೧೩. ಚಂದ್ರಶೇಖರ ಕಂಬಾರ, ಜಾನಪದ ವಿಶ್ವಕೋಶ, ಸಂಪುಟ ೧ ಮತ್ತು ೨, ೧೯೮೫

೧೪. ನಾಯಕ ಎನ್.ಆರ್., ಪೂರ್ವೋಕ್ತ, ಪು.೭೬

೧೫. ವಸುಧಾ ಸಿ.ಭಟ್, ಉದಯವಾಣಿ ದಿನಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಲೇಖನ, ೧೦.೦೮.೨೦೦೩

೧೬. ವಸುಧಾ ಸಿ.ಭಟ್, ಉದಯವಾಣಿ ದಿನಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಲೇಖನ, ೧೦.೦೮.೨೦೦೩

೧೭. ವಸುಧಾ ಸಿ.ಭಟ್, ಉದಯವಾಣಿ ದಿನಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಲೇಖನ, ೧೦.೦೮.೨೦೦೩

ಅಧ್ಯಾಯ ೬

ಹೊಸ್ತಿಲಿನ ಅಲಂಕಾರಗಳು

೬.೧. ಜಾತ್ರೆ-ಉತ್ಸವ

೬.೨. ಹಬ್ಬ-ಹರದಿನ

೬.೩. ಮದುವೆ-ಮುಂಜಿ

೬.೪. ರಂಗೋಲಿ-ಕುಂಕುಮ

೬


ಹೊಸ್ತಿಲಿನ ಅಲಂಕಾರಗಳು

ಮೂಲತಃ ಮಾನವ ಅಲಂಕಾರ ಪ್ರಿಯ. ಆತನು ಆದಿಯಿಂದ ತನ್ನ ಸುತ್ತಮುತ್ತಲಿರುವ ಪ್ರಕೃತಿಯನ್ನು ಕಂಡು ಉಂಟಾದ ಸಂತೋಷವನ್ನು ವಿವಿಧ ಕಲೆಗಳ ಮೂಲಕ ವ್ಯಕ್ತಪಡಿಸಿದನು. ಕಲೆ ಎನ್ನುವುದು ಮಾನವ ಸೌಂದರ್ಯವನ್ನು ಅನುಭವಿಸಿದ ನಂತರದ ಪ್ರತಿಬಿಂಬವೇ ಆಗಿದೆ. ಹೀಗೆ ಕಲೆಯಲ್ಲಿ ಮಾನವ ನಿಪುಣನಾಗಲು ಪ್ರಕೃತಿ ಆತನಿಗೆ ಕೇವಲ ಸಹಾಯ ಮಾಡದೇ ಪ್ರೇರಣೆಯೂ ಆಗಿದೆ. ಪಕ್ಕಿಗಳ ಚಿಲಿಪಿಲಿ, ನವಿಲಿನ ನಾಟ್ಯ ಮುಂತಾದವುಗಳಿಂದ ಸಂಗೀತ ನೃತ್ಯಗಳೆಂಬ ಕಲೆಗಳು ಸೃಷ್ಟಿಗೊಂಡರೆ, ಆಕಾಶದಲ್ಲಿನ ನಕ್ಷತ್ರಗಳ ಸಾಲು, ಅವುಗಳ ಸೌಂದರ್ಯವನ್ನು ಕಂಡು ಮಾನವ ಅದನ್ನು ಧರೆಗೆಳೆದು ತರುವಂತೆ ರಂಗೋಲಿಯನ್ನು ಸೃಷ್ಟಿ ಮಾಡಿರಲೂಬಹುದು. ಪ್ರಕೃತಿಯಿಂದ ಪ್ರೇರಣೆ ಪಡೆದ ಈ ಕಲೆ ದಿಢೀರನೆ ಹುಟ್ಟಿ ಬರಲಿಲ್ಲ. ಅಥವಾ ಇಂಥಹದ್ದೊಂದು ಕಾಲದಲ್ಲಿ ಹುಟ್ಟಿತು ಎಂದು ನಿಖರವಾಗಿ ಹೇಳಲಿಕ್ಕಾಗದು. ಪ್ರಾಚೀನ ವರ್ಣಚಿತ್ರ ಮತ್ತು ಅವರು ಬಿಟ್ಟು ಹೋದ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿ ಅದಕ್ಕನುಗುಣವಾಗಿ ಕಾಲದ ಗಣನೆಗೆ ತೆಗೆದುಕೊಳ್ಳಬಹುದು. ಮಾನವ ಭಾಷೆಯನ್ನು ಕಲಿತು ಸಂಪರ್ಕಿಸುವ ಮೊದಲು ಈ ಚಿತ್ರಗಳೇ ಸಂಪರ್ಕ ಸಾಧನಗಳಾಗಿದ್ದವು. ಎಂಬುದಕ್ಕೆ ಸಿಂಧೂ

ನಾಗರೀಕತೆಯಲ್ಲಿ ತಿಳಿದುಬಂದಿದೆ. ಕಲ್ಲಿನ ಗೋಡೆಗಳ ಮೇಲೆ ಆಯುಧಗಳಿಂದ ಕೊರೆದಿರುವ ನಾನಾ ಪ್ರಾಣಿಗಳ ಚಿತ್ರಗಳು ಆಕೃತಿಗಳು ಇವೆ. ಹೀಗೆ ಈ ಚಿತ್ರಕಲೆ ಜೀವನದ ಪ್ರತಿಯೊಂದು ಹಂತದಲ್ಲಿ ಕಾಣಿಸಿಕೊಂಡು ಒಂದು ಸಂಸ್ಕೃತಿಯಾಗಿ ಮಾರ್ಪಟ್ಟಿತು. ಸಂಸ್ಕೃತಿ ಮಾನವನೊಂದಿಗೆ ವಿಕಾಸಗೊಳ್ಳುತ್ತ 'ಅಲಂಕಾರದ' ಪ್ರಜ್ಞೆಯು ಮೂಡತೊಡಗಿತು.

ಯಾವುದೇ ಒಂದು ವಸ್ತು ರೂಪಗೊಳ್ಳುವುದಕ್ಕೆ ಮುಂಚೆ ಕಚ್ಚಾ ಸಾಮಗ್ರಿಯಾಗಿರುವಂತೆ ಇಂದಿನ ಶಿಷ್ಟರೂಪಕ್ಕೆ ಹಿಂದೆ ಕಚ್ಚಾ, ಸಾಮಾಗ್ರಿಯಾಗಿದ್ದು, ಕಾಲಕ್ರಮೇಣ ಸಿದ್ಧರೂಪವಾಗಿ ಜೀವನದ ವಿವಿಧ ಚಟುವಟಿಕೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಸಾಂಪ್ರದಾಯಿಕ, ನಂಬಿಕೆ, ಧರ್ಮದ ಹಿನ್ನೆಲೆಯೊಂದಿಗೆ ಹಬ್ಬ, ಜಾತ್ರೆ, ಉತ್ಸವ, ಮದುವೆಗಳಂತಹ ಸಂದರ್ಭಗಳಲ್ಲಿ ಒಂದೊಂದು ಧರ್ಮದ ಕ್ರಿಯಾವಿಧಿಗಳೊಂದಿಗೆ ಒಂದೊಂದು ರೀತಿಯ ನಂಬಿಕೆಗಳನ್ನು ಪ್ರಕಟಗೊಳ್ಳುತ್ತವೆ.

ದೇವರ ಸ್ತುತಿಯೊಂದಿಗೆ ಆರಂಭಗೊಳ್ಳುವ ಜನರ ಬದುಕು ಪ್ರತಿಯೊಂದು ಹಂತದಲ್ಲಿ ಆತನ ಸ್ಮರಣೆಯೇ ಪ್ರಮುಖವಾಗಿರುತ್ತದೆ. ಬೆಳಗಾದೊಡನೆ ದೇವರ ಪೂಜೆಗಾಗಿ ಸಾರಿಸುವುದು, ಅರಿಶಿನ-ಕುಂಕುಮ ಹಚ್ಚುವುದು, ಸುಣ್ಣ-ಜಾಜಾ(ಕೆಂಪುಮಣ್ಣು) ಬಳಿಯುವುದು ನಿತ್ಯದ ಕಾರ್ಯಗಳಾಗಿವೆ.



ಜಾಜಾಬಳಿದು ಅರಿಶಿನ ಕುಂಕುಮಗಳಿಂದ ಅಲಂಕರಿಸಿದ ಹೊಸ್ತಿಲು

ಹೊಸ್ತಿಲು ತೊಳೆದು ಪೂಜೆ ಮಾಡುವಾಗ ಅರಿಶಿನ-ಕುಂಕುಮ, ವಿಭೂತಿ ಹೂಗಳಿಂದ ಪೂಜಿಸಿ ಅಲಂಕರಿಸುವುದು, ಹೀಗೆ ಬೆಳಗಿನಿಂದಲೇ ಪವಿತ್ರದ ಸಂಕೇತವೂ ಭಯನಿವಾರಕವೂ ಆದ ಕೆಂಪು ಬಿಳಿ ಬಣ್ಣದ ಸಾಮಗ್ರಿಗಳು, ರೋಗನಿರೋಧಕ, ಕಲ್ಮಷ ನಿರೋಧಕ, ಸೌಂದರ್ಯವರ್ಧಕವಾದ ಅರಿಶಿನ,

ಹೀಗೆ ಪಾವಿತ್ರ್ಯ, ಮಂಗಳ ಭಯದ ಸೂಚಕಗಳಾದ ಅರಿಶಿನ-ಕುಂಕುಮ, ಹೂಗಳಿಂದ ಹೊಸ್ತಿಲು ಶೋಭಿಸುತ್ತಿರುತ್ತವೆ. ಹೀಗೆ ಧಾರ್ಮಿಕ ಹಿನ್ನೆಲೆಯಲ್ಲಿ ದೈವಿ ಪರಿಕಲ್ಪನೆ ಮತ್ತು ಆರಾಧನಾ ಸಂದರ್ಭಗಳು ವೈವಿಧ್ಯಮಯ ರೂಪ ತಾಳುತ್ತವೆ. ಜಾತ್ರೆ, ಉತ್ಸವ, ಮದುವೆ, ಹಬ್ಬಹರದಿನಗಳಲ್ಲಿ ಹಾಕುವ ರಂಗೋಲಿ, ಮಾಡುವ ಹೊಸ್ತಿಲ ಪೂಜೆಯಲ್ಲಿ ಮತೀಯ ನೆಲೆಯಲ್ಲಿಯೂ ಭಿನ್ನತೆ ಎದ್ದು ಕಾಣುತ್ತದೆ. ಅಲ್ಲದೆ ಮಾಟ ಮಂತ್ರದ ಪ್ರೇರಕ ಮತ್ತು ನಿರ್ಭದಂಕದ ರೂಪದಲ್ಲಿಯೂ ಇದನ್ನು ನೋಡಬಹುದು.



ವಿವಿಧ ಬಣ್ಣಗಳಿಂದ ಅಲಂಕಾರಗೊಂಡ ಬಾಗಿಲು ಮತ್ತು ಹೊಸ್ತಿಲು

ರಂಗೋಲಿ

ರಂಗೋಲಿ ಎನ್ನುವ ಪದದ ಅರ್ಥವೂ ಕೂಡ ಶಿಷ್ಟ ಮತ್ತು ಜನಪದಗಳಲ್ಲಿ ಭಿನ್ನ ಧ್ವನಿ ಪಡೆದಿದೆ. ಶಿಷ್ಟಾರ್ಥದಲ್ಲಿ ರಂಗ+ಒಲಿ=ರಂಗೋಲಿ. ರಂಗ ಎಂದರೆ ವಿಷ್ಣು, ಒಲಿ ಎಂದರೆ ಕೃಪೆ ಅಥವಾ ತೋರು, ಜನಪದರಲ್ಲಿ ರಂಗ ಎಂದರೆ ಬಣ್ಣ, ವಲ್ಲಿ ಎಂದರೆ ಬಳ್ಳಿ ಅಂದರೆ ಬಣ್ಣದ ಸಾಲು. ಬಣ್ಣಗಳಿಂದ ರಚಿಸಿದ ಬಳ್ಳಿಯ ಚಿತ್ರವೇ ರಂಗೋಲಿ ಎನ್ನಬಹುದು. ಹೀಗೆ ರಂಗನನ್ನು ವಲಿಸಿಕೊಳ್ಳುವ ಈ ಪರಿ. ರಂಗ ವಲಿಯುವುದು ಬಿಡುವುದು ಅದು ಬೇರೆ ಮಾತು. ಆದರೆ ಹೆಣ್ಣು ಮಕ್ಕಳು ಬೆಳಿಗ್ಗೆ ಎದ್ದೊಡನೆ ಹೊಸ್ತಿಲ ತೊಳೆದು, ಅಂಗಳ ಸಾರಿಸಿ ರಂಗೋಲಿಯನ್ನು ಹಾಕಿ ಹೊಸ್ತಿಲ ಪೂಜೆ ಮಾಡಿ, ದಿನದ ಕಾರ್ಯ ಪ್ರಾರಂಭಗೊಳಿಸುತ್ತಾರೆ. ಹಿರಣ್ಯಕಶ್ಯಪನನ್ನು ನರಸಿಂಹ ಹೊಸ್ತಿಲ ಮೇಲೆ ಹಾಕಿಕೊಂದ ಕಥೆಯನ್ನು ಆಧರಿಸಿ 'ದುಷ್ಟ ಶಿಕ್ಷೆ, ಶಿಷ್ಟ ಪರಿಪಾಲನೆ ಮಾಡುವ ದೇವರ ಬಗೆಗಿನ ಭಕ್ತಿಯಿಂದಾಗಿ ಹೊಸ್ತಿಲ ಪೂಜೆ ಮಾಡುವ ಸಂಪ್ರದಾಯ ರೂಢಿಸಿಗೊಂಡಿರುವುದು ಕಂಡುಬರುತ್ತದೆ. ವಿವಿಧಾಕಾರದ ಬಣ್ಣಬಣ್ಣದ ಚಿತ್ತಾರಗಳು, ಬಿಳಿಯ ಚುಕ್ಕೆಗಳು, ಕಣ್ಮನ ಸೆಳೆಯುವ ಶುಭ್ರರೇಖೆ ವೈವಿಧ್ಯಮಯ ವಿನ್ಯಾಸದ

ಕಲಾಕೃತಿಗಳು ಹೊಸ್ತಿಲ ಮುಂದೆ ಬೆಳದಿಂಗಳು ಚೆಲ್ಲಿದಂತೆ ಕಾಣುವ ಇದು ಮನೆಯ ಶಿಸ್ತು, ಕ್ರಿಯಾಶೀಲ ಮನೆಯ ಗೃಹಿಣಿಯ ಜೀವನಕ್ರಮಕ್ಕೆ ಕನ್ನಡಿ ಇದ್ದಂತೆ. ಪ್ರಸಿದ್ಧ ಜನಪದರ ಮಾತಿನಂತೆ "ಹೊಸ್ತಿಲಿನ ಪೂಜೆ, ಅಲಂಕಾರಗಳಿಂದ ಆ ಮನೆಯ ಗೃಹಿಣಿಯ ಗುಣಲಕ್ಷಣಗಳನ್ನು ಅಳೆಯಬಹುದಂತೆ."

ಈ ರಂಗೋಲಿ ಕೇವಲ ಸೌಂದರ್ಯಕ್ಕಾಗಿ ಅಷ್ಟೆ ಬಳಸದೆ ಇವರ ಹಿಂದೆ ತಾಂತ್ರಿಕ ಹಿನ್ನೆಲೆಯ ವಿಧಿಕ್ರಿಯೆಗಳೂ ಐತಿಹಾಸಿಕ ಪೌರಾಣಿಕ ಕಥಾನಕಗಳೂ ಇರುತ್ತವೆ. ರಂಗೋಲಿಯು ಆಯಾ ಪ್ರದೇಶದಲ್ಲಿ ದೊರೆಯುವ ವಸ್ತುಗಳಿಗನುಗುಣವಾಗಿ, ಆಯಾ ಪ್ರದೇಶದ ಧಾರ್ಮಿಕ ನೆಲೆಗಟ್ಟು ಮತ್ತು ಆರಾಧನೆಗೊಳ್ಳಲ್ಪಡುವ ದೈವದ ಮೇಲೂ ನಿರ್ಮಿತವಾಗುತ್ತದೆ.

ಉದಾಹರಣೆಗೆ - ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿ ಇದ್ದಿಲು ಮತ್ತು ಕೆಂಪು ಕಾರಣಿಯ ಸರಳ ಅಲಂಕರಣ ಮನೆಯ ಮುಂದೆ, ಹೆಬ್ಬಾಗಿಲಿನ ಇಕ್ಕೆಲಗಳಲ್ಲಿ ಜಗುಲಿ ಮತ್ತು ಒಳ ಹಜಾರದಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ಜನಪದರು. ಕೆಮ್ಮಣ್ಣಿನಿಂದ ಹೊಸ್ತಿಲು ಸಾರಿಸುವುದು. ಧೂಳಿನಂತಿರುವ ಕೆಮ್ಮಣ್ಣನ್ನು ನೀರಿನಲ್ಲಿ ಗಟ್ಟಿಯಾಗಿ ಕಲೆಸಿ ಮನೆಯ ಹೊಸ್ತಿಲು ಮತ್ತು ಬಾಗಿಲಿನ ಚೌಕಟ್ಟು ತಳಭಾಗದ ಆರು ಅಂಗುಲು ಎತ್ತರಕ್ಕೆ ಸಾರಿಸುತ್ತಾರೆ.[೧] ವಿವಿಧ ಸಂದರ್ಭಗಳಲ್ಲಿ ರಂಗೋಲಿಯು ಹೇಗೆ ಬಳಕೆಗೊಳ್ಳುತ್ತದೆ ಎಂಬುದನ್ನು ನೋಡೋಣ.

೬.೧. ಜಾತ್ರೆ-ಉತ್ಸವ


ಜಾತ್ರೆ - ಉತ್ಸವಗಳು ವ್ಯಕ್ತಿಗೆ ಸೀಮಿತವಾಗಿರದೆ, ಸಾಮೂಹಿಕವಾಗಿ ನಡೆಯುವ ಗ್ರಾಮದೇವರ ದೇವತಾ ಕಾರ್ಯವಾಗಿದೆ. ಈ ಕಾರ್ಯ ಗ್ರಾಮ ಸಮುದಾಯದ ಜನ ಒಂದೆಡೆ ಸೇರಿ ಜಾತಿ-ಮತ ಭೇದವಿಲ್ಲದೆ ಜಾತ್ರೆಗಳನ್ನು ಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ಹಾಕುವ ವಿವಿಧ ರೀತಿಯ ರಂಗೋಲಿಗಳು ಅಭ್ಯಾಸಾರ್ಹವಾದಂಥವು. ಇಲ್ಲಿ ಭಕ್ತಿಯ ಹಿನ್ನೆಲೆಯಿದ್ದರೂ ಸೌಂದರ್ಯದ ಜೊತೆಗೆ ಜಾತ್ರೆಗೆ ಸಂಬಂಧ ಪಟ್ಟಂತೆ ತೇರು, ಶ್ರಿ, ಸ್ವಸ್ತಿಕ, ಓಂ ನಂತಹ ಸಂಕೇತಗಳು, ಉತ್ಸವದ ಚಿತ್ರ, ತೇರು, ಗಿಳಿ, ಸೂರ್ಯ, ನಕ್ಷತ್ರ, ಆಯಾ ದೇವರ ಚಿತ್ರಗಳನ್ನು ಹಾಕಿ ಸಂತೋಷ ಪಡುತ್ತಾರೆ.

ಕೆಲವೊಂದು ಗ್ರಾಮದೇವತೆಗಳ ಜಾತ್ರೆಯಲ್ಲಿ ತಾಯಿಗೆ ಬಲಿಕೊಡುವ ರೂಢಿ ಇದ್ದು ಅಲ್ಲಿ ಮಂಡಲ ಹೊಯ್ಯುವುದು ಇದೆ. ಮಂಡಲ ವೃತ್ತಾಕಾರದಲ್ಲಿದ್ದು ವಿವಿಧ ರೀತಿಯ ಕೆಂಪು-ಹಳದಿ-ಹಸಿರು ಮುಂತಾದ ಬಣ್ಣಗಳಿಂದ ತುಂಬಿಕೊಂಡು ಅಲಂಕರಣದ ಜೊತೆಗೆ ದುಷ್ಟಶಕ್ತಿಯ ನಿಗ್ರಹಕೂಡ ಮಾಡುತ್ತದೆ. ಹೇಗೆಂದರೆ ಕೃಷಿಕ ರಾಶಿ ಮಾಡಿದ ಕಣದ ಸುತ್ತ ಬೂದಿಯ ಮಂಡಲ ಹೊಯ್ಯುತ್ತಾನೆ. ಇಲ್ಲಿ ರಕ್ಷಣೆಯ ಜೊತೆಗೆ ದುಷ್ಟಶಕ್ತಿಯ ಪ್ರವೇಶ ತಡೆಯುವುದೇ ಆಗಿದೆ. ಬೂದಿಯ ಮಂಡಲಕ್ಕೆ ಮುಖ್ಯ ಕಾರಣ ಯಜಮಾನ ತಾನಿಲ್ಲದಾಗ ಯಾರೋ ಬೆಳೆಯನ್ನು ಕದ್ದೊಯ್ದರೇ ಅವರ ಹೆಜ್ಜೆಯ ಗುರುತು ಆ

ಬೂದಿಯ ಮೇಲೆ ಬಿದ್ದು 'ಯಾರೊ' ಬಂದು ಹೋಗಿದ್ದಾರೆ ಎಂಬುದರ ಅರಿವು ಮೂಡಿಸುತ್ತದೆ. ಅದಲ್ಲದೆ ಬೂದಿ ಭಸ್ಮದ ಸಂಕೇತ. ಭಸ್ಮವನ್ನು ದಾಟುವ ಪ್ರಯತ್ನ ದುಷ್ಟಶಕ್ತಿಗಳು ಮಾಡುವುದಿಲ್ಲ. ಬೂದಿ ಮಾಟ-ಮಂತ್ರದ ಮೊದಲ ವಸ್ತು. ಮಾಟಕ್ಕೆ ಪ್ರತಿಯಾಗಿ ಮಾಟವೇ ಮದ್ದು ಎಂಬಂತೆ ಈ ಬೂದಿಯನ್ನು ರಾಶಿಯ ಸುತ್ತ ಹಾಕಿ ಕಾಳುಗಳಿಗೆ ರಕ್ಷಣಾತಂತ್ರವಾಗಿ ಬಳಸಿಕೊಂಡಿದ್ದು ಸ್ಪಷ್ಟವಾಗುತ್ತದೆ.

೬.೨. ಹಬ್ಬ-ಹರಿದಿನ

ಹಬ್ಬ ಹುಣ್ಣಿಮೆಯಂದು ಸಾಮಾನ್ಯವಾಗಿ ಅಲಂಕಾರ ಮಾಡುವುದು ಒಂದು ರೀತಿಯಾದರೆ ಆಯಾ ಹಬ್ಬಗಳಲ್ಲಿ ಮಾಡುವ ಹೊಸ್ತಿಲಿನ ಅಲಂಕಾರ ವೈಶಿಷ್ಟ್ಯ ಪೂರ್ಣವಾಗಿದೆ. ಯಾವುದೇ ಹಬ್ಬ ಬರಲಿ ಆಗ ಮನೆಯ ನೆಲ ಗೋಡೆಯನ್ನೆಲ್ಲ ಶುಭ್ರಗೊಳ್ಳುವ ಕ್ರಿಯೆ ಸಾರ್ವತ್ರಿಕವಾಗಿ ನಡೆಯುತ್ತದೆ. ಮದುವೆ ಯಂತಹ ಮಂಗಳ ಪ್ರಸಂಗಗಳಲ್ಲಿ ವರ್ಷಕ್ಕೊಮ್ಮೆಯಾದರೂ ನೆಲ ಸಾರಿಸಿ, ಬಾಗಿಲು-ಹೊಸ್ತಿಲು ಸಾರಿಸಿ, ಜೋರು ಬಿಡಿಸುತ್ತಾರೆ. ಬಾಗಿಲು ಇರುವ ಭಾಗದಲ್ಲಿ (ಚೌಕಟ್ಟಿನ ಸುತ್ತಲೂ) ಜೋರು ಬಿಡುತ್ತಾರೆ. (ಪಟ್ಟಿಗಳನ್ನು ಎಳೆಯುವುದು) ಇದನ್ನು ಮನೆಯ ಗೋಡೆಗಳಿಗೂ ಮಾಡುತ್ತಾರೆ. ಇದು ಗುಲಬರ್ಗಾ, ವಿಜಾಪುರ ಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಮನೆಯ ಪ್ರಮುಖ ಆಕರ್ಷಣೆ ಬಾಗಿಲು. ಜನಪದರ ಪ್ರಕಾರ ಬಾಗಿಲನ್ನು ನೋಡಿಯೇ ಮನೆಯ ವೈಶಿಷ್ಟ್ಯ ಹೇಳಬಹುದು. ಮನೆಯ ಬಾಗಿಲಿನ ಸುತ್ತಲೂ ಮಾಡುವ ಅಲಂಕಾರ ಈ ಕೆಳಗಿನಂತಿವೆ.


ಬಾಗಿಲ ಎರಡು ಬದಿಗೆ ಮಾಡಿರುವ ಅಲಂಕಾರ

೧. ಬಾಗಿಲಿನ ಮೇಲಿನ ಭಾಗದಲ್ಲಿ ಪಾಂಡವರ ಐದು ಸಂಕೇತಿಕ ಚಿತ್ರ ಬಿಡಿಸುವುದು.[೨]

೨. ಬಾಗಿಲಿನ ಮೇಲಿನ ಭಾಗದ ಮಧ್ಯದಲ್ಲಿ ಪಾಂಡವರ ಮೂರು ಸಾಂಕೇತಿಕ ಚಿತ್ರ ಚಿತ್ರಿಸು ವುದು.[೩]

೩. ಬಾಗಿಲಿನ ಮೇಲಿನ ಭಾಗದಲ್ಲಿ ನಡುವೆ ಪಾಂಡವರ ಐದು ಸಾಂಕೇತಿಕ ಚಿತ್ರ ಚಿತ್ರಿಸು ವುದು.[೪]

೪. ಬಾಗಿಲಿನ ಮೇಲಿನ ಭಾಗದಲ್ಲಿ ಪಾಂಡವರ ಒಂದು ಸಾಂಕೇತಿಕ ಚಿತ್ರ ಚಿತ್ರಿಸುವುದು.[೫]

೫. ಬಾಗಿಲ ಬದಿಯ ಮೇಲಿನ ಭಾಗದಲ್ಲಿ ಹೋಳಿಗೆ ಹೆಸರಿನ ಚಿತ್ರ ಚಿತ್ರಿಸುವುದು.[೬]

೬. ಬಾಗಿಲ ಬದಿಯಲ್ಲಿ ತೇರಿನಾಕೃತಿಯ ಚಿತ್ರವಿನ್ಯಾಸ ಮಾಡುವುದು.[೭]

೭. ಬಾಗಿಲಿಗೆ ವಿಭೂತಿ-ಕುಂಕುಮ, ಅರಿಶಿನದ ಚುಕ್ಕೆಯ ಚಿತ್ರ ವಿನ್ಯಾಸದ ಅಲಂಕಾರ ಮಾಡುವುದು.[೮]

೧. ಬಾಗಿಲಿನ ಮೇಲಿನ ಭಾಗದಲ್ಲಿ ಪಾಂಡವರ ಐದು ಸಾಂಕೇತಿ ಚಿತ್ರ ಚಿತ್ರಿಸುವುದು : ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಹಳ್ಳಿಗಳಲ್ಲಿ ಮಹಾನವಮಿಯೆಂದು ಬಾಗಿಲಿನ ಮೇಲಿನ ಭಾಗದಲ್ಲಿ ಪಾಂಡವರ ಹೆಸರಿನಲ್ಲಿ ಸುಣ್ಣದ ಮೇಲೆ ಹುರಮಂಜಿನಿಂದ ವಿವಿಧ ರೀತಿಯ ತ್ರಿಕೋನಾಕೃತಿ ಮತ್ತು ರೇಖಾಕೃತಿ(ಬಳ್ಳಿಯಾಕೃತಿಯಲ್ಲಿ) ಚಿತ್ರ ಬಿಡಿಸಿರುವುದನ್ನು ಕಾಣುತ್ತೇವೆ.[೯]

೨. ಬಾಗಿಲಿನ ಮೇಲಿನ ಭಾಗದಲ್ಲಿ ನಡುವೆ ಪಾಂಡವರ ಮೂರು ಸಾಂಕೇತಿಕ ಚಿತ್ರ ಚಿತ್ರಿಸುವುದು : ಈ ಸಾಂಕೇತಿಕ ಚಿತ್ರಗಳು ಒಂದೇ ಊರಿನಲ್ಲಿ ಮನೆಯಿಂದ ಮನೆಗೆ ಅಥವಾ ಓಣಿಯಿಂದ ಓಣಿಗೆ ಭಿನ್ನವಾಗಿ ಕಾಣಿಸಿಕೊಳ್ಳುತ್ತವೆ. ಕೆಲವು ಮನೆಗಳ ಮೇಲೆ ನಡುವೆ ಮೂರು ತ್ರಿಕೋನಾಕೃತಿಯ ಇಲ್ಲವೆ ಬಳ್ಳಿಯಾಕೃತಿಯ ಚಿತ್ರವಿನ್ಯಾಸಗಳಿರುತ್ತವೆ. ಇನ್ನೆರಡು ಚಿತ್ರವಿನ್ಯಾಸಗಳನ್ನು ಬಾಗಿಲಿನ ಎರಡೂ ಬದಿಯ ಅಂಚುಗಳಿಗೆ ಹೊಂದಿಸಿ ಚಿತ್ರಿಸಿರುತ್ತಾರೆ. ಇಲ್ಲಿ ಒಟ್ಟು ಐದು ಚಿತ್ರವಿನ್ಯಾಸಗಳಿರುವುದಾದರೂ ಅದನ್ನು ಬಿಡಿಸುವಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯ ಹೊಸತನ ತೋರಿಸುತ್ತಾರೆ.[೧೦]

೩. ಬಾಗಿಲಿನ ಮೇಲಿನ ಭಾಗದಲ್ಲಿ ನಡುವೆ ಪಾಂಡವರ ಐದು ಸಾಂಕೇತಿಕ ಚಿತ್ರ ಚಿತ್ರಿಸುವುದು : ಮೇಲೆ ಹೇಳಿದಂತೆ ಇನ್ನೂ ಒಂದು ಚಿತ್ರ ಬಾಗಿಲಿನ ನಡುವೆ ಇರುವಂತೆಯೇ ಚಿತ್ರಿಸುವುದು ಒಂದೇ ಊರಲ್ಲಿ ಕಂಡುಬರುತ್ತದೆ. ಇವುಗಳಿಗೆ ಬಳಸುವ ವಸ್ತು, ಬಣ್ಣ ಒಂದೇಯಾದರೂ ಒಂದು ಚಿತ್ರ ಬಾಗಿಲಿನ ನಡುವೆ ಪ್ರಧಾನವಾಗಿದ್ದರೆ, ಬಾಗಿಲಿನ ನಾಲ್ಕು ಅಂಚುಗಳಿಗೆ ಒಂದೊಂದರಂತೆ ಇನ್ನುಳಿದ ನಾಲ್ಕು ಚಿತ್ರಗಳನ್ನು ಚಿತ್ರಿಸಿರುತ್ತಾರೆ. ಇಲ್ಲಿಯೂ ಒಟ್ಟು ಐದು ಚಿತ್ರಗಳಿರುವುದು ವೈಶಿಷ್ಟ್ಯ. ಕೆಲವು ಕಡೆ ಬಾಗಿಲ ಮಗ್ಗಲು ಬಳ್ಳಿಯ ಹೂವಿನ ತೆನೆಯಾಕಾರಾದ ಚಿತ್ರವಿನ್ಯಾಸಗಳೂ ಕಾಣಿಸುತ್ತವೆ.


೪. ಬಾಗಿಲಿನ ಮಗ್ಗಲು ಮತ್ತು ಮೇಲಿನ ಭಾಗದಲ್ಲಿ ಹೋಳಿಗೆಯ ಹೆಸರಿನ ಚಿತ್ರ ಬಿಡಿಸುವುದು : ವಿಜಾಪುರ ಜಿಲ್ಲೆಯ ಬಾಗೇವಾಡಿ ಹಾಗೂ ಮುದ್ದೇಬಿಹಾಳ ತಾಲ್ಲೂಕುಗಳಲ್ಲಿ ಕಾರಹುಣ್ಣಿಮೆಯಂದು ಬಾಗಿಲಿನ ಬದಿಯಲ್ಲಿ ಮೇಲಿನ ಭಾಗದಲ್ಲಿ ಹೋಳಿಗೆಯ ವಿನ್ಯಾಸದ ಚಿತ್ರಗಳನ್ನು ಬರೆಯುವ ಸಂಪ್ರದಾಯವಿದೆ. ಇದಕ್ಕೆ ಹೋಳಿಗೆ ಬರೆಯುವುದೆಂದು ಹೆಸರು. ಈ ಸಂದರ್ಭದಲ್ಲಿ ಹೋಳಿಗೆಯ ನೈವೇದ್ಯವನ್ನು ಮಾಡುವುದಾಗಿ ಹೇಳುತ್ತಾರೆ.[೧೧]

೫. ಬಾಗಿಲ ಬದಿಯಲ್ಲಿ ತೇರಿನಾಕೃತಿಯಲ್ಲಿ ಚಿತ್ರವಿನ್ಯಾಸ ಚಿತ್ರಿಸುವುದು : ಬಾಗಿಲು ಬದಿಯ ಗೋಡೆಯ ಮೇಲೆ ತೇರಿನ ಚಿತ್ರ ಚಿತ್ರಿಸುವುದು, ಹೆಚ್ಚಾಗಿ ಬೆಳಗಾವಿ ಮತ್ತು ಧಾರವಾಡ ಜಿಲ್ಲೆಯಲ್ಲಿ ಕಂಡುಬರುತ್ತದೆ.


ಈ ತೇರಿನ ಚಿತ್ರವನ್ನು ವಿವಿಧ ಗಾತ್ರ ಮತ್ತು ವಿನ್ಯಾಸಗಳಲ್ಲಿ ಚಿತ್ರಿಸುತ್ತಾರೆ. ಗೋಡೆ ಸಾರಿಸಿದಾಗೊಮ್ಮೆ ಈ ಚಿತ್ರ ಬರೆಯುವುದಾಗಿ ಹೇಳುತ್ತಾರೆ. ಇಲ್ಲಿ ಮಾನವಾಕೃತಿಗಳು, ಹಾವು, ಚೇಳು, ಸೂರ್ಯ, ಚಂದ್ರ, ವಾಲಗದವರು ಮೊದಲಾದ ಚಿತ್ರಗಳು ಇರುವುದುಂಟು. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಹಾರುವ ಗೊಂಡನಹಳ್ಳಿಯಲ್ಲಿ ಮನೆಯ ಮುಂದೆ ಇದೇ ರೀತಿಯ ತೇರಿನ ಚಿತ್ರ ಬಿಡಿಸುತ್ತಾರೆ. ತೇರು ಇಲ್ಲಿ ದೇವರ ಸಂಕೇತವಾಗಿದೆ. ಚಿಕ್ಕಮಂಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನಲ್ಲಿ ಬಾಗಿಲು ಬದಿಯಲ್ಲಿ ಬಳೆಯಿಂದ ತೇರಿನಾಕೃತಿಯ ಚಿತ್ರವಿನ್ಯಾಸ ಮಾಡಿರುತ್ತಾರೆ. ಪ್ರತಿ ಹಬ್ಬಗಳಲ್ಲಿಯೂ ಈ ಚಿತ್ರಗಳಿಗೆ ಬಣ್ಣ ಬಳಿಯುತ್ತಾರೆ. ಗೋಡೆಗೆ ಹಸಿ ಮಣ್ಣನ್ನು ಲೇಪಿಸಿ ಹೆಂಗಸರು ಅದರಲ್ಲಿ ಮುಕ್ಕಾದ ಮುಕ್ಕಾದ ಬಳೆಗಳನ್ನು ಅಂಟಿಸಿ, ತೇರಿನ ವಿನ್ಯಾಸ ಮಾಡಿರುತ್ತಾರೆ. ಮಣ್ಣು ಒಣಗಿದ ಮೇಲೆ ಬಳೆಯಿದ್ದ ನಡುವಿನ ಜಾಗದಲ್ಲಿ ಒಂದೊಂದರಲ್ಲಿ ಒಂದೊಂದರಂತೆ ಕೆಂಪು, ಕರಿ, ಹಳದಿ ಬಣ್ಣಗಳನ್ನು ತುಂಬುತ್ತಾರೆ. ಸುತ್ತಲೂ ವರ್ಣವಿನ್ಯಾಸದ ಅಲಂಕಾರಗಳನ್ನು ಮಾಡುತ್ತಾರೆ. ದೀಪಾವಳಿಗೆ ಅರತಿ ಪೂಜೆ ಮಾಡುವ ಸಂಪ್ರದಾಯವಿದೆ. ಉತ್ತರ ಕರ್ನಾಟಕದಲ್ಲಿಯೂ ಹೀಗೆಯೇ ಪೂಜೆ ಸಲ್ಲುತ್ತದೆ.[೧೨]

೬. ಬಾಗಿಲಿಗೆ ವಿಭೂತಿ, ಕುಂಕುಮ, ಅರಿಶಿನದ ಚುಕ್ಕೆಯ ಚಿತ್ರವಿನ್ಯಾಸದ ಅಲಂಕಾರ ಮಾಡುವುದರಿಂದ ಗೃಹ ಶಾಂತಿ ನೆಲೆಗೊಳ್ಳುತ್ತದೆ. ಶುಭಕಾರ್ಯಗಳು ನಡೆಯುತ್ತವೆಯೆಂಬ ಭಾವನೆಗಳ ಹಿನ್ನೆಲೆಯಲ್ಲಿ ಬಾಗಿಲು ಪೂಜೆ ನಡೆಯುತ್ತದೆ. ಹೀಗೆ ನಡೆಯುವ ಪೂಜೆಯ ಆಚರಣೆಯಲ್ಲಿ ವಿಭೂತಿ ಕುಂಕುಮ, ಅರಿಶಿನದ ಚುಕ್ಕೆಗಳಿಂದ ವಿವಿಧ ವಿನ್ಯಾಸಗಳನ್ನು ಮಾಡುತ್ತಾರೆ.[೧೩]

ಬಾಗಿಲ ಬದಿಯ ಅಲಂಕರಣಗಳು



ಹೀಗೆ ಹೊಸ್ತಿಲಿಗೆ ಹಚ್ಚುವ ಅರಿಶಿನ-ಕುಂಕುಮಗಳಲ್ಲಿ ವೈಜ್ಞಾನಿಕ ಅಂಶಗಳ ಜೊತೆಗೆ ಆಯಾ ಧಾರ್ಮಿಕ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಭಿನ್ನತೆ ಎದ್ದು ತೋರುತ್ತದೆ. ಹೊಸ್ತಿಲು ಮನೆಯನ್ನು ರಕ್ಷಣೆ ಮಾಡುವ ಗುರುತರವಾದ ಜವಾಬ್ದಾರಿ ಹೊತ್ತಿದೆ. ಇಂತಹ ಹೊಸ್ತಿಲಿಗೆ ಅರಿಶಿನ ಹಚ್ಚುವುದು ಅದು ಮುತ್ತೈದೆಯರ ಮಂಗಳದ ಸಂಕೇತವಾಗಂತೆ ಕ್ರಿಮಿ-ಕೀಟಗಳನ್ನು ಮನೆಯ ಒಳಗೆ ಪ್ರವೇಶಿಸದಂತೆ ಕ್ರಿಮಿನಾಶಕ ಗುಣವನ್ನು (Anti septic) ಹೊಂದಿದೆ. ಕೆಳವರ್ಗದ ಜನರ ಮನೆಗಳಿಗೆ(ಗುಡಿಸಲುಗಳಿಗೆ) ಜಾಜಾ ಹಚ್ಚಿ ಅರಿಶಿನದ ನಾಲ್ಕು ಬೊಟ್ಟು ಇಟ್ಟು ಮಧ್ಯ ಕುಂಕುಮ ಹಚ್ಚುತ್ತಾರೆ. ಅವರಿಗೆ ಅರಿಶಿನವು ಭಂಡಾರ ಎಂಬ ಭಾವನೆ. ಈ ಭಂಡಾರ ದೇವಿಗೆ ಪೂಜಿಸುವುದಾಗಿದೆ. ಸಾಮಾನ್ಯವಾಗಿ ಕೆಳವರ್ಗದವರು ಸ್ತ್ರೀ ದೇವತಾರಾಧನೆಗೆ ಪ್ರಧಾನ್ಯತೆ ಕೊಟ್ಟವರು. ಇಲ್ಲಿ ಜಾಜಾ ಕೂಡ ಪ್ರಮುಖ ಸ್ಥಾನ ವಹಿಸುತ್ತದೆ. ಜಾಜಾದ ಪರಿಕಲ್ಪನೆ ಹುಟ್ಟಿದ್ದೆ ಬಲಿಯ ಸಂಕೇತದಿಂದ ಎಂದು ಹೇಳಬಹುದು. ಹಿಂದೆ ಪ್ರಾಣಿಬಲಿ ಕೊಟ್ಟು ಬಾಗಿಲಿಗೆ ಕಟ್ಟುತ್ತಿದ್ದರು. ಅದೇ ಮುಂದೆ ಜಾಜಾ(ಕೆಂಪು ಮಣ್ಣು)ದ ರೂಪದಲ್ಲಿ ಸಾಂಕೇತಿಕವಾಗಿ ಹೊಸ್ತಿಲ ಮೇಲೆ ಬಳಿಯುತ್ತಾರೆ. ವೀರಶೈವರ ಮನೆಗಳ ಹೊಸ್ತಿಲಿಗೆ ವಿಭೂತಿಯ ಮೂರು ಪಟ್ಟಿಗಳನ್ನು ಎಳೆದು ಮಧ್ಯ ಕುಂಕುಮ ಹಚ್ಚುತ್ತಾರೆ. ಕುರುಬರು ಮೈಲಾರ ಲಿಂಗನ ಸಾಂಕೇತಿಕವಾದ ಡಮರು ಮತ್ತು ವಿಭೂತಿಯ ಎರಡು ಪಟ್ಟಿಗಳನ್ನು ಎಳೆಯುತ್ತಾರೆ. ವಿಶ್ವಕರ್ಮ ಮತ್ತು ವೈದಿಕರಲ್ಲಿ ಕೆಲವೊಂದು ಸಾಮ್ಯತೆ ಕಂಡುಬರುತ್ತವೆ. ಅವೆಂದರೆ ರಂಗೋಲಿ ಮತ್ತು ಅರಿಶಿನ-ಕುಂಕುಮ ಹಾಗೂ ಹೂಗಳಿಂದ ಪೂಜಿಸುವುದು.




ಅರಿಶಿನ ಕುಂಕುಮಗಳಿಂದ ಶೋಭಿಸುವ ಹೊಸ್ತಿಲು

೬.೨.೧. ಸಂಕ್ರಾಂತಿ

ಸಂಕ್ರಾಂತಿಯ ವಿಶಿಷ್ಟತೆ ಸುಗ್ಗಿಯ ಕಾಲ. ಅಂದು ಮನೆಯ ಮುಂದೆ ಬಣ್ಣ ಬಣ್ಣದ ಸುಂದರ ರಂಗೋಲಿ, ಹೊಸ್ತಿಲ ತೊಳೆದು ಸಾರಿಸಿ ರಂಗೋಲಿ ಹಾಕಿ ಸಗಣಿಯಿಂದ ಬಟ್ಟಲಿನಾಕಾರ ಮಾಡಿ ರೈತ ಬೆಳೆದ ಬೆಳೆ, ಗಜ್ಜರಿ, ಬಾರಿಹಣ್ಣು, ಎಳ್ಳು, ಬೆಲ್ಲ ಇಟ್ಟು ಅರಿಶಿನ ಕುಂಕುಮಗಳಿಂದ ಪೂಜಿಸಿ ಹೊಸ್ತಿಲ ಇಕ್ಕೆಲಗಳಲ್ಲಿ ಅಂಗಳದ ರಂಗೋಲಿಯಲ್ಲಿ ಇಡುವುದಿದೆ.





ಸಂಕ್ರಾತಿ ಹಬ್ಬದ ರಂಗೋಲಿಗಳು

೬.೨.೨. ಯುಗಾದಿ

ಯುಗಾದಿ ಎಂದರೆ ಬೇವು ಬೆಲ್ಲದ ಸುಖ-ದುಃಖಗಳ ಪ್ರತೀಕವಾಗಿದ್ದು, ಅಂದು ಬಾಗಿಲಿಗೆ ಬೇವಿನ ತೊಪ್ಪಲು ಕಟ್ಟುವ ವಿಶೇಷ ಸಂಪ್ರದಾಯವಿದೆ. ದೇವಿಯಂದೆ ನಂಬಿದ ಬೇವಿನ ತೊಪ್ಪಲು ರೋಗ ನಿರೋಧ ಮತ್ತು ದೈವದ ಹಿನ್ನೆಲೆಯಲ್ಲಿ ಮನೆಗೆ ರಕ್ಷಣೆಕೊಟ್ಟು, ಪೋಷಿಸುತ್ತದೆ.

೬.೨.೩. ಕಾರಹುಣ್ಣಿಮೆ

ರೈತರ ವಿಶೇಷ ಹಬ್ಬವಾದ ಕಾರ ಹುಣ್ಣಿಮೆ ಹೊಸ್ತಿಲು ಸಾರಿಸಿ ಡಾಂಬರ ಎಣ್ಣೆ ಅಥವಾ ಎಳ್ಳೆಣ್ಣೆ ಹಚ್ಚಿ ಬಾಗಿಲಿಗೆ ತಳಿರು ತೋರಣ ಕಟ್ಟಿ ವಿಶೇಷ ಪೂಜೆ ಸಲ್ಲಿಸುತ್ತಾರೆ.

೬.೨.೪. ಹೊಸ್ತಿಲ ಹುಣ್ಣಿಮೆ

ದೇವರ ದೀಪಾವಳಿ ಎಂದೇ ಕರೆಯುವ ಈ ಹಬ್ಬದಲ್ಲಿ ಹೊಸ್ತಿಲಿನ ವಿಶೇಷ ಅಲಂಕಾರ. ದೇವರ ಆಗಮನ ಹೊಸ್ತಿಲ ಮೇಲೆಯೇ ಎಂದು ಸೂರ್ಯೋದಯಕ್ಕೆ ಮುಂಚೆ ಎದ್ದು ಹೊಸ್ತಿಲ ತೊಳೆದು

ರಂಗೋಲಿ ಹಾಕಿ ಹೊಸ್ತಿಲ ಮೇಲೆ ದೀಪಗಳನ್ನಿಟ್ಟು ಅಲಂಕರಿಸುತ್ತಾರೆ. ದೀಪಗಳ ಬೆಳಕು ರಾರಾಜಿಸುತ್ತಿರುವ ದೃಶ್ಯ ನೋಡುಗರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಈ ರೀತಿ ಹೊಸ್ತಿಲ ಮೇಲೆ ಬಾಗಿಲ



ಮಾವಿನ ತೋರಣ ಮತ್ತು ಕಸುತಿ ಹಾಕಿದ ಬಾಗಿಲ
ಪರದೆಯಿಂದ ಅಲಂಕೃತಗೊಂಡ ಬಾಗಿಲು

ಇಕ್ಕೆಲಗಳಲ್ಲಿ ದೀಪಗಳನ್ನಿಡುವ ಸಂಪ್ರದಾಯ ಕಾರ್ತಿಕ ಮಾಸದಲ್ಲಿ ಕಾಣಬಹುದು. ಇದು ಆಂಧ್ರ ಮತ್ತು ತಮಿಳುನಾಡಿನಲ್ಲಿ ಹೆಚ್ಚಾಗಿ ಕಾಣಬಹುದು. ಇತ್ತೀಚಿಗೆ ಆಂಧ್ರದವರ ಪ್ರಭಾವದಿಂದ ಕರ್ನಾಟಕದಲ್ಲಿಯೂ ಮಾಡಲಾಗುತ್ತದೆ.

೬.೨.೫. ಶ್ರಾವಣ ಮಾಸ

ಶ್ರೇಷ್ಠವಾದ ತಿಂಗಳು ಎಂದೆನಿಸಿಕೊಳ್ಳುವ ಈ ಮಾಸ ಪೂರ್ತಿ ಪೂಜಾ-ಪುನಸ್ಕಾರವೇ ನಡೆಯುತ್ತವೆ. ಕರಾವಳಿಯ ಕಡೆಗಳಲ್ಲಿ ಸೋಣೆ ಹೂವು ಗರಿಕೆಯಿಂದ ಹೊಸ್ತಿಲಿನ ಪೂಜೆ ಮಾಡುತ್ತಾರೆ.

೬.೨.೬. ನಾಗರಪಂಚಮಿ


ನಾಗರ ಪಂಚಮಿಯಂದು ಮನೆಯ ಮುಂದೆ ಹೊಸ್ತಿಲ ಮೇಲೆ ಸಾಂಕೇತಿಕವಾಗಿ ನಾಗಪ್ಪನನ್ನು ಬರೆಯುವುದು. ಅರಿಶಿನ-ಕುಂಕುಮ ಮತ್ತು ಗೆಜ್ಜೆವಸ್ತ್ರ(ಹತ್ತಿಯಿಂದ ಮಾಡಿದ ಹಾರ) ಹಾಕಿ ಪೂಜಿಸುತ್ತಾರೆ. ಈ ಗೆಜ್ಜೆವಸ್ತ್ರ ವೈದಿಕರಲ್ಲಿ ಹೆಚ್ಚಾಗಿ ಬಳಕೆಗೊಳ್ಳುತ್ತದೆ.

೬.೨.೭. ವಿಜಯದಶಮಿ(ದಸರಾ)


ವಿಜಯದ ಸಂಕೇತವಾದ ವಿಜಯದಶಮಿಯೆಂದು ಸೆಗಣಿಯಿಂದ ಪಾಂಡವರನ್ನು ಮಾಡಿ ಹೊಸ್ತಿಲಿನ ಬದಿಗಳಲ್ಲಿ ಕೂಡಿಸಿ ಪೂಜಿಸುತ್ತಾರೆ. ಅಂದು ಪಾಂಡವರು ಕಾಡಿನಿಂದ ನಾಡಿಗೆ ಬಂದ ಶುಭದಿನ. ಅಂದು ಬನ್ನಿ ಮುರಿಯಲು ಊರ ಜನರು ಸೇರಿ ಬನ್ನಿಗಿಡಕ್ಕೆ ಹೋಗಿರುತ್ತಾರೆ. ಅವರು ಬನ್ನಿ ಗಿಡಕ್ಕೆ ಪೂಜಿಸಿ ಬನ್ನಿ ಹರಿದುಕೊಂಡು ಊರೊಳಗೆ ಪ್ರವೇಶಿಸುತ್ತಿದ್ದಂತೆ ಪ್ರತಿ ಮನೆಯ ಬಾಗಿಲ ಬಳಿ ಸೀಗಿ ಬಡಿದು ದೀಪ ಹಚ್ಚಿರಬೇಕು. ಇದು ಉತ್ತರ ಕರ್ನಾಟಕದಲ್ಲಿ ಕಂಡುಬರುವಂತಹ ಆಚರಣೆಯಾಗಿದೆ. ಇದು ವಿಜಯದಶಮಿಯಂದು ಪ್ರಾರಂಭವಾಗಿ ಮುಂದೆ ಐದು ದಿನಗಳವರೆಗೆ ಸೀಗಿ ಬಡಿಯುವ ಆಚರಣೆ ಮುಂದುವರೆದು ಐದನೆಯ ದಿವಸ ಅಂದರೆ ಸೀಗಿ ಹುಣ್ಣಿಮೆಯ ದಿವಸ ಬಾಗಿಲಿನ ಬಳಿ ಗೋಡೆಗೆ ಸುಣ್ಣ ಹಚ್ಚಿ ಜಾಜಾದಿಂದ ಸೀಗಿ ಬರೆಯುತ್ತಾರೆ. ಸೀಗಿ ಬರೆಯುವ ವಿಧಾನವೆಂದರೆ ಸೆಗಣಿಯನ್ನು ತೆಗೆದುಕೊಂಡು ಪ್ರತಿದಿನ ಬೇರೆ ಬೇರೆ ಚಿತ್ರ ಸೆಗಣಿಯಿಂದ ಬಾಗಿಲಿನ ಗೋಡೆಗೆ ಬಿಡಿದು, ಅದಕ್ಕೆ ಕುಕ್ಕೆನ್ ಹೂ(ಅಣ್ಣೆ ಹೂ), ಅವರೆ ಹೂವ ಚುಚ್ಚಿ ದೀಪ ಹಚ್ಚಿ ಅರಿಶಿನ-ಕುಂಕುಮಗಳಿಂದ ಪೂಜಿಸಿ, ಸಕ್ಕರೆ ಪುಟಾಣಿ ನೈವೇದ್ಯ ಮಾಡಿ ಹೆಂಗೆಳೆಯರೆಲ್ಲ ಸೇರಿ ಹಾಡುತ್ತಾರೆ. ಹೀಗೆ ಓಣಿಯ ಪ್ರತಿಯೊಂದು ಮನೆಯಲ್ಲಿಯೂ ಇದೇ ಕ್ರಿಯೆ ಮುಂದುವರೆಯುತ್ತವೆ.

೬.೨.೮. ಸೀಗಿ ಹುಣ್ಣಿಮೆಯಲ್ಲಿ ಬರೆಯುವ ಚಿತ್ರಗಳು

ಹೀಗೆ ಪ್ರತಿ ದಿನ ಒಂದೊಂದರಂತೆ ಸಗಣೆಗಿಯಿಂದ ಬರೆದು ಕೊನೆಯ ದಿನ ಅಂದರೆ ಸೀಗೆ ಹುಣ್ಣಿಮೆಯ ದಿನ ಸುಣ್ಣ ಹಚ್ಚಿ ಜಾಜಾದಿಂದ ಈ ಎಲ್ಲ ಚಿತ್ರಗಳನ್ನು ಬರೆದು ಹೋಳಿಗೆ ಮಾಡಿ ನೈವೇದ್ಯ ಕೊಡುತ್ತಾರೆ.



ಗಂಗೆ ಗೌರಿ ಸೂರ್ಯ ಚಂದ್ರ ನಕ್ಷತ್ರಗಳು



೬.೧.೯. ದೀಪಾವಳಿ

ದೀಪಾವಳಿಯಲ್ಲಿ ವಿಶೇಷ ಅಲಂಕಾರ, ಹೊಸ್ತಿಲಿನ ಮೇಲೆ ಬಾಗಿಲ ಬಳಿ ದೀಪಗಳನ್ನಿಟ್ಟು ಕತ್ತಲೆಯನ್ನು ಹೊಡೆದೋಡಿಸುವ ವಿಶೇಷ ಪೂಜೆ. ಅಂದು ಮಲೆನಾಡ ಕಡೆಗಳಲ್ಲಿ ಬಲೀಂದ್ರನಿಗೆ ಸ್ವಾಗತಕೋರುವ ಸುದಿನ. ಅಂದು ಹೊಸ್ತಿಲ ಮೇಲೆ ತುಂಬಿದ ತಂಬಿಗೆಯನ್ನಿಟ್ಟು ಚಂಡು ಹೂವಿನ ದಂಡೆ ಸುತ್ತಿ ಪೂಜಿಸುತ್ತಾರೆ. ಅಂದು ಮಾವಿನ ತಳಿರು ತೋರಣದ ಜೊತೆಗೆ ಚಂಡು ಹೂವಿನ ವಿಶೇಷ ಅಲಂಕಾರ. ಚಂಡು ಹೂ ಸಮೃದ್ಧಿ ಶಾಂತಿಯ ಸಂಕೇತ. ಗೋಕುಲಾಷ್ಟಮಿಯೆಂದು ಶೇಡಿಯಿಂದ ಬಾಲಕೃಷ್ಣನನ್ನು ಬರಮಾಡಿಕೊಳ್ಳುವಂತೆ ಪಾದಗಳನ್ನು ಚಿತ್ರಿಸುವುದು. ಅಷ್ಟಮಿಯ ದಿವಸದಂದು ಲಕ್ಷ್ಮೀಯ ಪಾದಗಳನ್ನು ಚಿತ್ರಿಸುವುದು.

ಹೀಗೆ ಪ್ರತಿಯೊಂದು ಹಬ್ಬಗಳಲ್ಲಿ ಹಾಕುವ ರಂಗೋಲಿ ಮಾಡುವ ಆಲಂಕಾರ ಭಿನ್ನವಾಗಿದ್ದು ಅದು ಆಯಾ ಹಬ್ಬವೆಂದು ಗುರುತಿಸುವಿಕೆಯಲ್ಲಿ ಸಹಾಯ ಮಾಡುತ್ತದೆ. ಇಂದಿನ ಫ್ಯಾಶನ ಯುಗದಲ್ಲಿ ರಂಗೋಲಿ ಹಾಕುವುದು ಒಂದು ವಿದ್ಯೆ ಮತ್ತು ಪ್ರತಿಷ್ಠೆಯೇ ಆಗಿದೆ. ಆದರೆ ಹಿಂದಿನ ಕಾಲದಲ್ಲಿ ಅದೊಂದು ಧಾರ್ಮಿಕ ಕ್ರಿಯೆಯಾಗಿ ಕಂಡುಬರುತ್ತದೆ. ಅಂದು ಪ್ರತಿನಿತ್ಯದ ಬದಲು ವಿಶೇಷ ಸಂದರ್ಭಗಳಲ್ಲಿ ಹಬ್ಬ ಹರಿದಿನಗಳಲ್ಲಿ ಹೊಸ್ತಿಲ ಮೇಲೆ ಅಂಗಳದಲ್ಲಿ ರಂಗೋಲಿ ಹಾಕಲಾಗುತ್ತಿತ್ತು. ಅದನ್ನು ಕಂಡ ಜನ 'ಓ ಇಂದು ಇವರ ಮನೆಯಲ್ಲಿ ಏನೋ ವಿಶೇಷತೆ ಇದೆ'' ಎಂದು ತಿಳಿಯುತ್ತಿದ್ದರು. ಜನ ಜನರ ಮಧ್ಯ ರಂಗೋಲಿ ಒಂದು ಸಂಪರ್ಕ ಸಾಧನವಾಗಿಯೂ ಕೆಲಸ ಮಾಡುತ್ತಿತ್ತು.

೬.೩. ಮದುವೆ-ಮುಂಜಿ

ಮದುವೆ ಎಂದರೇನೆ ಸಂಭ್ರಮದ ವಾತಾವರಣ ಸೃಷ್ಟಿಸುತ್ತದೆ. ಅಂದು ಮನೆಯ ಪ್ರತಿಯೊಂದು ಗೋಡೆಗಳು, ಬಾಗಿಲುಗಳು ಸುಣ್ಣ-ಬಣ್ಣಗಳಿಂದ ಕಂಗೊಳಿಸುತ್ತಿರುತ್ತವೆ. ಇದಕ್ಕೆ ಮನೆಯ ಹೊಸ್ತಿಲು ಹೊರತಾಗಿಲ್ಲ. ಹೊಸ್ತಿಲಿಗೆ ವಿವಿಧ ರೀತಿಯ ಕೆಂಪು, ಹಳದಿ, ಬಣ್ಣಗಳನ್ನು ಹಚ್ಚುವುದು, ಬಾಗಿಲಿನ ಎರಡು ಬದಿಯಲ್ಲಿ ಶುಭ-ಲಾಭ ಬರೆಯುವುದು. ಗೋಡೆಯ ಮೇಲೆ ಮಂಗಳ ವಾದ್ಯಗಳನ್ನು ಚಿತ್ರಿಸುವುದು, ಬಾಗಿಲಿಗೆ ಮುತ್ತಿನ ತೋರಣ ಕಟ್ಟುವುದು. ಮತ್ತು ಕಸೂತಿ ಹಾಕಿದ ಬಟ್ಟೆಯ ತೋರಣ ಕಟ್ಟುವುದು. ಇವೆಲ್ಲ ಮದುವೆ ಮನೆಯ ಸಾಕ್ಷ್ಯಾಧಾರಗಳಿದ್ದಂತೆ.


ಮನೆಯ ಮುಂದೆ ಹಾಕುವ ಚಪ್ಪರ, ಬಾಗಿಲಿಗೆ ಹಚ್ಚುವ ಸುಣ್ಣಬಣ್ಣಗಳು, ಅಂಗಳದಲ್ಲಿಯ ರಂಗುರಂಗಿನ ರಂಗೋಲಿಗಳು ಇವೆಲ್ಲ ಮದುವೆ ವಾತಾವರಣಕ್ಕೆ ಮತ್ತಷ್ಟು ಕಳೆ ತಂದುಕೊಡುವಂತವು. ಇವು ಯಾವುದು ಇಲ್ಲ ಎಂದರೆ ಮದುವೆ ಇವರ ಮನಿಯಾಗ ಇದೆಯೋ ಇಲ್ಲವೋ ಎಂಬ ಅನುಮಾನ ಪ್ರಾರಂಭವಾಗುತ್ತದೆ. ಈ ಮಾತನ್ನು ಪ್ರತಿನಿಧಿಸುವ ತ್ರಿಪದಿ ಹೀಗಿದೆ ನೋಡಿ.


ಚಪ್ಪರ ಚೌಕಿಲ್ಲ ಹಪ್ಪಾಳ ಬಟುವಿಲ್ಲ
ಬಾಗಿಲಿಗೆ ಸುಣ್ಣ ತರವಿಲ್ಲ ತಮ್ಮಯ್ಯ
ಹೇಗೆ ಮಾಡೀದೆ ಮದುವೇಯ[೪೪]

ಆದ್ದರಿಂದ ಹೊಸ್ತಿಲಿಗೆ, ಬಾಗಿಲಿಗೆ ಮಾಡುವ ಅಲಂಕಾರದಿಂದಲೇ ಮನೆಯ ಮದುವೆಯ ಶೋಭೆ ಅಧಿಕವಾಗುತ್ತದೆ.

೬.೪. ರಂಗೋಲಿ-ಕುಂಕುಮ

ಪ್ರತಿನಿತ್ಯದ ಮೊದಲ ಕಾರ್ಯವೇ ಹೊಸ್ತಿಲ ಪೂಜೆ ಮತ್ತು ರಂಗೋಲಿ ಹಾಕುವುದು. ಇಲ್ಲಿ ಹೇಗೆಂದರೆ ಹಾಗೆ ಹಾಕಿ ಮುಗಿಸುವ ಹಾಗಿಲ್ಲ. ಇಲ್ಲಿಯೂ ವಿಧಿಪೂರ್ವಕ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಬೆಳಗಿನ ಮತ್ತು ಸಾಯಂಕಾಲದ ರಂಗೋಲಿ ಹಾಕುವಿಕೆಯಲ್ಲಿ ವ್ಯತ್ಯಾಸವಿದೆ. ಬೆಳಗಿನ ರಂಗೋಲಿ ದೇವರನ್ನು ಬರಮಾಡಿಕೊಳ್ಳುವಂತೆ ಲಂಬವಾಗಿ ಗೆರೆ ಎಳೆದರೆ, ಸಾಯಂಕಾಲದಲ್ಲಿ ದೇವರನ್ನು ಹೊರಗೆ ಬಿಡದಂತೆ ಅಡ್ಡ ಗೆರೆ ಎಳೆಯುವುದಿದೆ. ಉದಾ : ಬೆಳಗಿನ ರಂಗೋಲಿ





ಸಾಯಂಕಾಲದ ರಂಗೋಲಿ

ಇದು ದೇವರನ್ನು ಭಕ್ತಿಪೂರ್ವಕವಾಗಿ ಪ್ರೀತಿಯಿಂದ ಬಂಧಿಸಿಡುವುದಾಗಿದೆ. ಇದು ಒಂದು ರೀತಿಯಾದರೆ ಪ್ರತಿನಿತ್ಯದ ರಂಗೋಲಿಯು ಎಷ್ಟು ಎಳೆಗಳ ರಂಗೋಲಿ ಯಾವ ಹೊಸ್ತಿಲಿಗೆ ಹಾಕಬೇಕು. ನಡುವೆ ಚಕ್ರಾಕಾರದ ರಂಗೋಲಿ ಯಾಕೆ ಹಾಕಬೇಕು. ಅಲ್ಲದೆ ತೋರು ಬೆರಳು ಹೆಬ್ಬೆರಳುಗಳಿಂದ ರಂಗೋಲಿ ತೆಗೆದುಕೊಂಡು ಹೊಸ್ತಿಲಿಗೆ ಪಟ ಪಟನೆ ಬಡೆಯುವುದೇಕೆ? ಇವೆಲ್ಲವುಗಳಿಗೂ ಒಂದೊಂದು ವಿಶೇಷವಾದ ಸಂದೇಶವಿದೆ.

ಮನೆಯ ಬಾಗಿಲಿನ ಹೊಸ್ತಿಲಿನಲ್ಲಿ ಮೂರು ವಿಧಗಳಿವೆ.


೧. ತಲಬಾಗಿ ಹೊಸ್ತಿಲು[೧೫]

೨. ನಡುಮನೆಯ ಹೊಸ್ತಿಲು[೧೬]

೩. ದೇವರ ಮನೆಯ ಹೊಸ್ತಿಲು[೧೭]

೧. ತಲಬಾಗಿಲ ಹೊಸ್ತಿಲು

ಸಾಮಾನ್ಯವಾಗಿ ಗೃಹಿಣಿಯಾದವಳು ತನ್ನ ಮನಸ್ಸಿಗೆ ತೋಚಿದ ಯಾವುದೋ ಒಂದು ರಂಗೋಲಿಯನ್ನು ಮತ್ತು ಹೊಸ್ತಿಲ ಮೇಲೆ ಹೂಬಳ್ಳಿಯೋ, ರೇಖೆಗಳನ್ನೋ ಹಾಕುತ್ತಾಳೆ. ಆದರೆ ಇಲ್ಲಿ ಇಂತಿಷ್ಟೇ ಗೆರೆಗಳನ್ನು, ಚಕ್ರಗಳನ್ನು ಹಾಗೂ ರಂಗೋಲಿಯಿಂದ ಹೊಸ್ತಿಲಕ್ಕೆ ಪಟ-ಪಟನೆ ಬಿಡಿಯುವುದೇಕೆ ಎಂಬುದನ್ನು ವಿವರವಾಗಿ ನೋಡೋಣ.



ಚಿತ್ರದಲ್ಲಿ ತೋರಿಸಿರುವಂತೆ ಮೊದಲು ಹೊಸ್ತಿಲಿಗೆ ಐದರಂತೆ ಅಡ್ಡಲಾಗಿ ಗೆರೆಗಳನ್ನು ಪೂರ್ಣವಾಗಿ ಹಾಕಬೇಕು. ಪ್ರತಿ ಐದು ಗೆರೆಗಳ ಮಧ್ಯ ಚಕ್ರಗಳನ್ನು ಹಾಕುವುದು. ಐದು ಗೆರೆಗಳನ್ನು ಎಳೆದಾಗ ನಮಗೆ

ದೊರಕುವ ಮಾರ್ಗಗಳು ನಾಲ್ಕು. ಈ ತರಹದ ಎಳೆಗಳಿಗೂ ನಮ್ಮ ದೇಹಕ್ಕೂ ಸಂಬಂಧ ಕಲ್ಪಿಸಬೇಕು. ನಮ್ಮಲ್ಲಿರುವ ಜ್ಞಾನೇಂದ್ರಿಯ - ಕರ್ಮೇಂದ್ರಿಯ ಎಂದು ಭಾವಿಸುವುದು. ಈ ಗೆರೆಗಳ ಮಧ್ಯ ದೊರಕುವ ನಾಲ್ಕು ಮಾರ್ಗಗಳು ಚತುರ್ವಿಧ ಪುರುಷಾರ್ಥಗಳೆಂದೂ, ಈ ಪುರುಷಾರ್ಥಗಳೇ ಧರ್ಮ ಮತ್ತು ಅಧರ್ಮಗಳಿಗೆ ಅಂಟಿಕೊಂಡಿರುವ ವಿಷಯಗಳು.


ಚಕ್ರಾಕಾರದ ರಂಗೋಲಿ ಯಾಕೆ ಹಾಕಬೇಕೆಂದರೆ ಜೀವನವು ಸುಖ-ದುಃಖಗಳ ಸಂಗಮವಾಗಿರುವಂತೆ ಒಂದಾದ ಮೇಲೊಂದು ಚಕ್ರದ ಹಾಗೆ ಸುತ್ತುತ್ತಿರುತ್ತವೆ. ಇದನ್ನು ನೆನಪಿಸುವ ಸಂಕೇತವೇ ಈ ರಂಗೋಲಿ.[೧೮]

ತೋರುಬೆರಳು ಮತ್ತು ಹೆಬ್ಬೆರಳಿನಿಂದ ರಂಗೋಲಿ ತೆಗೆದುಕೊಂಡು ಹೊಸ್ತಿಲಿಗೆ ಪಟಪಟನೆ ಬಡಿದಾಗ ಅಲ್ಲಿ ಹಾರುವ ಹಕ್ಕಿಯ ಆಕೃತಿ ಗೋಚರವಾಗುತ್ತದೆ. ಆದಕ್ಕೂ ನಮ್ಮ ಮನಸ್ಸಿಗೂ ಸಾಮ್ಯತೆ ಕಂಡುಬರುವುದು.

ಭಗವಂತನು ಪ್ರಹ್ಲಾದನ ಮಾತನ್ನು ಉಳಿಸುವುದಕ್ಕೋಸ್ಕರ ನರಸಿಂಹನ ರೂಪ ತಾಳಿ ಹಿರಣ್ಯ ಕಶ್ಯಪುವಿನ ರಾಕ್ಷಸಿ ಪ್ರವೃತ್ತಿ, ದುಷ್ಟಶಕ್ತಿಯನ್ನು ಹೊಸ್ತಿಲ ಮೇಲೆಯೇ ಸಂಹಾರ ಮಾಡಿದನೋ, ಹಾಗೇಯೇ ನಮ್ಮ ಮನೆ ಹಾಗೂ ಮನಗಳಲ್ಲಿನ ರಾಕ್ಷಸಿ ಪ್ರವೃತ್ತಿ ಹಾಗೂ ತಾಮಸಿ ಮನೋಭಾವನೆಗಳನ್ನು ತೊಲಗಿಸಿ ನಿತ್ಯ ನೂತನವಾದ ಜ್ಞಾನ ಮತ್ತು ಮಾಂಗಲ್ಯ ಭಾಗ್ಯ ಕರುಣಿಸೆಂದು ಬೇಡಿಕೊಳ್ಳುತ್ತಾ ಹೊಸ್ತಿಲಿಗೆ ಅರಿಶಿನ-ಕುಂಕುಮ ಹಚ್ಚಿ ನಮಸ್ಕರಿಸಬೇಕು.[೧೯]

ನಡುಮನೆಯ ಹೊಸ್ತಿಲ

ನಡು ಮನೆಯ ಹೊಸ್ತಿಲಿಗೂ ಮತ್ತು ನಡುಮನೆಗೂ ಸಂಬಂಧವಿದೆ. ಹೇಗೇಂದರೆ ನಡುಮನೆಯಲ್ಲಿ ಸಂಸಾರದ ಆಗು-ಹೋಗುಗಳು ನಡೆಯುತ್ತಿರುತ್ತವೆ. ಈ ಎಲ್ಲಾ ಕರ್ಮಗಳಿಗೂ ತತ್ವಾಭಿಮಾನಿ ದೇವತೆಗಳು.



ಈ ರಂಗೋಲಿಯ ವಿವರ ಹೀಗಿದೆ. ಮೇಲೆ ಕಾಣಿಸುವ ನಾಲ್ಕು ಗೆರೆಗಳು ಕ್ರಮವಾಗಿ ನಾಲ್ಕು ದೇವತೆಗಳನ್ನು ಒಳಗೊಂಡಿದೆ. ಇವು ನೇರವಾಗಿ ನಮ್ಮ ಜೀವನದಲ್ಲಿ ಶಾಂತಿ, ಕೃತಿ, ಜಯಾ ಮತ್ತು ಮಾಯಾಯನ್ನು ಪ್ರತಿನಿಧಿಸುವ ದೇವತೆಗಳಾಗಿದ್ದಾರೆ. ಅವರೇ ಅನಿರುದ್ಧ-ಜೀವಾಭಿಮಾನಿಗಳು.

ಪ್ರದ್ಯುಮ್ನ - ಸೃಷ್ಟಿ ವಿಷಯಾಭಿಮಾನಿಗಳು


ಸಂಕರ್ಷಣ - ಸಂಸಾರದ ವಿಷಯಾಭಿಮಾನಿಗಳು

ವಾಸುವೇವ - ನಿಜ ಮೋಕ್ಷ ಪ್ರದರು.

ಹೀಗೆ ನಾಲ್ಕು ದೇವರುಗಳಿಂದ ಕೂಡಿದ ನಾಲ್ಕು ಗೆರೆಗಳ ಮಧ್ಯ ಜ್ಞಾನ, ಭಕ್ತಿ, ವೈರಾಗ್ಯವೆಂಬ ಮೂರು ಮಾರ್ಗಗಳು ದೊರೆಯುತ್ತವೆ. ಈ ದೇವರುಗಳನ್ನು ನೆನೆದುಕೊಂಡು ಹೊಸ್ತಿಲ ಪೂಜಿಸಬೇಕು.[೨೦]

ದೇವರ ಮನೆಯ ಹೊಸ್ತಿಲ ರಂಗೋಲಿ

ದೇವರ ಮನೆಯ ರಂಗೋಲಿಯ ಎಳೆಗಳಲ್ಲಿ ಮತ್ತೇ ಒಂದು ಎಳೆ ಕಡಿಮೆಯಾಗುತ್ತದೆ. ಇಲ್ಲಿ ಕೇವಲ ಮೂರು ಎಳೆಗಳು ಮಧ್ಯದಲ್ಲಿ ಚಕ್ರಗಳು ಬರುತ್ತವೆ.



ಮೂರು ಎಳೆಗಳು ಕ್ರಮವಾಗಿ ಶ್ರೀದೇವಿ ಪತಿ ವಿಶ್ವ, ಭೂದೇವಿ ಪತಿ ತೈಜಸ, ದುರ್ಗಾಪತಿ ಪ್ರಾಜ್ಞ, ಹೀಗೆ ಭಗವಂತನು ಒಂದು ದಿವಸದಲ್ಲಿ ಮೂರು ವಿಧವಾದ ಅವಸ್ಥೆಗಳನ್ನು ಒದಗಿಸಿ ಮೋಕ್ಷ ಪ್ರಾಪ್ತಿಗೆ ಪೂರಕಗಳಾದ ಸಾಧನಗಳು ಹಾಗೂ ಸಾಧನೆ, ಸಜ್ಜನ ಸಂಗ, ಸತ್ ಶ್ರವಣ, ಅಧ್ಯಯನ, ಪೂರ್ವಾನುಗ್ರಹ ಭಗವಂತನ ಗುಣಗಳು ತಿಳಿದು ಭಜಿಸುವುದು ಮತ್ತು ಭಕ್ತಿಪೂರ್ವಕ ಧ್ಯಾನ ಇವೆಲ್ಲ ಅಪರೋಕ್ಷ ಜ್ಞಾನಕ್ಕೆ ಅಂತರಂಗ ಸಾಧನಗಳು. ಈ ಎಲ್ಲ ಸಾಧನೆಗಳನ್ನು ಪೂರ್ವಭಾವಿಯಾಗಿ ಅನುಸಂಧಾನದ ಮೂಲಕ ಭಗವಂತನನ್ನು ಸ್ಮರಿಸಿ ಮಾಡಿದರೆ ಫಲಪ್ರದ ಮತ್ತು ಸಾರ್ಥಕ. ಪ್ರಸ್ತುತ ಮೂರು ಎಳೆಗಳ ರಂಗೋಲಿ ಮೂರು ಅವಸ್ಥೆಗಳು.

೧. ಜಾಗ್ರಾತಾವಸ್ಥೆ - ಶ್ರೀದೇವಿ ಪತಿ ವಿಶ್ವ

೨. ಸ್ವಪ್ನಾವಸ್ಥೆ - ಭೂದೇವಿ ಪತಿ ತೈಜಸ.

೩. ಸುಷುಪ್ತಾವಸ್ಥೆ - ದುರ್ಗಾದೇವಿ ಪತಿ ಪ್ರಜ್ಞ[೨]

ಈ ರೀತಿ ಮೂರು ದೇವತೆಗಳ ಸಂಕೇತಗಳೆಂದು ಮೂರು ಗೆರೆಗಳನ್ನು ಹಾಕಿದಾಗ ಸಿಗುವ ಮಾರ್ಗಗಳು ಎರಡು. ಒಂದು ಪ್ರವೃತ್ತಿ ಮಾರ್ಗ ಅಂದರೆ ಸಂಸಾರ ಬಂಧನ. ಎರಡು ನಿವೃತ್ತಿ ಮಾರ್ಗ ಅಂದರೆ ಮೋಕ್ಷ ಮಾರ್ಗ. ಹೀಗೆ ಮೇಲೆ ತಿಳಿಸಿದ ಎಲ್ಲ ವಿಧಿ-ವಿಧಾನಗಳನ್ನು ಅನುಸರಿಸಿ ರಂಗೋಲಿ ಹಾಕಿದರೆ ಮನೆಗೆ ಶ್ರೇಯಸ್ಸು ಕೀರ್ತಿ ಲಭಿಸುವುದು.[೨೦]

ಅಡಿಟಿಪ್ಪಣಿಗಳು

೧. ಪಾಟೀಲ್ ಎಸ್.ಸಿ., ಕರ್ನಾಟಕ ಜನಪದ ಚಿತ್ರಕಲೆ, ೧೯೯೭;೬೮

೨. ಅದೇ, ಪು.೨೦೧

೩. ಅದೇ,

೪. ಅದೇ,

೫. ಅದೇ,

೬. ಅದೇ,

೭. ಅದೇ,

೮. ಅದೇ,

೯. ಅದೇ,

೧೦. ಅದೇ,

೧೧. ಅದೇ, ಪು.೨೦೨

೧೨. ಅದೇ,

೧೩. ಅದೇ,

೧೪. ಮಹದೇವನಾಯಕ ಸ.ಚ.(ಸಂ), ನಾನೆದ್ದು ನೆನೆವೇನು, ೧೯೭೧;೪೦

೧೫. ಶ್ರೀ ವೆಂಕೋಬಾಚಾರ್ಯ ಜಹಗೀರದಾರ, ರಂಗೋಲಿ ದರ್ಶನ, ೧೯೯೨;೮

೧೬. ಅದೇ, ಪು.೧೦

೧೭. ಅದೇ, ಪು.೧೨

೧೮. ಅದೇ, ಪು.೭

೧೯. ಅದೇ, ಪು.೯

೨೦. ಅದೇ, ಪು.೧೧

೨೧. ಅದೇ, ಪು.೧೨

ಅಧ್ಯಾಯ ೭

ಹೊಸ್ತಿಲಿನ ತಾಂತ್ರಿಕ ಪ್ರಮೇಯಗಳು

೭


ಹೊಸ್ತಿಲಿನ ತಾಂತ್ರಿಕ ಪ್ರಮೇಯಗಳು

ಜನಾಂಗಿಕವಾಗಿ, ಸಾಮುದಾಯಿಕವಾಗಿ ಮನೆಗಳ ಬಾಗಿಲು ಮತ್ತು ಹೊಸ್ತಿಲು ರಚನೆಯಲ್ಲಿ ವೈವಿಧ್ಯತೆಯನ್ನು ಗಮನಿಸಬಹುದು. ಅದು ಅವರು ವಾಸಿಸುವ ಭೌಗೋಳಿಕ ಪರಿಸರದ ಹಿನ್ನೆಲೆಗನುಗುಣವಾಗಿ, ಆಕಾರದಲ್ಲಿ ಅಳತೆಯಲ್ಲಿ ಬದಲಾವಣೆಯನ್ನು ಹೊಂದುತ್ತದೆ. ಪ್ರಾಚೀನ ಕಾಲದಲ್ಲಿ ಮನೆ ನಿರ್ಮಾಣ ಕೇವಲ ಅಗತ್ಯತೆಯ ಪೂರೈಕೆಯ ದೃಷ್ಟಿಯಿಂದ ಮಾತ್ರ ಇರುತ್ತಿತ್ತು. ಬಾಗಿಲು ಚಿಕ್ಕದಾಗಿರುತ್ತಿದ್ದವು. ಕಿಟಕಿಗಳು ಸಣ್ಣದಾಗಿ ಕಡಿಮೆ ಸಂಖ್ಯೆಯಲ್ಲಿರುತ್ತಿದ್ದವು. ಬೆಳಕು ಮತ್ತು ಗಾಳಿಯ ಪ್ರವೇಶಕ್ಕೆ ಬೆಳಕಿಂಡಿ(ಗವಾಕ್ಷಿ)ಯ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು. ಮನೆಯ ಉಳಿದ ಬಾಗಿಲುಗಳಿಗಿಂತ ಮುಖ್ಯ ಪ್ರವೇಶದ್ವಾರ ಗಾತ್ರದಲ್ಲಿ ದೊಡ್ಡದಾಗಿರುತ್ತಿತ್ತು. ಕಾರಣ ಅದು ಅವರ ಮನೆತನದ ಪ್ರತಿಷ್ಠೆಯ ಸಂಕೇತವೂ ಆಗಿರುತ್ತಿತ್ತು.

ಮನೆಯಲ್ಲಿ ಜಗತ್ತನ್ನು ಕಾಣುವುದು ಜನಪದರ ಮನೋಭಾವ. ಅದೊಂದು ಅನನ್ಯ ಪ್ರಪಂಚ. ಮನೆಯೆನ್ನುವುದು ಜನಪದರಿಗೆ ಬರೀ ವಾಸಿಸುವ ಭೌತಿಕ ಅವಶ್ಯಕತೆ ಅಲ್ಲ. ಬದುಕಿನ ಸಾಂಸ್ಕೃತಿಕ ಸಂಕೀರ್ಣತೆಗಳನ್ನು ಗುಣಾತ್ಮಕವಾಗಿ ಒಳಗೊಂಡಿರುವ ಒಂದು ತುಂಬಿದ ಕೊಡ. ವಿವಿಧ ದೇವಾನು

ದೇವತೆಗಳಿಂದ ಹಿಡಿದು ದಿನಬಳಕೆಯ ಮತ್ತು ಜೀವನಾವಶ್ಯಕತೆಯ ಎಲ್ಲ ಸಾಮಗ್ರಿಗಳು ಅಲ್ಲಿರುತ್ತವೆ. ಅಲ್ಲದೆ ವಿವಿಧ ಆಚರಣೆ ಆರಾಧನೆ ಸಂಪ್ರದಾಯಗಳೂ ಇದರಲ್ಲಿ ಸೇರಿಕೊಳ್ಳುತ್ತವೆ. ಈ ಅಂಶಗಳು ಮನೆಯನ್ನು ಬೇರೆ ಬೇರೆಯಾಗಿ ವಿಂಗಡಿಸುತ್ತವೆ. ಮತ್ತು ಆ ಪ್ರತಿಯೊಂದು ಶಾಖೆಗಳು ತನ್ನದೇ ಆದ ಆಂತರಿಕ ಸಂಬಂಧಗಳೊಂದಿಗೆ ಮುಖ್ಯದ್ವಾರದೊಂದಿಗೆ ಬೆಸೆದುಕೊಂಡಿರುತ್ತವೆ. ಈ ಬೆಸುಗೆಯ ಬಹುಮುಖ್ಯ ಮಾಧ್ಯಮ ಹೊಸ್ತಿಲು. ಇಡೀ ಮನೆಯನ್ನೇ ಕೇಂದ್ರಿಕೃತ ನೆಲೆಗೆ ಬಂಧಿಸುವ ಈ ಹೊಸ್ತಿಲಿನ ತಾಂತ್ರಿಕ ಪ್ರಮೇಯಗಳು ತುಂಬ ಕುತೂಹಲಕರವಾದಂಥವು.

ಮೇಲೆ ವಿವರಿಸಿದಂತೆ ಮನೆಯನ್ನು ಬೇರೆ ಬೇರೆ ಶಾಖೆಗಳಾಗಿ ವಿಂಗಡಿಸುವ ಶಾಖೆಗಳೆಂದರೆ ಅಂಗಳ ತಲಬಾಗಿಲು(ಮುಖ್ಯ ಪ್ರವೇಶದ್ವಾರ), ಪಡಸಾಲಿ, ಅಡುಗೆ ಮನೆ ಬಾಗಿಲು, ದೇವರ ಮನೆ ಬಾಗಿಲು, ದಿಡ್ಡಿ(ಹಿತ್ತಲ) ಬಾಗಿಲು ಹೀಗೆ ಒಂದೊಂದು ಬಾಗಿಲ ಹಿಂದೆ ಒಂದೊಂದು ತರ್ಕ ಅಡಗಿದೆ. ಸಾಮಾಜಿಕ ಸಂಬಂಧಗಳನ್ನು ಬಲಪಡಿಸಲು ಅಂಗಳ ಪಡಸಾಲೆಗಳಿದ್ದರೆ, ಕೌಟುಂಬಿಕ ಸಂಬಂಧಗಳು ಅಡಿಗೆ ಮನೆಗೆ ಮೀಸಲಾದವು. ಧರ್ಮ ಕಾರ್ಯಕ್ಕೆ ದೇವರ ಕೋಣೆ ಮುಡುಪಾಯಿತು. ಸಾಮಾನ್ಯವಾಗಿ ಹಿಂದೆ ಎಲ್ಲರಿಗೂ ಎಲ್ಲ ಕಡೆಗಳಲ್ಲಿ(ಮನೆಯಲ್ಲಿ) ಮುಕ್ತ ಪ್ರವೇಶ ನಿಷಿದ್ಧ. ಅದು ಅವರ ಜಾತಿ-ಜನಾಂಗಕ್ಕೆ ಆತ್ಮೀಯತೆ-ಪರಕೀಯತೆಯ ಮೇಲೆ ಅವಲಂಬಿತವಾಗಿರುತ್ತದೆ. ಇದು ಸ್ವಚ್ಛತೆ ಮತ್ತು ಆರೋಗ್ಯಕರ ವಾತಾವರಣವನ್ನು ಕಾಪಾಡುವಂತದ್ದು. ಹೊರಗಿನಿಂದ ಬಂದ



ಮನೆಯೊಳಗಿನ ಶಾಖೆಗಳು



ಜಗುಲಿ(ಬಂಕ) ಮೇಲೆ ವಿಶ್ರಾಂತಿ ಪಡೆಯುತ್ತಿರುವುದು

ವ್ಯಕ್ತಿ ತಲಬಾಗಿಲ ಹೊರಗೆ ಕೈಕಾಲು ತೊಳೆದುಕೊಂಡು ಜಗುಲಿಯ ಮೇಲೆ ವಿಶ್ರಾಂತಿ ಪಡೆಯುತ್ತಿದ್ದರು. ಅಂದರೆ ಧೂಳು ನೇರವಾಗಿ ಮನೆಯ ಒಳಗೆ ಪ್ರವೇಶಿಸದಿರಲಿ ಎಂದು ತೆಗೆದುಕೊಳ್ಳುವ ಮುಂಜಾಗ್ರತೆಯ ಕ್ರಮವಾಗಿತ್ತು.

ಆಧುನಿಕ ಮನೆಗಳ ನಿರ್ಮಾಣದಲ್ಲಿ ಗೋಡೆಗಳಿ ಗಿಂತ ಕಿಟಕಿ-ಬಾಗಿಲುಗಳೇ ಹೆಚ್ಚಾಗಿ ಕಾಣುತ್ತವೆ. ಅಗತ್ಯವಿರಲಿ ಬಿಡಲಿ ಬೃಹದಾಕಾರದ ಬಂಗಲೆಯನ್ನು ನಿರ್ಮಿಸುವುದು. ಮನೆಯ ಪ್ರಮುಖ ಪ್ರವೇಶ ದ್ವಾರ(ತಲಬಾಗಿಲ)ಕ್ಕೆ ಮತ್ತು ಹಿಂದಿನ ಬಾಗಿಲುಗಳಿಗೆ ಮಾತ್ರ ಹೊಸ್ತಿಲನ್ನು ಕಾಣುತ್ತೇವೆ. ಉಳಿದ ಬಾಗಿಲುಗಳಿಗೆ ಹೊಸ್ತಿಲುಗಳೇ ಇಡುವುದಿಲ್ಲ. (ಹಿಂದೆ ಬಾಗಿಲಿನ ಚೌಕಟ್ಟಿಗೆ ಹೊಸ್ತಿಲು ಭದ್ರತೆಯನ್ನು ಕೊಡುವಂತಿದ್ದರೆ ಇಂದು ಸಿಮೆಂಟು ಕಲ್ಲುಗಳಿಂದ ಭದ್ರಪಡಿಸುತ್ತಿದ್ದಾರೆ) ಕಾರಣ ಇಲ್ಲಿ ಎಲ್ಲ ಜನರಿಗೆ ಮನೆಯ ಒಳಗೆ ಪ್ರವೇಶವಕಾಶ.(ಸಮಾಜ ಆಧುನಿಕತೆಯನ್ನು ಒಪ್ಪಿಕೊಂಡು ಸಾರ್ವತ್ರಿಕ ಬದುಕಿಗೆ ಸಮ್ಮತಿ ಸೂಚಿಸಿದರೂ, ವೈಯಕ್ತಿಕತೆಯ ಪ್ರಶ್ನೆ ಬಂದಾಗ ನಾವು ಮತ್ತೆ ನಮ್ಮ ಸಂಸ್ಕೃತಿಯನ್ನು ಸಂಪೂರ್ಣವಾಗಿ ಬಿಟ್ಟುಕೊಡಲು ಸಿದ್ಧರಾಗುವುದಿಲ್ಲ). ಹೊಸ್ತಿಲುಗಳೇ ಇಲ್ಲದ ಮೇಲೆ ದಾಟುವುದರ ಪ್ರಮೇಯವೇ ಬರುವುದಿಲ್ಲ.

ಆಧುನಿಕಯುಗದಲ್ಲಿ ಹೊಸ್ತಿಲಿನ ಬಳಕೆ ಅಷ್ಟಾಗಿ ಕಾಣಸಿಗುವುದಿಲ್ಲ. ಹಿಂದೆ ಮಾನವ ಮರಮುಟ್ಟುಗಳಿಂದ ಹತ್ತಿರವಿದ್ದ. ಅದು ಅವನ ಜೀವನಾವಶ್ಯಕತೆಯ ಒಂದು ವಸ್ತು(ಅಡಿಗೆ ಮಾಡಲು)ವೂ ಆಗಿತ್ತು. ಆದರೆ ಇಂದು ಕಟ್ಟಿಗೆಯ ಸ್ಥಾನವನ್ನು ಬೇರೆ ವಸ್ತುಗಳು(ಅಡಿಗೆ ಅನಿಲ) ಪಡೆದುಕೊಂಡು ಕಟ್ಟಿಗೆಯ ಬಳಕೆಯಿಂದ ದೂರವಾದನು. ಆಧುನಿಕತೆಯ ಪ್ರಭಾವದಿಂದ ಜನಸಂಖ್ಯೆಯ ಹೆಚ್ಚಳದಿಂದ (ಮರಕಡಿದು) ಅರಣ್ಯ ಕಡಿದು ಮನೆಗಳನ್ನು ನಿರ್ಮಿಸತೊಡಗಿದನು. ಇದರಿಂದ ಕಟ್ಟಿಗೆ ದುಬಾರಿಯ ಜೊತೆಗೆ ಸುಲಭವಾಗಿ ಕೈಗೆಟುಕುವುದು ತಪ್ಪಿತು. ಆದ್ದರಿಂದ ಕ್ರಮೇಣ ಅದರ ಬಳಕೆಯೂ ಕಮ್ಮಿಯಾಯಿತು. ಇದರಲ್ಲಿ ಸಾಗಾಣಿಕೆಯ ತೊಂದರೆಯು ಕಾಣಿಸಿಕೊಂಡಿತು. ಸುಲಭದಲ್ಲಿ ಸಿಗುವ ಕಬ್ಬಿಣವನ್ನೋ ಸಿಮೆಂಟನ್ನೋ ಮೊರೆಹೋದ ಮಾನವ ತನ್ನ ಸುತ್ತ ಮುತ್ತ ದೊರೆಯುವ ಸಂಪನ್ಮೂಲಗಳನ್ನು ಬಳಸುವುದರಲ್ಲಿ ನಿಸ್ಸೀಮ. ಒಂದು ಕಾಲದಲ್ಲಿ ಪ್ರತಿ ಕೋಣೆಗೆ ಅನಿವಾರ್ಯವಾಗಿದ್ದ ಹೊಸ್ತಿಲು ಇಂದು ಅನುಕೂಲವಾಗಿ ಬಿಟ್ಟಿದೆ. ಬೇಕೆಂದರೆ ಹಾಕಬಹುದು. ಇಲ್ಲವಾದರೆ ಆಧುನಿಕತೆಯ ನೆಪದಲ್ಲಿ ಬಿಡಬಹುದು. ಹಿಂದೆ ಹೊಸ್ತಿಲು ರಹಿತ ಕೋಣೆಗಳು ಕುಂಕುಮ ರಹಿತ ಹೆಣ್ಣಿನ ಹಣೆಯ ಹಾಗೆ ಬಿಕೋ ಎನ್ನುವಂತ ಮನೋಭಾವನೆಯೇ ಸಂಪೂರ್ಣ ಬದಲಾಗಿ ವಿರುದ್ಧ ಸ್ವರೂಪ ತಾಳಿತು. ಇಂದು ಪ್ರತಿಕೋಣೆಗೆ ಹೊಸ್ತಿಲಿಡುವುದು ಹಳೆಯ ಸಂಪ್ರದಾಯವೆಂಬ ಧೋರಣೆ ಬೆಳೆದುಬಿಟ್ಟಿದೆ.

ಹೊಸ್ತಿಲು ಪರಿಕಲ್ಪನೆ ಹುಟ್ಟಿದ್ದೆ ನೀರಿನ ಪ್ರವಾಹದಿಂದ, ಕ್ರಿಮಿ-ಕೀಟಗಳಿಂದ, ಧೂಳಿನಿಂದ ಪರಕೀಯರನ್ನು ತಡೆಹಿಡಿಯುವುದರಿಂದ(ಒಂದು ಕಛೇರಿಗೆ ಹೋದರೆ ನಾವು ಚಪ್ಪಲಿ ಬಿಟ್ಟದೆ ಒಳಗೆ

ಹೋಗುತ್ತೇವೆ. ಆದರೆ ಒಂದು ಮನೆ ಅದರಲ್ಲೂ ಆ ಮನೆಗೆ ದೊಡ್ಡ ಹೊಸ್ತಿಲಿದ್ದು, ಅದು ಪೂಜೆಯಿಂದ ಅಲಂಕರಣಗೊಂಡಿದ್ದರೆ, ನಮ್ಮ ಹೆಜ್ಜೆ ಮುಂದೆ ಹೋಗುವುದರ ಬದಲು ಹಿಂದೆ ಸರಿದು ಚಪ್ಪಲಿ ಬಿಚ್ಚಿ ಮನೆಯವರ ಅನುಮತಿ ಪಡೆದು ಒಳ ನಡೆಯುತ್ತೇವೆ. ಇಂಥ ಸುಸಂಸ್ಕೃತ ಹೊಣೆ ಹೊತ್ತಿದೆ ಈ ಹೊಸ್ತಿಲು.) ಹುಟ್ಟಿದ್ದು. ಅಂದರೆ ಹೊಸ್ತಿಲಿದೆ ಆದರೆ ಪ್ರತಿಕೋಣೆಯ ಬದಲು ಪ್ರಮುಖದ್ವಾರ ಮತ್ತು ಹಿಂದಿನ ದ್ವಾರಗಳಿಗೆ ಸೀಮಿತವಾಗಿದೆ. ಅಂದರೆ ಹೊಸ್ತಿಲು ಮಾನವನಿಗೆ ಇಂದಿಗೂ ರಕ್ಷಣೆಯನ್ನು ಒದಗಿಸುತ್ತದೆ ಎಂದೇ ಹೇಳಬಹುದು. ಕೆಲವೊಂದು ಸಣ್ಣಪುಟ್ಟ ಕಾರಣಗಳಿಂದ ಹೊಸ್ತಿಲು ಸಂಖ್ಯೆಯಲ್ಲಿ ಇಳಿಮುಖ ಹೊಂದಿವೆ ಎಂದು ಹೇಳಬಹುದು. ಉದಾಹರಣೆಗೆ

೧. ಸೌಂದರ್ಯದ ಪ್ರಜ್ಞೆ

೨. ಸ್ಥಳದ ಅಭಾವ

೩. ಸುಲಭವಾಗಿ ಸ್ವಚ್ಛಗೊಳಿಸುವ ಕಾರಣ.

೪. ಅವಸರದ ಬದುಕು.

೫. ಆಧುನಿಕತೆಯ ಸುಳಿಯಲ್ಲಿ ಸಿಕ್ಕು.

೬. ಅನುಕರಣೆಯಿಂದ

ಹೀಗೆ ಕೆಲವೊಂದು ಕಾರಣಗಳನ್ನು ಮುಂದೆ ಮಾಡಿ ಹಳೆಯ ಸಂಪ್ರದಾಯ ಆಧುನಿಕತೆಯ ಆಡಂಬರಗಳ ಮಧ್ಯ ಮೂಲ ಸ್ವರೂಪವನ್ನೇ ಬದಲಿಸಿಕೊಂಡರೂ 'ಹೊಸ್ತಿಲು' ಮಹತ್ವ, ಪಾವಿತ್ರತೆಯನ್ನು ಉಳಿಸಿಕೊಂಡು ಬಂದಿದೆ.

ವಸತಿ ಎಂದರೆ ಮನೆ. ಮನೆಗೂ ಅಲ್ಲಿ ವಾಸಿಸುವ ನಿವಾಸಿಗೂ ಜೀವ-ದೇಹದ ಸಂಬಂಧವಿದೆ. ಆಯಾ ಜನಾಂಗದವರ ಅಭಿರುಚಿಗೆ ತಕ್ಕಂತೆ ನಿರ್ಮಾಣಗೊಳ್ಳುವ ಮನೆಗೆ ಪ್ರಮುಖ ಅಂಗ ಬಾಗಿಲು. ಬಾಗಿಲಿನಲ್ಲಿ ಅತಿ ಪ್ರಮುಖವಾದದ್ದು. ಪೂಜ್ಯನೀಯವಾದದ್ದು. ಮನೆಯ ರಕ್ಷಣೆಯ ಹೊಣೆ ಹೊತ್ತದ್ದು ಹೊಸ್ತಿಲು. ಸುಮಾರು ೭೦೦೦ ವರ್ಷಗಳ ಹಿಂದೆ ನವಶಿಲಾಯುಗದಲ್ಲಿಯೇ ಮನೆಯ ಕಲ್ಪನೆ ತಲೆದೋರಿದ್ದು ಎನ್ನಲಾಗಿದೆ. ಅದಕ್ಕಿಂತ ಮೊದಲು ಮಾನವ ವಾಸಿಸುತ್ತಿದ್ದುದು ಗವಿ, ಗವ್ಹರ, ಮರದ ಪೊಟರೆಯಲ್ಲಿ, ಪ್ರಾಣಿಗಳಿಂದ ರಕ್ಷಣೆ ಪಡೆಯಲು ಗುಹೆಯ ಬಾಯಿಗೆ ಕಲ್ಲುಬಂಡೆಯನ್ನು ಇಡುವುದನ್ನು ಕಲಿತ. ಆದರೂ ಇದು ಎಲ್ಲ ಸಂದರ್ಭಗಳಲ್ಲಿ ಸುಲಭ ಸಾಧ್ಯವಿರಲಿಲ್ಲ. ಇದು ನಿರಾಂತಂಕ ಪರಿಹಾರವಾಗಿಲ್ಲ. ಬಹುಶಃ ಇದೇ ಕಾರಣಗಳಿಂದ ಆತ ಕದವಿರುವ ಬಾಗಿಲನ್ನು ಕಲ್ಪಿಸಿಕೊಳ್ಳಲು ಕಾರಣವಾಯಿತು. ಹಿಂದೆ ಮಾನವ ನೀರಿದ್ದಲ್ಲಿ ಮತ್ತು ಎತ್ತರದ ಪ್ರವೇಶಗಳಲ್ಲಿ ತನ್ನ ವಾಸ್ತವ್ಯ ಹೂಡುತ್ತಿದ್ದ. ಹೀಗಿರುವಾಗ ನೀರು ಮನೆಯ ಒಳಗೆ ಸರಾಗವಾಗಿ ಮತ್ತು ಯಾವುದೇ ರೀತಿಯ ಕ್ರಿಮಿ-

ಕೀಟಗಳು ಒಳಗೆ ಪ್ರವೇಶಿಸದಿರಲಿ ಎಂದು 'ಹೊಸ್ತಿಲನ್ನು' ನಿರ್ಮಿಸಿದನು. ಈ ಬಾಗಿಲು ಮತ್ತು ಹೊಸ್ತಿಲು ಕಟ್ಟಿಗೆಯದಾದರೂ ಆಗಬಹುದು. ಕಲ್ಲಿನದಾದರೂ ಆಗಬಹುದು.

೭.೧. ಕಟ್ಟಿಗೆ ಮತ್ತು ಕಲ್ಲು

ಮಾನವ ಬದುಕಿನ ಅವಶ್ಯಕತೆಗಳಲ್ಲಿ ಕಟ್ಟಿಗೆ ಮುಖ್ಯ ಆಧಾರವಾಗಿ ಕಾಣುತ್ತದೆ. ಉರುವಲಾಗಿ, ಮನೆಯ ಸೂರಾಗಿ ಮತ್ತು ಮನೆಗೆ ಭದ್ರತೆಯನ್ನು ಒದಗಿಸುವ ಬಾಗಿಲು-ಹೊಸ್ತಿಲು ಕದಗಳಾಗಿ ಹೀಗೆ ನಾನಾ ವಿಧಗಳಲ್ಲಿ ಮಾನವನಿಗೆ ಅವಶ್ಯ ಸಂಪನ್ಮೂಲವೆನಿಸಿದೆ. ಮನೆಗೆ ರಕ್ಷಣೆ ಹಾಗೂ ದೀರ್ಘಕಾಲ ಬಾಳಿಕೆಗೆ ಬರುವ ಮರದ(ಕಟ್ಟಿಗೆ) ಬಾಗಿಲು ಮತ್ತು ಹೊಸ್ತಿಲಿನ ಬಳಕೆ ತೀರಾ ಪ್ರಾಚೀನ ಕಾಲದಲ್ಲಿ ಸಾಮಾನ್ಯವಾಗಿತ್ತು. ಹಂಪೆಯಲ್ಲಿ ಕಂಡುಬಂದ ಭಿತ್ತಿಚಿತ್ರಗಳು ಮತ್ತದರ ಅವಶೇಷಗಳಿಂದ ಆ ಕಾಲದ ಬಾಗಿಲುಗಳ ರಚನೆಯನ್ನು ಗುರುತಿಸಬಹುದಾಗಿದ್ದು ಅವು ಆಧುನಿಕ ಕಾಲದ ಮರದ ಬಾಗಿಲುಗಳನ್ನೇ ಬಹುಮಟ್ಟಿಗೆ ಹೋಲುವಂತಿವೆ.[೧]

ಮರದ ಬಾಗಿಲು, ಹೊಸ್ತಿಲು ನಿರ್ಮಾಣ ಕಾರ್ಯದಲ್ಲಿ ಎಲ್ಲ ಮರಗಳನ್ನು ಬಳಸುವುದು ಸಾಧ್ಯವಿಲ್ಲ. ಹಾಗಂತ ಎಲ್ಲವನ್ನು ಬಳಸದೇ ಇರುವುದಕ್ಕೂ ಆಗುವುದಿಲ್ಲ. ಅದಕ್ಕೆ ಅದರದೆ ಆದ ಒಂದು ನಿಯಮವಿದೆ. ರಕ್ಷಣೆ, ಬಾಳಿಕೆ ಮತ್ತು ಶ್ರೇಯಸ್ಸಿಗೋಸ್ಕರ ಯೋಗ್ಯವಾದ ಮರಗಳನ್ನು ಆಯ್ಕೆ ಮಾಡಿಕೊಂಡು ಬಾಗಿಲು ಮತ್ತು ಹೊಸ್ತಿಲಿಗೆ ಉಪಯೋಗಿಸಿಕೊಳ್ಳುವುದು ಸೂಕ್ತವಾಗಿದೆ.

ನಿಷೇಧಾತ್ಮಕ ನೆಲೆಯ ಕಟ್ಟಿಗೆಗಳು

ಶಾಸ್ತ್ರಗ್ರಂಥ ಹೇಳುವಂತೆ ಎಳೆಯ ಹಾಗೂ ತುಂಬಾ ಹಳೆಯದಾದ ಮರಗಳ ಬಳಕೆ ನಿಷೇಧ. ಮರವು ವಯಸ್ಸಾದಂತೆ ಬಣ್ಣ ಹಾಗೂ ಅಂತರ್ಗತ ಶಕ್ತಿಯನ್ನು ಕಳೆದುಕೊಂಡು ಒಣಗುವುದು, ಹಾಳಾಗುವುದನ್ನು ಸೂಚಿಸುತ್ತದೆ. ತುಂಬಾ ಎಳೆಯ ಮರವಾದರೆ ಅನುಕೂಲಕರವಾದ ಅಳತೆಗೆ ಕತ್ತರಿಸಲಾಗದು. ಸಾಕಷ್ಟು ಬಲವು ಇರದು. ಸುಮಾರು ಅರವತ್ತರ ವಯಸ್ಸಿನ ಮರಗಳನ್ನು ಕತ್ತರಿಸಬಹುದು ಎಂದು ಹೇಳುತ್ತಾರೆ. ಕೆಲವೊಂದು ಮರಗಳಂತೂ ಸಂಪೂರ್ಣ ನಿಷೇಧ. ಅವುಗಳೆಂದರೆ ಸ್ಮಶಾನದಲ್ಲಿ ಬೆಳೆದ ಮರ. ಕೆರೆಯ ದಡದ ಮೇಲೆ ಬಳೆದ ಮರ, ಬಿಳು ಬೀದ್ದ, ಒಣಗಿದ, ಹೆಚ್ಚಿನ ಗಂಟಿರುವ, ಸುಟ್ಟ ಕೊಂಬೆಗಳಿಲ್ಲದ, ಮಿಂಚು-ಸಿಡಿಲಿನಿಂದ ಬಿದ್ದ ಇನ್ನೂ ಮುಂತಾದ ಮರಗಳು. ಅರಳಿ, ಅಶ್ವತ್ಥ, ಅತ್ತಿ, ತೆಂಗು, ಬನ್ನಿ, ಬೇವು(ಬೇವು ಪ್ರಾದೇಶಿಕವಾಗಿ ಬಳಕೆಯಲ್ಲಿ ವ್ಯತ್ಯಾಸ ಪಡೆದುಕೊಂಡಿದೆ). ಈ ಮುಂತಾದ ಮರಗಳನ್ನು ಬಳಸುವುದು ನಿಷೇಧ.

ಈ ನಿಷೇಧಗಳನ್ನು ಒಡ್ಡುವುದಕ್ಕೆ ಕಾರಣವೇನು? ಯಾತಕ್ಕಾಗಿ ಈ ಕಟ್ಟಿಗೆಗಳು ಬಳಕೆಗೆ ಯೋಗ್ಯವಲ್ಲ ಎನ್ನುವುದು ಮುಖ್ಯ ಸಂಗತಿ. ನೂರಾರು ಕನಸುಗಳನ್ನು ಹೊತ್ತು ಮನುಷ್ಯ ಮನೆ ನಿರ್ಮಿಸುತ್ತಾನೆ.

ಅದಕ್ಕೆ ಒದಗುವ ಸಾಮಗ್ರಿಗಳು ಕೂಡ ಒಳ್ಳೆಯ ಗುಣಮಟ್ಟದ್ದಾಗಿರಬೇಕು. ಸುಂದರವಾಗಿರಬೇಕು. ಬಾಳಿಕೆ ಬರಬೇಕು ಎಂದು ಬಯಸುವುದು ಸಹಜ. ಹೀಗಿರುವಾಗ ಸುಟ್ಟ, ಸಿಡಿಲು ಬಿದ್ದ, ಇನ್ನು ಮುಂತಾದ (ಮೇಲೆ ಹೇಳಿದ) ಕಟ್ಟಿಗೆಗಳನ್ನು ಬಳಸುವುದಾದರೂ ಹೇಗೆ? ಅದು ಅಲ್ಲದೆ ಮನೆಯ ಬಾಯಿಯೆಂದೇ ಹೇಳುವ ಬಾಗಿಲು ಮತ್ತು ಹೊಸ್ತಿಲು ಪವಿತ್ರವಾದ, ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದೆ. ಆದ್ದರಿಂದ ಕಟ್ಟಿಗೆ ಆರಿಸುವಾಗ ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಬೇಕಾದುದು ಅಗತ್ಯ. ಹಾಗೆಯೇ ಬೇವು ಕೆಲವೊಂದು ಪ್ರದೇಶಗಳಲ್ಲಿ ದೇವಿ ಎಂದು ಪೂಜಿಸಲ್ಪಡುತ್ತದೆ. ಆದ್ದರಿಂದ ಅದನ್ನು ಹೊಸ್ತಿಲಿಗೆ ಉಪಯೋಗಿಸಿದರೆ ಮನುಷ್ಯ ಎಷ್ಟೇ ಎಚ್ಚರವಹಿಸಿ ಓಡಾಡಿದರೂ ಕಾಲು ಹತ್ತುವ ಸಂಭವ ಉಂಟು. ಅದಕ್ಕಾಗಿಯೇ ಬೇವು ನಿಷಿದ್ಧ. ಆದರೆ ಬೇವು ದೇವಿ ಎಂದು ಮಾನ್ಯತೆ ಪಡೆದುಕೊಳ್ಳದ ಸಮುದಾಯಗಳಲ್ಲಿ ಬಾಗಿಲು ಮತ್ತು ಹೊಸ್ತಿಲಿಗೆ ಸೂಕ್ತವಾದ ಕಟ್ಟಿಗೆ. ಯಾಕೆಂದರೆ ಬೇವು ಕಹಿ ಇರುವುದರಿಂದ ಗೆದ್ದಲು(ಹುಳ) ಹತ್ತುವುದಿಲ್ಲ ಎಂಬ ಭಾವನೆಯೂ ಇಲ್ಲದಿಲ್ಲ. ಇನ್ನೂ ಅಶ್ವತ್ಥ, ತೆಂಗು, ಬನ್ನಿ, ಅತ್ತಿ ಮುಂತಾದ ಗಿಡಗಳು ಪೂಜ್ಯನೀಯ ಭಾವನೆಯ ಜೊತೆಗೆ ತಾಳಿಕೆ ಬರುವುದಿಲ್ಲವಾದ್ದರಿಂದ ನಿಷೇಧ ಒಡ್ಡಿರಬಹುದು. ಏನೇ ಆದರೂ ನಮ್ಮ ಮನೆಗೆ ಯೋಗ್ಯವಾದ, ನಮಗೆ ತೃಪ್ತಿಯೆನಿಸಿದ ಮರಗಳ ಆಯ್ಕೆಯಂತು ನಮ್ಮ ಜವಾಬ್ದಾರಿಯಾಗಿದೆ.


ಬಳಸುವಂತಹ ಕಟ್ಟಿಗೆಗಳು

ಹೊಸ್ತಿಲು ವಿಶೇಷವಾಗಿ ಗೊಜ್ಜಲ ಕಟ್ಟಿಗೆಯಿಂದ(ಜಂಗಲಿ) ತಯಾರಿಸಲಾಗುತ್ತದೆ. ಈ ಕಟ್ಟಿಗೆ ಬಾದಾಮಿ ತಾಲ್ಲೂಕಿನ ಕಡೆಗಳಲ್ಲಿ ಸಿಗುವಂತ ಕಟ್ಟಿಗೆಯಾದ್ದರಿಂದ ಅಲ್ಲಿಯೇ ಅದನ್ನು ಕೇವಲ ಹೊಸ್ತಿಲಿಗೆ ಮಾತ್ರ ಬಳಸುವುದನ್ನು ಕಾಣಬಹುದು. ಈ ಕಟ್ಟಿಗೆ ಬಳಸುವುದರ ಹಿಂದಿರುವ ತರ್ಕವು ವಿಶಿಷ್ಟವಾಗಿದೆ. ಹೊಸ್ತಿಲು ದಿನನಿತ್ಯ ನೀರಿನಿಂದ ತೊಳೆಯುವುದರಿಂದ ಕೊಳೆತು ಹೋಗಬಹುದು ಎಂಬ ಅಳುಕಿರುತ್ತದೆ. ಆದರೆ ಗೊಜ್ಜಲ ಕಟ್ಟಿಗೆಗೆ ಆ ಭಯವಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ಮಾಟ-ಮಂತ್ರ (ಭಾನಾಮತಿ)ಗಳು ಗೊಜ್ಜಲ ಕಟ್ಟಿಗೆಯ ಹೊಸ್ತಿಲಿದ್ದರೆ, ಆ ಮನೆಯ ಒಳಗೆ ಪ್ರವೇಶಿಸುವುದೇ ಇಲ್ಲವೆಂಬ ಬಲವಾದ ನಂಬಿಕೆ ಜನರಲ್ಲಿದೆ.(ಗ್ರಾಮಗಳಲ್ಲಿ ತಮಗಾಗದವರಿಗೆ ಮಾಟ ಮಾಡಿಸಬೇಕೆಂದು ನಿಂಬೆಹಣ್ಣು, ಗೊಂಬೆ, ಮುಂತಾದವುಗಳಿಗೆ ಮಂತ್ರಿಸಿ ಅವುಗಳನ್ನು ಅವರ ಹೊಸ್ತಿಲ ಬಳಿಯಲ್ಲಿ ಇಡುವುದು ಇಂದಿಗೂ ಕಂಡಬರುವಂತಹ ವಿಚಿತ್ರ ಸಂಗತಿಯಾಗಿದೆ.) ಅಲ್ಲದೆ ದೇವದಾರು, ಬಿಳಿ ಮತ್ತಿ, ಕೆಂಪು ಮತ್ತಿ, ತೇಗದ ಮರ(ಟೀಕ್ ವುಡ್) ಕರಿಜಾಲಿ, ಅಶೋಕ ಮುಂತಾದ ಮರಗಳು ಶ್ರೇಷ್ಠವಾದವುಗಳು. ಅಂದರೆ ಇವು ಸಾಮಾನ್ಯವಾಗಿ ಎಲ್ಲ ಪ್ರದೇಶಗಳಲ್ಲಿ ಸುಲಭವಾಗಿ ಸಿಗುವಂಥವು ಇದೆ. ಆದರೆ ಇವುಗಳಲ್ಲಿ ತೇಗ ಮಾತ್ರ ಅತಿ ಶ್ರೇಷ್ಠವಾದ ಕಟ್ಟಿಗೆಯಾಗಿದೆ. ಕೊಂಚ ದುಬಾರಿಯೆಂದೇ ಹೇಳಿದರೂ ಗುಣಮಟ್ಟದಲ್ಲಿ ಉತ್ತಮವಾಗಿದ್ದು, ಸೂಕ್ಷ್ಮಾತೀಸೂಕ್ಷ್ಮ ಕೆತ್ತನೆಯನ್ನು ಮಾಡಲು ಸಾಧ್ಯ.

ಆದರೆ ಬೇರೆ ಕಟ್ಟಿಗೆಯ ಮೇಲೆ ಇಷ್ಟು ನಯನ ಮನೋಹರವಾದ ಕೆತ್ತನೆ ಸಾಧ್ಯವಿಲ್ಲವಾದರೂ ಯಂತ್ರದ ಸಹಾಯದಿಂದಲೇ ಮಾಡಬಹುದಾದಂಥ ಸರಳ ಕೆತ್ತನೆ ಮಾಡಲು ಸಾಧ್ಯ. ಆದರೆ ತೇಗದ ಕಟ್ಟಿಗೆಯಲ್ಲಿ ಬಡಗಿ(ಕಾರ್ಮಿಕ) ತನ್ನ ಏನೆಲ್ಲ ಜಾಣ್ಮೆ ತೋರಿಸಲು ಸಾಧ್ಯವೋ ಅದೆಲ್ಲ ತೋರಿಸಲು ಸಾಧ್ಯ. ಆದ್ದರಿಂದ ಮನೆಯ ಪ್ರಮುಖದ್ವಾರ ಮತ್ತು ಹೊಸ್ತಿಲು ಮಾತ್ರ ತೇಗದ ಕಟ್ಟಿಗೆಯಿಂದಲೇ ಮಾಡಿಸಬೇಕು ಎನ್ನುವುದು ಪ್ರತಿಯೊಬ್ಬರ ಆಸೆ.

ರಚನೆ

ಮನೆಗೆ ಮುಖ್ಯ ಬಾಗಿಲು. ಬಾಗಿಲಿಗೆ ಮುಖ್ಯ ಚೌಕಟ್ಟು ಯಾವುದೇ ಒಂದು ಫ್ರೇಂ ಭದ್ರವಾಗಿ ಕದಲದಂತಿರಬೇಕಾದರೆ ನಾಲ್ಕು ಪಟ್ಟಿಗಳು ಒಂದಕ್ಕೊಂದು ಸೇರಿಸಿದಂತಿರಬೇಕು.(ಚೌಕಟ್ಟು ಎಂದರೇನೆ ನಾಲ್ಕು ಕಟ್ಟುಗಳಿಂದ ಕೂಡಿದ್ದು) ಅಷ್ಟೇ ಅಲ್ಲದೆ ಬಾಗಿಲಿನ ಮೂರು ಕಡೆಯ ಭಾರವನ್ನು ಹೊರುವುದು ಈ ಕೆಳಗಿನ ಪಟ್ಟಿಯೇ. ಆದ್ದರಿಂದ ಬಾಗಿಲಿನ ಭದ್ರತೆಯ ದೃಷ್ಟಿಯಿಂದಲೂ ಅತ್ಯಗತ್ಯ. ಹೀಗೆ ಮನೆಗೆ ಮುಖ್ಯವಾದ ಬಾಗಿಲಿನ ಕಟ್ಟಿಗೆಯನ್ನು ಶುಭಘಳಿಗೆ ಮತ್ತು ಕೆಲವೊಂದು ನಿಯಮಗಳನ್ನು ಅನುಸರಿಸಿ ತರುವುದಾಗಿದೆ. ಕಾಡಿನಲ್ಲಿ ಮರವನ್ನು ಶುಭ ಘಳಿಗೆಯಲ್ಲಿ ಕತ್ತರಿಸುವುದು ಉತ್ತಮವಾದುದು. ಕತ್ತಿರಿಸುವಾಗ ಮರವು ಪಶ್ಚಿಮಕ್ಕೆ ಬಿದ್ದರೆ ಅದು ಅಶುಭ. ಅಂತಹ ಮರ ನಿಷಿದ್ಧ. ಒಂದು ವೇಳೆ ಬಳಸಲೇ ಬೇಕಾದಂತಹ ಪ್ರಸಂಗವಿದ್ದರೆ ಸೂಕ್ತವಾದ ಶಾಂತಿ ಧಾರ್ಮಿಕ ಕ್ರಿಯೆಗಳಿಂದ ಪೂಜೆ ಮಾಡಿ ಪವಿತ್ರಗೊಳಿಸಿ ಬಳಸಬಹುದು. ಇಲ್ಲಿ ಒಂದು ಸಂಗತಿ ಗಮನಿಸುವಂತದ್ದು. ಅದೆಂದರೆ ಪಶ್ಚಿಮಕ್ಕೆ ಬಿದ್ದ ಕಟ್ಟಿಗೆ ನಿಷೇಧ. ಆದರೆ ಬಳಸಲೇ ಬೇಕಾದ ಅನಿವಾರ್ಯತೆ ಇದ್ದಾಗ ಎಂದು ಉದ್ಧಾರ ತೆಗೆಯುವುದಿದೆ. ಅಂದರೆ ಮನುಷ್ಯ ನಿಯಮಗಳನ್ನು ಸೃಷ್ಟಿಸಿಕೊಂಡು ಅದರ ಸುತ್ತು ಬದುಕನ್ನು ಹೆಣೆದುಕೊಂಡ. ಆದರೆ ಆ ನಿಯಮ ಅನಿವಾರ್ಯವಾದಾಗ ಅದಕ್ಕೆ ಪರಿಹಾರವೊಂದನ್ನು ಹುಡುಕಿ ಅದರ ಭಂಗವೂ ಮಾಡುತ್ತಾನೆಂದಾಯಿತು. ಹೇಗೆ ಋಷಿ ಮುನಿಗಳು ಕೋಪದಿಂದ ಶಾಪವಿತ್ತುದ್ದನ್ನು ಶಾಂತರಾದಾಗ ಶಾಪ ವಿಮೋಚನೆಯ ಮಾರ್ಗ ಸೂಚಿಸುವುದಿಲ್ಲವೇ ಹಾಗೆ. ನಿಯಮಗಳು ಬೇಕು ಆದರೆ ಅದೇ ಕಂಟಕವಾದಾಗ ಶಾಂತಿ ಎನ್ನುವ ಮಂತ್ರ ಸಿದ್ಧ.



ಕಣ್ಮನ ಸೆಳೆಯುವ ಕುಸುರಿ ಕೆತ್ತನೆಯ ಬಾಗಿಲು

ಬಾದಾಮಿ ಚಾಲುಕ್ಯರ ಕಾಲದಲ್ಲಿ ವಾಸ್ತುಶಿಲ್ಪದ ಪ್ರಯೋಗ ಶಾಲೆ ಎಂದು ಹೆಸರು ಪಡೆದ ಬಾದಾಮಿ, ಐಹೊಳೆ, ಪಟ್ಟದಕಲ್ಲು ಪ್ರದೇಶಗಳು ಗೃಹವಾಸ್ತು

ರಚನೆಗೆ ಹೆಸರಾದ ಪ್ರದೇಶಗಳಾಗಿವೆ. ಬಾದಾಮಿ ಸುತ್ತಮುತ್ತ ಅದರಲ್ಲೂ ಹೊಳೆ ಆಲೂರು ಗ್ರಾಮ ಸಂಪೂರ್ಣವಾಗಿ ಗೃಹಕುಶಲಕರ್ಮಿಗಳಿಂದ ತುಂಬಿ ಹೋಗಿದೆ. ಇಲ್ಲಿ ಬಡಿಗತನವನ್ನು ಕೇವಲ ಬಡಿಗ ಸಮಾಜ ಮಾತ್ರವೇ ಅಲ್ಲದೆ, ಮುಸಲ್ಮಾನರೊಳಗೊಂಡಂತೆ ಎಲ್ಲಾ ಜನರು ನಿರ್ವಹಿಸುತ್ತಾರೆ. ಬಾಗಿಲಿನ ರೂಪ, ರಚನೆ, ವಿನ್ಯಾಸಗಳ ಕಲಾತ್ಮಕತೆ, ನೋಡುಗರ ಕಣ್ಮನ ಸೆಳೆಯುವಂತಿವೆ.

ಹೊಸ್ತಿಲು ರಚನೆಯಲ್ಲಿ ವಿಶೇಷವಾದ ಕೆತ್ತನೆಯನ್ನು ಹೊಂದಿರದೆ, ಸರಳವಾದ ರಚನೆಯನ್ನು ಹೊಂದಿರುತ್ತದೆ. ಹೆಚ್ಚೆಂದರೆ ಹೊಸ್ತಿಲಿನ ಎದುರಿಗೆ ಮಧ್ಯಭಾಗದಲ್ಲಿ ಕಮಲದ ಹೂ, ಸೂರ್ಯಪಾನ, ಈ ತರಹದ ಸರಳ ರಚನೆ ಒಳಗೊಂಡಿರುತ್ತದೆ. ಆಟೆ ಬರೆಸುವಿಕೆ, ನಿಂಬೆಗೋಲು, ದಪ್ಪ ಓಗೆ ಮುಂತಾದ ರೀತಿಯಲ್ಲಿ ಕೆತ್ತಿರುತ್ತಾರೆ. ಕೆಲವೊಂದು ಹೊಸ್ತಿಲಿಗೆ ಮಧ್ಯಭಾಗದಲ್ಲಿ ಚಕ್ರದ ಆಕಾರದಲ್ಲಿ ಕೆತ್ತನೆಯನ್ನು ನೋಡಬಹುದು. ಇಂತಹ ಚಕ್ರದ ಆಕಾರದ ಹೂವಿನ ಕೆತ್ತನೆಯನ್ನು ಗ್ರಾಮಗಳಲ್ಲಿ ಹಳೆಯ ಪ್ರತಿಷ್ಠಿತ ಮನೆಗಳಿಗೆ ಕಾಣಸಿಗುತ್ತವೆ. ದೇವಾಲಯದ ಹೊಸ್ತಿಲಿಗಂತೂ ಇದು ಸರ್ವೇ ಸಾಮಾನ್ಯ. ಈ ಚಕ್ರ ಮನೆಗೆ ಶ್ರೀ ಚಕ್ರದ ಹಾಗೆ ರಕ್ಷಣೆ ಒದಗಿಸಲಿ ಎಂದು ಕೂಡ ನಂಬಿಕೆ ಇದೆ.

ಹೊಸ್ತಿಲು ಹೆಚ್ಚು ಕುಸುರಿ ಕಾರ್ಯ ಹೊಂದಿರದೆ ಇದ್ದುದಕ್ಕೆ ಕಾರಣ ಹೀಗೂ ಹೇಳಬಹುದು. ಹೊಸ್ತಿಲು ನಿತ್ಯ ನೀರಿನಿಂದ ತೊಳೆಯುವುದರಿಂದ ನೀರು ನಿಂತು ಕಟ್ಟಿಗೆ ಕೊಳೆತು ಹೋಗಬಹುದು. ಹಾಗೆಯೇ ಗೃಹಿಣಿಯ ಕೈಯಿಂದ ನಿತ್ಯ ನೂತನ ಅಲಂಕಾರ ಮಾಡಿಸಿಕೊಳ್ಳುವುದರಿಂದ ಕೆತ್ತಿದ ಸ್ಥಳದಲ್ಲಿ ಹೊಲಸು(ರಂಗೋಲಿ, ಕುಂಕುಮ, ಅರಿಶಿಣ) ಕೂಡುವ ಸಾಧ್ಯತೆಗಳಿವೆ. ಸಮತಟ್ಟಾದ ಹೊಸ್ತಿಲಿದ್ದರೆ ನೀರು ನಿಲ್ಲದೆ ಜಾರಿ ಹೋಗುತ್ತವೆ. ಮತ್ತು ವಿವಿಧ ನಮೂನೆಯ ರಂಗೋಲಿಯು ಹಾಕಲು




ಕೆತ್ತನೆ ಹೊಂದಿದ ಹೊಸ್ತಿಲು

ಸಾಧ್ಯವಾಗುತ್ತದೆ. ಹೀಗೆ ಮುಂತಾದ ಕಾರಣಗಳಿಂದ ಹೊಸ್ತಿಲಿಗೆ ಯಾವುದೇ ರೀತಿಯ ಕುಸುರಿ ಕಾರ್ಯ ಮಾಡುವುದಿಲ್ಲ. ಆದರೂ ಕೆಲವೊಂದು ಕಡೆ ಕೆತ್ತನೆಯ ಹೊಸ್ತಿಲನ್ನು ನೋಡಬಹುದು.

ಬಾಗಿಲು ಚೌಕಟ್ಟಿನ ರಚನೆಯ ಬಗ್ಗೆ ಹೇಳುವುದಾದರೆ ಬಾಗಿಲಿನ ಅಗಲಕ್ಕಿಂತ ಎತ್ತರ ಎರಡರಷ್ಟಿರುವುದು ಸಹಜ. ಮನೆಯಲ್ಲಿ ವಾಸ ಮಾಡುವ ಜನರ ಮೇಲೆಯೂ ಇದರ ಗಾತ್ರ ಹೆಚ್ಚಾಗಬಹುದು. ಕಡಿಮೆಯಾಗಬಹುದು. ಉದಾಹರಣೆಗೆ ಕೃಷಿ ಮನೆತನಗಳಲ್ಲಿ ಅದರಲ್ಲೂ ಶ್ರೀಮಂತ ಕೃಷಿಕರ ಮನೆಯಲ್ಲಿ ದನ-ಕರಗಳು, ಕೃಷಿಯ ಉಪಕರಣಗಳು, ಮನೆಯಲ್ಲಿ ಜನರ ಓಡಾಟ, ಇವೆಲ್ಲವುಗಳು ಕೂಡ ಗಾತ್ರದಲ್ಲಿ ವ್ಯತ್ಯಾಸ ಹೊಂದಬಹುದು. ಹೊಸ್ತಿಲು ದೊಡ್ಡದಾಗಿರುವ ಕೃಷಿ ಮನೆತನಗಳಲ್ಲಿ ಕೃಷಿ ಉಪಕರಣಗಳ ಸಾಗಾಣೆ ಸುಲಭವಾಗಲಿ ಎಂದು, ವಯಸ್ಸಾದವರು ದಾಟಲು ಅನುಕೂಲವಾಗಲೆಂದು, ಮಕ್ಕಳು ಓಡಾಡಲು, ದನ-ಕರುಗಳಿಗೆ ಹೀಗೆ ಎಲ್ಲಾ ದೃಷ್ಟಿಯಿಂದ ಸುಲಭವಾಗಲಿ ಎಂದು ಹೊಸ್ತಿಲನ್ನು ಎರಡು ಭಾಗ ಮಾಡಿ ನಡುವೆ ಕಿಂಡಿ ಬಿಟ್ಟಿರುತ್ತಾರೆ. ಇದು ಅನುಕೂಲಕ್ಕೆ ತಕ್ಕಂತೆ ತೆಗೆದು ಇಡುವುದು ಮಾಡುತ್ತಾರೆ. ಇದನ್ನು ಮುಚ್ಚಲು ಕಲ್ಲನ್ನು ಬಳಸುತ್ತಾರೆ. ಇದಕ್ಕೆ ವಿರುದ್ಧವಾದ ಹೊಸ್ತಿಲ ರಚನೆ ಭತಗುಣಕಿ ಗ್ರಾಮದ ಕ್ಷೇತ್ರಕಾರ್ಯದಲ್ಲಿ ಗಮನಕ್ಕೆ ಬಂದದ್ದು ಎಂದರೆ ಅಲ್ಲಿನ ಬಹುತೇಕ ಮನೆಗಳು ಕೃಷಿ ಮೂಲ ಮನೆತನಗಳೇ ಆಗಿದ್ದು, ಅವರ ಮನೆಯ ಹೊಸ್ತಿಲು ಕಲ್ಲಿನಿಂದ ಮಾಡಲಾಗಿದ್ದು, ಎರಡು ಭಾಗಗಳಿಂದ ಕೂಡಿತ್ತು. ನಡುವೆ ದೊಡ್ಡ ಕಿಂಡಿ ಇದ್ದು ಅಲ್ಲಿ ಕಟ್ಟಿಗೆಯ ತುಂಡು ಸೇರಿಸಲಾಗಿತ್ತು. ಅದಕ್ಕೆ ಪೂಜೆ ಪುನಸ್ಕಾರ ಮಾಡಲಾಗಿತ್ತು. ಹುಳ ಹುಪ್ಪಟೆಗಳ ಪ್ರವೇಶವನ್ನು ತಡೆಯಲು ಕ್ರಮ ಇದೆಂದು ಹೇಳಬಹುದು.

ಸಾಮಾನ್ಯವಾಗಿ ಜನಪದರ ಮನೆಯ ಬಾಗಿಲುಗಳ ಅಳತೆಯ ಪ್ರಕಾರ ಹೊಸ್ತಿಲು ಇರುತ್ತವೆ. ಚಿಕ್ಕ ಮನೆಗಳೇ ಹೆಚ್ಚಾಗಿರುವ ಜನಪದರಲ್ಲಿ ಬಾಗಿಲು ಚಿಕ್ಕದಾಗಿದ್ದು ಅದಕ್ಕೆ ಹೊಸ್ತಿಲು ಕೂಡ ಚಿಕ್ಕದಾಗಿ ಇರುತ್ತಿತ್ತು. ಗುಡಿಸಲುಗಳಲ್ಲಿ ಬಗ್ಗಿ ಹೋಗುವಂತೆ ಇರುವ ಬಾಗಿಲುಗಳು ಹೊಂದಿರುವ ಹೊಸ್ತಿಲು ಕೂಡ ಸುಮಾರು ೪ ರಿಂದ ೫ ಇಂಚು ಎತ್ತರದಿಂದ ಮಾಡಿ ಕೆಮ್ಮಣ್ಣಿನಿಂದ ಸಾರಿಸುತ್ತಾರೆ. (ಕೆಲವೊಂದು ಅತಿಚಿಕ್ಕ ಗುಡಿಸಲುಗಳು ಕಟ್ಟಿಗೆಯ ತುಂಡನ್ನೇ ಅಡ್ಡಲಾಗಿ ಇಟ್ಟು, ಹೊಸ್ತಿಲು ಎಂದು ಭಾವಿಸಿ ಕೊಳ್ಳುವ ಹಾಗೆ ಮಾಡಿರುತ್ತಾರೆ.) ಒಟ್ಟಾರೆ ಹೇಳ ಬೇಕೆಂದರೆ ಅವರವರ ಆರ್ಥಿಕ ಸ್ಥಿತಿಗತಿಯನ್ನು ಅವಲಂಬಿಸಿ ಬಾಗಿಲು ಮತ್ತು ಹೊಸ್ತಿಲಿನ ಅಳತೆಯನ್ನು ಕಾಣಬಹುದು. ಅದಕ್ಕೆ ಹೊಸ್ತಿಲು ಮನೆಯ ಪ್ರತಿಷ್ಠೆಯ ಸಂಕೇತವೆಂದು ಹೇಳುತ್ತಾರೆ.


ಕಟ್ಟಿಗೆ ತುಂಡಿನ ಹೊಸ್ತಿಲು

ಬಾಗಿಲಿನ ಚೌಕಟ್ಟಿನ ಮೇಲ್ಭಾಗದಲ್ಲಿ ಇರುವುದು ಉತ್ತರಾಣಿ. ಇದಕ್ಕೆ ಹಣೆಪಟ್ಟಿ ಎಂದು ಹೇಳುತ್ತಾರೆ. ಇದು ಅನೇಕ ರೀತಿಯ ಕೆತ್ತನೆಯನ್ನು ಹೊಂದಿರುತ್ತದೆ. ಚಿಕ್ಕ ಚಿಕ್ಕ ನಕ್ಷೆಗಳಿಂದ ಕೂಡಿರುತ್ತದೆ. ಕೊನೆ ಪಕ್ಷ ಸಾಂಕೇತಿಕವಾಗಿ ಒಂದು ರೇಖೆಯನ್ನಾದರೂ ಹೊಂದಿರುತ್ತವೆ. ಕಾರಣ ಶಾಸ್ತ್ರಗ್ರಂಥಗಳು ನಕ್ಷೆಗಳು ದೇವರ ವಿಗ್ರಹಗಳಿರದ ಉತ್ತರಾಣಿಯನ್ನು ನಿಷೇಧಿಸುತ್ತದೆ. ಇಲ್ಲಿ(ಉತ್ತರಾಣಿ ಯಲ್ಲಿ) ಅತಿ ಸೂಕ್ಷ್ಮ ಕೆತ್ತನೆಯನ್ನು ನೋಡಬಹುದು. ವಿವಿಧ ನಮೂನೆಯ ಹೂ ಬಳ್ಳಿಗಳು, ದೇವರುಗಳ ವಿಗ್ರಹಗಳು, ಪ್ರಾಣಿಗಳು ಹೀಗೆ ಮುಂತಾದ ವಿನ್ಯಾಸಗಳಿಂದ ಕೆತ್ತಲಾಗಿರುತ್ತದೆ.

ದೇವರುಗಳಲ್ಲಿ ವಿಶೇಷವಾಗಿ ಪರಮೇಶ್ವರ-ಪಾರ್ವತಿ, ವಿಘ್ನೇಶ್ವರ, ವೆಂಕಟರಮಣ, ತಮ್ಮ ತಮ್ಮ ಇಷ್ಟದೇವತೆಗಳ ವಿಗ್ರಹಗಳನ್ನು ಕೆತ್ತಿಸಿರುತ್ತಾರೆ. ಕಮಲದ ಹೂ, ಕುಂಡಲಿ ಇವು ಹಣೆ ಪಟ್ಟಿಯ ಮಧ್ಯಭಾಗದಲ್ಲಿನ ಕೆತ್ತನೆಗಳಾದರೆ, ಹಣೆಪಟ್ಟಿ ಎರಡು ಕಡೆಗಳಲ್ಲಿ ಆನೆಗಳು, ಗಂಡಬೇರುಂಡ, ನವಿಲುಗಳು, ಗಿಳಿಗಳು, ಕಾಮಧೇನು, ಬಸವಣ್ಣ, ಮುಸ್ಲಿಂ ಬಾಂಧವರು ಬಾಗಿಲ ಮೇಲೆ ಅರ್ಧಚಂದ್ರ, ನಕ್ಷತ್ರ, ೭೮೬, ಮಕ್ಕ ಮದೀನಾ ಹಾಗೂ ಮನೆ ದೇವರ ಹೆಸರನ್ನು ಕೆತ್ತಲಾಗುತ್ತದೆ.

ಉತ್ತರ ಕರ್ನಾಟಕದ ಕಡೆಗಳಲ್ಲಿ ಹಣೆಪಟ್ಟಿಯ ಎರಡು ಕಡೆಗಳಲ್ಲಿ ಕುದುರೆಯ ಮುಖಗಳ ಬೊಂಬೆಗಳನ್ನು ಅಳವಡಿಸುವುದು ಕಾಣಬಹುದು. ಅವು ಮನೆತನದ ಪ್ರತಿಷ್ಠೆಯ ಸಂಕೇತವು ಹೌದು. ಬಾಗಿಲಿಗೆ ಅಳವಡಿಸಿದ ಕುದುರೆಯ ಮುಖಗಳು ಸೂರ್ಯನ ಅಶ್ವಗಳ ಸಂಕೇತ. ಆ ಅಶ್ವಗಳು ಸೂರ್ಯನ ರಥವನ್ನು ಓಡಿಸುವ ಹಾಗೆ, ಮನೆ ಎಂಬ ರಥವನ್ನು ಜ್ಞಾನ ಮತ್ತು ಯಶಸ್ಸಿನ ಕಡೆಗೆ ಎಳೆದುಕೊಂಡು ಹೋಗುವವು ಎಂಬಂತೆ ಈ ಅಶ್ವಗಳನ್ನು ಜೋಡಿಸಲಾಗಿದೆ. ಹಿಂದೂಗಳಿಗೆ ಕಣ್ಣಿಗೆ ಗೋಚರವಾಗುವ ಪ್ರತ್ಯಕ್ಷ ದೈವವೆಂದರೆ ಸೂರ್ಯ. ಬೆಳಗಿನ ಚಟುವಟಿಕೆಗಳು ಪ್ರಾರಂಭವಾಗುವುದು ಸೂರ್ಯೋದಯದಿಂದ. ಜಗತ್ತಿನ ಕತ್ತಲೆಯನ್ನು ಹೋಗಲಾಡಿಸುವ ಸೂರ್ಯದೇವ, ಮನೆ-ಮನಗಳ ಕತ್ತಲೆಯನ್ನು ಹೋಗಲಾಡಿಸುವ ಪ್ರತೀಕವೆಂಬಂತೆ ಈ ಕುದುರೆಗಳನ್ನು ಕಾಣಬಹುದು.

ಈ ಹಣೆಪಟ್ಟಿಯು(ಉತ್ತರಾಣಿ) ಹೊಸ್ತಿಲಿನಷ್ಟೆ ಪ್ರಾಮುಖ್ಯತೆಯನ್ನು ಪಡೆದಿರುತ್ತದೆ. ಇದು ತಳಿರು ತೋರಣ ಅರಿಶಿಣ ಕುಂಕುಮ ಇತ್ಯಾದಿಗಳಿಂದ ಅಲಂಕಾರಗೊಂಡಿರುತ್ತದೆ.

ಇನ್ನೂ ಬಾಗಿಲ ಎರಡು ತೋಳುಗಳು ಕೂಡ ಸೂಕ್ಷ್ಮಾತಿಸೂಕ್ಷ್ಮ ಕೆತ್ತನೆಯನ್ನು ಹೊಂದಿರುತ್ತವೆ. ತೋಳುಗಳಲ್ಲಿ ಹೂ ಬಳ್ಳಿಗಳು ಕೆಲವೊಂದು ತೋಳುಗಳಿಗೆ ಹಿತ್ತಾಳೆಯ ಫಿರಕಿಗಳನ್ನು ಅಳವಡಿಸಿರುತ್ತಾರೆ. ಇವು ಬಾಗಿಲಿಗೆ ಭದ್ರತೆಯನ್ನು ಒದಗಿಸುವ ಜೊತೆಗೆ ಅಂದವಾಗಿಯೂ ಕಾಣುತ್ತವೆ.

ಈ ರೀತಿಯ ಪೂರ್ಣ ಚೌಕಟ್ಟು ನಿರ್ಮಾಣ ಮಾಡಲು ಕನಿಷ್ಠ ಪಕ್ಷ ೨೦ ರಿಂದ ೩೦ ದಿವಸಗಳವರೆಗೆ ಸತತ ಪರಿಶ್ರಮ ಅಗತ್ಯ. ಇಂತಹ ಚೌಕಟ್ಟು ನಿರ್ಮಿಸಿದ ಕಾರ್ಮಿಕರಿಗೆ ದೊರೆಯುವ ಸಂಭಾವನೆ ೨೫೦೦

ರಿಂದ ೩೦೦೦ ರೂಪಾಯಿಗಳು ಮಾತ್ರ. ಇವುಗಳನ್ನು ಮಾರುಕಟ್ಟೆಯಲ್ಲಿ ಮಾರುವಾಗ ೧೫೦೦೦ ದಿಂದ ೨೦.೦೦೦ ರೂಪಾಯಿಗಳವರೆಗೆ.


ಗ್ರಾಮೀಣ ಪ್ರದೇಶದಲ್ಲಿ ಈಗಲೂ ಮನೆಕಟ್ಟುವಾಗ ಬಾಗಿಲ ಚೌಕಟ್ಟು(ಹೊಸ್ತಿಲು) ಕೂಡಿಸುವಾಗ 'ಆಯ ಪಾಯ'ದ ಸಂಪ್ರದಾಯ ಅನುಸರಿಸುತ್ತಾರೆ. ಪಂಚಾಂಗ 'ಶುಭ ಘಳಿಗೆ' ಮುಂತಾದವುಗಳು ಭಾವಿ ಜೀವನದ ಸುಭದ್ರ ಬುನಾದಿಯ ನಿರ್ಮಾಣಕ್ಕೆ ಇವೆಲ್ಲವುಗಳನ್ನು ನಂಬಿಕೊಂಡು ಬಂದಿದ್ದಾರೆ. ಮನೆಯ ಮುಖ ಹೊಸ್ತಿಲು. ಆದ್ದರಿಂದ ಹೊಸ್ತಿಲನ್ನು ಕೂಡಿಸುವಾಗ ನೀತಿ ನಿಯಮಾವಳಿಗಳನ್ನು ಅನುಸರಿಸುತ್ತಾರೆ. ಯೋಗ್ಯ ಕಟ್ಟಿಗೆಯಿಂದ ಸೂಕ್ತವಾದ ರೀತಿಯಲ್ಲಿ ರಚನೆಗೊಂಡಿರುವ ಹೊಸ್ತಿಲು, ಚೌಕಟ್ಟನ್ನು ಒಂದು



ಹೊಸ ಮನೆಗೆ ಬಾಗಿಲು ಚೌಕಟ್ಟು ಕೂರಿಸುವುದು

ಗೊತ್ತಾದ ಶುಭ ಘಳಿಗೆಯಲ್ಲಿ ಆಚಾರಿಗಳ ಕೈಯಿಂದ ಚೌಕಟ್ಟನ್ನು ಪೂಜಿಸಿ, ಒಂದು ಸಣ್ಣ ಮಣ್ಣಿನ ಮಡಿಕೆ ಅಥವಾ ತಾಮ್ರದ ತಂಬಿಗೆಯಲ್ಲಿ ಪಂಚಲೋಹ, ಪಂಚಫಳಾರ, ಪಂಚಾಮೃತ ಹಾಕಿ ಅರಿಶಿನ-ಕುಂಕುಮಗಳಿಂದ ಪೂಜಿಸಿ, ಹೂ ಹಾಕಿ ಅದನ್ನು ಹೊಸ್ತಿಲ ಕೆಳಗೆ ಇಟ್ಟು ಮೇಲೆ ಹೊಸ್ತಿಲು ಕೂಡಿಸುತ್ತಾರೆ. ಇದರಿಂದ ಮನೆ ಸಮೃದ್ಧಿ ಹೊಂದುತ್ತದೆ ಎಂದು ಜನನಂಬಿಕೆ ದುಷ್ಟಶಕ್ತಿಗಳನ್ನು ನಿಯಂತ್ರಿಸುವುದಕ್ಕೆ ಮಂತ್ರಿಸಿದ ಕಾಯಿ ಇತ್ಯಾದಿಗಳನ್ನು ಒಳಬಾಗಿಲ ಮೇಲೆ ಕಟ್ಟುವ ಪದ್ಧತಿ ಹಳ್ಳಿಗಳಲ್ಲೂ, ನಗರಗಳಲ್ಲೂ ವ್ಯಾಪಕವಾಗಿವೆ. ಮನೆಗೆ ಆಧಾರವಾದ ಈ ಬಾಗಿಲಿಗೆ ಶ್ರೇಯಸ್ಸನ್ನು ಹಾರೈಸಿ, ಹೊಸ ಮನೆಗೆ ಬಾಗಿಲು ಇಡುವ ಸಂದರ್ಭದಲ್ಲಿ ಮರಿ ಬಲಿಕೊಟ್ಟು(ಮಾಂಸಹಾರಿಗಳು) ಅದರ ತಲೆಯನ್ನು ಹೊಸ್ತಿಲ ಕೆಳಗೆ ಹೂಳುವ ಪದ್ಧತಿಗಳೂ ಇವೆ. ಸಸ್ಯಹಾರಿಗಳು ಕುಂಬಳಕಾಯಿಯನ್ನೇ ಬಲಿಯ ರೂಪದಲ್ಲಿ ಹೊಸ್ತಿಲಿಗೆ ಒಡೆಯುತ್ತಾರೆ. ಒಡೆದ ಕುಂಬಳ ಕಾಯಿ ಹೋಳುಗಳನ್ನು ತಿರುವು

ಮುರುವು ಮಾಡಿ ಒಳಗೆ ಕುಂಕುಮ ಹಾಕುತ್ತಾರೆ. ಇಲ್ಲಿ ಕುಂಕುಮ ರಕ್ತದ ಸಂಕೇತ. ಹೀಗೆ ಮಾಡುವುದು ಪಂಚ ಭೂತಗಳಿಗೆ ಶಾಂತಿ ಮಾಡಿದಂತೆ. ಸ್ಥಳದಲ್ಲಿನ ಪಂಚಭೂತಗಳು ಮತ್ತು ಮನೆ ನಿರ್ಮಿಸುವಾಗ ಬೇರೆ ಕಡೆಗಳಿಂದ ತಂದಂತಹ ಪಂಚಭೂತಗಳು ಒಂದಕ್ಕೊಂದು ಘರ್ಷಣೆ ಪ್ರಾರಂಭವಾಗಿ ಮನೆಯಲ್ಲಿ ವಾಸ ಮಾಡುವವರಿಗೆ ತೊಂದರೆಯುಂಟು ಮಾಡಬಹುದು ಎಂದು ಬಲಿಯನ್ನು ಸಮರ್ಪಿಸಿ, ಜನರಿಗೆ ಊಟ ಮಾಡಿಸುವುದರಿಂದ(ಅನ್ನದ ಶಾಂತಿ) ಅವುಗಳನ್ನು ಶಾಂತಗೊಳಿಸಲು "ಗೃಹಶಾಂತಿ" ಪದ್ಧತಿ ಅನುಸರಿಸುತ್ತಾರೆ.



ಹೊಸ್ತಿಲಿಗೆ ಕುಂಬಳಕಾಯಿ ಒಡೆದು ಎರಡು ಬದಿಗೆ ಇಟ್ಟಿರುವುದು

ಹಾಗೆಯೇ ಹೊಸ್ತಿಲ ಎರಡು ಕಡೆಗಳಲ್ಲಿ ಸ್ವಸ್ತಿಕಗಳನ್ನು ಕೆತ್ತಿಸುವುದು, ವಿಘ್ನೇಶ್ವರನನ್ನು ಕೆತ್ತುವುದು, ಕೆಟ್ಟ ಶಕ್ತಿ ಹೊಸ್ತಿಲು ದಾಟಿ ಪ್ರವೇಶ ಮಾಡದಿರಲಿ ಎಂದು ಹೊಸ್ತಿಲಿಗೆ ಕುದುರೆ ನಾಲು ಹೊಡೆಯುವುದು. ಮೊಳೆ ಹೊಡೆಯುವುದು, ಬಾಗಿಲ ಮೇಲೆ 'ನಾಳೆ ಬಾ' ಎಂದು ಬರೆಯಿಸುವುದು, ಕಾಲು ತೊಳೆದುಕೊಂಡೆ ಮನೆಯ ಒಳಗೆ ಪ್ರವೇಶ ಮಾಡಬೇಕು ಎಂಬ ಅನೇಕ ಸಂಗತಿಗಳ ಹಿಂದೆ ಇದರ ಮಹತ್ವವೆಂದರೆ ಮುಂದೆ ಆಗುವ ಅನಾಹುತಗಳನ್ನು ತಪ್ಪಿಸುವದಕ್ಕೋಸ್ಕರ ಮುಂಜಾಗೃತಾ ಕ್ರಮಗಳೇ ಆಗಿವೆ.

ಕುದುರೆ ನಾಲು(ಕುದುರೆಯ ಕಾಲಿಂದ ಕಳಚಿ ಬಿದ್ದು ದೊರೆತ) ಹೊಸ್ತಿಲಿಗೆ ಬಡೆಯುವುದು(೧) ಒಳ್ಳೆಯದು ಎಂದು ಭಾವಿಸಿದರೆ ಹೊಸ್ತಿಲಿಗೆ ಮೊಳೆ ಹೊಡೆಯುವುದು. ಮೂರು ಉದ್ದೇಶಗಳಿಗಾಗಿ.

೧. ಸೊಸೆ ಪ್ರಥಮ ಬಾರಿಗೆ ಗೃಹ ಪ್ರವೇಶ ಮಾಡುವಾಗ(ವಿವರ ಹಿಂದೆ ಹೇಳಲಾಗಿದೆ)

೨. ಸತ್ತ ವ್ಯಕ್ತಿ ಮತ್ತೆ ಮರಳಿ ಮನೆಗೆ ಬರಬಾರದು(ವಿವರ ಹಿಂದೆ ಹೇಳಲಾಗಿದೆ)




ಕುದುರೆ ನಾಲು ಹೊಡೆದ ಹೊಸ್ತಿಲು

೩. ಮೈಸೂರು ವಿಭಾಗದ ಕೆಲವೊಂದು ಬುಡಕಟ್ಟು ಜನಾಂಗದವರ ನಂಬಿಕೆಯಂತೆ ಶನಿಕಾಟ ಹತ್ತಿದರೆ(ಕಾಡಾಟ ಹತ್ತಿದರೆ) ಸಂತೆಯಿಂದ ಮೂರು ಮೊಳೆಗಳನ್ನು ಖರೀದಿಸಿ ತಂದು ಹೊಸ್ತಿಲಿಗೆ ಸಾಲಾಗಿ ಬಡಿಯುತ್ತಾರೆ. ಹೀಗೆ ಮಾಡುವುದರಿಂದ ಬಂದಂತಹ ಕಾಟ ಕಳೆದು, ಜೀವನದಲ್ಲಿ ಶಾಂತಿ-ನೆಮ್ಮದಿಯುಂಟಾಗುತ್ತದೆ ಎನ್ನುವುದು. ಹೀಗೆ ಹೊಸ್ತಿಲಿನ ಪಾತ್ರ ಅತ್ಯಂತ ಗುರುತರವಾಗಿ ಬೆಳೆದುಕೊಂಡು ಬಂದಿದೆ.

ಕಲ್ಲು

ಮಾನವ ವಸತಿಗಳಿಗಿಂತ ದೇವಾಲಯಗಳು ಹೆಚ್ಚು ಕಾಲ ಉಳಿಯುವಂಥವು. ಅವುಗಳ ಉಳಿಯುವಿಕೆಗಾಗಿ ಮಾನವ ಶಕ್ತಿ ಮೀರಿ ಪ್ರಯತ್ನ ಪಡುತ್ತಾನೆ. ತನ್ನ ಹೊಟ್ಟೆಗೆ ಹಿಟ್ಟಿದೆಯೋ ಇಲ್ಲವೋ ದೇವರ ನೈವೇದ್ಯಕ್ಕಾಗಿ ರುಚಿ ರುಚಿಯಾದ ಪಕ್ವಾನ್ನಗಳನ್ನು ತಯಾರಿಸುತ್ತಾನೆ. ತನಗೆ ಸೂರಿನ ಕೊರತೆ ಇದ್ದರೂ ಆ ಕೊರತೆ ದೇವರಿಗೆ ದೇವಾಲಯಕ್ಕೆ ತಾಗಬಾರದು ಎಂದು ನಾನಾ ಪರಿಯಿಂದ, ಕೊನೆಗೆ ಜನರಿಂದ ಪಟ್ಟಿ(ಚಂದಾ) ಎತ್ತಿ ಗಟ್ಟಿ ಮುಟ್ಟಾದ ದೇವಾಲಯವನ್ನು ನಿರ್ಮಿಸುತ್ತಾನೆ. ಇದಕ್ಕೆ ಮೂಲಕಾರಣ ಅವರು ದೇವರ ಮೇಲೆ ಇಟ್ಟಿರುವ ಅಪಾರವಾದ ನಂಬಿಕೆ. ಇಂತಹ ದೇವಾಲಯಗಳಿಂದಲೇ ಆಯಾ ಕಾಲದ ರಾಜನ ಆಳ್ವಿಕೆ, ಅವರ ಧಾರ್ಮಿಕ ಸೆಳೆತ, ಅಂದಂದಿನ ಸ್ಥಿತಿಗತಿಗಳು ತಿಳಿಯಲು ಸಹಾಯಕವಾಗುತ್ತದೆ.

ದೀರ್ಘಕಾಲ ಉಳಿಯುವಂಥ ದೇವಾಲಯಕ್ಕೆ ಬಾಗಿಲನ್ನು(ದ್ವಾರಗಳು) ಕಲ್ಲಿನಿಂದ ತಯಾರಿಸಲಾಗುತ್ತಿತ್ತು. ಪುರಾತನ ದೇವಾಲಯಗಳ ವಿಶೇಷತೆಯೇ ಕಲ್ಲಿನಲ್ಲಿ ವೈವಿಧ್ಯಮಯ ಕೆತ್ತನೆಗಳನ್ನು ಕೆತ್ತುವುದು. ಇಡೀ ದೇವಾಲಯವು ಕಲ್ಲಿನಲ್ಲಿ ಮಾಡಲಾಗಿದ್ದು, ಬಾಗಿಲ ಚೌಕಟ್ಟು, ಹೊಸ್ತಿಲ ಕೂಡ ಕಲ್ಲಿನಿಂದಲೇ ಮಾಡಿರುವುದು ಇತಿಹಾಸಗಳಿಂದ ತಿಳಿಯುತ್ತದೆ. ಆಧುನಿಕ ಯುಗದಲ್ಲಿಯೂ ದೇವಾಲಯಗಳಿಗೆ ಕಲ್ಲಿನ ಚೌಕಟ್ಟುಗಳು, ಹೊಸ್ತಿಲು ನೋಡುತ್ತೇವೆ. ಕಾರಣ ದೇವಾಲಯಗಳಲ್ಲಿ ಜನಸಂಚಾರ ಅಧಿಕವಾಗಿರುವುದರಿಂದ



ಕಲ್ಲಿನ ಬಾಗಿಲು

ಕಟ್ಟಿಗೆಗಿಂತ ಕಲ್ಲಿನ ಹೊಸ್ತಿಲು ಉತ್ತಮ ಎಂದಿರಬಹುದು. ಇವು ಹೆಚ್ಚುಕಾಲ ಬಾಳಿಕೆ ಬರುವಂತವು ಎಂದರೂ ತುಂಬಾ ಪುರಾತನ ಕಾಲದ್ದನ್ನು ಇಂದು ನಿರೀಕ್ಷಿಸುವುದು ಸಾಧ್ಯವಿಲ್ಲ.

ಬಾಗಿಲ ಚೌಕಟ್ಟುಗಳು ಹೆಚ್ಚು ಅಲಂಕರಣಗೊಂಡಿರುವ ರಚನೆಯನ್ನು ನೋಡಬೇಕೆಂದರೆ ಬಾದಾಮಿ ಚಾಲುಕ್ಯರ ಕಾಲಕ್ಕೆ ಬರಬೇಕು. ಅವರ ದೇವಾಲಯದ ದ್ವಾರಬಾಗಿಲಿಗೆ ಹಲವು ಪಟ್ಟಿಕೆಗಳನ್ನು ಹೊಂದಿದ್ದು, ಹೂ, ಲತೆ, ಸುರುಳಿ, ಚಿಕ್ಕ ಚಿಕ್ಕ ಉಬ್ಬು ಶಿಲ್ಪಗಳು, ಜೋಲಾಡುವ ಸರ್ಪ ಮೊದಲಾದ ಚಿತ್ರಣಗಳಿರುತ್ತವೆ. ಚೌಕಟ್ಟಿನ ಮೇಲು ಭಾಗದ ಲಲಾಟಬಿಂಬದಲ್ಲಿ ಎರಡೂ ಕಾಲುಗಳಲ್ಲಿ ಸರ್ಪಗಳನ್ನು ಹಿಡಿದು ಹಾರುತ್ತಿರುವ ಗರುಡನ ಚಿತ್ರಣ ವಿಶೇಷವಾಗಿರುತ್ತದೆ.

ದೇವಸ್ಥಾನಗಳ ಬಾಗಿಲುಗಳನ್ನು ಆದಷ್ಟು ಹೆಚ್ಚು ಅಲಂಕರಣಗೊಳಿಸುವುದು ಕಲ್ಯಾಣದ ಚಾಲುಕ್ಯರ ಮತ್ತೊಂದು ವಿಶೇಷ ವೈಖರಿ. ಲಕ್ಕುಂಡಿಯ ಕಾಶಿ ವಿಶ್ವೇಶ್ವರ ದೇವಾಲಯದ ದಕ್ಷಿಣ ದ್ವಾರವನ್ನು ಇಲ್ಲಿ ಉದಾಹರಣೆಯಾಗಿ ನೋಡಬಹುದು. ಇಲ್ಲಿ ಒಂಭತ್ತು ದ್ವಾರ ಶಾಖೆಗಳಿವೆ. ಇವುಗಳಲ್ಲಿ ಕ್ರಮವಾಗಿ ವಜ್ರದಾಕಾರದ ಅಲಂಕರಣ, ಸಂಗೀತಗಾರರನ್ನೊಳಗೊಂಡ ಲತಾಸುರುಳಿಗಳು, ರಸಿಕ ದಂಪತಿ ಗಳು, ಅರ್ಧಕಂಬ, ಸಿಂಹಗಳ ಸಾಲು, ರಸಿಕ ದಂಪತಿಗಳು, ಕಲ್ಪಲತಾ ಸುರುಳಿಗಳು, ಯಕ್ಷಯುಕ್ತ ಲತಾ ಸುರುಳಿಗಳು ಮತ್ತು ಹೂವಿನ ಎಸಳುಗಳನ್ನು ಅತಿ ಸೂಕ್ಷ್ಮವಾಗಿ ಕೆತ್ತಲಾಗಿದೆ.

ಹಾಗೆಯೇ ದ್ವಾರಗಳ ಮೇಲಿನ ಮಕರ ತೋರಣ, ಹೊಸ್ತಿಲ ಹಾಗೂ ಅದಕ್ಕೆ ಹೊಂದಿರುವ ಚಂದ್ರಶಿಲೆಗಳ ವಿನ್ಯಾಸ ಮತ್ತು ಕೆತ್ತನೆ ಇವೆಲ್ಲ ಇವರ ವಿಶಿಷ್ಟ ಲಕ್ಷಣಗಳಾಗಿವೆ. ಹೀಗೆ ಕಾಲಕಾಲಕ್ಕೆ ದೇವಾಲಯಗಳ ಕೆತ್ತನೆಯಲ್ಲಿ ಬದಲಾವಣೆಯನ್ನು ಕಂಡರೂ ಕೆಲವೊಂದು ಸಾಮಾನ್ಯ ಲಕ್ಷಣಗಳು

ಕಾಣಬಹುದು. ಅವೆಂದರೆ ಎಲ್ಲಾ ಬಾಗಿಲ ಚೌಕಟ್ಟುಗಳಲ್ಲಿ ಲಂಬಪಟ್ಟಿಕೆಗಳ ಮೇಲೆ ಹೂ-ಬಳ್ಳಿಗಳ ಕೆತ್ತನೆ, ದ್ವಾರಪಾಲಕರು, ಹಣೆಪಟ್ಟಿಯಲ್ಲಿ ಗಜಲಕ್ಷ್ಮಿ ಅದಕ್ಕೂ ಮೇಲೆ ಮಕರ ತೋರಣ ಇತ್ಯಾದಿ.

ಈ ರೀತಿಯಿಂದ ರಾಜ-ಮಹಾರಾಜರು ತಮ್ಮ ಕಾಲದಲ್ಲಿ ಇಂತಹ ಅನೇಕ ದೇವಾಲಯಗಳ ಕಟ್ಟಿಸಿ ವೈವಿಧ್ಯಮಯ ಕೆತ್ತನೆಯಿಂದ ಕಲ್ಲಿನಲ್ಲಿ ಜೀವವನ್ನು ತುಂಬಿ ಐತಿಹಾಸಿಕ ಪರಂಪರೆಯನ್ನು ಕಟ್ಟಿಕೊಟ್ಟಿದ್ದಾರೆ. ಇದೇ ಪರಂಪರೆಯನ್ನು ಮುಂದುವರೆದು ಆಧುನಿಕ ದೇವಾಲಯಗಳಲ್ಲಿ ಕಲ್ಲಿನ ಬಾಗಿಲು ಹೊಸ್ತಿಲು ಪರಂಪರೆಯು ಉಳಿಯುತ್ತಾದರೂ ಆ ಕಲಾಕೃತಿ, ವೈವಿಧ್ಯಮಯ ಕೆತ್ತನೆ ಮಾತ್ರ ಕಾಣೆಯಾಗಿದೆ. ಕೇವಲ ಬೃಹದಾಕಾರದ ಕಲ್ಲಿನ ಹೊಸ್ತಿಲು ಇಟ್ಟು ಹೊಸ್ತಿಲ ಮೇಲೆ ಶ್ರೀ ಚಕ್ರದ ಆಕಾರದ ಕೆತ್ತನೆ ಮಾತ್ರವಿರುತ್ತದೆ. ದೇವಾಲಯವೆಂದರೆ ಪಾವಿತ್ರತೆ ಮತ್ತು ದೈವಿಭಾವನೆಯಿಂದ ಬಾಗುವ ವ್ಯಕ್ತಿ ದೇವಾಲಯದ ಹೊಸ್ತಿಲು ಅಲೌಕಿಕ ಜಗತ್ತನ್ನು ಲೌಕಿಕ ಜಗತ್ತಿನಿಂದ ಬೇರ್ಪಡಿಸುವುದಾಗಿದೆ. ಅದಕ್ಕೆ ಭಕ್ತನಾದವನು ದೇವಸ್ಥಾನದ ಹೊಸ್ತಿಲಿಗೆ ಭಕ್ತ್ಯಾದರಗಳನ್ನು ಸಲ್ಲಿಸಿಯೇ ಒಳಬರುತ್ತಾನೆ.

ಈ ದೇವಸ್ಥಾನದ ಮಹಾದ್ವಾರಗಳೊಂದಿಗೆ ಗ್ರಾಮೀಣ ಜನಪದರ ಗುಡಿ ಬಾಗಿಲ ಹೋಲಿಸಿದರೆ, ಇಲ್ಲಿನಷ್ಟು ವೈವಿಧ್ಯಮಯ ಕೆತ್ತನೆಯನ್ನು ಹೊಂದಿರದೆ ಸಾಧಾರಣವಾಗಿರುತ್ತದೆ. ಎಷ್ಟೋ ದೇವಸ್ಥಾನಗಳಿಗೆ ಛಾವಣಿಯಾಗಲೀ ಬಾಗಿಲುಗಳಾಗಲೀ ಇಲ್ಲ. ಇದ್ದರೂ ಸಾಧಾರಣವಾಗಿರುತ್ತವೆ. ಅಲ್ಲಿ ಕೆತ್ತನೆಗಿಂತ ಬಣ್ಣಗಳೇ ಮುಖ್ಯವಾಗಿರುತ್ತವೆ. ಆ ಬಣ್ಣಗಳೇ ಭಕ್ತನ ಮನಸ್ಸನ್ನು ದೈವದೆಡೆಗೆ ಭಕ್ತಿಪೂರ್ವಕವಾಗಿ ಮಣಿಯುವಂತೆ ಮಾಡುತ್ತವೆ.

ಇನ್ನು ವಾಸದ ಮನೆಗಳ ಬಗೆಗೆ ಪರಿಶೀಲಿಸಿದರೆ ನಗರದ ಬಹುಪಾಲು ಬಾಗಿಲುಗಳು 'ನಿರಾಭರಣ' ಈಗ ಯಂತ್ರಗಳು ಮರ ನಯಗೊಳಿಸಿ ಚೌಕಟ್ಟು ನಿರ್ಮಿಸುತ್ತಿರುವಾಗ ನಯನಮನೋಹರ ಕೆತ್ತನೆ



ಆಧುನಿಕರ ಮನೆ ಬಾಗಿಲಿಗೆ ಲಕ್ಷ್ಮಿ ವಿಗ್ರಹ

ಎಲ್ಲಿಂದ ಸಾಧ್ಯ. ಆದರೆ ಶ್ರೀಮಂತರ ಮನೆ ಬಾಗಿಲು ವಿವಿಧ ದೇವರ ವಿಗ್ರಹಗಳ ಕೆತ್ತನೆಯನ್ನು ಚೌಕಟ್ಟುಗಳು ವಿವಿಧ ಹೂಬಳ್ಳಿಯಿಂದ ಕಂಗೊಳಿಸಿ ಇವು ದೇವರ ಆಲಯವೋ ಅಥವಾ ಮನುಷ್ಯನ ನಿವಾಸವೋ ಎಂದು ಗೊಂದಲ ಉಂಟು ಮಾಡುತ್ತವೆ.

೬.೨. ಕಬ್ಬಿಣ

ಮಾನವನಿಗೆ ಒದಗಿದ ನೈಸರ್ಗಿಕ ಸಂಪತ್ತುಗಳಲ್ಲಿ ಕಬ್ಬಿಣ ಅತ್ಯಮೂಲ್ಯ ಲೋಹ. ಕಲ್ಲಿನಲ್ಲಿ ಕಬ್ಬಿಣದ ಅದಿರನ್ನು ಪಡೆಯುಬಹುದಾದ ಇದು ಉಳಿದೆಲ್ಲ ಲೋಹಗಳಿಗಿಂತ ಗಟ್ಟಿಮುಟ್ಟಾದ ಮತ್ತು ಉಪಯುಕ್ತವಾದ ಉಪಕರಣಗಳನ್ನು ತಯಾರಿಸಬಹುದು. ನಾಗರೀಕತೆಯುಗದ ಆರಂಭದ ಹಂತವೇ ಕಬ್ಬಿಣದ ಶೋಧನೆಯಿಂದ ಎಂದು ಹೇಳಬಹುದು. ಪ್ರತಿಯೊಂದು ವಸ್ತುಗಳ ತಯಾರಿಕೆಯಲ್ಲಿ ಕಬ್ಬಿಣದ ಬಳಕೆ ಪ್ರಾರಂಭವಾಯಿತು. ಹಿಂದೆ ಮನೆಕಟ್ಟಲು ಮಣ್ಣು-ಕಲ್ಲು ಬಳಸಿದರೆ ಮುಂದೆ ಸಿಮೆಂಟು ಕಬ್ಬಿಣಗಳು ಸೇರಿಕೊಂಡು ಮನೆಯನ್ನು ಇನ್ನಷ್ಟು ಗಟ್ಟಿಮುಟ್ಟಾಗಲು ಸಹಕಾರಿಯಾದವು. ಅತಿ ಪ್ರಾಚೀನ ಕಾಲದಲ್ಲಿಯೇ ಕಬ್ಬಿಣಕ್ಕೆ ಮಹತ್ವವಿತ್ತು ಎನ್ನುವುದನ್ನು ಮಂಟೇಸ್ವಾಮಿಯ ಚರಿತ್ರೆಯಲ್ಲಿ ಶಿಷ್ಯರಿಗೆ ಕಬ್ಬಿಣದ ಭಿಕ್ಷೆ ಕೇಳೋದಕ್ಕೆ ಹೋಗಿದ್ದಿರೇನೋ ಎನ್ನುವ ಮಾತಿನಿಂದ ತಿಳಿದು ಬರುತ್ತದೆ. ಬಾಗಿಲು ಕಟ್ಟಿಗೆಯದಾದರೂ ಅದರ ಭದ್ರತೆಗೆ ಕಬ್ಬಿಣದ ಉಪಯೋಗ ಆಗಲೇಬೇಕಿತ್ತು. ಕಟ್ಟಿಗೆಯ ಫಳಿ(sheet)ಗಳನ್ನು ಒಂದಕ್ಕೊಂದು ಜೋಡಿಸಲು ಚೌಕಟ್ಟಿನ ನಾಲ್ಕು ಪಟ್ಟಿಕೆಗಳ ಜೋಡಣೆಗೆ ಕಬ್ಬಿಣದ ಮಳಿಗಳು ಬೇಕಾಗಿದ್ದವು. ಬಾಗಿಲುಗಳಿಗೆ ಫಿರಕಿಗಳ ಜೋಡಣೆಯನ್ನು ಕೂಡ ಭದ್ರತೆಯ ದೃಷ್ಟಿಯಿಂದ ಮಾಡಿರುತ್ತಿದ್ದರು. ಮೊಳೆಗಳನ್ನು ಹೊಡೆದಿದ್ದು ಅವು ನೋಡಲು ಅಂದವಾಗಿ ಕಾಣುವುದಿಲ್ಲ ಎಂದು ಅವಕ್ಕೆ ಕವಚವೆಂಬಂತೆ ಫಿರಕಿಗಳನ್ನು ಕೂಡಿಸುತ್ತಿದ್ದರು. ಚೆಂದ ಮತ್ತು ಭದ್ರತೆ ಎರಡೂ ದೃಷ್ಟಿಯಿಂದಲೂ ಬಳಕೆಯಾಗುತ್ತದೆ. ಬಾಗಿಲು ಭದ್ರಪಡಿಸಲು ಚಿಲಕದ(ಕೊಂಡಿ) ವ್ಯವಸ್ಥೆಯು ಕಬ್ಬಿಣದಿಂದಲೇ ಆಗಬೇಕಿತ್ತು. ಹಿಂದೆ ಹಳ್ಳಿಗಳಲ್ಲಿ ಹೊಸ್ತಿಲಿಗೆ ಚಿಲಕದ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು. ಯಾರಾದರೂ(ಮಕ್ಕಳು, ಮುದುಕರು, ಅಂಗವಿಕಲರು) ಬಾಗಿಲು ಹಾಕಿ ಭದ್ರಪಡಿಸಬಹುದಾಗಿತ್ತು. ತಾಯಿ ತನ್ನ ಚಿಕ್ಕ ಮಗುವಿನ ಕೈಯಿಂದಲೂ ಬಾಗಿಲು ಭದ್ರಪಡಿಸಿಕೊಳ್ಳಲು ಸಾಧ್ಯವಾಗುತ್ತಿತ್ತು. ಇಂತಹ ಕೆಲವೊಂದು ಹೊಸ್ತಿಲು ಹಳ್ಳಿಗಳಲ್ಲಿ ಇಂದಿಗೂ ನಮಗೆ ಕಾಣಸಿಗುತ್ತವೆ ಹಳೆಯ ಮನೆಗಳಿಗೆ ಚೌಕಟ್ಟಿನ ಕೆಳಭಾಗದಿಂದ ಹೊಸ್ತಿಲಿಗೆ(ಎರಡು ಬದಿಗೆ) ಕಬ್ಬಿಣದ ಸರಪಳಿಯನ್ನು ನೋಡಬಹುದು. ಇದು ಬಾಗಿಲು ಭದ್ರತೆಯನ್ನು ಸೂಚಿಸುತ್ತದೆ. ಬಾಗಿಲು ಭದ್ರತೆಗೆ ನಾಲ್ಕು ಕಡೆಯಿಂದಲೂ ಆಧಾರ ಕೊಂಡಿ(ಇಂಜಸ್), ಮೇಲೆ ಕೆಳಗೆ ಚಿಲಕಗಳು, ಹಿಡಿಯಲು ಹಿಡಿಕೆ ಹೀಗೆ ಒಂದೇ ಎರಡೇ ಪ್ರತಿಯೊಂದು ಹಂತದಲ್ಲಿ ಕಬ್ಬಿಣದ ಬಳಕೆಯಾಗುತ್ತದೆ.



ಬಾಗಿಲಿಗೆ ಕಬ್ಬಿಣದ ಸರಪಳಿಗಳು

ಮುಂದುವರಿದ ಮಾನವ ಕೇವಲ ಕಟ್ಟಿಗೆಯನ್ನೇ ನಂಬಿಕೊಂಡು ಕೂಡದೆ ನೈಸರ್ಗಿಕ ಖನಿಜಗಳನ್ನು ಬಳಸಿಕೊಂಡು ಕಟ್ಟಿಗೆಗಿಂತ ಗಟ್ಟಿಮುಟ್ಟಾದ(ಹುಳ, ಗೆದ್ದಲು ಹತ್ತದ) ಬಾಗಿಲು ಚೌಕಟ್ಟನ್ನು ತಯಾರಿಸಬಹುದು ಎಂಬುದನ್ನು ಕಂಡುಕೊಂಡನು. ಇತ್ತೀಚಿಗಂತೂ ನಗರಗಳಲ್ಲಿ ಸುಲಭವಾಗಿ ದೊರೆಯುವ, ಯಂತ್ರಗಳಿಂದಲೆ ತಯಾರಿಸಲ್ಪಟ್ಟ ಕಬ್ಬಿಣದ ಚೌಕಟ್ಟುಗಳ ಬಳಕೆ ಅಧಿಕವಾಗಿದೆ. ಗೃಹಿಣಿ ಕಬ್ಬಿಣದ ಹೊಸ್ತಿಲಿಗೆ ಪೂಜಿಸುವುದು ಕಾಣುತ್ತೇವೆ. ಕಬ್ಬಿಣದ ಶಟರ್ , ಗೇಟ್ ಹೀಗೆ ಪ್ರತಿಯೊಂದು ವಸ್ತುಗಳನ್ನು ಕಬ್ಬಿಣದಿಂದಲೇ ನಿರ್ಮಿಸುತ್ತಿದ್ದಾರೆ.

೭.೩. ವಿವಿಧ ಲೋಹಗಳು

ಹೊಸ್ತಿಲು ಕೇವಲ ಕಟ್ಟಿಗೆ, ಕಬ್ಬಿಣ ಮತ್ತು ಕಲ್ಲುಗಳಿಂದ ಮಾತ್ರವಲ್ಲದೆ ವಿವಿಧ ಲೋಹಗಳಾದ ಬಂಗಾರ, ಬೆಳ್ಳಿ, ತಾಮ್ರ ಮತ್ತು ಹಿತ್ತಾಳೆಗಳಿಂದಲೂ ಕೂಡ ನಿರ್ಮಿಸುವುದು ಸರ್ವೇಸಾಮಾನ್ಯ. ಆದರೂ ಇವು ಕೇವಲ ದೇವಾಲಯದ ಹೊಸ್ತಿಲುಗಳಿಗೆ ಮಾತ್ರ ಮೀಸಲಾದಂತಹವು. ಕಾರಣ ಇವು ಪೂರ್ತಿ ಲೋಹಗಳಿಂದಲೇ ರಚಿತವಾಗದೆ. ಕಲ್ಲಿನ ಹೊಸ್ತಿಲ ಮೇಲೆ ಹೊದಿಕೆಯ ರೂಪದಲ್ಲಿ ಇಂಥ ಲೋಹಗಳನ್ನು ಬಳಸುವುದನ್ನು ಕಾಣುತ್ತೇವೆ. ಕಲ್ಲಿನ ಹೊಸ್ತಿಲು ಇರುವುದು ಬಹುಕಾಲ ಬಾಳಿಕೆ ಬರುವಂತಹ ದೇವಾಲಯಗಳಿಗೆ ಮಾತ್ರ ಮನೆಯ ಹೊಸ್ತಿಲು ಕಲ್ಲಿನಿಂದ ಮಾಡಿದರೆ ಆ ಮನೆ ಸರ್ವನಾಶವಾಗುತ್ತದೆ ಎಂದು ಕೆಲವರು ಅಭಿಪ್ರಾಯ ಪಟ್ಟರು. ಮಧೋಳ ಜಿಲ್ಲೆಯಲ್ಲಿ ಹೆಚ್ಚಾಗಿ(ಮನೆಗಳಿಗೆ) ಕಲ್ಲಿನ ಹೊಸ್ತಿಲುಗಳು ಇರುವುದು ತಿಳಿದುಬರುತ್ತದೆ.

ಪುರಾತನ ಕಾಲದ ಅರಸರು ತಮ್ಮ ಕಾಲದ ಕಲೆ ಸಂಪ್ರದಾಯಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸದೇ ದೇವಾಲಯದಲ್ಲಿ ಕೆತ್ತಿರುವ ಶಿಲ್ಪದ ಮೂಲಕ ಇಡೀ ದೇವಾಲಯವೇ ಕಲ್ಲಿನಿಂದ

ನಿರ್ಮಾಣವಾಗುತ್ತಿರಬೇಕಾದರೆ, ಹೊಸ್ತಿಲಿಗೆ ಬೇರೆ ರೀತಿಯ ಅಂವರೆ ಕಟ್ಟಿಗೆಯಿಂದ ಮಾಡಬೇಕು ಎಂದು ಅನಿಸಿರಲಿಲ್ಲವೋ ಏನೋ? ಅದಕ್ಕೆ ಹೊಸ್ತಿಲು ಸಹ ಕಲ್ಲಿನಿಂದಲೇ ಮಾಡಿ ಅದಕ್ಕೆ ಮತ್ತಷ್ಟು ಮೆರಗನ್ನು ಕೊಡುವಂತೆ ಮೇಲೆ ಬೆಳ್ಳಿ, ಬಂಗಾರ, ತಾಮ್ರ, ಹಿತ್ತಾಳೆ ಹೀಗೆ ಲೋಹಗಳನ್ನು ಅವುಗಳ ಮೇಲೆ ಹೂಬಳ್ಳಿ, ಶ್ರೀ ಚಕ್ರ(ಮಧ್ಯದಲ್ಲಿ), ಪಾದಗಳನ್ನು ಮಾಡಿ ಹೊದಿಕೆಯ ರೂಪದಲ್ಲಿ ಬಾಗಿಲು ಮತ್ತು ಹೊಸ್ತಿಲಿಗೆ ಅಂಟಿಸಿರುವುದು ಕಾಣುತ್ತೇವೆ.

ಮೆಸಪಟೋಮಿಯಾ ನಾಗರೀಕತೆಯಲ್ಲಿ ದೊರೆತ ಬಾಗಿಲುಗಳಲ್ಲಿ ಕೆಲವೊಂದು ಕಂಚಿನವು ಆಗಿದ್ದವು. ಇದೇ ಸಂಪ್ರದಾಯವು ಮುಂದಿನ ಯುಗದಲ್ಲಿಯೂ ಮುಂದುವರೆದುಕೊಂಡು ಬಂದಿದೆ. ಮೊಟ್ಟ ಮೊದಲ ಬಾರಿಗೆ ಅಚ್ಚಿನಲ್ಲಿ ಮಾಡಿದ ಕಂಚಿನ ಬಾಗಿಲೊಂದು ಉತ್ತರ ಯುರೋಪಿನಲ್ಲಿ ದೊರೆತಿದೆ. ಪ್ರತಿಯೊಂದು ದೇವಾಲಯಕ್ಕೆ ಅದರದೆ ಆದ ಇತಿಹಾಸವಿರುತ್ತದೆ. ದೇವರು ಎಲ್ಲರಿಗೂ ಭೇದ-ಭಾವವಿಲ್ಲದೆ ಏಕರೀತಿಯವನಾಗಿದ್ದರೂ, ಭಕ್ತಾದಿಗಳಲ್ಲಿ ಮಾತ್ರ ನಾವು ಬಡವರು-ಶ್ರೀಮಂತರು ಎಂಬ ಪ್ರಭೇದಗಳನ್ನು ಕಾಣುತ್ತೇವೆ. ಉದಾಹರಣೆಗಾಗಿ ಶ್ರೀಮಂತರ ದೇವರೆಂದೇ ಪ್ರಸಿದ್ಧಿಯನ್ನು ಪಡೆದ ತಿರುಪತಿಯ ಶ್ರೀ ವೆಂಕಟೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ಬಂಗಾರದ ಬಾಗಿಲು ಮತ್ತು ಹೊಸ್ತಿಲುಗಳಿವೆ. ರಾಯಚೂರು, ಗುಲ್ಬರ್ಗಾ, ಮೈಸೂರು ಹೀಗೆ ವಿವಿಧ ಜಿಲ್ಲೆಯಲ್ಲಿಯ ಅನೇಕ ದೇವಸ್ಥಾನಗಳಿಗೆ ಬೆಳ್ಳಿಯ ಹೊದಿಕೆಯ ಹೊಸ್ತಿಲುಗಳು ಕಂಡುಬರುತ್ತವೆ. ಬೀದರ್ ಜಿಲ್ಲೆಯ ದೇವಸ್ಥಾನಕ್ಕೆ ಹಿತ್ತಾಳೆಯ ಹೊದಿಕೆಯ ಹೊಸ್ತಿಲನ್ನು ಕಾಣಲು ಸಾಧ್ಯ. ಈ ಎಲ್ಲಾ ದೇವಾಲಯಗಳ ವಿಶೇಷತೆಯೆಂದರೆ ಬಂಗಾರ, ಬೆಳ್ಳಿ ತಾಮ್ರ ವಿವಿಧ ಲೋಹಗಳ ಮೇಲೆ ಮೋಹಕ ಮತ್ತು ಭಕ್ತಿ ಉಂಟಾಗುವ ಕೆತ್ತನೆ ಇದೆ. ಅವೆಂದರೆ ಪ್ರತಿ ದೇವಸ್ಥಾನದ ಹೊಸ್ತಿಲ ಮೇಲೆ ಶ್ರೀ ಚಕ್ರವನ್ನು ಮತ್ತು ಆಯಾ ದೇವರುಗಳ ಸಂಕೇತವೆಂಬಂತೆ ಪ್ರಾಣಿಗಳನ್ನು ಹೊಸ್ತಿಲಿನ ಎರಡೂ ಕಡೆಗಳಲ್ಲಿ ಕೆತ್ತಲಾಗಿದೆ. ಉದಾಹರಣೆಗಾಗಿ, ನಂಜನಗೂಡಿನ ನಂಜುಂಡೇಶ್ವರ ದೇವಾಲದ ಹೊಸ್ತಿಲಿಗೆ ನಂದಿಯ ಪ್ರತಿರೂಪ ಕೆತ್ತಲಾಗಿದೆ. ದೇವಿಯ ದೇವಸ್ಥಾನದ ಹೊಸ್ತಿಲಿಗೆ ಸಿಂಹದ ಕೆತ್ತನೆಯನ್ನು ಮಾಡಲಾಗಿದೆ. ಹೀಗೆ ಆಯಾ ದೇವರ ವಾಹನಗಳನ್ನು ಕಾಣುತ್ತೇವೆ.

ದೇವಸ್ಥಾನದ ಬಾಗಿಲಿನ ಮತ್ತೊಂದು ವಿಶೇಷತೆಯಿಂದರೆ ಬಾಗಿಲಿನ ಎರಡು ಕಡೆಗಳಲ್ಲಿ ದ್ವಾರಪಾಲಕರನ್ನು ಕೆತ್ತಿರುವುದು. ಬಲಿಷ್ಠ ಪ್ರಾಣಿಗಳನ್ನು, ದೃಷ್ಟಿಯಾಗಬಹುದೆಂದು ದ್ವಾರದ ಇಕ್ಕೆಲಗಳಲ್ಲಿ ಸ್ತ್ರೀ ಪುರುಷರ ವೈವಿಧ್ಯಮಯ ಭಂಗಿ ಕಾಣಬಹುದು. ಹೀಗೆ ವಿವಿಧ ಲೋಹಗಳಿಂದ ವೈವಿಧ್ಯಮಯ ಕೆತ್ತನೆಯಿಂದ ಪೂಜ್ಯತೆ ಯನ್ನು ಮಾನ್ಯತೆಯನ್ನು ಪಡೆದ ಇಂತಹ ಹಲವಾರು ಬಾಗಿಲು ಹೊಸ್ತಿಲುಗಳನ್ನು ನೋಡಬಹುದು. ಇದೇ ಉದ್ದೇಶದಿಂದಲೇ ಮನೆಗಳ ಬಾಗಿಲಿಗೆ ಬೆದರುಬೊಂಬೆ, ನಿಂಬೆಹಣ್ಣು, ಮೆಣಸಿನಕಾಯಿ, ಕವಡಿ, ಗಜಗ, ಕೇರು ಮುಂತಾದವುಗಳನ್ನು ಇಂದಿಗೂ ಕೂಡ ಕಟ್ಟುತ್ತಾರೆ.

೭.೪. ವಾಸ್ತು ಶಾಸ್ತ್ರೀಯ ನೆಲೆಗಳು

ವಾಸ್ತು ಶಬ್ದವೇ ವಸ್ತು ಎಂಬ ಪದದಿಂದ ಬಂದಿದೆ. ವಸ್ತುವಿಗೆ ಸಂಬಂಧಿಸಿದ್ದು ವಾಸ್ತು. ವಸ್ತು ಮನೆಯಾದರೆ, ಮನೆಗೆ ಸಂಬಂಧಪಟ್ಟ ವಾಸ್ತು ಹೇಗಿರಬೇಕು ಎಂಬುದು ನಿರ್ದೇಶಿಸುವ ಶಾಸ್ತ್ರ 'ವಾಸ್ತುಶಾಸ್ತ್ರ' ಎನಿಸುತ್ತದೆ. ವಸ್ತುವಿನಿಂದ ವಾಸ್ತು ಬಂದಿದ್ದರೂ ಈ ದಿನ ವಾಸ್ತುವಿನಿಂದಲೇ ಗೃಹಲಕ್ಷಣ ವಿವರಿಸುವ ಶಾಸ್ತ್ರವೆಂಬ ಅರ್ಥವೆ ಸಾಮಾನ್ಯವಾಗಿಬಿಟ್ಟಿದೆ. ಮನೆಯ ಮುಖ. ಮುಖ್ಯ ದ್ವಾರ, ಉತ್ತರ ದಿಕ್ಕು, ಒಳಗಿನ ಕೊಠಡಿಗಳ ವ್ಯವಸ್ಥೆ ದೇವರ ಜಗುಲಿ ಇಂತಹ ದಿಕ್ಕಿನಲ್ಲಿ ಹೀಗೆ ಹೀಗೆ ಇರಬೇಕು, ಎಂದು ವಿವರಿಸುವ ವಾಸ್ತುಶಾಸ್ತ್ರ ಕರ್ನಾಟಕಕ್ಕಿಂತ ಆಂಧ್ರದಲ್ಲಿ, ಭಾರತದಕ್ಕಿಂತ ಜಪಾನ ಮೊದಲಾದ ದೇಶಗಳಲ್ಲಿ ಹೆಚ್ಚು ಚಲಾವಣೆಯಲ್ಲಿದೆ. ನಮ್ಮ ದೇಶದ ಸಂಸ್ಕೃತಿಯನ್ನು ಆಧರಿಸಿ ನಮ್ಮ ವಾಸ್ತುಶಾಸ್ತ್ರ ನಿರ್ಮಾಣವಾದರೆ, ಚೀನಾ ಸಂಸ್ಕೃತಿಯನ್ನು ಆಧರಿಸಿ ಚೀನಾ ದೇಶದ ವಾಸ್ತು ರೂಪಗೊಂಡಿದೆ. ಈ ಹಿನ್ನೆಲೆಯಲ್ಲಿ ವಾಸ್ತುಶಾಸ್ತ್ರ ಜಾಗತಿಕವಾಗಿ ಏಕರೂಪವಾಗಿಲ್ಲ ಎನ್ನುವುದನ್ನು ಗಮನಿಸಬಹುದಾಗಿದೆ. ಉದಾಹರಣೆಗಾಗಿ ಭಾರತೀಯ ವಾಸ್ತು ಶಾಸ್ತ್ರಿಯರ ಪ್ರಕಾರ ಪೂರ್ವ ಇಲ್ಲವೆ ಉತ್ತರ ದಿಕ್ಕು ಮನೆಯ ಮುಖ್ಯ ಬಾಗಿಲಿಗೆ ಶುಭವಾಗಿದ್ದರೆ, ಚೀನಾ ವಾಸ್ತುವಿನಲ್ಲಿ ಅದು ಪಶ್ಚಿಮ ಇಲ್ಲವೆ ದಕ್ಷಿಣವಾಗಿರುತ್ತದೆ. ಇದನ್ನು ನೋಡಿದಾಗ ನಾವು ಬೆಳೆಸಿಕೊಂಡು ಬಂದಿರುವ ನಂಬಿಕೆಗಳು ನಮ್ಮ ಶಾಸ್ತ್ರ ನಿರ್ಮಾಣಕ್ಕೆ ಕಾರಣವಾಗಿವೆ ಎಂಬುದು ಸ್ಪಷ್ಟವಾಗುತ್ತದೆ.

ನನ್ನ ಅಧ್ಯಯನಕ್ಕೆ ನೇರವಾಗಿ ಸಂಬಂಧ ಪಡುವುದು ಹೊಸ್ತಿಲು. ಸಾಮಾನ್ಯವಾಗಿ ಬಾಗಿಲ ಮತ್ತು ಹೊಸ್ತಿಲು ಒಂದು ಚೌಕಟ್ಟಿನ ವಿವಿಧ ಭಾಗವಾಗಿದ್ದರಿಂದ ಬಾಗಿಲು ಎಂದು ನೇರವಾಗಿ ಹೇಳುತ್ತಿದ್ದೇನೆ.

ಒಳ್ಳೆಯ ಯೋಜನೆ ಮತ್ತು ವಾಸ್ತುಶಾಸ್ತ್ರದ ಅನುಸಾರವಾಗಿ ಮನೆಯ ನಿರ್ಮಾಣದಲ್ಲಿ ಹೆಬ್ಬಾಗಿಲು ಪ್ರಮುಖ ಸ್ಥಾನವಹಿಸುತ್ತಿದೆ. ಸಿಂಹದ್ವಾರವು ಪೂರ್ವ ಉತ್ತರ ದಿಕ್ಕಿಗೆ ಮುಖ ಮಾಡಿ ಇಡುವುದು ಒಳ್ಳೆಯದು. ಆದರೆ ದಕ್ಷಿಣಾಭಿಮುಖವಾಗಿಡುವುದು. ಕೆಟ್ಟದ್ದು. ಪೂರ್ವ ಮತ್ತು ಉತ್ತರದ ದಿಕ್ಕಿಗೆ ಮುಖ ಮಾಡಿ ಬಾಗಿಲು ಇಡುವುದರಿಂದ ಗಾಳಿ-ಬೆಳಕು ಯಥೇಚ್ಛವಾಗಿ ಬರುತ್ತದೆ. ಅದು ಅಲ್ಲದೆ ಬೆಳಗಿನ ಸೂರ್ಯನ ಕಿರಣಗಳು ನೇರವಾಗಿ ಮನೆಯ ಒಳಗೆ ಪ್ರವೇಶಿಸುವುದರಿಂದ ಕ್ರಿಮಿ-ಕೀಟಗಳು ನಾಶವಾಗಿ ಮನೆಯಲ್ಲಿ ಆರೋಗ್ಯಕರವಾದ ವಾತಾವರಣ ಏರ್ಪಡುತ್ತದೆ. "ಬೆಳಗಿನ ಸೂರ್ಯನ ಕಿರಣಗಳು ದೇವರ ಪಾದ ತೊಳೆಯುತ್ತವೆ" ಎನ್ನುವ ಮಾತು ನೆನಪಿಸಿಕೊಳ್ಳಬಹುದು.

ಸಿಂಹದ್ವಾರ ಇಡುವುದು ಆ ಮನೆಯ ವಾಸ್ತುಗನುಗುಣವಾಗಿರಬೇಕೆ ವಿನಃ ಯಾವುದೇ ವ್ಯಕ್ತಿಗಳ ರಾಶಿಗನುಗುಣವಾಗಿಡುವುದು ಸರಿಯೆಂದು ತೋರುವುದಿಲ್ಲ. ಕಾರಣ ವ್ಯಕ್ತಿಯ ಆಯುಶ್ಯಕ್ಕಿಂತ ಮನೆಯ ಆಯುಶ್ಯ ಹೆಚ್ಚಾಗಿರುವುದರಿಂದ, ಆ ವ್ಯಕ್ತಿ ಅಲ್ಪಯುವಾಗಬಹುದು. ಅವನ ನಂತರ ಅವನ

ಕುಟುಂಬದವರು ವಾಸಿಸಬಹುದು. ಕ್ರಮೇಣ ಕುಟುಂಬದ ಮೂಲತ್ವವೇ ಬದಲಾಗಬಹುದು. ಆದ್ದರಿಂದ ಯಾವ ದಿಕ್ಕಿಗೆ ಬಾಗಿಲು ಇಡುವುದರಿಂದ ಏನೇನು ಪರಿಣಾಮಗಳು ಉಂಟಾಗುತ್ತವೆ ಎನ್ನುವುದನ್ನು ನೋಡೋಣ.

೧. ವಾಯುವ್ಯದ ಬ್ಲಾಕಿನ ಮನೆ ಉತ್ತರದ ಮುಂಬಾಗಿಲಾದಾಗ ಪಕ್ಕದಲ್ಲೇ ಪೂರ್ವದಲ್ಲಿರುವ ಮನೆಗಿಂತಲೂ ಈ ಮನೆ ಹಿಂದಕ್ಕಿರಬಾರದು.[೨]

೨. ವಾಯುವ್ಯದ ಬ್ಲಾಕಿನ ಮನೆಗೆ ಉತ್ತರದ ಮುಂಬಾಗಿಲಿದ್ದು, ನೀಚದಲ್ಲಿ ಗೇಟಿದ್ದರೆ, ನೀಚಸ್ಥಾನವಾದ ಉತ್ತರ ಆಗ್ನೇಯದ ನಡಿಗೆಯುಂಟಾಗುತ್ತದೆ. ಆದ್ದರಿಂದ ಕೆಟ್ಟ ಪರಿಣಾಮಗಳುಂಟಾಗುತ್ತದೆ.[೩]

೩. ಪಶ್ಚಿಮದ ಮುಂಬಾಗಿಲಿದ್ದು ಪೂರ್ವ ಉತ್ತರಗಳನ್ನು ಸೇರಿಸಿದಂತೆ ಮನೆ ಕಟ್ಟಿದರೆ ಆ ಮನೆಯವರು ಸಾಲಗಾರರಾಗಿ ಆ ಮನೆ ಹರಾಜಿಗೆ ಬರುತ್ತದೆ.[೪]

೪. ಪಶ್ಚಿಮದ ಮುಂಬಾಗಿಲಿದ್ದು ಪೂರ್ವಕ್ಕೆ ಒತ್ತಿದಂತಿದ್ದು, ಪಶ್ಚಿಮದಲ್ಲಿ ವಾಲುವಾಸರೆ ಇದ್ದು ಮಹಡಿಗೂ ವಾಲುವಾಸರೆ ಇದ್ದರೆ ಆ ಮನೆಯ ಗಂಡಸರು ಪಾರ್ಶ್ವವಾಯುವಿನ ಪಾಲಾಗುತ್ತಾರೆ. ಹಾಗೇ ಉತ್ತರಕ್ಕೆ ಒತ್ತಿಕಟ್ಟಿ, ಮನೆಗೂ ಮಹಡಿಗೂ ದಕ್ಷಿಣದಲ್ಲಿ ವಾಲುವಸಾರೆಗಳಿದ್ದರೆ. ಆ ಮನೆಯ ಹೆಂಗಸರು ಪಾರ್ಶ್ವವಾಯುವಿನ ಪಾಲಾಗುತ್ತಾರೆ. ಈ ಲಕ್ಷಣಗಳಿರು ಮನೆಗಳನ್ನು ಪರಿಶೀಲಿಸಿದರೆ ನಿಮಗೆ ನಿಜಾನಿಜಗಳು ಗೊತ್ತಾಗುತ್ತದೆ.[೫]

೫. ಉತ್ತರದ ಮುಂಬಾಗಿಲಿದ್ದು ಪೂರ್ವಕ್ಕೆ ಒತ್ತಿದಂತಿದ್ದು ಪಶ್ಚಿಮದ ಬೀದಿಗೆ ನೈರುತ್ಯದಲ್ಲಿ ಬಾಗಿಲಿರುವ ಮನೆಗಳಾಗಲೀ, ವ್ಯಾಪಾರದ ಸಂಸ್ಥೆಯಾಗಲೀ ಸ್ಥಿರತೆ ಇಲ್ಲದೇ ನಷ್ಟವನ್ನು ಅನುಭವಿಸಬೇಕಾಗುತ್ತದೆ.[೬]

೬. ಉತ್ತರದ ಮುಂಬಾಗಿಲಿದ್ದು, ಆಗ್ನೇಯ ವಾಯುವ್ಯಗಳು ಬೆಳೆದು ಈಶಾನ್ಯ ನೈರುತ್ಯಗಳು ಕಡಿದಂತಾಗಿದ್ದು. ನೀಚ ಸ್ಥಾನದಲ್ಲಿ ಬಾಗಿಲುಗಳಿದ್ದರೆ, ಆ ಮನೆಯ ಗಂಡ-ಹೆಂಡತಿಯರು, ಅಣ್ಣ-ತಮ್ಮಂದಿರು, ತಂದೆ-ಮಕ್ಕಳು, ಅತ್ತೆ-ಸೊಸೆಯರು ಸೌಹಾರ್ದತೆಯಲ್ಲದೇ ಪರಸ್ಪರ ವೈರಭಾವದಿಂದ ಮಾನಸಿಕ ಯಾತನೆಯನ್ನು ಅನುಭವಿಸುತ್ತಾರೆ. ಆ ಮನೆ ಆಗಾಗ ಅಗ್ನಿಗೆ ಅಹುತಿಯಾಗಿ ಪ್ರಾಣ ಹಾನಿಯೇ ಉಂಟಾಗುತ್ತದೆ.[೭]

೭. ಉತ್ತರದ ಮುಂಬಾಗಿಲಿದ್ದು, ಪೂರ್ವ ಸೇರಿದ್ದು, ಪೂರ್ವ ಉತ್ತರದ ಗೋಡೆಗಳು ವಕ್ರವಾಗಿರುವ ಮನೆಯಲ್ಲಿ ಅಂಗವಿಹೀನವಾದವರು ಹುಟ್ಟುತ್ತಾರೆ.[೮]

೮. ಉತ್ತರದಲ್ಲಿನ ಬಾಗಿಲುಗಳು ಕೇವಲ ಉತ್ತರವನ್ನೇ ನೋಡುತ್ತಿದ್ದರೆ, ಒಳ್ಳೆಯ ಫಲಿತಾಂಶಗಳುಂಟಾಗುತ್ತದೆ. ಉತ್ತರ ಭಾಗದಲ್ಲಿನ ಬಾಗಿಲುಗಳು ಈಶಾನ್ಯವನ್ನೇ ನೋಡುತ್ತಿದ್ದರೆ ಆ ಮನೆಯಲ್ಲಿ ಮೇಧಾವಿಗಳು ಹುಟ್ಟುತ್ತಾರೆ. ಅಂಥ ಮನೆಯಲ್ಲಿ ಸಿರಿಸೆಲೆಸಿ ಸುಖಶಾಂತಿಗಳನ್ನುಂಟು ಮಾಡುತ್ತವೆ.[೯]

೯. ಪೂರ್ವದ ಮುಂಬಾಗಿಲು ಈಶಾನ್ಯವನ್ನು ನೋಡುತ್ತಿದ್ದರೆ ಸಿರಿ ವಂಶಾಭಿವೃದ್ಧಿಗೆ ಎಡೆಬಿಡದ ನೆರೆ.[೧೦]

೧೦. ಮುಂಬಾಗಿಲು ನೋಡಿದರೆ ಪೂರ್ವ-ಗಂಡಸಿನ ಪುರೋಭಿವೃದ್ಧಿ ಅಪೂರ್ವ.[೧೧]

೧೧. ತಲೆಬಾಗಿಲು ಪಶ್ಚಿಮವನ್ನು ನೋಡುತ್ತಿದ್ದರೆ-ಪೂರ್ವದಲ್ಲಿರಬೇಕು ಇನ್ನೊಂದು ಬಾಗಿಲು.[೧೨]

೧೨. ಉತ್ತರದ ಮುಂಬಾಗಿಲಿದ್ದರೆ ಅಗತ್ಯವನ್ನನುಸರಿಸಿ ಇರಲೇಬೇಕು ಬಾಗಿಲು ದಕ್ಷಿಣಕ್ಕೆ.[೧೩]

೧೩. ಪಶ್ಚಿಮವನ್ನು ನೋಡುವ ದ್ವಾರ-ಹಲ ಶುಭಗಳ ಮಣಿಹಾರ.[೧೪]

೧೪. ಉತ್ತರದ ಬಾಗಿಲು ಉತ್ತರದ ಬಾಗಿಲನ್ನು ನೋಡಲು ಉತ್ತಮ ಶುಭ ಬಂದೊದಗುವುದು.[೧೫]

೧೫. ಉತ್ತರದ ಬಾಗಿಲು ಈಶಾನ್ಯವನ್ನು ನೋಡುತ್ತಿದ್ದರೆ ಆ ಮನೆಯಲ್ಲಿ ಉತ್ತಮ ಗುಣವಂತರು ಹುಟ್ಟುವರು.[೧೬]

ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿ ಬಾಗಿಲು(ಹೊಸ್ತಿಲು) ಇಡುವುದು ಒಳ್ಳೆಯದು ಎಂದು ಗೌರು ತಿರುಪತಿ ರೆಡ್ಡಿಯವರು ತಮ್ಮ ವಾಸ್ತುಶಾಸ್ತ್ರದ ವಾಸ್ತವಗಳು ಎಂಬ ಗ್ರಂಥದಲ್ಲಿ ಹೇಳಿದ್ದಾರೆ. ಹೀಗೆ ಸಕಲ ಶಾಸ್ತ್ರವನ್ನನುಸರಿಸಿ ನಿರ್ಮಿಸಿದ ಮನೆ ವಾಸಕ್ಕೆ ಯೋಗ್ಯವಾಗುವುದು. ವಾಸ್ತುಪುರುಷನನ್ನು ಸಂತುಷ್ಟಗೊಳಿಸುವುದರ ಮೂಲಕ. ಅಂದರೆ ವಾಸ್ತುಶಾಂತಿ(ಗೃಹಶಾಂತಿ) ಮಾಡುವುದು. ಈ ಭೂಮಿಯ ಮೇಲೆ ಕಂಡುಬರುವ ಕಟ್ಟಡ ಮುಂತಾದ ಜಡವಸ್ತುಗಳು ಪಂಚಭೂತಗಳಿಂದಲೇ ಸೃಷ್ಟಿಯಾಗಿವೆ. ಆಕಾಶ, ವಾಯು, ಅಗ್ನಿ, ಜಲ, ಭೂಮಿ ಈ ಪಂಚಭೂತಗಳಲ್ಲಿನ ಅಗೋಚರ ಶಕ್ತಿಯು ಪ್ರಕೃತಿಯಲ್ಲಿ ಕೂಡಿದೆ. ಈ ಚೇತನ್ಯ ಶಕ್ತಿಯ ಮಹತ್ವವನ್ನು ಊಹಿಸಲಾಗದ, ಕಲ್ಪನಾತೀತ. ಮಾನವ ತನ್ನ ಆಸೆ ಕಲ್ಪನೆಗೆ ಅನುಸಾರ ತಾನು ವಾಸಿಸುವ ಗೃಹವನ್ನೋ ಕಾರ್ಯಾಗಾರವನ್ನೋ ಕಟ್ಟಬಹುದು. ಆದರೆ ಅವನ ಜೀವನದ ಮೇಲೆಯೇ ಹಿಡಿತವಿರುವ ಪ್ರಕೃತಿಯ ವಿರುದ್ಧ ಹೋಗಲಾರ. ಮನೆ ನಿರ್ಮಿಸುವ ಸಮಯದಲ್ಲಿ ಬೇರೆ ಬೇರೆ ಕಡೆಗಳಿಂದ ಪಂಚಭೂತಗಳನ್ನು ಬಳಸಲಾಗುತ್ತದೆ. ಬೇರೆ ಕಡೆಯಿಂದ ಬಂದಂತಹ ಪಂಚಭೂತಗಳು ಹಾಗೂ ಮನೆ ಕಟ್ಟುವ ಸ್ಥಳದಲ್ಲಿ ಇರುವಂತಹ ಪಂಚಭೂತಗಳ ನಡುವೆ ಘರ್ಷಣೆ ಉಂಟಾಗಿ ಅಲ್ಲಿ ವಾಸ ಮಾಡುವಂಥವರಿಗೆ ಅವರ ಪರಿಣಾಮವಾಗಬಹುದು. ಆದ್ದರಿಂದ ಗೃಹಶಾಂತಿ(ವಾಸ್ತುಶಾಂತಿ)ಯಿಂದ ಈ ಪಂಚಭೂತಗಳನ್ನು ಕೂಡ ಶಾಂತಗೊಳಿಸಬಹುದು. ಅದು ಪೂಜೆಯ ರೂಪದಲ್ಲಿರಬಹುದು ಅಥವಾ ಬಲಿಯ ರೂಪದಲ್ಲಿರಬಹುದು.

ವಾಸ್ತುಪೂಜೆ : ವಾಸ್ತುಶಾಂತಿ ಅಥವಾ ವಾಸ್ತುಪೂಜೆಯಲ್ಲಿ ಮೊದಲ ಪೂಜೆ ಪಂಚಭೂತಗಳಲ್ಲಿ ಒಂದಾಗ ಜಲ ಪೂಜೆ ಇದನ್ನು ಆಡು ಭಾಷೆಯಲ್ಲಿ 'ಗಂಗಮ್ಮನ ಪೂಜೆ' ಎಂದು ಹೇಳುತ್ತೇವೆ. ಗಂಗಮನನ್ನು ಅಂದರೆ ನೀರನ್ನು ಒಂದು ಕೊಡದಲ್ಲಿ ತುಂಬಿಕೊಂಡು ಅದಕ್ಕೆ ಅರಿಶಿನ ಕುಂಕುಮಗಳಿಂದ ಪೂಜಿಸಿ

ಮುತ್ತೈದೆಯಾದ ಆ ಮನೆಯ ಒಡತಿ ಅದನ್ನು ತಲೆಯ ಮೇಲೆ ಹೊತ್ತುಕೊಂಡು, ಮನೆಯ ಒಡೆಯನ ಕೈಯಲ್ಲಿ ಮನೆದೇವರ ಮೂರ್ತಿ ಅಥವಾ ಪಟ ಹಿಡಿದುಕೊಂಡು ಬಂಧು-ಬಾಂಧವರೊಡಗೂಡಿ ಸಿಂಹದ್ವಾರ ಅಂದರೆ ಮುಖ್ಯಬಾಗಿಲಿಗೆ ಬರುತ್ತಾರೆ. ಹೊಸ್ತಿಲಿನ ಮುಂದೆ ನಿಂತು ಹೊಸ್ತಿಲಿಗೆ ಪೂಜಿಸಿ, ಅಲ್ಲಿಯೇ ಬಲಿಯು ಅಂದರೆ ಕುಂಬಳಕಾಯಿಯನ್ನು ಪೂಜಿಸುತ್ತಾರೆ. ಮೊದಲೇ ಬಾಗಿಲಿಗೆ ಮಾವಿನ ತೋರಣ, ಹೂಗಳಿಂದ ಅಲಂಕರಿಸಿರುತ್ತಾರೆ. ಕುಂಬಳಕಾಯಿಯನ್ನು ಹೊಸ್ತಿಲಿಗೆ ಒಡೆಯುತ್ತಾರೆ. ಒಡೆದ ಕುಂಬಳಕಾಯಿಗಳ ಹೋಳುಗಳನ್ನು ವಿರುದ್ಧ ದಿಕ್ಕಿನಲ್ಲಿ ಇಡುತ್ತಾರೆ. ಅದರ ಒಳಗೆ ಕುಂಕುಮ ಹಾಕುತ್ತಾರೆ. ಇದು ರಕ್ತದ ಸಂಕೇತ. ಹೀಗೆ ಕುಂಬಳಕಾಯಿ ಒಡೆಯುವಾಗ ಒಳಗಿನಿಂದ ಎದುರು ಅಂದರೆ ಪೂಜೆ ಮಾಡುವವರ ಎದುರಾಗಿ ಯಾರು ಬರಬಾರದು. ಹೀಗೆ ಪೂಜೆ ಕೈಗೊಂಡ ಬಳಿಕ ಎಲ್ಲರೂ ಬಲಗಾಲನ್ನು ಮುಂದೆ ಮಾಡಿ ಮನೆಯ ಒಳಗೆ ಪ್ರವೇಶಿಸುತ್ತಾರೆ. ತಂದಂತಹ ತುಂಬಿದ ಕಲಶ ದೇವರ(ಜಗುಲಿ) ಕಟ್ಟೆಯ ಮೇಲೆ ಇಡುತ್ತಾರೆ. ಈ ಕಲಶ ತುಂಬಿದ ಸಂಸಾರದ ಸಂಕೇತವಾಗಿದೆ. ನಂತರ ವಾಸ್ತು ಪುರುಷನ ಪೂಜೆ. ಯಾವ ವಾಸ್ತುವನ್ನು ನಂಬಿ ನಾವು ಮನೆ ನಿರ್ಮಿಸಿರುತ್ತೇವೆಯೋ ಆ ವಾಸ್ತು ಪುರುಷನ ಪೂಜೆ ಅತ್ಯಗತ್ಯ ವಾಸ್ತು ಪುರುಷನ ಪೂಜೆಯ ನಂತರ ನವಗ್ರಹ ಪೂಜೆ. ನವಗ್ರಹ ಪೂಜೆಯಿಂದ ಗ್ರಹಗಳಿಂದ ಉಂಟಾಗುವ ಭಾದೆ ತಪ್ಪಿಸಬಹುದು. ನವಗ್ರಹ ಎಂದರೆ ಒಂಭತ್ತು ತರಹದ ಧಾನ್ಯಗಳನ್ನು ತಂದು, ಒಂದೊಂದಕ್ಕೆ ಒಂದೊಂದು ಗ್ರಹದ ಹೆಸರಿನಿಂದ ಪೂಜಿಸಬೇಕು. ಕೊನೆಯ ಶಾಂತಿ ಅನ್ನದಾನ. ಬಂದಂತಹ ಬಂಧು-ಮಿತ್ರರೊಡಗೂಡಿ ಪ್ರೀತಿಯ ಭೋಜನ. ಈಗ ಮನೆ ವಾಸಕ್ಕೆ ಸಂಪೂರ್ಣ ಯೋಗ್ಯ.

೭.೫. ಕುಳಿಗಳು

ನಿತ್ಯ ಪೂಜಿಸಿಕೊಳ್ಳುವ ಹೊಸ್ತಿಲು ಸೂಕ್ಷ್ಮ ಕೆತ್ತನೆಯನ್ನು ಹೊಂದಿರುವುದಿಲ್ಲ. ಅದು ಏನಿದ್ದರೂ ರಂಗೋಲಿ, ಕುಂಕುಮ ಹೂಗಳಿಂದಲೇ ಆಲಂಕರಣಗೊಳ್ಳಬೇಕು. ಆದರೂ ದೇವರು ಮತ್ತು ಮನುಷ್ಯರ ಮಧ್ಯ ಸಂಬಂಧ ಬೆಸೆಯುವ ಉದ್ದೇಶಗಳಿಂದಲೇ ಹಿಂದೆ ದೇವಾಲಯದ ಹೊಸ್ತಿಲುಗಳಿಗೆ ಕುಳಿಗಳನ್ನು (ಸಣ್ಣ ಸಣ್ಣ ದುಂಡಾಕಾರದ ತಗ್ಗುಗಳು) ಮಾಡಲಾಗುತ್ತಿತ್ತು. ಇಂದಿನ ದೇವಾಲಯಗಳಿಗೆ ಇವು ಅಷ್ಟಾಗಿ ಕಂಡುಬರುವುದಿಲ್ಲವಾದರೂ ಪುರಾತನ ಕಾಲದ ದೇವಸ್ಥಾನದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ನೋಡಲು ಸಿಗುತ್ತವೆ.

ಮನುಷ್ಯನಿಗೆ ಕಷ್ಟಬರುವುದು ಸಹಜ. ಹೀಗೆ ಕಷ್ಟದ ಸಮಯದಲ್ಲಿ ಮೊದಲು ಸ್ಮರಣೆಗೆ ಬರುವವನು ದೇವರು. ಇಂತಹ ಸಂದರ್ಭದಲ್ಲಿ ಕುಳಿಗಳು ಸಂಪರ್ಕ ಸಾಧನಗಳಂತೆ ಕಾರ್ಯ ನಿರ್ವಹಿಸುತ್ತವೆ. ತಮ್ಮ ಕಷ್ಟಗಳನ್ನು ಪಾರು ಮಾಡು ಎಂದು ದೇವರಿಗೆ ಬೇಡಿಕೊಂಡು ಆ ಕುಳಿಗಳಲ್ಲಿ ಉಪ್ಪು ಹಾಕಿ "ಉಪ್ಪು

ಹಾಕತೀಸಿ ಉಪ್ಪದರ ಕಳಿಲಿ'' ಎಂದು ಬೇಡಿಕೊಳ್ಳುತ್ತಾನೆ. ಈ ಉಪ್ಪನ್ನೇ ಯಾಕೆ ಹಾಕಬೇಕೆಂದರೆ ಸಾಮಾನ್ಯವಾಗಿ ಉಪ್ಪು ಋಣದ ಸಂಕೇತ ಅದಕ್ಕೆ ಜನಪದರು ಯಾರ ಉಪ್ಪು ತಿನ್ನುವುದು ಶ್ರೇಯಸ್ಸಲ್ಲ ಎಂದು ನಂಬಿದವರು. ಆದ್ದರಿಂದ ದೇವರಿಗೆ ಉಪ್ಪು ಹಾಕಿದರೆ ಉಪ್ಪಿನ ಋಣ ತೀರಿಸುವುದಕ್ಕಾದರೂ ಆತನ ಕಷ್ಟಗಳನ್ನು ಪರಿಹಾರ ಮಾಡುತ್ತಾನೆ. ಹೇಗೆ ನೂಲು ಎಳೆಯನ್ನು ದೇವರಿಗೆ ಕಟ್ಟಿ(ಅಶ್ವತ ಗಿಡಕ್ಕೆ, ನಾಗಪ್ಪನಿಗೆ ನೂಲಿನಿಂದ ಕಟ್ಟುತ್ತಾರೆ) ತಮ್ಮ ಕಾರ್ಯಸಿದ್ಧಿಗಾಗಿ ಬೇಡಿಕೊಂಡು ತಮ್ಮ ಕಾರ್ಯನೆರವೇರಿದ ಮೇಲೆ ಅದನ್ನು(ನೂಲು) ಬಿಚ್ಚುವುದುಂಟು. ಹಾಗೆ ಒಂದು ರೀತಿಯ ಭಾವನಾತ್ಮಕ ಸಂಬಂಧದ ಮೂಲಕ ತಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳುವ ಪ್ರಯತ್ನ. ಕೇವಲ ಕಷ್ಟದ ದಿನಗಳಷ್ಟೇ ಅಲ್ಲದೆ ಸುಖದ ಸುಮಧುರ ಕ್ಷಣಗಳನ್ನು ದೇವರೊಂದಿಗೆ ಹಂಚಿಕೊಳ್ಳಲು ಈ ಕುಳಿಗಳು ಸಹಾಯ ಮಾಡುತ್ತವೆ. ರೈತನಿಗೆ ಮಳೆ ಕೈಕೊಡದೆ ಬೆಳೆ ಸಮೃದ್ಧಿಯಿಂದ ಬಂದು ಅವುಗಳನ್ನು ನೇರವಾಗಿ ಮನೆಗೆ ತಂದು ತಿನ್ನದೆ ಆ ಕಾಳುಗಳನ್ನು ತೆಗೆದುಕೊಂಡು ಹೋಗಿ ಆ ಕುಳಿಗಳಲ್ಲಿ ಹಾಕಿ ಮುಂದಿನ ಸಮೃದ್ಧಿಯನ್ನು ಕೋರಿ ಭಕ್ತಿ ಸಲ್ಲಿಸಿ ಮನೆಗೆ ಬರುತ್ತಾನೆ.

ಕೃಷಿ ಮನೆತನ ಎಂದ ಮೇಲೆ ದನಕರುಗಳು, ಹೈನುಗಾರಿಕೆ ಇರುವುದು ಸಹಜ. ಇಂಥವರಲ್ಲಿ ಆಕಳು ಅಥವಾ ಎಮ್ಮೆ ಕರು ಹಾಕಿದಾಗ, ಮೊದಲ ಹಾಲು(ಗಿಣ್ಣದ ಹಾಲು) ತಾನು ತಿನ್ನದೆ ಅದನ್ನು ದೇವಸ್ಥಾನದ ಹೊಸ್ತಿಲ ಕುಳಿಗಳ ಒಳಗೆ ಹಾಕಿ ಮೊದಲ ಹೈನು ಅರ್ಪಿಸಿ ಪೂಜಿಸಿ ಬರುತ್ತಾನೆ. ನಂತರದ ಹಾಲನ್ನು ತಾನು ಬಳಸುತ್ತಾನೆ. ಹೀಗೆ ಹೊಸ್ತಿಲ ಕುಳಿಗಳು ಜನಪದರ ಸುಖ-ದುಃಖದ ಕ್ಷಣಗಳನ್ನು ದೈವದೊಂದಿಗೆ ಹಂಚಿಕೊಳ್ಳುವ ಸಂಪರ್ಕ ಸಾಧನಗಳಾಗಿವೆ.

ಒಟ್ಟು ಮನೆಯ ತಾಂತ್ರಿಕ ಪ್ರಮೇಯಗಳನ್ನು ಗಮನಿಸಿದಾಗ ಹಲವು ರೀತಿಯ ವೈಶಿಷ್ಟ್ಯಗಳನ್ನು ಹೊಂದಿರುವುದು ಕಾಣುತ್ತದೆ. ಹೊಸ್ತಿಲಿಗೆ ಬಳಸುವ ಮರ, ಲೋಹ, ಕಲ್ಲುಗಳಿಂದ ಹಿಡಿದು ಎಲ್ಲವೂ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ವಾಸ್ತುಶಾಸ್ತ್ರೀಯ ಮತ್ತು ಸಾಮಾನ್ಯ ನೆಲೆಗಳಲ್ಲಿ ಬಳಕೆಯಾಗುವುದು ಗ್ರಹಿಕೆಗೆ ಬರುತ್ತದೆ. ಹೊಸ್ತಿಲ ಅಳತೆ, ಅದನ್ನು ಕೂಡಿಸುವುದು, ಅದರ ಮೇಲಿನ ಚಿತ್ತಾರಗಳು, ಕುಳಿಗಳು, ನಾಲು, ಚಿಲಕಗಳು ಹೊಸ್ತಿಲ ಬಹುಬಳಕೆ ಮತ್ತು ಅದರ ಕ್ರಿಯಾಶೀಲ ನೆಲೆಗಳನ್ನು ಕಟ್ಟಿಕೊಡುತ್ತವೆ. ಬಹುಬಾಳಿಕೆ, ಸಂರಕ್ಷಣೆ ಈ ಎಲ್ಲ ಕ್ರೀಯೆಯ ಹಿಂದಿರುವುದು ಕಾಣುತ್ತದೆ.

ಅಡಿಟಿಪ್ಪಣಿಗಳು

೧. ಗೋವಿಂದರಾಜು ಟಿ., ಜಾನಪದೀಯ ಬಹುಮುಖಿ ಜಾನಪದ, ೨೦೦೦;೨೭೯

೨. ಗೌರುತಿರುಪತಿರೆಡ್ಡಿ, ವಾಸ್ತುಶಾಸ್ತ್ರದ ವಾಸ್ತವಗಳು, ೧೯೯೪;೯೧

೩. ಅದೇ, ಪು.೯೨

೪. ಅದೇ, ಪು.೯೨

೫. ಅದೇ, ಪು.೯೨

೬. ಅದೇ, ಪು.೯೨

೭. ಅದೇ, ಪು.೯೩

೮. ಅದೇ, ಪು.೯೩

೯. ಅದೇ, ಪು.೯೬

೧೦. ಅದೇ, ಪು.೧೦೧

೧೧. ಅದೇ, ಪು.೧೦೨

೧೨. ಅದೇ, ಪು.೧೦೩

೧೩. ಅದೇ, ಪು.೧೦೬

೧೪. ಅದೇ, ಪು.೧೦೭

೧೫. ಅದೇ, ೧೧೦

೧೬. ಅದೇ, ಪು.೧೧೧

ಅಧ್ಯಾಯ ೮

ಸಮಾರೋಪ

೮

ಸಮಾರೋಪ

೮.೧. ಅಧ್ಯಯನದ ಸಾಂಸ್ಕೃತಿಕ ವಿಶೇಷತೆಗಳು

ನನ್ನ ಅಧ್ಯಯನದುದ್ದಕ್ಕೂ ಹೊಸ್ತಿಲನ್ನು ವಸ್ತುವಾಗಿ, ದೈವವಾಗಿ, ಸ್ತ್ರೀಗೆ ಸಂವಾದಿಯಾಗಿ, ಸಾಮಾಜಿಕ ಸಂಬಂಧಗಳ ಸ್ವರೂಪದಲ್ಲಿ, ಪುರುಷ, ಸ್ತ್ರೀ ಮತ್ತು ಮಕ್ಕಳು ಕೇಂದ್ರಿತವಾಗಿ, ಕುಟುಂಬ ಕೇಂದ್ರಿತವಾಗಿ, ಸಮುದಾಯ ಕೇಂದ್ರಿತವಾಗಿ, ರಕ್ಷಣಾತ್ಮಕ ಪರಿಕರವಾಗಿ ಸೀಮೆ-ಸರಹದ್ದಾಗಿ ಹೀಗೆ ವಿವಿಧ ಆಯಾಮಗಳಲ್ಲಿ ಚರ್ಚಿಸುತ್ತಾ ಬರಲಾಗಿದೆ. ಈ ಚರ್ಚೆಯಲ್ಲಿ ಚರಿತ್ರೆ ಪುರಾಣದಿಂದ ಹಿಡಿದು ಸಾಹಿತ್ಯ ಸಂಸ್ಕೃತಿ ಮತ್ತು ಆಧುನಿಕ ಸಂದರ್ಭ-ಹೀಗೆ ಹಲವು ನೆಲೆಗಳಲ್ಲಿ ಹೊಸ್ತಿಲು ನಿರ್ವಚನಗೊಂಡ ಬಹುಮುಖಿ ಬಗೆಗಳನ್ನು ವಿವೇಚಿಸಲಾಗಿದೆ.

ಒಟ್ಟು ಸಂಸ್ಕೃತಿಯ ಸಂದರ್ಭದೊಳಗೆ ಹೊಸ್ತಿಲು ಒಂದು ಜೀವಂತ ಪ್ರಕ್ರಿಯೆಯಾಗಿ ರೂಪುಗೊಂಡಿದ್ದು ಸ್ಪಷ್ಟವಾಗಿ ಕಾಣುತ್ತದೆ. ಹೊಸ್ತಿಲು ಬರೀ ಕಟ್ಟಿಗೆಯ ಅಥವಾ ಕಲ್ಲಿನ ಒಂದು ಘನಾಕೃತಿಯಾಗಿ ಕಾಣದೆ ಒಂದು ಸಾಂಸ್ಕೃತಿಕ ಸಂವೇದನೆಯನ್ನಾಗಿ ಈ ಅಧ್ಯಯನ ಪರಿಗಣಿಸಿದೆ. ಏಕೆಂದರೆ ಹೊಸ್ತಿಲು ಕೇವಲ

ಹೆಣ್ಣಿಗೆ ಅಥವಾ ಮನೆಗೆ ಅಥವಾ ಒಂದು ಊರಿಗೆ ಸೀಮಿತವಾಗಿರದೆ ಇದನ್ನು ಮೀರಿದ ಒಂದು ಜೀವಂತ ಕ್ರಿಯೆಯಾಗಿ ನಿರ್ವಚನಗೊಂಡಿರುವುದು ಎದ್ದು ಕಾಣುವಂತ ಸಂಗತಿ.

ಬೆಳಿಗ್ಗೆ ಎದ್ದೊಡನೆಯೇ ಸಾಂಪ್ರದಾಯಿಕ ಸಮುದಾಯಗಳಲ್ಲಿ ಮೊದಲು ಸ್ವಚ್ಛಗೊಳ್ಳುವುದು ಮತ್ತು ಪೂಜೆಗೊಳ್ಳುವುದು ಹೊಸ್ತಿಲೇ ಎಂಬುದು ಗಮನಾರ್ಹ. ಹೀಗೆ ದಿನನಿತ್ಯ ಎದ್ದೇಳುತ್ತಲೇ ಹೊಸ್ತಿಲನ್ನು ಸ್ಪರ್ಶಿಸಿ, ಪೂಜಿಸಿ ಅಂದಗೊಳಿಸುವ ಹೆಣ್ಣಿನ ಬಾಳಿಗೆ ಆ ಹೊಸ್ತಿಲೇ ಒಂದು ಕಂಟಕವಾಗುವ ವಿಪರ್ಯಾಸವನ್ನೂ ಕಾಣುತ್ತೇವೆ. ಹಾಗೆಯೇ ರಕ್ಷಣಾತ್ಮಕ ಸಂಬಂಧಗಳನ್ನು ಕಾಣುತ್ತೇವೆ.

ಆರಂಭದಲ್ಲಿ ಮನೆಯ ರಕ್ಷಣೆಯ ಅವಶ್ಯಕತೆಯಾಗಿ ರೂಢಿಗೊಂಡ ಹೊಸ್ತಿಲಿನ ಪರಿಕಲ್ಪನೆ ನಾಗರಿಕತೆ ಬೆಳೆದಂತೆ ವೈವಿಧ್ಯಮಯವಾದ ರೂಪಗಳನ್ನು, ಆಚರಣೆಗಳನ್ನು, ವಿಧಿ-ನಿಷೇಧಗಳನ್ನು, ನಂಬಿಕೆಗಳನ್ನು ತನ್ನೊಂದಿಗೆ ಬೆಳೆಸಿಕೊಂಡೇ ಬಂದಿದೆ. ಹೀಗೆ ಮುಕ್ತವಾಗಿದ್ದ ಹೊಸ್ತಿಲು ಹಲವು ರೀತಿಯ ಸಂಕೀರ್ಣತೆಗಳನ್ನೂ ಗರ್ಭೀಕರಿಸಿಕೊಂಡು ಬಂದಿದೆ. ಇದರಲ್ಲಿ ಸ್ಥಳೀಯ ಆಚರಣಾತ್ಮಕ ಸಂಬಂಧಗಳಿಂದ ಹಿಡಿದು ವಿಶ್ವಾಸತ್ಮಕ ಎಂದೆನಿಸುವ ಆಚರಣಾತ್ಮಕ ಸಂಬಂಧಗಳನ್ನು ಕಾಣಬಹುದು. ಹೊಸ್ತಿಲು ಮಾನವನ ವೈಯಕ್ತಿಕ ಮತ್ತು ಸಾಮಾಜಿಕ ಸಂಬಂಧಗಳನ್ನು ನಿರ್ದೇಶಿಸುತ್ತಾ ಬಂದಿದೆ. ವೈಯಕ್ತಿಕ ಜೀವನದಲ್ಲಿ ಹೊಸ್ತಿಲು ಒಂದು ಮೀರುವ(ದಾಟುವ), ಮುರಿಯುವ, ಮರುರಚಿಸಿಕೊಳ್ಳುವ ಸಾಧನವಾಗಿ ಪ್ರಚಲಿತಗೊಂಡಿದ್ದು ಕಂಡುಬರುತ್ತದೆ. ಒಮ್ಮೆ ದಾಟಿದ ಹೊಸ್ತಿಲನ್ನು ಮತ್ತೆ ದಾಟಿ ಒಳಗೆ ಬರಬೇಕಾದ ಕ್ರಿಯೆ ಅಷ್ಟು ಸುಲಭವಾದುದ್ದಲ್ಲ. ಹೊಸ್ತಿಲು ದಾಟಿದ ವ್ಯಕ್ತಿಯನ್ನು ಸಮಾಜಬಾಹಿರನನ್ನಾಗಿ, ಕುಟುಂಬಬಾಹಿರನನ್ನಾಗಿ ನೈತಿಕ ಅಧಃಪತನಕ್ಕೊಳಗಾದವನೆಂಬ ಹಿನ್ನೆಲೆಯಲ್ಲಿ ಒಟ್ಟು ಸಾಮಾಜಿಕ ಸಂಬಂಧಗಳು ಗ್ರಹಿಸಲು ಪ್ರಯತ್ನಿಸುತ್ತದೆ. ಇದು ಸಾಮಾಜಿಕ ಸನ್ನಿವೇಶವಾದರೆ ಎಷ್ಟೋ ಸಾರಿ ಹೀಗೆ ದಾಟಿದ ವ್ಯಕ್ತಿ ಸಮಾಜ ಗ್ರಹಿಸುವ ಸಂಬಂಧಗಳಿಗೆ ತದ್ವಿರುದ್ಧವಾಗಿ ತನ್ನ ಒಟ್ಟು ಬದುಕನ್ನು ಗುಣಾತ್ಮಕವಾಗಿ, ರಕ್ಷಣಾತ್ಮಕವಾಗಿ ಹೇಗೆ ರೂಪಿಸಿಕೊಳ್ಳುತ್ತಾನೆ ಎಂಬುದು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಸಂಸ್ಕೃತಿಯಲ್ಲಿ ಹೊಸ್ತಿಲು ಹೆಚ್ಚು ಸ್ತ್ರೀವಾಚಿಯಾಗಿ ನಿರ್ವಚನಗೊಂಡಿರುವುದು ಸ್ಪಷ್ಟವಾಗಿ ಕಾಣುತ್ತದೆ. ಇದು ಪ್ರಧಾನ ಮತ್ತು ಅಧೀನವೆಂದೆನಿಸುವ ಎಲ್ಲಾ ಸಾಮಾಜಿಕ ಸಂದರ್ಭದಲ್ಲಿ ಕಾಣುತ್ತೇವೆ. ವಿಶೇಷವಾಗಿ ಕೃಷಿ ಬದುಕಿನಲ್ಲಿ ಹೊಸ್ತಿಲನ್ನು ಹೆಣ್ಣಾಗಿ ಪರಿಗಣಿಸುವುದು ಎದ್ದು ಕಾಣುವ ಸಂಗತಿಯಾಗಿದೆ. ಹೀಗಾಗಿ ಪ್ರತಿನಿತ್ಯದ ಎಲ್ಲ ಜೀವನಾವರ್ತನ ಸಂದರ್ಭದಲ್ಲಿ ಹೊಸ್ತಿಲು ಸಾಮಾನ್ಯವಾಗಿ ಪೂಜೆಗೊಳ್ಳುವುದು ಕಂಡುಬರುತ್ತದೆ. ಹಾಗೆಯೇ ಹಲವು ರೀತಿಯ ನಂಬಿಕೆ ನಿಷೇಧಗಳನ್ನು ಇಂಥಲ್ಲಿ ಕಾಣುತ್ತೇವೆ. ಈ ನಂಬಿಕೆ ಮತ್ತು ನಿಷೇಧಗಳಲ್ಲಿ ಬರೀ ಭಾವನಾತ್ಮಕವಾದ ವಿಚಾರಗಳು ಇರದೇ ಜೀವನಸಂಬಂಧಿಯಾದ

ತಾರ್ಕಿಕ ವಿಚಾರಗಳನ್ನು ಕಾಣಬಹುದಾಗಿದೆ. ನವವಧುವನ್ನು ಮನೆ ತುಂಬಿಸಿಕೊಳ್ಳುವಾಗ ಹೊಸ್ತಿಲ ಮೇಲೆ ಅವಳ ಬಲ ಪಾದವನ್ನು ಇರಿಸಿ ಉಂಗುಷ್ಟ ಮತ್ತು ಪಕ್ಕದ ತೋರು ಬೆರಳಿನ ಮಧ್ಯ ಮಳೆ ಹೊಡೆಯುವ ರೀತಿಯು ಸಂಬಂಧಗಳ ಅಭಿವೃದ್ಧಿ ಮತ್ತು ಭದ್ರತೆಗೆ ಸಾಕ್ಷಿಯಾಗಿದೆ. ಹಾಗೆ ತುಂಬಿದ ರಾಶಿಯನ್ನು ಮನೆಗೆ ತರಬೇಕಾದರೆ ರಾಶಿಯ ಮೊದಲ ಚೀಲವನ್ನು ಹೊಸ್ತಿಲಿಗೆ ತಾಗಿಸಿ ಮನೆಯೊಳಗೆ ಒಯ್ಯುವ ರೀತಿಯು ಗಮನಾರ್ಹವಾದದು. ಮಕ್ಕಳು ಮರಿಗೆ ರೋಗ-ರುಜಿನ ಬಂದಾಗ ಪರಿಹಾರ ಸ್ಥಾನವಾಗಿ ಉಪಯೋಗವಾಗುವ ಹೊಸ್ತಿಲು ಮತ್ತೊಂದು ಸಂದರ್ಭದಲ್ಲಿ ನಿಷೇಧಾತ್ಮಕವಾಗಿಯೂ ಬಳಕೆಯಾಗುತ್ತದೆ. ಒಟ್ಟು ಮನುಷ್ಯನ ಹುಟ್ಟಿನಿಂದ ಸಾವಿನವರೆಗೆ ಹೊಸ್ತಿಲು ವಿಭಿನ್ನ ಸಂದರ್ಭಗಳಲ್ಲಿ ಬಳಕೆಯಾಗುತ್ತದೆ ಎಂಬುದನ್ನು ಒಟ್ಟು ಅಧ್ಯಯನದಿಂದ ಗ್ರಹಿಸಲಾಗಿದೆ.

ಹೊಸ್ತಿಲು ಎನ್ನುವುದು ಕೇವಲ ಸ್ತ್ರೀ ಸಂದರ್ಭದಲ್ಲಿ ಮಾತ್ರವಲ್ಲದೆ ಬೇರೆ ಬೇರೆ ಅರ್ಥದಲ್ಲಿ ಅದರ ಬಳಕೆಯಾಗಿರುವುದು ಅಧ್ಯಯನದಿಂದ ಕಂಡುಬರುವ ಸಂಗತಿಯಾಗಿದೆ. 'ಹೊಸ್ತಿಲಲ್ಲಿ' ಎನ್ನುವುದು ಪರಿವರ್ತನೆ, ಚಲನೆ, ಕ್ರಿಯೆಯ ಪ್ರತೀಕವಾಗಿಯೂ ಬಳಕೆಗೊಂಡುದು ಕಾಣುತ್ತದೆ. ಶಿವರಾಮ ಕಾರಂತರ ನಾಗರಿಕತೆಯ ಹೊಸ್ತಿಲಲ್ಲಿ ಎನ್ನುವ ಪುಸ್ತಕದ ಶೀರ್ಷಿಕೆಯು ಇಲ್ಲಿ ನೆನಪಿಗೆ ಬರುತ್ತದೆ. ಇದರಲ್ಲಿ ಆದಿಮಾನವನ ನಾಗರಿಕತೆಯೆಡೆಗೆ ಪರಿವರ್ತನೆ ಹೊಂದುವ ಕಾಲದ ಸ್ಥಿತ್ಯಂತರವನ್ನು ಹೇಳಲಾಗಿದೆ. ಹೀಗೆ ಹೊಸ್ತಿಲು ಪ್ರಕೃತಿಯ ವಿಕೋಪಗಳಾದ ಮಳೆ, ಗಾಳಿ, ಧೂಳು ಮುಂತಾದವುಗಳಿಂದ ಮತ್ತು ಕ್ರಿಮಿ ಕೀಟಗಳಿಂದ ಹೀಗೆ ಹೊರಗಿನ ಪ್ರತಿಯೊಂದು ಭಯದ ನಿವಾರಣೆಯಾಗಿ, ದೇವರಾಗಿ, ಮನೆತನದ ಮರ್ಯಾದೆಯಾಗಿ, ಸಾಮಾಜಿಕ ನೆಲೆಯಲ್ಲಿ ಪ್ರತ್ಯೇಕತೆಯನ್ನು ಕಾಯ್ದಿಡುವುದಾಗಿ ಕಂಡುಬರುತ್ತದೆ.

ಒಟ್ಟು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೊಸ್ತಿಲು ನಾನಾ ಕಾರಣಗಳಿಗಾಗಿ ಬಳಕೆಯಾಗಿದ್ದು ಕಾಣುತ್ತದೆ. ಅದು ದೇವಾಲಯದ ಹೊಸ್ತಿಲಾಗಿ, ಅರಮನೆಯ ಅಲಂಕರಣಕ್ಕಾಗಿ, ಯುದ್ಧದ ಭೀಕರ ದೃಶ್ಯದಲ್ಲಿ ಕರುಳಿನ ತೋರಣಗಳನ್ನು ಕಟ್ಟುವ ಭೀಬತ್ಸ ರೂಪದಲ್ಲಿ, ಶೃಂಗಾರ ರಸದಲ್ಲಿ, ತವರಿನ ನೆನಪಾಗಿ ಹೀಗೆ ಲೇಖಕರು, ಕವಿಗಳು ತಮ್ಮ ಕಾವ್ಯದಲ್ಲಿ ಹೊಸ್ತಿಲನ್ನು ಅವ್ಯಾಹತವಾಗಿ ದುಡಿಸಿಕೊಂಡಿದ್ದುದು ಕಂಡುಬರುತ್ತದೆ.

ವಿವಿಧ ಸಂಸ್ಕೃತಿಯಲ್ಲಿ ಹೊಸ್ತಿಲು ಕಂಡ ಬಗೆ, ಆಚರಿಸಿಕೊಂಡ ನೆಲೆ ಮತ್ತು ಹೊಸ್ತಿಲು ಪ್ರತಿನಿಧಿಸುವ ಸಂಕೇತಗಳು ಒಟ್ಟು ಜನ ಬದುಕಿನಲ್ಲಿ ನೋಡಲಾಗಿ ಪ್ರಧಾನ ಸಂಸ್ಕೃತಿಯಲ್ಲಿ ಪ್ರತಿಷ್ಠೆಯ ಸ್ತರದಲ್ಲಿ ಮೆರೆದರೆ ಉಪಸಂಸ್ಕೃತಿಯಲ್ಲಿ ರಕ್ಷಣೆಯ ಪ್ರಮುಖ ಘಟಕವಾಗಿದೆ. ಉಪಸಂಸ್ಕೃತಿಯಲ್ಲಿನ ಚಿಕ್ಕ ಬಾಗಿಲುಗಳು ಪ್ರತ್ಯೇಕತೆಯನ್ನು, ಕತ್ತಲೆಯನ್ನು ಪ್ರತಿನಿಧಿಸುವುದರ ಜೊತೆಗೆ ಸುರಕ್ಷತೆಯನ್ನು ಒದಗಿಸುವಂತಿದೆ. ಕಾರಣ ಅವರ ಪ್ರತಿಯೊಂದು ಬೇಡಿಕೆಯನ್ನು ಪೂರೈಸುವುದು ಚಿಕ್ಕ ಗುಡಿಸಲೆ

ಆಗಿರುವುದರಿಂದ. ಪ್ರಧಾನ ಸಂಸ್ಕೃತಿಯಲ್ಲಿ ಪ್ರತಿಯೊಂದು ಬೇಡಿಕೆಯ ಅಗತ್ಯತೆಗೆ ಪ್ರತ್ಯೇಕ ಸ್ಥಳ ಇರುವುದರಿಂದ ವಿಶಾಲ ಬಾಗಿಲು ಮತ್ತು ದೊಡ್ಡ ಹೊಸ್ತಿಲು ಕಂಡುಬರುತ್ತವೆ.

ಸಂಸ್ಕೃತಿಯಲ್ಲಿ ಸ್ತ್ರೀಯ ವಿವಿಧ ಬಗೆಯ ಸ್ಥಾನಮಾನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿ ಪ್ರಧಾನ ಸಂಸ್ಕೃತಿಯ ಜಡತೆ, ಹೊಸ್ತಿಲಿನ ಸಂಕೋಲೆ ಉಪಸಂಸ್ಕೃತಿಯಲ್ಲಿನ ಸ್ತ್ರೀಗೆ ಅಷ್ಟಾಗಿ ಕಂಡುಬರುವುದಿಲ್ಲ. ಆದರೂ ಕೆಲವೊಂದು ನಿಯಮಗಳಿಗೆ ಹೊಸ್ತಿಲು ಆಕೆಯನ್ನು ಕೂಡ ಬದ್ಧಳನ್ನಾಗಿ ಸಿರುವುದು ಇಲ್ಲಿ ಮನಗಾಣಬಹುದು.

ಲಿಂಗಸಂಬಂಧಿ ಪ್ರಮೇಯವನ್ನಾಗಿ ಹೊಸ್ತಿಲನ್ನು ನೋಡಲಾಗಿ ಸ್ತ್ರೀಗಿರುವ ಕಟ್ಟುಪಾಡು, ದಾಟು ಎನ್ನುವ ಅಪವಾದ ಪುರುಷನ ಹಂತಕ್ಕೆ ಸೀಮಿತವಾಗಿಲ್ಲ. ಕಾರಣ ಸ್ತ್ರೀಗಿರುವ ಜೈವಿಕ ಅಂಶವೇ ಅಥವಾ ತಾಯ್ತನದ ಹೊಣೆಗಾರಿಕೆಯು ಕಾರಣವಾಗಿರಬಹುದು. ಹಾಗೆಂದು ಆಕೆಗೆ ವ್ಯಕ್ತಿತ್ವವಾಗಲೀ, ಅಸ್ತಿತ್ವವಾಗಲಿ ಇಲ್ಲವೆಂದಲ್ಲ. ವ್ಯಕ್ತಿತ್ವ ಮತ್ತು ಅಸ್ತಿತ್ವ ಅದು ಯಾರಿಂದಲೂ ಕೇಳಿ ಪಡೆಯುವಂತದ್ದಲ್ಲ. ಕೊಟ್ಟರೆ ತೆಗೆದುಕೊಳ್ಳುವ ವಸ್ತುವು ಅಲ್ಲ. ಅದು ಹುಟ್ಟಿನಿಂದಲೆ ಪ್ರತಿಯೊಂದು ಜೀವಿಯ ಜೊತೆಗೆನೇ ಹುಟ್ಟುವಂತದ್ದು. ಸ್ತ್ರೀ-ಪುರುಷರೆನ್ನುವ ಮೇಲು-ಕೀಳಿನ ಭಾವನೆ ಬಿಟ್ಟು ಇಬ್ಬರ ಮಿಲನ ಮತ್ತು ಸಹಬಾಳ್ವೆಯಿಂದಲೆ ಜೀವನ ಸುಗಮವೆನ್ನುವ ಮಾತು ತಿಳಿದುಕೊಳ್ಳಬೇಕಾದ ಸತ್ಯವಾಗಿದೆ. ಗಂಡು ಹೆಣ್ಣು ಎನ್ನುವ ಲಿಂಗಸಂಬಂಧಗಳು ಹುಟ್ಟಿದ್ದಲ್ಲ ಅವು ಕಟ್ಟಿದ್ದು ಎಂದು ಪ್ರತಿಪಾದಿಸುವ ಆಯ್ದಕ್ಕಿ ಲಕ್ಕಮ್ಮನಂತವರ ಮಾತುಗಳು ಅರಿವು ಮತ್ತು ಭಾವಕ್ಕೆ ಭೇದವೆನಿಸಬಾರದು. ವ್ಯಕ್ತಿತ್ವ ಮತ್ತು ಅಸ್ತಿತ್ವ ಇಂಥ ಅಭೇದ ಸ್ಥಿತಿಯವು.

ಹೊಸ್ತಿಲಿನೊಂದಿಗೆ ಸಾಂಸ್ಕೃತಿಕವಾಗಿ ಬೆಳೆದು ಬಂದ ಸಂಪ್ರದಾಯ, ನಂಬಿಕೆ ಅದು ಕುಟುಂಬ, ದೈವ, ಕೃಷಿ ಹಾಗು ಸಮುದಾಯ ಹೀಗೆ ಮಾನವ ಬದುಕಿನಲ್ಲಿ ಅವರ ಆಚರಣೆಯಲ್ಲಿ ಪ್ರತಿ ಕಾರ್ಯದ ಸಂಪರ್ಕ ಬೆಸೆಯುವ ಸಾಧನವಾಗಿ ಕಾಣಿಸಿಕೊಳ್ಳುತ್ತದೆ. ಅಲ್ಲದೆ ಸುಖ-ದುಃಖದ ಸಂಕೇತವಾಗಿ, ಪ್ರತಿಷ್ಠೆ ಅವಮಾನಗಳ ಸಂಕೇತವಾಗಿ, ಋಣಾನುಬಂಧ ಕಡೆದುಕೊಳ್ಳುವಲ್ಲಿ, ಹಕ್ಕು ಸ್ಥಾಪಿಸುವಲ್ಲಿ ತನ್ನ ನಿರಂತರತೆಯನ್ನು ಕಾಪಾಡಿಕೊಂಡು ಬಂದಿರುವುದು ಗಮನಾರ್ಹ ಸಂಗತಿಯಾಗಿದೆ.

ಹೊಸ್ತಿಲಿಗೆ ಮಾಡುವ ಪೂಜೆ ಪುನಸ್ಕಾರ, ರಂಗೋಲಿ ಅಲಂಕಾರ, ತಳಿರು ತೋರಣಗಳ ವಿವಿಧತೆಯಲ್ಲಿ ದಿನನಿತ್ಯದ ಮತ್ತು ವಿಶೇಷ ದಿನಗಳಲ್ಲಿ ವ್ಯತ್ಯಾಸ ಕಂಡುಬರುವುದರ ಜೊತೆಗೆ ಕೆಲವೊಂದು ಪೂಜೆ ಅಲಂಕಾರ ಇಂತಹದ್ದಕ್ಕೆ ಎಂದು ಸಾರಿ ಹೇಳುವಂತಿದ್ದದು ಕುತೂಹಲ ಹುಟ್ಟಿಸುವ ಸಂಗತಿಯಾಗಿದೆ.

ಕಟ್ಟಿಗೆ ಮಾತ್ರವಲ್ಲದೆ ವೈವಿಧ್ಯಮಯ ಲೋಹಗಳಿಂದಲೂ ವಿವಿಧ ಕೆತ್ತನೆಯಿಂದಲೂ ಕಣ್ಮನ ಸೆಳೆಯುವ ಚಿತ್ತಾರ, ಹೂಬಳ್ಳಿ, ಕುಳಿಗಳಿಂದ ವಾಸ್ತುಶಾಸ್ತ್ರೀಯ ನೆಲೆಯಿಂದ ಕೂಡ ಹೊಸ್ತಿಲಿನ ಅಧ್ಯಯನವನ್ನು ಮಾಡಬಹುದಾಗಿದೆ.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ನಮ್ಮಲ್ಲಿ ಸಂಪ್ರದಾಯವೆನ್ನುವುದು ಬಹಳ ವಿಶಿಷ್ಟವಾದದ್ದು ಎಂದು ಕಂಡುಬರುತ್ತದೆ. ಅದು ತಲೆಮಾರಿನ ಚಾರಿತ್ರಿಕ ಪ್ರಜ್ಞೆಯನ್ನು ಗರ್ಭೀಕರಿಸಿಕೊಂಡಂಥದ್ದು. ಎಲ್ಲಿ ಸಂಕೇತ ಸೂಚನೆಗಳಿಗೆ ಒಂದು ನಿರ್ದಿಷ್ಟವಾದ ಬೆಲೆಯುಂಟೋ ಅಲ್ಲಿಯೇ ಸಂಪ್ರದಾಯದ ಜನನವಾಗುತ್ತದೆ. ಆದ್ದರಿಂದ ಸಂಪ್ರದಾಯ ಎನ್ನುವುದು ಆರಾಧಕ ಸಮುದಾಯವೊಂದು ಪರಂಪರಾನುಗತವಾಗಿ ಮನವೊಪ್ಪಿ ಗ್ರಹಿಸುವ ಸಂಕೇತಗಳ ಮೊತ್ತ ಎಂದು ಹೇಳಬಹುದು.

ಹೊಸ್ತಿಲಿನ ಸಂಪ್ರದಾಯವನ್ನು ಅದರ ಸ್ವರೂಪ ಸಾಮ್ಯ ಹಾಗೂ ಗುಣಸಾಮ್ಯದಿಂದ ಗ್ರಹಿಸಬಹುದಾಗಿದೆ. ಸಂಪ್ರದಾಯ ಬದುಕಿಗೆ ಪ್ರತಿಬಂಧಕವೆನಿಸಿದರೆ ಒಂದೊಂದು ಬಾರಿ ಬದುಕು ಸಂಪ್ರದಾಯವೆನಿಸಲೂಬಹುದು. ಹೀಗಾಗಿ ಇವೆರಡು ಒಂದೇ ನಾಣ್ಯದ ಎರಡು ಮುಖಗಳು. ಇಂಥ ಸಂಪ್ರದಾಯದಲ್ಲಿ ಆಡಂಬರಕ್ಕಿಂತ ಆಲೋಚನೆ, ಕಠಿಣತೆಗಿಂತ ಸರಳತೆ, ಜಡತೆಗಿಂತ ಅದರ ಗತಿಶೀಲ ಗುಣಕ್ಕೆ ಮಹತ್ವ ಕೊಡಬೇಕಾಗುತ್ತದೆ. ಸಂಪ್ರದಾಯವೆನ್ನುವುದು ತನ್ನ ಮಿತಿಯಲ್ಲಿಯೇ ಪ್ರಗತಿಮುಖವಾಗಿಯೂ ಇರಬೇಕಾಗುತ್ತದೆ. ಅದೊಂದು ಸಂಕೋಲೆಯಾಗಬಾರದು. ಅಂದರೆ ಒಂದು ಸಂಪ್ರದಾಯದಿಂದ ಇನ್ನೊಂದು ಸಂಪ್ರದಾಯ ಜೀವ ಪಡೆಯಬೇಕೇ ವಿನಃ ಅದು ತಾನೇ ಸ್ಥಿರವೆಂದು ಭಾವಿಸಬಾರದು.

ಹೊಸ್ತಿಲು ಭಾರತೀಯ ಜನಬದುಕಿನಲ್ಲಿ ಒಂದು ಪ್ರಧಾನ ಸಾಂಸ್ಕೃತಿಕ ಘಟಕ. ಮತ್ತು ಆರಾಧನೆಯ ಸಂಕೇತವಾಗಿರುವುದು, ನಿತ್ಯ ಬೆಳಗಿನ ಜಾವದಿ ಪೂಜೆಯ ಮೂಲಕ ದೈವವನ್ನು ಕಾಣುವ ಸರಳ ಆಚರಣೆ ಇದಾಗಿರುವುದು ವೇದ್ಯವಾಗುತ್ತದೆ. ಗ್ರಾಮದಿಂದ ಹಿಡಿದು ನಗರ ನಾಗರಿಕತೆಯವರೆಗೆ, ಪ್ರಧಾನ ಸಂಸ್ಕೃತಿ ಯಿಂದ ಹಿಡಿದು ಉಪಸಂಸ್ಕೃತಿಯವರೆಗೆ ಹೊಸ್ತಿಲಿನ ಮಹತ್ವ ಹಾಸುಹೊಕ್ಕಾಗಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಅನುಬಂಧಗಳು

೧. ಆಕರ ಗ್ರಂಥಗಳು

೨. ಮಾಹಿತಿದಾರರು

೧

ಆಕರ ಗ್ರಂಥಗಳು

ಅಂಗಡಿ ಎಸ್.ಎಸ್., ೧೯೯೯; ಬಡಿಗ ವೃತ್ತಿ ಪದಮಂಜರಿ, ವಿದ್ಯಾನಿಧಿ ಪ್ರಕಾಶನ, ಗದಗ

ಅಂಬಳಿಕೆ ಹಿರಿಯಣ್ಣ, ೧೯೯೩; ಕಚ್ಚೆಗೌಳಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಅಂಬಳಿಕೆ ಹಿರಿಯಣ್ಣ, ಜನಪದ ಲೋಚನ, ಪ್ರಜ್ವಲ ಪ್ರಕಾಶನ, ಮೈಸೂರು

ಅಂಬಳಿಕೆ ಹಿರಿಯಣ್ಣ, ೧೯೯೯; ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಇಂದಿರಾ ಆರ್., ೨೦೦೦; ಮಹಿಳೆ ಮತ್ತು ಕೌಟುಂಬಿಕ ಹಿಂಸೆ, ಶ್ರೀಮತಿ ಯಶೋಧಾ ರಾ.ಗೌ.ಟ್ರಸ್ಟ್, ಮೈಸೂರು

ಇಂದಿರಾ ಆರ್., ೨೦೦೨; ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಈಶ್ವರಪ್ಪ ಎಂ.ಜಿ., ಜಾನಪದ ಇಬ್ಬನಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಉಷಾ ಎಂ.(ಸಂ), ೨೦೦೪; ಮಹಿಳಾ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕರ್ಕಿ ಡಿ.ಎಸ್. ೨೦೦೦; ಡಿ.ಎಸ್.ಕರ್ಕಿಯವರ ಸಮಗ್ರ ಕಾವ್ಯ, ಹಚ್ಚೆವು ಕನ್ನಡದ ದೀಪ, ಸಾಹಿತ್ಯ ಪ್ರಕಾಶ, ಹುಬ್ಬಳ್ಳಿ

ಕರೀಗೌಡ ಬೀಚನಹಳ್ಳಿ(ಸಂ), ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯದ ವಿಶ್ವಕೋಶ ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಕೀರ್ತಿನಾಥ ಕುರ್ತುಕೋಟಿ, ೧೯೯೬; ರಾಜಸ್ಪರ್ಶ (ಲೇಖನಗಳ ಸಂಗ್ರಹ), ಮನೋಹರ ಗ್ರಂಥಮಾಲೆ, ಧಾರವಾಡ

ಕೃಷ್ಣಪ್ಪ ಜಿ., ೨೦೦೧; ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ : ಒಂದು ಅಧ್ಯಯನ, ಶ್ರೀರಂಗ ಪ್ರಕಾಶನ, ಮೈಸೂರು

ಕೃಷ್ಣಮೂರ್ತಿ ಹನೂರು, ೧೯೯೩; ಮ್ಯಾಸಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಕೃಷ್ಣಮೂರ್ತಿ ಹನೂರು(ಸಂ), ೧೯೯೮; ಜನಪದ ಮತ್ತು ಬುಡಕಟ್ಟು ಗೀತೆಗಳು, ಸಾಹಿತ್ಯ ಅಕಾಡೆಮಿ, ಬೆಂಗಳೂರು

ಕೇಶವಭಟ್ಟ ಟಿ., ೧೯೮೬; ಹವ್ಯಕರ ಶೋಬಾನೆಗಳು, ಚಿರಸಾಹಿತ್ಯ ಪ್ರಕಾಶನ, ಬೆಂಗಳೂರು

ಖಂಡೋಬಾ ಪಿ.ಕೆ., ೧೯೯೧; ಕರ್ನಾಟಕದ ಲಂಬಾಣಿಗಳು : ಒಂದು ಸಾಂಸ್ಕೃತಿಕ ಅಧ್ಯಯನ, ದಿ.ತೇಜಸಿಂಗ್ ರಾಠೋಡ ಮೆಮೋರಿಯಲ್ ಟ್ರಸ್ಟ್, ಗುಲಬರ್ಗಾ

ಗಾಯತ್ರಿ ನಾವಡ, ೧೯೯೯; ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ, ಸಿರಿ ಪ್ರಕಾಶನ, ಹೊಸಪೇಟೆ

ಗೋಪಾಲಕೃಷ್ಣ ಅಡಿಗ, ೧೯೯೭; ಅಡಿಗರ ಸಮಗ್ರ ಸಾಹಿತ್ಯ ೧, ಸಮಗ್ರಕಾವ್ಯ, ಆಯ್.ವಿ.ಎಚ್.ಪ್ರಕಾಶನ, ಬೆಂಗಳೂರು

ಗೋವಿಂದರಾಜು ಟಿ., ೧೯೯೩; ಗೊಂಬೆರಾಮರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಗೋವಿಂದರಾಜ ಟಿ., ೧೯೯೩; ಚನ್ನಾದೇವಿ ಅಗ್ರಹಾರ ಜನಪದೀಯ ಅಧ್ಯಯನ, ಪುಸ್ತಕ ಜೇನು ದೊಡ್ಡ ಬಳ್ಳಾಪುರ ತಾಲ್ಲೂಕು, ಕಾಡನೂರು

ಗೌರು ತಿರುಪತಿರೆಡ್ಡಿ, ೧೯೯೪; ವಾಸ್ತುಶಾಸ್ತ್ರದ ವಾಸ್ತವಗಳು, ಪ್ರಜಾಹಿತ ಪಬ್ಲಿಷರ್ಸ್, ಪ್ರೊದ್ದುಟೂರು

ಚಕ್ಕೆರೆ ಶಿವಶಂಕರ, ೧೯೯೩; ಗೊರವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಚಂದ್ರಪ್ಪ ಎನ್., ೨೦೦೨; **ಮುಂಡ ಸಂಸ್ಕೃತಿ**, ಮುಂಡ ಪ್ರಕಾಶನ, ಬೆಂಗಳೂರು

ಚಿದಾನಂದಮೂರ್ತಿ ಎಂ., ೧೯೯೮; **ಹೊಸತು ಹೊಸತು**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಚಂದ್ರಶೇಖರ ಕಂಬಾರ(ಸಂ), ೧೯೮೫; **ಕನ್ನಡ ಜಾನಪದ ವಿಶ್ವಕೋಶ**, ಸಂಪುಟ ೧ ಮತ್ತು ೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಚಂದ್ರಶೇಖರ ಕಂಬಾರ, ೨೦೦೪; **ದೇಶೀಯ ಚಿಂತನ**, ಅಂಕಿತ ಪ್ರಕಾಶನ, ಬೆಂಗಳೂರು

ಚಳ್ಳಕೆರೆ ಹನುಮಂತಪ್ಪ, **ರಾಜ್ಯವನುಳಿಸೀತು ರಾಗಿಯಕಲ್ಲು**, ಕಮಲ ಪ್ರಕಾಶನ, ಶಿವಮೊಗ್ಗ

ಜವರೇಗೌಡ ದೇ., **ಜನಪದ ವಾಹಿನಿ**, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು

ಜವರೇಗೌಡ ದೇ., **ಜಾನಪದ ಅಧ್ಯಯನ**, ಚೇತನ ಬುಕ್‌ಹೌಸ್, ಮೈಸೂರು

ಜವಳಿ ಬಿ.ಸಿ., ೧೯೮೩; **ಹರಿಹರ ಕವಿಯ ಸ್ತ್ರೀಪಾತ್ರ ದರ್ಶನ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜೋಶಿ ಶಂಬಾ, ೨೦೦೩; **ಮಕ್ಕಳ ಒಡಪುಗಳು**, ಮಾನವಧರ್ಮ ಪ್ರತಿಷ್ಠಾನ, ಧಾರವಾಡ

ದಾಸೇಗೌಡ ಜಿ.ವಿ., ೧೯೮೨; **ಕನ್ನಡದಲ್ಲಿ ಜನಪದ ಕಲ್ಪನೆ ಮತ್ತು ಇತರ ಲೇಖನಗಳು**, ತೇಜಸ್ವಿನಿ ಪ್ರಕಾಶನ, ತುಮಕೂರು

ದೇವನೂರು ಪಾಂಡುರಂಗ, ೧೯೯೩; **ಭೈರವ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಧಾರವಾಡಕರ್ ರಾ.ಯ, ೧೯೯೦; **ಕನ್ನಡ ಭಾಷಾಶಾಸ್ತ್ರ**, ಗೀತಾ ಬುಕ್‌ಹೌಸ್, ಮೈಸೂರು

ನಾಗರಾಜ ಡಿ.ಆರ್., ೧೯೮೭; **ಶಕ್ತಿ ಶಾರದೆಯ ಮೇಳ, ಆಧುನಿಕ ಕನ್ನಡ ಕಾವ್ಯದ ಅಧ್ಯಯನ**, ಅಕ್ಷರ ಪ್ರಕಾಶನ, ಸಾಗರ

ನಾರಾಯಣ ಟಿ.೧೯೯೩; **ಯಾನಾದಿಗರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ನಾಯಕ ಎನ್.ಆರ್., ೨೦೦೧; **ಉತ್ತರ ಕನ್ನಡ ಜಿಲ್ಲೆಯ ನಾಡವರ ಸಂಸ್ಕೃತಿ**, ಜನಪದ ಪ್ರಕಾಶನ, ಹೊನ್ನಾವರ

ನಾರಾಯಣಸ್ವಾಮಿ ಕೆ.ವೈ., ೨೦೦೦; **ನೀರದೀವಿಗೆ**, ಲೋಹಿಯಾ ಪ್ರಕಾಶನ, ಬಳ್ಳಾರಿ

ನೀಲಮ್ಮ ಕತ್ನಳ್ಳಿ, ೧೯೯೭; **ಮಹಿಳೆ : ಹಲವು ಮುಖಗಳು**, ಶ್ರೀ ರೇಣುಕಾ ಪ್ರಕಾಶನ, ಗುಲಬರ್ಗಾ

ಪಾಟೀಲ ಎಸ್.ಸಿ., ೧೯೯೩; **ಕರ್ನಾಟಕದ ಜನಪದ ಚಿತ್ರಕಲೆ**, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ, ಗದಗ

ಪಾಟೀಲ ಎಸ್.ಸಿ., ೧೯೯೫; ಜನಪದ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

ಬಸವಾರಾಧ್ಯ ಎನ್., ೧೯೭೬; ಹಳಗನ್ನಡ ನಿಘಂಟು, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು

ಬಸವಾರಾಧ್ಯ ಎನ್.(ಸಂ), ೧೯೯೦; ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಸಂ.೧, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

ಬಸವಾರಾಧ್ಯ ಎನ್.(ಸಂ), ೧೯೯೫; ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಸಂ.೮, ಕನ್ನಡ ಸಾಹಿತ್ಯಪರಿಷತ್, ಬೆಂಗಳೂರು

ಬಸವರಾಜ ಎಲ್., ೧೯೯೧; ನಿಜಗುಣ ಶಿವಯೋಗಿಯ ತತ್ವದರ್ಶನ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು

ಬಾಳಣ್ಣ ಸೀಗಿಹಳ್ಳಿ(ಸಂ), ೧೯೮೯; ಬೆಳಗಾವ ಜಿಲ್ಲೆಯ ವೀರಶೈವ ದೇಶಗತಿಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ

ಬಿರಾದರ ಎಂ.ಜಿ., ಜನಪದ ಜೀವಾಳ, ಪುಸ್ತಕ ಅಕಾಡೆಮಿ, ಕಲಬುರ್ಗಿ

ಬಿರಾದಾರ ಬಿ.ಬಿ., ಜಾನಪದ ನಿಧಿ ಜಾನಪದ ಲೇಖನಗಳು, ಜ್ಯೋತಿ ಪ್ರಕಾಶನ, ಧಾರವಾಡ

ಬೇಂದ್ರೆ ದ.ರಾ., ವಾಮನಬೇಂದ್ರೆ(ಸಂ), ೧೯೭೪; ಸಾಹಿತ್ಯದ ವಿರಾಟ್ ಸ್ವರೂಪ, ಸಮಾಜ ಪುಸ್ತಕಾಲಯ, ಧಾರವಾಡ

ಬೋರಲಿಂಗಯ್ಯ ಹಿ.ಚಿ.(ಸಂ), ೨೦೦೪; ಬುಡಕಟ್ಟು ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬೋರಲಿಂಗಯ್ಯ ಹಿ.ಚಿ., ೨೦೦೧; ವಿಸ್ಮೃತಿ ಮತ್ತು ಸಂಸ್ಕೃತಿ, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು

ಭಾನುಮತಿ ವೈ.ಸಿ., ೧೯೯೪; ಮಲೆನಾಡು ಶೈವ ಒಕ್ಕಲಿಗರು ಜಾನಪದೀಯ ಅಧ್ಯಯನ, ಕೇಶವ ಪ್ರಕಾಶನ, ಮೈಸೂರು

ಮಯ್ಯ ಪಾ.ನ., ೧೯೯೫; ಕೋಟದವರು ಕೋಟ ಪ್ರದೇಶದ ಸಾಂಸ್ಕೃತಿಕ ಅಧ್ಯಯನ, ಪಾರಂಪಳ್ಳಿ ಪ್ರಕಾಶನ, ಮಂಗಳೂರು

ಮಲ್ಲೇಪುರಂ ಜಿ.ವೆಂಕಟೇಶ(ಸಂ), ಶಂಬಾ ಕೃತಿ ಸಂಪುಟ, ಮಾನವ ಸಂಸ್ಕೃತಿ ೬, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಮಲ್ಲೇಪುರಂ ಜಿ.ವೆಂಕಟೇಶ(ಸಂ), ಶಂಬಾಕೃತಿ ಸಂಪುಟ, ಮಾನವ ಸಂಸ್ಕೃತಿ ೫, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಮಹದೇವ ನಾಯ್ಕ ಸ.ಚ.(ಸಂ), ನಾನೆದ್ದು ನೆನೆವೇನು, ಕಾವ್ಯಾಲಯ ಪ್ರಕಾಶನ, ಮೈಸೂರು

ಮಾನಸ ಮಂಜುಳ(ಸಂ), ೧೯೯೯; ಜನಪ್ರಿಯ ಸಾವಿರಾರು ಗಾದೆಗಳು, ತುನುಮನ ಪ್ರಕಾಶನ, ಮೈಸೂರು

ಮೈಥಿಲಿ ಶಿವರಾಮನ್(ಮೂಲ), ಸುಮಿತ್ರಬಾಯಿ ಎನ್.(ಅನು), ೧೯೮೬; ಸ್ತ್ರೀವಿಮೋಚನೆಯೆಡೆಗೆ, ಮಂಜುಶ್ರೀ ಮುದ್ರಣ, ಮೈಸೂರು

ರಹಮತ್ ತರಿಕೇರೆ(ಸಂ), ೨೦೦೪; ಕುಮಾರವ್ಯಾಸ ಭಾರತ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ರಾಜೇಂದ್ರ ಡಿ.ಕೆ.(ಸಂ), ೧೯೭೩; ನಮ್ಮ ಸುತ್ತಿನ ನಂಬಿಕೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

ರೋಹಿಣಿ ಬಿ.ಎಂ., ೧೯೯೫; ಸ್ತ್ರೀ ಸಂವೇದನೆ, ಹೇಮಾಂಶು ಪ್ರಕಾಶನ, ಮಂಗಳೂರು

ವೀರೇಶ ಬಡಿಗೇರ, ೧೯೯೬; ರಾಶಿಬುತ್ತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ವೀರೇಶ ಬಡಿಗೇರ, ೧೯೯೯; ಉತ್ತರ ಕರ್ನಾಟಕದ ಜನಪದ ಗೀತ ಮೇಳಗಳು ಒಂದು ಸಾಂಸ್ಕೃತಿಕ ಅಧ್ಯಯನ, ವಿಮೋಚನಾ ಪ್ರಕಾಶನ, ಅಥಣಿ

ವೀರೇಶ ಬಡಿಗೇರ, ೧೯೯೯; ಗುಳ್ಳವ್ವ ಆಚರಣೆ ವಿಶ್ಲೇಷಣೆ, ಮಯ ಪ್ರಕಾಶನ, ಕಮಲಾಪುರ

ವೀರಣ್ಣ ರಾಜೂರು(ಸಂ), ೧೯೯೩; ಶಿವಶರಣೆಯರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು

ವೆಂಕೋಬಾಚಾರ ಜಹಗೀರದಾರ, ೧೯೯೨; ರಂಗೋಲಿ ದರ್ಶನ, ಯಂತ್ರೋದ್ಧಾರ ಪ್ರಕಾಶನ, ಹುಬ್ಬಳ್ಳಿ

ವೆಂಕಟೇಶ ಇಂದ್ವಾಡಿ, ೨೦೦೨; ದೇವ-ದೇವಿ ಅಲೆಯ ಜನರ ಆಚರಣೆಗಳ ಮುಖೇನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವೆಂಕಟಸುಬ್ಬಯ್ಯ ಜಿ.(ಸಂ), ೧೯೯೦; ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಸಂ.೬, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಸದ್ಗುರುಸ್ವಾಮಿ ಲಿಂಗಾನಂದರು, ೧೯೮೭; ಅಕ್ಕನ ಪ್ರವಚನ, ವಿಶ್ವಕಲ್ಯಾಣ ಮಿಶನ್, ಬೆಂಗಳೂರು

ಸೋಮಶೇಖರ ಇಮ್ರಾಪೂರ, ೧೯೭೮; ನಮ್ಮ ಜಾನಪದ ಸಮೀಕ್ಷೆ, ಚೇತನಾ ಪ್ರಕಾಶನ, ಧಾರವಾಡ

ಶಶಿಕಲಾ ಮೋಳ್ಳಿ(ಪ್ರ.ಸಂ.), ಸೂಗಯ್ಯ ಹಿರೇಮಠ, ೧೯೯೬; ವಡ್ಡಾರಾಧನೆ ಆಯ್ದ ಕಥೆಗಳ ಸಂಕಲನ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಶಿರಹಟ್ಟಿ ಸ.ಮ.(ಸಂ), ೧೯೮೩; ನಾದ ಜೀವದ ನಾಟಿ ಮಿಡಿದಾವ ಜಾನಪದ ಗೀತ ಸಂಕಲನ, ಅಖಿಲ ಕರ್ನಾಟಕ ಕಬ್ಬಿಗರ ಕೂಟ, ಗದಗ

ಶಿವರಾಮ ಕಾರಂತ, ೧೯೬೯; ನಾಗರಿಕತೆಯ ಹೊಸ್ತಿಲಲ್ಲಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

ಶಿವಾನಂದ ಗುಬ್ಬಣ್ಣವರ್(ಸಂ), ೧೯೯೪; ಸೋ ಅನ್ನs ಸೋಬಾನವನ್ನss ಸೋಬಾನಪದಗಳ ಸಂಗ್ರಹ, ಅಕ್ಷಯ ಪ್ರಕಾಶನ, ಧಾರವಾಡ

ಶ್ರೀಮತಿ ಎಚ್.ಎಸ್., ೨೦೦೨; ಗರ್ಭಾಶಯ ಮಹಿಳೆಯ ಶಕ್ತಿಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಶೈಲಜ ಹಿರೇಮಠ, ೨೦೦೪; ಮಾತೃ ಪ್ರಧಾನ ಪರಿಕಲ್ಪನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಸವಿತಾ ನಾಯಕ, ೨೦೦೦; ಬುಡಕಟ್ಟು ಮಹಿಳೆಯ ಪ್ರಸಾದನ ಕಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಸಿದ್ಧಮೂರ್ತಿ, ಶಂಕರನಾರಾಯಣ ಭಟ್ಟ(ಪ್ರ.ಸಂ.), ೧೯೯೭; ವಾಸ್ತುಶಿಲ್ಪ ಪ್ರವೀಣ ಜ್ಯೋತಿಷ ಮುನಿಯಂಗಳ ಕೃಷ್ಣಭಟ್ಟ, ಸ್ಮರಣ ವೇದಿಕೆ, ಸುಬ್ರಮಣ್ಯ, ದಕ್ಷಿಣ ಕನ್ನಡ ಜಿಲ್ಲೆ

ಸುಜ್ಞಾನಮೂರ್ತಿ ಬಿ.(ಅನು), ೨೦೦೧; ವಾಸ್ತುಶಾಸ್ತ್ರ ಪ್ರವೇಶಿಕೆ, ಸಿ.ವಿ.ಜಿ.ಪಬ್ಲಿಕೇಶನ್, ಬೆಂಗಳೂರು

ಹಿರೇಮಲ್ಲೂರು ಈಶ್ವರನ್, ೧೯೯೭; ಲಿಂಗಾಯತ ಧರ್ಮ ಒಂದು ಅಧ್ಯಯನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

ಲೇಖನಗಳು

ರೋಹಿಣಿ ಶರ್ಮಾ ಎಚ್., ಪ್ರಜಾವಾಣಿ, ದಿನಪತ್ರಿಕೆ, ಸಾಪ್ತಾಹಿಕ ಪುರವಣಿ, ೧೦.೦೨.೨೦೦೨

ವಸುಧಾ ಸಿ.ಭಟ್ ಉದಯವಾಣಿ ದಿನಪತ್ರಿಕೆ, ವಿಶೇಷ ಸಂಚಿಕೆ, ೧೦.೦೮.೨೦೦೩

ಅನಿಲ್ ಎಚ್.ಟಿ., ಉದಯವಾಣಿ, ದಿನಪತ್ರಿಕೆ ಸಾಪ್ತಾಹಿಕ ಸಂಪದ, ೬.೧೨.೨೦೦೪

೨

ಮಾಹಿತಿದಾರರು

ಹೆಸರು	ವಯಸ್ಸು	ವೃತ್ತಿ	ಊರು
ಮೊಹಮ್ಮದ್ ರಫಿಕ್	೪೦	ಕಾರ್ಮಿಕ	ಹೊಳೆಆಲೂರು, ಗದಗ ಜಿಲ್ಲೆ
ಶಾಂತಿನಾಥ ಆದಪ್ಪ ಚಬ್ಬರ	೫೦	ಕಾರ್ಮಿಕ	ಹೊಳೆಆಲೂರು, ಗದಗ ಜಿಲ್ಲೆ
ಮರಿಗೌಡ ಪಾಟೀಲ್	೫೪	ವ್ಯವಸಾಯ	ಹೊಸೂರು
ಗಂಗನಗೌಡ	೫೫	ಬಡಿಗತನ	ಹೊಳೆಆಲೂರು, ಗದಗ ಜಿಲ್ಲೆ
ಐಯನ್‌ಗೌಡ	೪೮	ಬಡಿಗತನ	ಹೊಳೆಆಲೂರು. ಗದಗ ಜಿಲ್ಲೆ
ಭೀಮಣ್ಣ ನರಸಿಂಹನೋರ	೫೮	ಒಕ್ಕಲುತನ	ಲೋಕುರು, ಧಾರವಾಡ ಜಿಲ್ಲೆ
ರಫಿಕ್ ಮಾಬಾಸಾಬ	೩೯	ಕಾರ್ಮಿಕ	ಹೊಳೆಆಲೂರು, ಗದಗ ಜಿಲ್ಲೆ
ಲಿಂಗಪ್ಪ ಬಡಿಗೇರ	೧೦೦	ಬಡಿಗತನ	ಚಿಕ್ಕೇನಕೊಪ್ಪ, ಕೊಪ್ಪಳ ಜಿಲ್ಲೆ
ರುದ್ರಪ್ಪ ಬಡಿಗೇರ	೩೮	ಬಡಿಗತನ	ಚಿಕ್ಕೇನಕೊಪ್ಪ, ಕೊಪ್ಪಳ ಜಿಲ್ಲೆ
ಸರೋಜಮ್ಮ	೫೮	ಗೃಹಿಣಿ	ಕುರ್ಡಿ, ರಾಯಚೂರು ಜಿಲ್ಲೆ
ಯಶೋಧಾಬಾಯಿ ಬಡಿಗೇರ	೬೦	ಗೃಹಿಣಿ	ಭತಗುಣಕಿ, ಬಿಜಾಪುರ ಜಿಲ್ಲೆ
ಶಾರದಾಬಾಯಿ ಪೋದ್ದಾರ	೫೮	ಗೃಹಿಣಿ	ಖೇಳಗಿ, ಬೀದರ್ ಜಿಲ್ಲೆ
ರಂಗಮ್ಮ	೭೫	ಗೃಹಿಣಿ	ರಂಗನ್‌ಪೇಟೆ, ಗುಲಬರ್ಗಾ ಜಿಲ್ಲೆ
ರಮಾಬಾಯಿ	೫೬	ಗೃಹಿಣಿ	ರಾಯಚೂರು, ರಾಯಚೂರು ಜಿಲ್ಲೆ
ಸುರೇಖಾ ಚಾಲಿಹಾಳ	೩೯	ಗೃಹಿಣಿ	ಹೊಸಪೇಟೆ, ಬಳ್ಳಾರಿ ಜಿಲ್ಲೆ
ಪ್ರಮೀಳಾಬಾಯಿ	೬೬	ಗೃಹಿಣಿ	ಗಂಗಾವತಿ, ಕೊಪ್ಪಳ ಜಿಲ್ಲೆ

ಗೋವಿಂದರಾವ್	೭೦	ಶಿಕ್ಷಕ	ಬಳ್ಳಾರಿ, ಬಳ್ಳಾರಿ ಜಿಲ್ಲೆ
ದಾವಲ್‌ಸಾಬ	೫೨	ವ್ಯಾಪಾರ	ಹೊಳೆಆಲೂರು, ಗದಗ ಜಿಲ್ಲೆ
ದ್ಯಾವಪ್ಪ ಈರಪ್ಪ ಬಡಿಗೇರ	[illegible]	ಬಡಿಗತನ	ಕೆರೂರು, ಬಾಗಲಕೋಟೆ ಜಿಲ್ಲೆ
ರಾಮಿಬಾಯಿ	೬೨	ಗೃಹಿಣಿ	ಅಚ್ಚಲದೊಡ್ಡಿ, ಬೆಂಗಳೂರು ಜಿಲ್ಲೆ
ಚಿಕ್ಕಯ್ಯಗೌಡ	೭೬	ವ್ಯವಸಾಯ	ಅಚ್ಚಲದೊಡ್ಡಿ, ಬೆಂಗಳೂರು ಜಿಲ್ಲೆ
ಪಾರ್ವತಮ್ಮ	೩೮	ಗೃಹಿಣಿ	ಮೊಟ್ಟೆದೊಡ್ಡಿ, ಬೆಂಗಳೂರು ಜಿಲ್ಲೆ
ಗಿರಿಜಾ	೪೭	ಉಪನ್ಯಾಸಕಿ	ರಾಯಚೂರು, ರಾಯಚೂರು ಜಿಲ್ಲೆ
ವಿಜಯಾಂಬಿಕಾ	೪೫	ಉಪನ್ಯಾಸಕಿ	ರಾಯಚೂರು, ರಾಯಚೂರು ಜಿಲ್ಲೆ
ಆಶಾಪ್ರೇಮಲತಾ	೪೭	ಉಪನ್ಯಾಸಕಿ	ರಾಯಚೂರು, ರಾಯಚೂರು ಜಿಲ್ಲೆ
ಲಲಿತಾ ಗದಗಿನ್	೩೫	ಶಿಕ್ಷಕಿ	ರಾಯಚೂರು, ರಾಯಚೂರು ಜಿಲ್ಲೆ
ರಮಾದೇವಿ	೨೯	ಶಿಕ್ಷಕಿ	ರಾಯಚೂರು, ರಾಯಚೂರು ಜಿಲ್ಲೆ
ಶಾರದಬಾಯಿ ಮಾನಸ್‌ಗಲ್	೫೫	ಶಿಕ್ಷಕಿ	ರಾಯಚೂರು, ರಾಯಚೂರು ಜಿಲ್ಲೆ
ಗಂಗಮ್ಮ ಎಲ್.	೪೨	ಉಪನ್ಯಾಸಕಿ	ರಾಯಚೂರು, ರಾಯಚೂರು ಜಿಲ್ಲೆ